|| हरिः ॐ श्रीः ||

|| ಶ್ರೀ ಲಕ್ಷ್ಮೀ ವೇಂಕಟೇಶೋ ವಿಜಯತೇ ||



ಶ್ರೀ ಹರಿ ವಂಶ

Vol. III

ಲೇಖಕರು :

ಭಾಗವತರತ್ನಂ ವಿದ್ವಾನ್

ಘೂಳೀ ಕೃಷ್ಣಮೂರ್ತ್ಯಾಚಾರ್ಯ:

ಬಳ್ಳಾರಿ

Publishers :

Shri Vyass Publishing House
Satyanaryanpet, BELLARY.

Printers,

Hombali Printary
Station Road, GADAG.

॥ ಹರಿಃ ಓಂ ॥

— ವಿ ಜ್ಞಾ ಪ ನೆ —

ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳು
ಶ್ರೀ ಫಲಿಮಾರು - ಭಂಡಾರಕೇರಿಮಠ
ಉ ಡು ಪಿ.

ಶ್ರೀ ಹರಿ ಗುರು ಭಕ್ತರೂ, ಪ ರ ಮ ವಿದ್ವಾಂಸರೂ ಆದ ಶ್ರೀ ಘೂಳಿ ಕೃಷ್ಣಮೂರ್ತ್ಯಾಚಾರ್ಯರಿಗೆ ಮಾಡುವ ನಾರಾಯಣ ಸ್ಮರಣೆಗಳು. ನಾವು ಸುಧಾ ಪಾಠ ಇತ್ಯಾದಿ ಶ್ರೀ ಭಗವದನುಗ್ರಹ ದಿಂದ ಮಾಡುತ್ತಿದ್ದೇವೆ.

ನೀವು ಕಳುಹಿಸಿದ ಶ್ರೀಹರಿ ವಂಶದ ಎರಡು ಭಾ ಗ ಗ ಳು ಮುಟ್ಟಿವೆ. ಓದುತ್ತಿದ್ದೇವೆ. ನೀವು ಸನ್ಮತ ಪ್ರಚಾರರೂಪ ಭಗ ವತ್ಸೇವೆಯಿಂದ ಪ ರ ಮ ಧ ನ್ಯ ರೇ ಆಗಿದ್ದೀರಿ. ಸದಾ ಇಂತಹ ಉತ್ತಮ ಕಾರ್ಯಗಳು ನಿಮ್ಮಿಂದ ನಡೆಯುತ್ತಿರಲಿ - ಎಂದು ಭಗವಂತನನ್ನು ಪ್ರಾರ್ಥಿಸುವೆವು.

ಇತ್ಯನೇಕ ನಾರಾಯಣ ಸ್ಮರಣೆಗಳು.

ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥರು.

— ಅನುಕ್ರಮಣಿಕೆ —

ಓಂ ಶ್ರೀ

|| ಶ್ರೀರಸ್ತು ||

ಶ್ರೀ ಭವಿಷ್ಯಪರ್ವ ಪ್ರಾರಭ್ಯತೇ ||ಹರಿಃ ಓಂ||

ಶ್ರೀ ವೈಶಂಪಾಯನನು ಜನಮೇಜಯನಿಗೆ ನಿರೂಪಿಸಿದ ವಿಷ್ಣುಪರ್ವಕಥೆಯನ್ನು ಕೇಳಿ, ಆನಂದಿಸಿ ಶೌನಕನು ಸೂತನನ್ನು ಪ್ರಶ್ನಿಸಿದನು.

"ಸೂತ! ವೈಶಂಪಾಯನ ಮುನಿಯ ಮುಖದಿಂದ ಶ್ರೀಹರಿವಂಶಾಂತರ್ಗತ ಹರಿವಂಶಪರ್ವವನ್ನೂ ವಿಷ್ಣುಪರ್ವವನ್ನೂ ಕೇಳಿ, ಪಾವನನಾದ ಜನಮೇಜಯನ ವಂಶವಿಸ್ತಾರವನ್ನು ನಮಗೆ ವರ್ಣಿಸು!"

ಸೂತನಿಂತೆಂದನು " ಜನಮೇಜಯನಿಗೆ ಕಾಶೀ ರಾಜಪುತ್ರಿಯಲ್ಲಿ ಚಂದ್ರಾಪೀಡ ಸೂರ್ಯಾಪೀಡರೆಂಬ ಈರ್ವರು ಸುತರಿದ್ದರು. ಚಂದ್ರಾಪೀಡನಿಗೆ ನೂರುಜನ ಪುತ್ರರಾದರು. ಅವರಲ್ಲಿ ಶ್ರೇಷ್ಠನಾದ ಸತ್ಯಕರ್ಣನು ವಾರಣಾಸಿಯಲ್ಲಿದ್ದು ರಾಜ್ಯವಾಳಿದನು. ಆ ರಾಜರ್ಷಿಗೆ ಶ್ವೇತಕರ್ಣನು ಪುತ್ರನು. ಬಲುಕಾಲವಾರಾಜನಿಗೆ ಸಂತಾನವಾಗದಿರಲು ಶ್ವೇತಕರ್ಣನು ವಿರಕ್ತನಾಗಿ ತಪೋವನವನ್ನು ಸೇರಿದನು. ಅವನ ರಾಣಿಯಾದ ಮಾಲಿನಿಯು ಅವನನ್ನನುಸರಿಸಿದಳು. ಗರ್ಭಿಣಿಯಾಗಿದ್ದೂ ತಿಳಿಯದ ಯಾದವಿಯು ಪತಿಯನ್ನು ಸೇವಿಸುತ್ತಿರಲು, ಶ್ವೇತಕರ್ಣನು ತಪಸ್ಸಿದ್ಧನಾಗಿ ಪರಲೋಕವನ್ನೈದಿದನು. ಸುಚಾರುನೆಂಬ ಯಾದವನ ಮಗಳಾದ ಮಾಲಿನಿಯು, ತಂದೆಯ ಮನೆಯನ್ನು ಸೇರಲೊಲ್ಲದೆ, ವನದಲ್ಲೇ ಪ್ರಸವಿಸಿ, ಕುಮಾರನನ್ನು ಬಿಟ್ಟು, ಪತಿಲೋಕವನ್ನು ಸೇರಿದಳು. ಶ್ರವಿಷ್ಠೆಯ ಸುತರಾದ ಪಿಪ್ಪಲಾದ ಕೌಶಿಕರು ಆ ಕೂಸನ್ನು ನೋಡಿ ಕರುಣೆಯಿಂದ ಮೇಕಗಳಂತೆ ನಿಂತು ಸಾಕಿದರು.ಆಕೂಸು ಅಜಪಾರ್ಶ್ವನೆಂದೇ ಪ್ರಸಿದ್ಧನಾದನು. ವೇಮಕನೆಂಬ ಮುನಿವರನ ಪತ್ನಿಯು ಅವನನ್ನು ಮಗನನ್ನಾಗಿ ಸ್ವೀಕರಿಸಿದಳು. ಅಜಪಾರ್ಶ್ವನವಂಶವು ಬಲುಸಂವತ್ಸರಗಳ ವರಿವಿಗೂ ಬೆಳೆಯಿತು ಯಯಾತಿಯ ವಚನದಂತೆ ಪೌರವ ವಂಶವು ಆಚಂದ್ರಾರ್ಕವಾಗಿ ನಿಂತಿತು. ಕೊನೆಗೆ ಕಲಿಯುಗದಲ್ಲಿ ಸುಮಿತ್ರನೆಂಬ ರಾಜನೇ ಆ ವಂಶದ ಕ್ಷತ್ರಿಯರಾಜನಾಗಿ - ಮುಂದೆ ಸಂಕರವಾಗಿ ಶೂದ್ರಾದಿಗಳು ರಾಜರಾದರು

ಜನಮೇಜಯನು ಸರ್ಪಯಾಗವನ್ನು ಮುಗಿಸಿ, ಅಶ್ವಮೇಧವನ್ನು ಮಾಡಲೆಣಿಸಿದನು. ಋಷಿವರರು ಆಹೂತರಾಗಿ ಬಂದರು. ಶ್ರೀ ಕೃಷ್ಣ ದ್ವೈಪಾಯನನೂ

ನಯಮಾಡಿಸಿದನು. ಆ ಮುನಿ ಪುಂಗವನಿಗೆ ರಾಜಪುಂಗವನು ಅರ್ಘ್ಯಪಾದ್ಯಾದಿಗಳನ್ನಿತ್ತು, ಭಕ್ತಿಯಿಂದ ಪೂಜಿಸಿ ದಿವ್ಯಾಸನದಲ್ಲಿ ಕೂಡಿಸಿದನು.

" ದೇವ ದೇವ ! ಸರ್ವಜ್ಞ ! ನಿನ್ನದಯದಿಂದ ಮಹಾಭಾರತದ ಕಥೆಯನ್ನು ನಿನ್ನಶಿಷ್ಯವರನಾದ ಈ ವೈಶಂಪಾಯನನು ಪೇಳಲು ಕೇಳಿ, ಧನ್ಯನಾದೆನು. ಆಶ್ಚರ್ಯಕರವಾದ ಭಾರತೇತಿಹಾಸವು-ಶಂಖದಲ್ಲಿ ತುಂಬಿದ ಹಾಲಿನಂತೆ-ಪವಿತ್ರವಾಗಿ ಸೇವ್ಯವೆನಿಸಿದೆ. ಕುರುಕುಲವೇ ನಷ್ಟವಾಗಿ ಹೋಯಿತೆಂದರೆ, ರಾಜಸೂಯವೇ ಕುರು ಪಾಂಡವಕುಲಕ್ಕೆ ಬೀಜವೆಂದು ತಿಳಿದಿರುವೆನು.ದ್ರೌಪದೀಸಂಭವಕುಂಡವು ಧನಂಜಯ ವಿಜೃಂಭಿತವಾಗಿ, ವಾಯು ಪುತ್ರನಿಂದ ವ್ಯಾಪಿಸಿ, ಶ್ರೀ ಕೃಷ್ಣಪ್ರೇರಿತವಾಗಿ ಕುರುವಂಶ ಧ್ವಂಸವಾಯಿತು.

ಹಿಂದೆ ಚಂದ್ರನೂ ರಾಜಸೂಯವನ್ನು ಮಾಡಿದ್ದನಂತೆ - ಆಗ ತಾರಕಾಮಯವಾದ ಮಹಾಯುದ್ಧವಾಯಿತು. ವರುಣನೂ ಮಾಡಿದಾಗ ದೇವಾಸುರ ಮಹಾ ಸಂಗ್ರಾಮವು ನಡೆಯಿತು. ಹರಿಶ್ಚಂದ್ರನು ಮಾಡಿದಾಗ ವಿಶ್ವಾಮಿತ್ರ ವಸಿಷ್ಠರು ಆಡೀಬಕರೂಪರಾಗಿ ಕಾದಾಡಿದರು, ಆಗಲೂ ಬಹುಜೀವನಾಶವಾದ ಯುದ್ಧವು ಪ್ರಸಕ್ತ ವಾಯಿತು. ಇಂತು ರಾಜಸೂಯವು ಯುದ್ಧಕಾರಣವೆಂದರಿತೂ ಸರ್ವಜ್ಞನಾದ ನೀನದನ್ನು ಏಕೆ ನಿವಾರಿಸಲಿಲ್ಲ ?" ಎಂದು ಕೇಳಿದ ರಾಜನಿಗೆ ಶ್ರೀವ್ಯಾಸನಿಂತೆಂದನು.

"ರಾಜನ್; ನಿನ್ನ ಪೂರ್ವಪಿತಾಮಹರು ಕಾಲಕರ್ಮ ಸಂಯೋಗದಿಂದ ಕಾದಾಡಿ ಜನನಾಶವನ್ನುಂಟು ಮಾಡಿದರು. ಭವಿಷ್ಯವೇನೆಂದು ನನ್ನನ್ನವರು ಕೇಳಲಿಲ್ಲ. ಕೇಳಿದ್ದರೂ ನಾನು ಹೇಳುತ್ತಿದ್ದಿಲ್ಲ. ಆದರೂ ಎಷ್ಟೋಸಲ ದುರ್ಯೋಧನಾದಿಗಳಿಗೆ ಯುದ್ಧವು ಒಳಿತಲ್ಲವೆಂದು ಹೇಳಿದೆನು ಭವಿಷ್ಯವನ್ನು ಯಾರೂ ನಿಲ್ಲಿಸಲಾರರು. ಕಾಲವು ದುರ್ನಿವಾರವಾಗಿದೆ. ನೀನು ಮಾಡಲೆಣಿಸುವ ಅಶ್ವಮೇಧಯಾಗವು ಕಲಿಯುಗವಾಗಿರುವುದರಿಂದ-ಸರಿಯಾಗಿ ನೆರವೇರಲಾರದು. ಕ್ರತುಶ್ರೇಷ್ಠವಾದ ಅಶ್ವ-ಮೇಧವನ್ನು ಅಧಿಕಾರಿಗಳು ಮಾತ್ರ ಮಾಡಲರ್ಹರು. ಹಾಗಾಗದಾಗ ವಾಸವನು ಆ ಯಜ್ಞಕ್ಕೆ ಭಂಗವನ್ನು ತಂದೊಡ್ಡುವನು ಶಕ್ರಾಪರಾಧವನ್ನು ಮಾಡುವುದು ನಿನಗುಚಿತವಲ್ಲ, ನಿನ್ನ ಉಪಾಧ್ಯಾಯರಿಗೆ ಸಲ್ಲ. ಕಾಲಹರಿಗೆ ಎಲ್ಲರೂ ಅಧೀನರು "

ಜನಮೇಜಯನಾಮಾತಿಗೆ ಹೆದರಿ "ವ್ಯಾಸದೇವಾ! ಅಶ್ವಮೇಧವನ್ನು ಮಾಡಲು ಸಂಭಾರಗಳನ್ನು ಸಿದ್ಧಪಡಿಸಿರುವೆನು. ಋತ್ವಿಗ್ವರರನ್ನು ವರಿಸಿರುವೆನು. ಅದನ್ನೀಗ ಬಿಡುವಂತಹ ಪ್ರಸಂಗವೇನು ? ನನ್ನಂತಹ ರಾಜನ್ಯನು ಯಜ್ಞಯಾಗಾದಿಗಳನ್ನು ಮಾಡಿ ಸ್ವರ್ಗಾದಿ ಲೋಕವನ್ನು ಹೊಂದಬಯಸುವದು ತಪ್ಪಾಗುವದೇ ? ಪಾಶಬದ್ಧವಾದ ಪಕ್ಷಿಯುಸ್ವೇಚ್ಛೆಯಿಂದ ಹಾರಲಾರದಂತೆ, ಪುಣ್ಯಕಾರ್ಯಗಳಿಂದ ಪಾಪನಾಶವನ್ನು ಹೊಂದದವನು ಊರ್ಧ್ವಗತಿಯನ್ನೆಂತು ಪಡೆಯುವನು ?" ಎಂದು ಕೇಳಿದನು.

ವ್ಯಾಸನು " ರಾಜನ್! ಹಾಗಲ್ಲ! ಯಜ್ಞಫಲವು ಮುಖ್ಯವಾಗಿ ದೇವತೆಗಳಿಗೆ ಸೇರುವದು. ಆಮೇಲೆ ಋಷಿಗಳಿಗೆ-ಅನಂತರ ಮನುಜರಿಗೆ ಸ್ವಲ್ಪಫಲವು ಸಿಗುವದು ನಿಜ! ತೇಜೋಮಯರಾದ ದೇವತೆಗಳೇ ತೇಜಃಪ್ರದವಾದ ರಾಜಸೂಯಾಶ್ವಮೇಧಾದಿ ಯಜ್ಞಗಳನ್ನು ಮಾಡಲು ಅರ್ಹರು. ಮುಂದೆ ಕಾಶ್ಯಪಗೊತ್ರಜನಾದ ಒಬ್ಬ ಯೋಗಿಯು ಭೂವಿವರದಿಂದ ಎದ್ದುಬರುವನು. ಅವನು ಕಲಿಯುಗದ ಕೊನೆಯಲ್ಲಿ ಅಶ್ವಮೇಧವನ್ನು ಮತ್ತೆ ಮಾಡುವನು. 'ಶ್ವೇತಗ್ರಹ' ವೆಂಬ ಉತ್ಪಾತವಿಶೇಷವು ಕಂಡು, ಯುಗಪ್ರಲಯ ಕಾಲವು ಸಮೀಪಿಸಿದಾಗ ಅವನವಂಶಜನಾದ ರಾಜನು ರಾಜಸೂಯವನ್ನೂ ಮಾಡುವನು. ಯಾರು ಮಾಡಿದರೇನು ? ಯಾಗಗಳು ಅವರವರ ಶ್ರಾದ್ಧಾದಾನ ತಪೋವಿನಯಾದಿಗುಣಗಳಂತೆ ಫಲವನ್ನು ಕೊಡುವವು. ಕಲಿಯುಗದ ದ್ವಿಜರು ಯಜ್ಞಫಲವನ್ನು ಮಾಡಿಕೊಂಬುವರು. ಯಜ್ಞದಾನಾದಿಗಳು ಕಲಿಕಾಲದಲ್ಲಿ ಮರೆಯಾಗುವವು, ತದಾಭಾಸಗಳು ನಡೆಯುವವು. ಮನುಜರ ಇಂದ್ರಿಯ ಶಕ್ತಿಗಳು ಕುಂಠಿತವಾಗುವವು. ಪೂರ್ವಶಿಷ್ಟಾಚಾರಗಳು ಬಿಡಲ್ಪಡುವವು. ನಾಲ್ಕು ವರ್ಣಗಳ ಸಂಕರವಾಗಿ, ನಾಲ್ಕು ಆಶ್ರಮ ಧರ್ಮಗಳು ಶಿಥಿಲವಾಗುವವು. ಕೆಲವರು ಮಾತ್ರ ಧರ್ಮದಲ್ಲಿ ನಡೆಯುವರು. ಅಲ್ಪಧರ್ಮಕೃತಿಯೂ ಮಹಾಪುಣ್ಯಪ್ರದವಾಗಿರುವ ಕಾಲವಾದರೂ ಜನರು ಸ್ವಧರ್ಮವನ್ನು ನಡೆಸರು. " ಎಂದನು. ಕಲಿಯುಗದ ಲಕ್ಷಣಗಳನ್ನು ವಿವರವಾಗಿ ಕೇಳಲಿಚ್ಛಿಸಿದ ಜನಮೇಜಯನಿಗೆ ಶ್ರೀ ವೇದವ್ಯಾಸನದನ್ನು ವರ್ಣಿಸಿದನು.

ಕಲಿಯುಗದಲ್ಲಿ ರಾಜರೆನಿಸಿಕೊಂಡವರು ಕಪ್ಪಗಳನ್ನೂ ಕಾಣಿಕೆಗಳನ್ನೂ ಸ್ವೀಕರಿಸುವರಾಗಲಿ, ಅವನ್ನೀವ ಪ್ರಜರನ್ನು ಕಳ್ಳರಿಂದಾಗಲೀ, ದುಷ್ಟರಿಂದಾಗಲಿ ರಕ್ಷಿಸದಿರುವರು. ಕ್ಷತ್ರಿಯರಾಗದವರೂ ರಾಜ್ಯವಾಳುವರು. ವೇದವನ್ನೋದದವರೂ ಯಜ್ಞಗಳನ್ನು ಮಾಡಿಸುವರು ವಿಪ್ರರು ಶೂದ್ರರನ್ನವಲಂಬಿಸಿ ಬದುಕುವರು. ಶೂದ್ರರು ಬ್ರಾಹ್ಮಣರಂತೆ ವೇದಾಭ್ಯಾಸ ತತ್ತ್ವೋಪದೇಶಗಳನ್ನು ಮಾಡುವರು. ವಿಪ್ರರು ಪಂಚಯಜ್ಞಗಳನ್ನು ಬಿಟ್ಟುಬಿಡುವರು. ಎಲ್ಲ ವರ್ಣದವರೂ ಏಕಪಂಕ್ತಿಯಲ್ಲಿ ಕೂತು ನಿಷಿದ್ಧಾನ್ನಗಳನ್ನು ತಿನ್ನುವರು. ಮದ್ಯಪಾನ, ಮಾಂಸಭಕ್ಷಣಗಳು ಸಾಮಾನ್ಯವಾಗುವವು. ಮಿತ್ರರ ಪತ್ನಿಯನ್ನು ಕೆಡಿಸಿ, ಪಾಪಭಯವಿಲ್ಲದೆ ತಿರುಗುವರು. ಭೃತ್ಯರು ಕೈಗೆ ಸಿಕ್ಕಿದ್ದನ್ನು ಕದ್ದು-ಬೈದರೆ ತಿರಿಗಿ ಬೀಳುವರು. ಪ್ರಭುಗಳು ಭೃತ್ಯ ಕ್ಷೇಮವನ್ನು ಲಕ್ಷಿಸರು ಧನವೇ ಪೂಜನೀಯವೆನಿಸುವದು. ಕನಕರಜತಗಳು ಕನಸಾಗುವವು. ಸಜ್ಜನರು ನಿಂದಾಪಾತ್ರರೆನಿಸಿ, ನೊಂದು ಗುಪ್ತವರ್ತನರಾಗುವರು. ಪಾಪಿಯನ್ನೂ ದುಷ್ಟನನ್ನೂ ತಿಳಿದು ತಿಳಿದು ಯಾರೂ ದಂಡಿಸರು. ವಿಧವೆಯರು ಅಲಂಕಾರಸಹಿತರಾಗೇ ಮೆರೆಯುವರು. ಸನ್ಯಾಸಿಗಳು ಬಂಧುಪ್ರಿಯರಾಗಿ ಧನವನ್ನು ಅವರಿಗೆ ಮಾತ್ರ ಕೊಡುವರು. ಮದುವೆಯಾಗದ ಮುಗುದೆಯರು ಮಾತೆಯರಾಗಿ

ಮಕ್ಕಳನ್ನು ತ್ಯಜಿಸುವರು. ಮುದುಕರನ್ನು ಪೋಷಿಸರು. ಶಾಸ್ತ್ರವಚನಗಳನ್ನು ಲೆಕ್ಕಿಸರು. ಎಲ್ಲರೂ ವೇದಾಧ್ಯಾಯಿಗಳೆ! ಎಲ್ಲರೂ ವರ್ತಕರೇ! ಎಲ್ಲರೂ ಪೂಜ್ಯರೇ ಎಂದು ಭಾವಿಸಿ ಕೊಬ್ಬಿ ಸಾಧುಸಂತರನ್ನು ಅವಮಾನಿಸುವರು-

ತಪೋಯಜ್ಞ ಯಾತ್ರಾಗಳನ್ನುಮಾಡಿ ವಿಪ್ರರು ದುಡ್ಡಿಗಾಗಿ ಮಾರಿ ಕೊಂಬುವರು. ಋತುಧರ್ಮಗಳು ವಿಪರೀತವಾಗುವವು. ಶಾಕ್ಯಬುದ್ಧಾದಿ ಪಾಷಂಡ ಧರ್ಮಗಳು ಜನಪ್ರಿಯವಾಗುವವು. ಗೋ ಸಂತತಿಯು ವಿರಳವಾಗಿ, ಕ್ರೂರ ಜಂತು ಸಂತಾನವು ಹೆಚ್ಚುವದು. ಮಧುರಾದಿರಸಗಳು ಮಾಯವಾಗುವವು. ಕೊನೆಗಿರು- ವವರು ಮಧ್ಯದಲ್ಲಿಬಂದು, ಮಧ್ಯದಲ್ಲಿರವವರು ಕೊನೆಯಲ್ಲಿ ವಸಿಸುವರು ಎಲ್ಲರೂ ಪ್ರಚ್ಛನ್ನ ಚೋರರು ಆಗಿದ್ದು ಬಾಯಲ್ಲಿ ಧರ್ಮವನ್ನು ಇತರರಿಗೆ ಮಾತ್ರ ಉಪದೇಶಿ- ಸುವರು. ಮಳೆಯ ವಿಚಿತ್ರವೆಂದರೆ ನೇಗಿಲಿಗೆ ಹೂಡಿದ್ದ ಎತ್ತಿನ ಎಡಕೊಂಬು ತೊಯ್ದರೆ, ಬಲಕೊಂಬುತೋಯದೇ ಇರುವದು. ದುಡ್ಡಿದ್ದವರು ಪಾನ, ವೇಶ್ಯಾ ದ್ಯೂತರತರಾಗುವರು. ತಂದೆಯ ಆಸ್ತಿಯನ್ನು ನಿಷ್ಠುರರಾಗಿ ಹಂಚಿ ಕೊಂಬುವರು. ರಾಜಮಾರ್ಗಗಳಲ್ಲಿ ಕಳ್ಳಕಾಕರು ಭಯಪ್ರದರಾಗಿ ದೋಚಿ ಕೊಲ್ಲುವರು ಲೋಭ, ಅನೃತ, ದುರಾಶಾದಿಗಳಿಂದ ಆಕ್ರಾಂತರಾದ ಜನರು ಶಾಂತಿ ಸುಖಗಳಿಗೆ ದೂರರಾಗಿ ದುಃಖಪಡುವರು. ಮುತ್ತು ರತ್ನಗಳ ಅಭಾವದಿಂದ ನಾರಿಯರು ಕೇಶಾಲಂಕಾರವನ್ನು ಮಾಡಿಕೊಂಡು, ನಾರುಬೇರುಗಳಿಂದಲು, ಪಲಾಸ್ತಿಕೆಗಳಿಂದಲು, ಬಿದಿರು ಪೊದರು ಗಳಿಂದಲು ಮಾಡಿದ ಉಡಿಗೆ ತೊಡಿಗೆಗಳನ್ನು ಧರಿಸುವರು.

ನಾರಿಯರಿಗೆ ಸೌಕುಮಾರ್ಯ ನಾಶವಾದಾಗ ಮದುವೆಯಾಗುವುದು. ಪುರುಷರು ಭಾರ್ಯಾವಶರಾಗುವರು. ವೇಷ ಸೌಂದರ್ಯವು ವಿಪುಲವಾಗಿ, ಸ್ವಭಾವವು ನಾಶ ವಾಗುವದು. ತರುಣಿಯರು ಪುರುಷಾಧಿಕ ಸಂಖ್ಯಾಕರಾಗಿ, ಮದುವೆಯೇ ಆಗದೆ ಉಳಿಯುವರು ಮದುವೆಯಾದರೆ ಮಕ್ಕಳಾಗದೆ ಕೊರಗುವರು ವ್ಯಭಿಚಾರತರಾಗಿ ಕುಲ ಶೀಲಾಚಾರಗಳಿಗೆ ತಿಲಾಂಜಲಿಯನ್ನಿತ್ತು ಸ್ತ್ರೀ ಪುರುಷರು ಸ್ವೈರರಾಗುವರು. ರಾಜಚೋರ ದುಷ್ಟವಹ್ನಿ ಜಲರೋಗ ಭಯಗಳಿಂದ ಜನರು ನಷ್ಟಪ್ರಾಯ ರಾಗುವರು ಎಲ್ಲರೂ ಯಾವುದೋ ನೆಮವನ್ನು ಒಡ್ಡಿ ಯಾಚಿಸುವರು ದಾನವನ್ನು ಹಿಡಿದಾಗ ಯಾರಿಂದ ಎಂಬುವ ವಿವೇಕವೇ ಇರದು; ಕೊಡುವಾಗ ಪ್ರತಿಫಲಾಶೆ ಹಿರಿದು. ಎಲ್ಲದುಃಖಗಳಿಗೆ ಮೂಲ ಕಾರಣವಾದ ತೃಷ್ಣೆಯೇ ಕಲಿಕಾಲದ ರಾಣಿಯು. ಮಳೆ ಬಂದಾಗ ಗಾಳಿ ಅದನ್ನು ಕೆಡಿಸುವದು. ಬೆಳೆ ಬಂದಾಗ ಚೋರಾಳಿ ಅದನ್ನು ಹರಿಸುವದು ಆತ್ಮ ಪ್ರಶಂಸೆಯಂತೆ ಪರನಿಂದೆಯೂ ಅಖಂಡ ವಾಗುವದು. ಪರಲೋಕ, ಪಾಪಪುಣ್ಯ, ಆಚಾರ ವಿಚಾರ, ದೇವ ಗುರುಗಳು-ಈ ಶಬ್ದಗಳನ್ನು ಕೇಳಿ ಜನರು ನಗೆಯಾಡುವರು. ಕಲಿಯುಗದಲ್ಲಿ ಮೊದಲು ತಲೆ ಕೆಡುವುದು-

ಬ್ರಾಹ್ಮಣರು ಕೆಡುವರು. ಅವರಹಿಂದೆ ಇತರಾಂಗಗಳು ಹಾಳಾಗುವವು. ಬಾಯಲ್ಲಿ ಸಿಹಿಮಾತು-ಕೈಯಲ್ಲಿ ದೊಣ್ಣೆ. ಇದು ಕಲಿಯುಗುಣ. ಕೊಟ್ಟ ಸಾಲವನ್ನು ಕೊಡಬಾರದು ಕೈಹಿಡಿದ ಸತಿಯನ್ನು ಸಾಕಬಾರದು - ಯಾರ ಕೈಗೆ ಏನುಸಿಕ್ಕರೆ ಅದನ್ನು ದಕ್ಕಿಸಿಕೊಳ್ಳಬೇಕು-ಬುದ್ಧಿ ತಿಳಿಯಹೇಳುವವರನ್ನು ಮೂಲೆಯಲ್ಲಿ ಕೂಡಿಸಬೇಕು- ಇದು ಕಲಿಯ ನಡತೆ. ಇಂತು ಧರ್ಮಕರ್ಮ ಭ್ರಷ್ಟರಾಗಿ ಜನರು ನಾಶ ವಾಗಬೇಕು; ಇದು ಕಲಿಯ ಇಚ್ಛೆ!

ಸಂತೋಷವಾಯಿತು, ಫಲವಿಲ್ಲ; ಸಿಟ್ಟು ಬಂತು, ಹಿಂಸೆ ಉಂಟು, ಮೋಹ, ಒಂಟಿ, ಕಾಡಾಟಗಳು ಎಲ್ಲವರ ಪಾಲೂ ಬೆಳೆಸಿದ್ದಾಯಿತು, ತೃಪ್ತಿಯಿಲ್ಲ, ಶಾಸ್ತ್ರಜ್ಞಾನವಿಲ್ಲ; ಉಪದೇಶವಿದೆ, ಎಲ್ಲರಿಗೂ ಎಲ್ಲವೂ ಗೊತ್ತಿದೆ ಆದರೆ ನಡೆಸುವುದು ಅಧರ್ಮವನ್ನೇ! ಎಲ್ಲರೂ ಕವಿಗಳೇ, ಒಬ್ಬನಾದರೂ ದೇವಭಕ್ತನಲ್ಲ, ಏನು ತಿಂದರೂತಪ್ಪಲ್ಲ ಏನೂ ಪಾಪವಲ್ಲ, ಏನು ಕುಡಿದರೂ ಹೇಯವಲ್ಲ. ಗುಂಜಾಮಣಿ, ಶಂಖ, ಕಲ್ಲು ಮಣ್ಣುಗಳಿಂದ ಮಾಡಿದ ಆಭರಣಗಳೇ ನಾರಿಯರಿಗೆ ಗತಿ! ಸೊಸೆಯರು ಅತ್ತೆಯರನ್ನು ಆಜ್ಞಾಪಿಸುವರು. ಪುತ್ರರು ಪಿತೃಗಳನ್ನು ನಿಂದಿಸುವರು. ಶಿಷ್ಯರು ಗುರುಗಳನ್ನು ವ್ಯಾಕ್ಯಾಣಗಳಿಂದ ನೋಯಿಸುವರು. ಭಿಕ್ಷಾಬಲಿಗಳನ್ನು ಯೋಗ್ಯರಿಗೆ ಕೊಡದೆ ಪುರುಷರು ತಿನ್ನುವರು. ವ್ಯಾಧಿಯಿಂದಲಾಗಲೀ, ಆಧಿಯಿಂದಲಾಗಲಿ ರಹಿತರಾರೂ ಇರುವದಿಲ್ಲ. ಎಲ್ಲ ಕಲಿಪಾಪಗಳಿಗೆ ಮೂಲವು ಅಸೂಯೆ ಯಲ್ಲಿದೆ. ಇಂತು ಕಲಿಯುಗದ ಜನರು ಅಸೂಯೆ, ಅದರಿಂದ ಅತೃಪ್ತಿ, ಅದರಿಂದ ದ್ವೇಷ, ಅದರಿಂದ ಕೈಕಲಹ, ಅದರಿಂದ ಸರ್ವನಾಶವನ್ನು ಹೊಂದವರು.

ಧರ್ಮ ಚ್ಯುತಿಯಿಂದ ಶೀಲಹಾನಿಯು ಅದರಿಂದ ಆಯುರ್ಹ್ರಾಸವು, ಅದರಿಂದ ಬಲಗ್ಲಾನಿ. ಅದರಿಂದ ವೈವರ್ಣ್ಯ, ಆಧಿವ್ಯಾಧಿಪೀಡೆ, ಅದರಿಂದ ನಿರ್ವೇದ- ಇದು ಕಲಿಕ ಉಪಕ್ರಮ ಸುಜೀವರಿಗೆ ನಿರ್ವೇದದಿಂದ ದೈವಭಕ್ತಿಯು, ದುರ್ಜನರಿಗೆ ದೈವ ದ್ವೇಷವು ಸಹಜವಾಗಿದೆ. ಸುಜನರು ಬ್ರಹ್ಮವಿಚಾರರತರಾಗಿ ಜ್ಞಾನವನ್ನು ಸದ್ಗುರುಗಳಿಂದ ಹೊಂದಿ ಸುಖಿಸುವರು ವೇದ ಪ್ರತ್ಯಕ್ಷಗಳನ್ನೂ ತದವಿರುದ್ಧವಾದ ಅನುಮಾನವನ್ನೂ ಪ್ರಮಾಣಗಳೆಂದು ಅಂಗಿಕರಿಸಿ, ನಿಜಜ್ಞಾನವನ್ನು ಹೊಂದಿದಾಗ ಕೃತಯುಗದ ಪ್ರಾರಂಭವೆಂದು ತಿಳಿ ! ಕೆಲವರು ವೇದಗಳನ್ನು ಅಪ್ರಮಾಣವೆಂಬುವರು; ಅವರಿಗೆ ಅವರ ವಚನಗಳೇ ಪ್ರಮಾಣ, ಇಂತಹ ಹೇತು ವಾದಿಗಳು, ನಾಸ್ತಿಕರು, ಧರ್ಮಾಧರ್ಮಗಳ ಸಂಕರವನ್ನು ಮಾಡಿ, ಲೋಕದಲ್ಲಿ ಅಶಾಂತಿಯನ್ನು ಹರಡಬೇಕೆಂದಿರುವ ರಾಕ್ಷಸರೇಸರಿ! ಇಂದು ನಮ್ಮದು! ನಾಳಿನ ಗೊಡವೇಬೇಡ! ಉಂಡು ಸುಖಿಸು- ಎಂದು ಮಾತಾಡುವ ಮಹಾಪಾಪಿಗಳೂ ಒಂದು ದಿನ ಸಾಯುವರೆಂದು ತಿಳಿ! ಅವರಿಗೆ ತಾತ್ಕಾಲಿಕ ದೃಷ್ಟಿ ಮಾತ್ರವಿದೆ ಶಾಸ್ತ್ರಜ್ಞಾನವಿಲ್ಲ. ಅಂತಹ

ಡಾಂಭಿಕರು ಬರಿಯ ಹೇತುವಾದವನ್ನು ಮಾಡುವ ಪಂಡಿತ ಮಾನಿಗಳಾಗಿ, ಲೋಕವನ್ನು ವಂಚಿಸುವರು.

ಕಲಿಯುಗ ಕಷಾಯವು ಇಂಗಿದೆ ಎಂದು ತಿಳಿಯುವುದು ಯಾವಾಗ ಎಂದರೆ, ಕೇಳು !

ಧರ್ಮತೃಷ್ಣೆ ಹೆಚ್ಚಾಗುವುದು. ಅಸೂಯಾ ದ್ವೇಷಗಳು ದೂರವಾಗುವವು ವಿಪ್ರರು ಸ್ವ ವೃತ್ತಿಪರರಾಗುವರು. ಇತರ ವರ್ಣದವರಿಗೆ ವಿಪ್ರದ್ವೇಷವು ನಿಷ್ಕಾರಣವೆಂಬ ಅರಿವುಮಾಡುವದು.

ಮಹಾಯುದ್ಧವಾಗಿ, ಮಹಾಕಪ್ಪವಾಗಿ, ಭೂಕಂಪ ಗೃಹ ಯುದ್ಧಗಳಾಗಿ, ಭೂ ಭಾರವು ನಸಿಸುವದು. ವಿಪ್ರರೂಪವಾಗಿ ಹುಟ್ಟಿದ್ದ ರಾಕ್ಷಸರು ನಷ್ಟರಾಗುವರು. ಸಾಧುಸಜ್ಜನರಿಗೆ ಸುಖವಾಗುವದು. ವೇದಾಧ್ಯಯನ ಹೋಮ ವ್ರತದಾನಗಳು ನಿರ್ವಿಘ್ನವಾಗಿ ನಡೆಯುವವು. ಪರದಾರಾಧನ ರತ್ನಾಪಹಾರಕರಿಗೆ ಶಿಕ್ಷೆಲಭಿಸುವದು. ಸಾಹಸ ಪ್ರಿಯರಿಗೆ ಕೈಕಾಲು ಮುರಿಯುವವು. ವ್ಯವಸಾಯವು ಮೂರು ಹೂ, ಆರು ಕಾಯಾಗಿ ವೃದ್ಧಿ ಹೊಂದುವುದು. ಎಲ್ಲರೂ ಭೃತ್ಯ ರಾಗರು, ಎಲ್ಲರೂ ಪ್ರಭುಗಳೂ ಆಗರು. ಎಂದರಿತವರು ಸ್ವಾಮಿ ಭೃತ್ಯ ಭಾವವನ್ನು ಪಿತೃ ಪುತ್ರ ಸಂಬಂಧದಂತೆ ನೋಡಿ ತೃಪ್ತರಾಗುವರು. ಹಿಂದಿನ ಧರ್ಮ ಕರ್ಮ ಸ್ವರೂಪಗಳನ್ನು ತಿಳಿಸಿ ಕೊಡುವ ಋಷಿಗಳು ಅವತರಿಸಿ ಸರ್ವ ಜನರನ್ನು ಸ್ವ ಸ್ವಧರ್ಮ ನಿರತರನ್ನಾಗಿ ಸ್ಥಾಪಿಸುವರು. ಆಗ ಕೃತವು ಪ್ರಾರಂಭವಾಗುತ್ತಿದೆ ಎಂದು ತಿಳಿಯಬೇಕು.

ಕಲಿಯುಗದ ಕೊನೆಯಲ್ಲಿ ಜೀವನವು ದುರ್ಭರವಾಗುವದು. ಚೋರರು ಕಸಿದುದನ್ನು ರಾಜರುಕದಿಯುವರು ಚೋರರಿಗೆ ಚೋರ ಪೀಡೆಯಾಗುವದು. ಯಜ್ಞಗಳು ನಿಂತುಹೋಗುವವು. ಕೀಟ, ಮೂಷಕ ಸರ್ಪದಂಶಗಳ ಕಾಟದಿಂದ ಜನರು ಉಳಿಯರು ಬಂಧು ಪೋಷಣ, ಪಿತೃದಾನ, ಧಾನ್ಯ ಸೇಕರಣಗಳನ್ನು ಜನರು ಮಾಡಲಾರದಾಗುವರು. ದೇಶವನ್ನು ಬಿಟ್ಟು ಬುದ್ಧಿವಂತರು ಓಡಿಹೋಗುವರು. ಅಂಗ ವಂಗ ಕಳಿಂಗ ಕಾಶ್ಮೀರ ದೇಶಗಳು ನಾಸ್ತಿಕ ಬಹುಳವಾಗುವವು. ಮ್ಲೇಂಛರ ಸಹವಾಸದಿಂದ ಅವರ ದುರಾಚಾರಗಳು ಅನಿವಾರ್ಯವಾಗಿ ಸದಾಚಾರಗಳು ಕೆಟ್ಟು, ಜನರು ಪತಿತ ರಾಗುವರು. ರಕ್ಷಕರು ಭಕ್ಷಕರಾಗುವರು ಶಾಸ್ತ್ರಿಗಳು ನಿಷಿದ್ಧಾಚರಣರರಾಗುವರು. ವಿಪ್ರರುಯಜ್ಞ ಯಜ್ಞೋಪವೀತ ಪಿತೃಕಾರ್ಯ ವೇದಾಧ್ಯಯನಗಳನ್ನು ಬಿಟ್ಟು ಬಿಡುವರು. ಜನರಿಗೆ ಧಾನ್ಯಾಭಾವವಾಗಿ, ಕೀಟ, ಸರ್ಪ ಭೇಕ, ಮೀನ, ಕಂದ ಮೂಲ, ಪಕ್ಷಿ, ಮಧು ಪರ್ಣಗಳಿಂದ ಜೀವವನ್ನು ಬಿಗಿ ಹಿಡಿಯುವರು ಕುಲ ಜಾತಿ ಲಿಂಗ ಲಕ್ಷಣವರ್ಜಿತರಾದ ಸ್ತ್ರೀ ಪುರುಷರು ಲಜ್ಜೆ ಬಿಟ್ಟು ವಿಹರಿಸುವರು. ಕೊನೆಗೆ

ಸರ್ವನಾಶವಾಗುವ ಭಯದಿಂದ ಮತ್ತೆ ಕೆಲವರು ಸ್ವಧರ್ಮರತರಾಗುವ ಸಮಯವೇ ಕಲಿಯ ಕೊನೆ ಎಂದು ತಿಳಿ! ದಾರಿದ್ರ್ಯದಿಂದ ವೈರಾಗ್ಯ, ಅನಾರೋಗ್ಯದಿಂದ ಕಾಮ ತ್ಯಾಗ, ಗತಿಹೀನತೆಯಿಂದ ದೈವಭಕ್ತಿ, ನಿರ್ವೇದದಿಂದ ಜ್ಞಾನಸಕ್ತಿಯು ಉಂಟಾಗಿ ಕೊನೆಯಲ್ಲಿ ತಿರವಾದಾಗ ಕೃತಯುಗದ ಆರಂಭವೆಂದೂ ತಿಳಿ! ಆಗ ಸೇವಾ ತಪಸ್ಸತ್ಯ ದಾನದಯಾ ಶೌಚಕಗಳೆಂಬ ಧರ್ಮವಾದಗಳು ಕ್ರಮವಾಗಿ ಅಧಿಕವಾಗಿ ಕೃತವು ನಡೆಯುವದು. ಧರ್ಮಾಚರಣದಿಂದ ಆಯುರ್ವೃದ್ಧಿ, ಆಯುರ್ಬಲದಿಂದ ಜ್ಞಾನ ಸಂಪಾದನೆ, ಅದರಿಂದ ಭಕ್ತಿ, ಇಂತು ಸರ್ವ ಶ್ರೇಯಸ್ಸುಗಳು ಪ್ರಾಪ್ತವಾಗುವವು.

— O —

2. ಅಶ್ವಮೇಧ ಭಂಗ.

ಜನಮೇಜಯರಾದಿ ಸಭಿಕರು ಸಾತ್ಯಮತೇಯನ ಸತ್ಯವಚನಾಮೃತ ಪಾನದಿಂದ ಆನಂದಿಸಿ, ಆ ಸ್ವಾಮಿಯನ್ನು ಪೂಜಿಸಿದರು. ಭಗವಂತನು ಅವರಿಂದ ಅಪ್ಪಣೆಹೊಂದಿ ಅಂತರ್ಹಿತನಾದನು: ಜನಮೇಜಯನು ಸರ್ಪಯಾಗವನ್ನು ನಿಲ್ಲಿಸಿ, ಆಸ್ತಿಕನನ್ನು ಸಮ್ಮಾನಿಸಿ ಕಳಿಸಿದನು.

ರಾಜನು ಪ್ರಜಾರಕ್ಷಣ ನಿರತನಾಗಿ ಧರ್ಮದಿಂದ ರಾಜ್ಯವಾಳಿದನು. ಕೆಲ ಕಾಲವಾದ ಮೇಲೆ ಜನಮೇಜಯನು ಶ್ರೀ ವ್ಯಾಸರ ಮಾತನ್ನು ಕಡೆಗಣಿಸಿ, ಅವರು ಬೇಡವೆಂದ ಅಶ್ವಮೇಧವನ್ನು ಮಾಡಲು ಸಿದ್ಧನಾದನು. ಹೋತ್ರಾದಿ ಋತ್ವಿಜರನ್ನು ನಿಯಮಿಸಿದನು. ಭೂರಿದಕ್ಷಿಣೆಗಳನ್ನಿತ್ತು ಸದಸ್ಯರನ್ನುಸತ್ಕರಿಸಿದನು. ಯಜ್ಞದ ಸೂಕ್ತ ದಿನದಲ್ಲಿ ಯಜ್ಞಾಶ್ವವು ಮಾರಿತವಾಯಿತು. ವಿಧಿಯಂತೆ ಜನಮೇಜಯನ ಪತ್ನಿಯಾದ ವಪುಷ್ಟಮೆಯು ಅದರ ಸಮೀಪದಲ್ಲಿ ದೀಕ್ಷಿತಳಾಗಿ ಕೂತಿದ್ದಳು. ಅವಳಲ್ಲಿದ್ದ ರಂಭೆಯ ಆವೇಶವನ್ನರಿತ ಇಂದ್ರನು, ಮೃತಾಶ್ವವನ್ನು ಪೊಕ್ಕು ಅವಳಿಂದ ಮನಸಾ ಕ್ರೀಡಿಸಿದನು. ಅಶ್ವಗತವಿಕಾರವನ್ನು ಕಂಡು ರಾಜನು ಕುಪಿತನಾಗಿ ಅಧ್ವರ್ಯುವಿನನ್ನು ನೋಡಿ "ಕೊಲ್ಲು ಇದನ್ನು!" ಎಂದು ಆಜ್ಞಾಪಿಸಿದನು. ಜ್ಞಾನಿಯಾದ ಅಧ್ವರ್ಯುವು ರಾಜನನ್ನು ನೋಡಿ "ಪಶುವುಮಾರಿತವಾಗಿದೆ. ತದ್ಗತ ವಿಕಾರವು ಇಂದ್ರ ಕೃತ" ವೆಂದನು ರಾಜನುಕೋಪರಕ್ತ ನೇತ್ರನಾಗಿ"ಇಂದಿನಿಂದ ಕ್ಷತ್ರಿಯರು ವಾಜಿಮೇಧ-ದಿಂದ ನಿನ್ನನ್ನು ಪೂಜಿಸದಿರಲಿ!ನನ್ನ ಪ್ರಜಾರಕ್ಷಣ ಪುಣ್ಯದಿಂದ, ಯಜ್ಞದಾನ ಪ್ರಭಾವದಿಂದ ನನ್ನ ಶಾಪ ವಚನವು ಸತ್ಯವಾಗಲಿ!" ಎಂದ, ಅಲ್ಲಿಗೆಬಿಡದೆ, ಋತ್ವಿಗ್ವರರನ್ನು ಯಜ್ಞರಕ್ಷಣದಕ್ಷರಲ್ಲರೆಂದು, ದೇಶದಿಂದ ಹೊರದೂಡಿದನು. "ಈ ಪಾಪಿನಿವಪುಷ್ಟಮೆಯು ಕುಲಕಲಂಕಿನಿಯಾದಳು. ನನ್ನ ತಲೆಮೇಲೆ ಕಾಲಿಟ್ಟುತುಳಿದ ಇವಳಿಂದ ನನ್ನಕೀರ್ತಿ ಮಹಿಮೆಗಳು ನಾಶವಾದವು ಶುನಕಸ್ಪೃಷ್ಟವಾದ ಭಕ್ಷ್ಯ

ದಂತೆ, ಮುಡಿದು ಬಿಸುಟಿದಹಾರದಂತೆ ಅಶುದ್ಧಳಾದ ಇವಳ ಮುಖವನ್ನು ನಾನು
ನೋಡಲಾರೆನು. ಕೊಲ್ಲಿರಿ ಇವಳನ್ನು !" ಎಂದು ರೇಗಾಡಿದನು

ಆಗ ಇಂದ್ರದೂತನಾಗಿ ಬಂದ ವಿಶ್ವಾವಸುವೆಂಬ ಗಂಧರ್ವರಾಜನು ರಾಜನ
ನ್ನೋಲಯಿಸುತ್ತಿಂತೆಂದನು. "ರಾಜನ್ ! ವೃಥಾ ಕೋಪಿಸಬೇಡ ! ಮೂರುಯಜ್ಞ
ಗಳನ್ನು ಮಾಡಿರುವನಿನಗೆ ನೂರು ಯಜ್ಞಗಳನ್ನು ಮಾಡಿದ ಮಹೇಂದ್ರನಿಂದ ವೈರವು
ಉಚಿತವಲ್ಲ. ಅಶ್ವಮೇಧವನ್ನುಮಾಡಿ, ತತ್ಫಲವನ್ನು ಹೊಂದಲು, ಅದಕ್ಕೆಯೋಗ್ಯ
ಜೀವನೇ ಆಗಬೇಕು. ನಿನಗಾಅಧಿಕಾರವಿಲ್ಲ ಸಿಟ್ಟಾಗಿಕೆಡಬೇಡ ! ನಿನ್ನಪತ್ನಿಯು
ಪತ್ನೀಶಾಲೆಯಲ್ಲಿ ಅದೂಷಿತಳಾಗೇ ಇರುವಳು. ನಿನ್ನಪತ್ನಿಯರೂಪದಿಂದ ಕೂತಿದ್ದ
ರಂಭೆಯನ್ನು ರಂಭಾಪತಿಯಾದ ಇಂದ್ರನು ಸ್ವೀಕರಿಸಿದನು. ನಿನ್ನಯಜ್ಞಕ್ಕೆ ವಿಘ್ನ
ವನ್ನು ತಂದವನು ಇಂದ್ರನಲ್ಲ, ಋತ್ವಿಜರ ಅಪಾಂಡಿತ್ಯವಲ್ಲ, ನಿನ್ನಕಾರ್ಯಕರಣಲೋಪ
ವಲ್ಲ. ಕಾಲನಾಮಕ ಶ್ರೀಶೇಚ್ಛೆಯೇ ಮುಖ್ಯಕಾರಣವು. ಕಾಲಕ್ಕೆದುರಿಲ್ಲವೆಂದು
ಶ್ರೀ ವ್ಯಾಸರು ಹೇಳಲಿಲ್ಲವೇನಿನಗೆ ? ನಿನ್ನಕ್ರತುವಿನಿಂದ ಇಂದ್ರಾದಿಗಳೂ ಹೆದರಿ,
ನಿನಗೆ ವಿಘ್ನವನ್ನು ಮಾಡಿದರು. ವೈಭವದಿಂದ ಇಂದ್ರಸಮನೆನಿಸಿದ ನಿನಗೆ ಪದವಿ
ಯಿಂದಲು, ಯೋಗ್ಯತೆಯಿಂದಲು ಉತ್ತಮರಾದ ದೇವೇಂದ್ರಾದಿಗಳು ಮಾಡಲರ್ಹ
ವಾದ ಅಶ್ವಮೇಧಯಾಗವುಸಲ್ಲ. ಆರಂಭೆಯೂ ಇಲ್ಲಿಲ್ಲ ತಿಳಿದುನೋಡು !ವ ಪುಷ್ಪ
ಮಾದೇವಿಯು ನಿನ್ನವಳಾಗೇಪರಿಶುದ್ಧಳಾಗಿರುವಳು. ಯಜ್ಞವನ್ನು ನಿಲ್ಲಿಸು ! ವಿಪ್ರ
ವರರನ್ನು ತಿರುಗಿಕರೆಯಿಸಿ ಸನ್ಮಾನಿಸು ! ಪತ್ನಿಯನ್ನು ನಿರ್ವಿಚಾರನಾಗಿ ಸ್ವೀಕರಿಸು!"
ವಿಶ್ವಾವಸುವಿನ ಹಿತವಚನವನ್ನಾಲಿಸಿ, ಜನಮೇಜಯನು ಕಾಲಬಲಕ್ಕೆ ತಲೆಬಾಗಿ,
ಯಜ್ಞವನ್ನು ನಿಲ್ಲಿಸಿದನು. ಪತ್ನಿಯನ್ನು ಸ್ವೀಕರಿಸಿದನು. ಋತ್ವಿಗ್ಜನರನ್ನು ಕರೆಸಿ
ಕ್ಷಮೆಬೇಡಿ, ಸನ್ಮಾನಿಸಿದನು. ಮುದಿತ ಮಾನಸನಾಗಿ, ಪ್ರಜಾಪಾಲನವನ್ನು
ಯಥಾವಿಧಿಯಾಗಿ ಮಾಡಿದನು. ಇಂತಹ ಮಹರ್ಷಿವ್ಯಾಸನಿಂದ ಪ್ರಣೀತವಾದ ಮಹಾ
ಭಾರತವನ್ನು ಕೇಳಿ,ಹೇಳಿದವರು ಆಯುರಾರೋಗ್ಯಯಶಃ ಶ್ರೀ ಬಲಗಳನ್ನು ಹೊಂದಿ,
ಶ್ರೀಶನಅನುಗ್ರಹದಿಂದ ಮುಕ್ತಿಸುಖವನ್ನು ಪಡೆಯುವರು. ಅವರ ಸರ್ವಪಾಪಗಳೂ
ನಷ್ಟವಾಗುವವು. ಗಿಡಗಳಹೂಗಳಿಂದ ಫಲಗಳಾಗಿ ಅವುನಟ್ಟಲ್ಪಟ್ಟಾಗ ಗಿಡಗಳಾ
ಗುವಂತೆ ಮಹರ್ಷಿವೇದವ್ಯಾಸದೇವನ ನುಡಿಮುತ್ತುಗಳು ಸುಜನಹೃದಯ ಕ್ಷೇತ್ರದಲ್ಲಿ
ಬೆಳೆದು, ತಾವೂವೃದ್ಧವಾಗಿ ಜನಸುಖವರ್ಧನವನ್ನೂ ಮಾಡುತ್ತಿರುವವು.

ಶ್ರೀ ವೇದವ್ಯಾಸದೇವನ ಮುಖಪಂಕಜನಿಃಸೃತವಾದ ಶ್ರೀ ಭಾರತೇತಿಹಾಸವು
ಶ್ರೀ ಹರಿವಂಶದ ಮೂರುಪರ್ವಗಳಿಂದಕೂಡಿ ಪಠಿತವಾಗಬೇಕು. ಪೇಳಿದರೆ ಕೇಳಿ
ದರೆ ಧನ, ಆರೋಗ್ಯ, ಸತ್ಪತ್ನೀಲಾಭ, ಸತ್ಪತಿಲಾಭಗಳಾಗುವವು. ರೋಗ ಅಜ್ಞಾನ
ಚಿಂತೆಗಳು ನಷ್ಟವಾಗುವವು. ಸುಜನಮಂಡಲಪಲ್ಲಿ ಕೂತು ಶ್ರದ್ಧೆಯಿಂದ ಶ್ರೀ[illegible]

ಹಾಭಾರತವನ್ನು ಪೇಳಿದವನು ಜ್ಞಾನಯಜ್ಞವನ್ನು ಮಾಡಿದವನಾಗಿ ಸುಖಿಸುವನು. ಕೇಳಿದವರೂ ಅಜ್ಞಾನಾದಿಸರ್ವದೋಷಗಳನ್ನು ಕಳೆದುಕೊಂಡು ಸುಖಿಸುವರು.

॥ ಶ್ರೀ ಮಧ್ವೇಶಾರ್ಪಿತಮಸ್ತು ॥

3. ಪುಷ್ಕರೋದಯಃ ॥

ಜನಮೇಜಯನು ಶ್ರೀ ಹರಿಯ ಮಹದ್ಯಶವನ್ನು ವಿಶದವಾಗಿ ಕೇಳಲು ಇಚ್ಛಿಸಿ "ನತಸ್ಯೇಶೇಕಶ್ಚನತಸ್ಯನಾಮ ಮಹದ್ಯಶಃ । ತಸ್ಮಿನ್ ಯಶೋನಿಹಿತಂ ವಿಶ್ವರೂಪಂ" ಎಂದು ವೇದದಲ್ಲಿ ಪೊಗಳಲ್ಪಡುವ ಶ್ರೀ ನಾರಾಯಣನ ಮಹಿಮೆಯಸ್ನು ಕುರಿತುಪ್ರಶ್ನಿಸಿದನು. ಶ್ರೀ ಹರಿಯ ಮಹದ್ಯಶವು ಅನಂತವಾಗಿದೆ. ಅದನ್ನು ಸಾಕಲ್ಯೇನ ಪೇಳಿ ಮುಗಿಸಲು ಶ್ರೀ ಬ್ರಹ್ಮರುದ್ರಾದಿಗಳಿಗೂ ಸಾಧ್ಯವಲ್ಲ. ಅಂತಹ ಶ್ರೀ ಹರಿಯಲ್ಲಿ ಜಗತ್ತಿನ ನಾಸುರೂಪಕ್ರಿಯಾದಿಗಳೆಲ್ಲವೂ ಆಶ್ರಯಿಸಿನಿಂತಿವೆ. ಎಂದು ಶ್ರುತ್ಯರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು, ಯಥಾಯೋಗ್ಯವಾಗಿ ತಿಳಿಯಲು ಕೋರಿದನು.

"ಅಧೀತ್ಯಸರ್ವಮಧ್ಯಾತ್ಯಂಬ್ರಹ್ಮಲೋಕೇ ಮಹೀಯತೇ" ಎಂದು ಮುಗಿಸಲ್ಪಡುವುದರಿಂದಲೂ ಶ್ರೀ ಹರಿವಂಶವು ಕೇವಲ ಶ್ರೀ ಹರಿಮಹಿಮಾ ಪ್ರತಿಪಾದಕವೇ ಆಗಿದೆ ಎಂದು ತಿಳಿದುಬರುವುದು. ಏಕಾರ್ಣವ, ದೇವ, ಅಸುರ, ಪುಷ್ಕರ, ಯುಗ, ಪ್ರಳಯ ಇತ್ಯಾದಿಸರ್ವಶಬ್ದಗಳು ಶ್ರೀ ಹರಿಯನಾಮಗಳು. ಮುಖ್ಯಾರ್ಥದಿಂದ ಶ್ರೀಶಪ್ರತಿಪಾದಕವಾದವೇದವು ಅಮುಖ್ಯಾರ್ಥದಿಂದ ಇತರಜಗತ್ತನ್ನೂ ನಿರೂಪಿಸುವುದು. ಅಜಾಮೇಕಾಂಲೋಹಿತ ಶುಕ್ಲಕೃಷ್ಣಾಂ ಎಂದು ಶ್ರೀ ತತ್ವವೂ, ದ್ವಾಸುಪರ್ಣಾಎಂಬಲ್ಲಿ ಜೀವತತ್ವವೂ ನಿರೂಪಿತವಾಗಿ, ಶ್ರೀ ಹರಿಯು ಪ್ರಕೃತಿ (ಅಕ್ಷರ)ಗೂ ಮತ್ತೂ (ಕ್ಷರ) ಬ್ರಹ್ಮಾದಿಜೀವರಿಗೂ ಭಿನ್ನನು, ನಿಯಾಮಕ ಸ್ವಾಮಿಯು ಆಗಿರುವನೆಂದು ಸ್ಪಷ್ಟವಾಗಿ ಶ್ರುತಿಯುಸಾರುತ್ತಿದೆ. ಎಲ್ಲಿವೇದಾದಿ ಶಾಸ್ತ್ರಗಳನ್ನು ಓದಿ, ತತ್ಪ್ರತಿಪಾದಿತನಾಗಿರುವ ಶ್ರೀ ಹರಿಯನ್ನು ತಿಳಿಯದವನು ವೇದಾಧ್ಯಯನಾದಿಗಳಿಂದ ಹೊಂದುವುದಾವುದೂಇಲ್ಲ ಎಂದು "ಯಸ್ತನ್ನವೇದ ಕಿಮೃಚಾಕರಿಷ್ಯತಿ ವೇದವುಪೇಳುತ್ತಿದೆ ಆದ್ದರಿಂದ ಭಾರತ ಭಾಗವಾದ ಶ್ರೀ ಹರಿವಂಶವೆಲ್ಲವೂ ಪ್ರತ್ಯಕ್ಷರವೂ, ಪ್ರತಿಪದವೂ, ಪ್ರತಿವಾಕ್ಯವೂ ಶ್ರೀ ನಾರಾಯಣ ಮಹಿಮೆಯನ್ನು ಹೇಳುತ್ತಿದೆ ಇಂತಹ ಶಾಸ್ತ್ರ ಮರ್ಮವನ್ನರಿತವನಾದ್ದರಿಂದ ಜನಮೇಜಯನು ಬ್ರಹ್ಮತತ್ವವು ಅದ್ವಯವಾಗಿದೆ. ಇತರವೆಲ್ಲವೂ ದ್ವಯವಾಗಿದೆ. ಎಂದು ಮನಗಂಡಿರುವನು.

"ಸಲಿಲೇ ಏಕೊದ್ರಷ್ಟಾ" (ಶ್ರೀ ಹರಿಯುಸರ್ವಜ್ಞನಾಗಿ ಪ್ರಳಯೋದಧಿಯಲ್ಲಿ ಸ್ವಗತಭೇದವಿವರ್ಜಿತನಾಗೇ ಇದ್ದನು) "ಅದ್ವೈತೋಭವತಿ" ಎಂದರೆ ಇದೇಅರ್ಥ.

ಅವನಿಗೆ ಎರಡನೇ ವಸ್ತು ಸಮಾನವಾದೂದೇಇಲ್ಲ ಅಂದಮೇಲೆ ಅಧಿಕವಾದವಸ್ತುವು ಇಲ್ಲವೇಇಲ್ಲ ಎಂದು ಹೇಳಬೇಕೇ ?.

ಏಕಾರ್ಣವವೆಂದರೆ ಅವ್ಯಾಕೃತಸಮುದ್ರ, ನಭ ಎಂದರೆ ಅವ್ಯಾಕೃತಾಕಾಶ ಎಂದು ಅರ್ಥವು. ಅವೆರಡೂ ಶ್ರೀ ದೇವೀರೂಪಗಳೆನಿಸಿ, ಆಕೆಯು ಅಧೀನವಾಗಿರುವವು. "ಅನಯ್ವೈವದಿಶಾಧ್ಯಾತ್ಮಮಾಧಿದೈವಿಕರೂಪಕೈಃ | ನಿರೂಪಿತಂಪುರಾಣೇಷು ಪೂರ್ವೇಷ್ವಪಿ ನಸಂಶಯಃ||" ಎಂಬ ವಾಕ್ಯದಂತೆ ಎಲ್ಲಪುರಾಣಗಳಲ್ಲಿಯು ಶ್ರೀಶನ ಆಧ್ಯಾತ್ಮಿಕಾಧಿಭೌತಿಕಾಧಿದೈವಿಕ ರೂಪತ್ರಯವು ನಿರೂಪಿತವಾಗಿದೆ ಎಂದು ಜ್ಞಾನಿಜನ ಸಮ್ಮತವಾಗಿದೆ. "ಅತ್ರಾಪಿಬ್ರಹ್ಮಣಃ ತತ್ವಂಪಾರೋಕ್ಷ್ಯೇಣ ಪ್ರದರ್ಶಿತಂ ಚಕ್ರೇ ದುರ್ಜನ ಚೋರೇಭ್ಯಃ ತತ್ವರತ್ನಂ ಸುರಕ್ಷಿತಂ || ಎಂದು ಶ್ರೀ ಹರಿವಂಶದಲ್ಲಿಯೂ ಶ್ರೀ ಹರಿ ತತ್ವರತ್ನವು ಅನೇಕಾಖ್ಯಾನ ಸಮೂಹದಲ್ಲಿ ಅಡಗಿಸಿಟ್ಟು, ಸುಜನರಿಗೆ ಮಾತ್ರ ಅದರ ಪ್ರಕಾಶವಾಗಿ. ದುರ್ಜನ ಚೋರರಿಗೆ ಅದುಸಿಗದಂತೆ ರಕ್ಷಿಸಲ್ಪಟ್ಟಿದೆ. "ಪರೋಕ್ಷಪ್ರಿಯಾಹಿದೇವಾಃ ಪ್ರತ್ಯಕ್ಷದ್ವಿಷಃ" ಎಂದು ವೇದವೇಹೇಳುತ್ತಿದೆ

ಸಂಸಾರಿಜನರಿಗೆ ಆಗುತ್ತಿರುವ ತಾಪತ್ರಯಗಳನ್ನು ಕೇಳಿ, ಭೀತನಾದ ಜನಮೇಜಯನು "ಪೂಜ್ಯವೈಶಂಪಾಯನ ! ತರತಿಶೋಕಂ ಆತ್ಮವಿತ್"=ಬ್ರಹ್ಮಜ್ಞಾನಿಯು ಶೋಕಸಾಗರವನ್ನು ದಾಟಿಬಿಡುವನು. ಆದಕ್ಕಾಗಿ "ನಾನ್ಯಃ ಪಂಥಾ ವಿದ್ಯತೇ ಅಯನಾಯ" = ಮೋಕ್ಷಸುಖಕ್ಕೆ ಬ್ರಹ್ಮಜ್ಞಾನ ತತ್ಪ್ರಸಾದಗಳನ್ನು ಬಿಟ್ಟರೆ ಬೇರೆಮಾರ್ಗವಿಲ್ಲ "ಆದುದರಿಂದ, ನನಗೆ ಶ್ರೀ ಹರಿಪ್ರಸಾದಜನಕವಾದ ಭಕ್ತಿಜ್ಞಾನಮಾರ್ಗಗಳನ್ನು ನಿರೂಪಿಸು ! ಜ್ಞಾನವಾದರೂ ಶ್ರೀ ಪದ್ಮನಾಭನ ಮಹಿಮಾ ಶ್ರವಣಮನನಧ್ಯಾನಗಳಿಂದಲಲ್ಲವೇ ?" ಎಂದು ಕೇಳಿದನು.

"ಪ್ರಳಯಸಾಗರದಿ ಶ್ರೀ ಲೋಲನು ಮಲಗಿದ್ದನು. ಆತನ ನಾಭಿಯಿಂದ ಪುಷ್ಕರವು (ಪದ್ಮವು) ಪುಟ್ಟಬಂತು. ಅದರಲ್ಲಿಲೋಕಗಳೂ, ಲೋಕದ ದೇವಮಾನವದಾನವಾದಿ ಪ್ರಜರೂ ದೇಹಯೋಗದಿಂದ ಉದ್ಭವಿಸಿದರು. ಇಂತು ಸರ್ವಜಗವನ್ನೂ ಸೃಜಿಸಿ, ಪಾಲಿಸಿ, ಸಂಹರಿಸಿ, ನಿಯಮಿಸಿ ವಿರಾಜಿಸುವ ಶ್ರೀ ಹರಿಯ ಅನಂತ ಕಲ್ಯಾಣ ಗುಣಗಳನ್ನು ಕೇಳುತ್ತಿರುವನನಗೆ ಸಾಕೆನಿಸಿಲ್ಲ. ಶ್ರೀಶನು ಸ್ವಪಿತಿ = ಎಂದರೆ ತನ್ನೆಲ್ಲ ಅವತಾರಗಳನ್ನೂ ತನ್ನಲ್ಲಿಟ್ಟುಕೊಂಡು ಅದ್ವಯನಾಗಿದ್ದನು. ಮಿಕ್ಕಜೀವರನ್ನು ತನ್ನ ಉದರದಲ್ಲಿಟ್ಟು ಸಾಧನ ಹೀನರನ್ನಾಗಿಸಿದ್ದನು. ಅಂತಿದ್ದಕಾಲದ ಪರಿಮಾಣವೆಷ್ಟು? ಕಾಲವು ಅನಂತವಾದರೂ ಅದರಲ್ಲಿದ್ದು ಅವಯವಕಾಲವನ್ನು ಎಂತು ನಿರ್ಮಿಸಿದನು. ಹಗಲು, ರಾತ್ರಿ, ಪಕ್ಷ, ಮಾಸವತ್ಸರಗಳೆಂತು ವಿಂಗಡಿಸಲ್ಪಟ್ಟವು ? ಸೃಷ್ಟಿಕಾಲದಲ್ಲಿ ಶ್ರೀಶನಿಂದ ಪ್ರಜಾಪತಿಗಳು ಪುಟ್ಟಿ ಜಗತ್ತಿನ ಜನಸಂತತಿಯನ್ನು ವೃದ್ಧಿಪಡಿಸಿದ

ವಿಧಾನವಾವುದು ? ವಿವಿಧವಾದ ಜೀವಜಡಗಳು ಶ್ರೀಶನಿಂದ ಎಂತು ಸೃಜಿಸಲ್ಪಟ್ಟರು ? ಪ್ರಳಯಕಾಲದಲ್ಲಿ ದೇವಾಸುರರು ಇದ್ದಿದ್ದಿಲ್ಲ, ಸ್ಥಾವರಗಳಿಲ್ಲ. ಅನಲಾನಿಲಾಕಾಶಾದಿಗಳಿಲ್ಲ. ಎಲ್ಲವನ್ನೂ ತನ್ನ ಉದರದಲ್ಲಿಟ್ಟು, ಅವೆಲ್ಲ, ಇದ್ದೂ, ಇಲ್ಲದಂತೆ, ಮಾಡಿ ಆಳುವ ಶ್ರೀ ಪದ್ಮನಾಭನ ಮಹಿಮೆಯನ್ನು ಹೇಳು! (ಒಂದನೇಪ್ರಶ್ನೆ) ಶ್ರೀ ಹರಿಯಿಂದ ಅವ್ಯಾಕೃತಾಕಾಶವು ವ್ಯಾಕೃತವಾಗಿ, ಅದರಲ್ಲಿ ದೇವಾದಿಗಳು, ಸೂತ್ರನಾಮಕ ಮುಖ್ಯವಾಯುವಿನದ್ವಾರಾ ಎಂತು ದೇಹಧಾರಣರೂಪ ಉತ್ಪತ್ತಿಯನ್ನು ಪೊಂದಿದರು ? (ಎರಡನೇಪ್ರಶ್ನೆ) ಸೂತ್ರನಾಮಕ ಮುಖ್ಯಪ್ರಾಣನ ತಂದೆಯಾದ ಶ್ರೀ ರಮಣನನ್ನು ತಿಳಿದು, ಪೊಂದಿಸುಖಿಸುವ ಸಾಧನಗಳಾವುವು ? (ಮೂರನೇಪ್ರಶ್ನೆ). ಅಖಂಡಕಾಲ ಸ್ವಾಮಿಯೂಆದ ಶ್ರೀ ಹರಿಯು ಕಾಲಾವಯವಗಳಾದ ವತ್ಸರಾದಿನಿಮೇಷಾಂತಗಳನ್ನು ಎಂತು ಸೃಜಿಸಿದನು ? ನಿರ್ವಿಕಾರನಾದ ಶ್ರೀಶನಿಗೆ ಪರಿಣಾಮಿಕಾರಣತ್ವವಾಗಲಿ, ಉಪಾದಾನಕಾರಣತ್ವವಾಗಲಿ ಕೂಡುವುದಿಲ್ಲ. ಅಂದಮೇಲೆ ಆತನು ಸ್ವತಂತ್ರನಿಮಿತ್ತಕಾರಣನೇ ಆಗಿರಬೇಕು. ಸೂಕ್ಷ್ಮವಾದ ಜಡವನ್ನು ವಿಕಾರಗೊಳಿಸಿ, ಬೆಳೆಸಿ, ಜೀವರಿಗೆ ಭೌತಿಕದೇಹ ಸಂಪರ್ಕವನ್ನಿತ್ತು ಸೃಜಿಸಿ, ತತ್ತದ್ಯೋಗ್ಯಸಾಧನವನ್ನು ಮಾಡಿಸಿ, ತತ್ತದ್ಯೋಗ್ಯಗತಿಯನ್ನೀವ ಪ್ರಭುವಿನಲೀಲೆಗಳನ್ನು ವರ್ಣಿಸು ! (ನಾಲ್ಕನೇಪ್ರಶ್ನೆ). ಮಹದಾದಿತತ್ವಗಳು ತದಭಿಮಾನಿಗಳನ್ನೂ ವಿವರಿಸು ! ಜೀವರಿಗೆ ಬಂದಿರುವ ಅಜ್ಞಾನವನ್ನು ಅವರು ಕಳೆದುಕೊಂಡು ಶ್ರೀಶಸನ್ನಿಧಿಯನ್ನು ಸೇರುವುದೆಂತು ? ಅನಂತರೋಽಬಾಹ್ಯಃ ಪ್ರಜ್ಞಾನ ಘನಃ ಎಂಬ ಶ್ರುತಿಯಂತೆ ಸರ್ವತ್ರ ಅಂತರ್ಯಾಮಿ ಯಾಗಿರುವ ಆನಂದಮಯನಾದ ಶ್ರೀಶನಿಗೆ ತತ್ಕೃತಲೇಪವಿರುವುದಿಲ್ಲವಲ್ಲವೇ ? ಅದೆಂತು ? (ಐದನೇಪ್ರಶ್ನೆ). ಶೂನ್ಯತುಲಾಂದಧತೇ ! ಎಂಬ ಶ್ರೀ ಭಾಗವತವಚನದಂತೆ ಮಹಾಭೂತಾದಿತತ್ವ ಸಮುದಾಯವನ್ನು ಪ್ರಕೃತಿಯಿಂದ ಸೃಜಿಸಿ, ವಿಸ್ತರಿಸಿ, ಕಾಲಕರ್ಮಸಂಯೋಗದಿಂದ ತತ್ತದ್ಯೋನಿಗಳಲ್ಲಿ ತಂದು, ಮಹಾಪ್ರಭುವು ಸರ್ವಜ್ಞನು, ಆದನಾರಾಯಣನು ತತ್ತದ್ಯೋಗ್ಯಸಾಧನಗತಿಗಳನ್ನು ಈಯುವದೆಂತು ? ಶ್ರೀ ಹರಿಯ ಪ್ರಾದುರ್ಭಾವಗಳನ್ನೂ, ತತ್ಕೃತಲೀಲಾವೈಭವವನ್ನೂ ವರ್ಣಿಸು ! ಶ್ರದ್ಧೆಯಿಂದ ಕೇಳುತ್ತಿರುವ ನಮ್ಮ ಸಂಶಯಗಳನ್ನೆಲ್ಲ ನಿವಾರಿಸಿ, ನಮ್ಮನ್ನು ಉದ್ಧರಿಸು" ಎಂದು ಕೇಳಿದರಾಜನಿಗೆ ಮುನಿವರನಿಂತೆಂದನು.

"ಶ್ರೀ ನಾರಾಯಣನ ಮಹಾವೈಭವವನ್ನು ಕೇಳಬೇಕೆಂಬ ಸದಿಚ್ಛೆಯು ಪಾವನಭರತ ವಂಶದಲ್ಲಿಪುಟ್ಟಿದ ನಿನಗೆ ಯೋಗ್ಯವೇಆಗಿದೆ ! ಆದಿಕಾಲದಿಂದಲು ಅನಾದಿಎಂದು ಪ್ರಸಿದ್ಧವಾದ ವೇದಗಳಿಂದಲು, ಪುರಾಣಗಳಿಂದಲು, ಆಪ್ತ ಬ್ರಾಹ್ಮಣರಿಂದಲು ನಾನು ಕೇಳಿತಿಳಿದಿರುವುದನ್ನೇ ನಿನಗೆ ನಾನು ಪೇಳುವೆನು. ಸರ್ವಜ್ಞನಾದ ವೇದವ್ಯಾಸನ ದಯೆ ಎಂದುತಿಳಿ ! ಅದನ್ನೂ ಸಾಕಲ್ಯೇನ ನಾನುವರ್ಣಿಸಲಾರೆನು.

ವೇದವಿದಗ್ರಣಿಗಳಾದ ಬೃಹಸ್ಪತಿವರರೂ ವರ್ಣಿಸಲಾರರು. "ಸೋಹಂಭಗವೋ ಮಂತ್ರ ವಿದೇವಾಸ್ಮಿನಾತ್ಮವಿತ್" ಎಂಬ ನಾರದನೂ ಪೂರ್ತಿಯಾಗಿ ವರ್ಣಿಸಲಾರನು. ಆದರೂ ತನುಮನಶ್ಶುದ್ಧಿಯಾಗಲೆಂದು ಕೈಲಾದಷ್ಟು ವಿವರಿಸುವೆನು

ಶ್ರೀ ಹರಿಯು ಸರ್ವದೇವತೆಗಳಿಗೂ ಪ್ರಭುವಾಗಿ, ಅವರವರನಾಮ ರೂಪಕ್ರಿಯಾದಿಗಳ ಪ್ರವರ್ತಕನಾಗಿ ಅಧಿದೈವನೆನಿಸಿರುವನು. ದೇಹಗಳಲ್ಲಿ ಅಂತರ್ಯಾಮಿಯಾಗಿ ಜೀವರವ್ಯಾಪಾರಗಳನ್ನು ನಡೆಸುತ್ತಾ, ಅಧ್ಯಾತ್ಮನೆನಿಸಿಜೀವ ಭಿನ್ನನಾಗಿರುವನು. ಮಹಾಭೂತಗಳಲ್ಲಿದ್ದು ತತ್ತದ್ಗುಣ ಪ್ರವರ್ತಕನಾಗಿ ಅಧಿಭೂತನೆನಿಸಿರುವನು. ಅವನನ್ನು ಅಬಾಧಿಕಸಕಲೈಶ್ವರ್ಯನೆಂದು ಸತ್ಯಶಬ್ದದಿಂದ ವೇದಗಳು ಕರೆಯುವವು. ಬುದ್ಧಿಮನೋದಶೇಂದ್ರಿಯಗಳಸ್ವಾಮಿಯಾದ ಶ್ರೀಶನನ್ನು ಕ್ಷೇತ್ರಜ್ಞನೆಂಬುವರು ಅವನೇ ಸರ್ವಚರಾಚರ ಜಗತ್ತಿಗೆ ಸ್ವತಂತ್ರಶಾಸಕನು

ಕಾಲಸ್ವಾಮಿಯಾದ ಶ್ರೀ ರಮಣನು ಸೃಷ್ಟಿಯನ್ನು ಮಾಡಲಿಚ್ಛಿಸಿದನು. ಮೊದಲು ಕಾಲದಲ್ಲಿಯುಗಾದಿ ಅವಯವಗಳನ್ನು ನಿರ್ಮಿಸಿದನು. ಜೀವರಶರೀರ ವ್ಯಾಪಾರ ಪ್ರವರ್ತನೆಯಾಗಲೆಂದು ಜೀವಶ್ರೇಷ್ಠನಾದ ಮುಖ್ಯಪ್ರಾಣನನ್ನೂ, ಬುದ್ಧಿ ವ್ಯಾಪಾರಕ್ಕೆಂದು ರಮಾನಾಮಕ ಭಾರತೀ ದೇವಿಯನ್ನೂ ಸೃಜಿಸಿ, ಅವರದ್ವಾರಾ ಮಿಕ್ಕೆಲ್ಲ ಜೀವರಿಗೆ ಶರೀರಸಂಯೋಗರೂಪವಾದ ಸೃಷ್ಟಿಯನ್ನು ಮಾಡಿದನು. ಅವನೇ ಪ್ರಳಯಕಾಲವನ್ನೂ ನಿರ್ಣಯಿಸಿ, ಆಗ ಸರ್ವಸಂಹಾರವನ್ನೂ ಮಾಡಿಬಿಡುವನು. ಶರೀರಯೋಗದಿಂದ ಜೀವರಿಗೆ ಅಹಂಮಮಕಾರಗಳು ಪುಟ್ಟಿ. ಅದರಿಂದ ಅವರ ಸಾಂಸಾರಿಕ ತಾಪಗಳಲ್ಲಿ ನರಳುವದೂ, ದುರಭಿಮಾನತ್ಯಾಗವನ್ನುಮಾಡಿ ಶ್ರೀ ಹರಿಯಜ್ಞಾನದಿಂದ ಲಭಿಸಿದಭಕ್ತಿಪರಿಪಾಕದಿಂದ ಮುಕ್ತಿಸುಖವನ್ನು ಪೊಂದುವುದೂ ಶ್ರೀ ಶನಇಚ್ಛೆಯಿಂದಲೇ ! ಯಜ್ಞಯಾಗಾದಿ ಫಲಪ್ರದನು, ಶಾಸ್ತ್ರಪ್ರವಕ್ತನು, ಸರ್ವಸ್ವತಂತ್ರನು ಆದ ಶ್ರೀ ನಾರಾಯಣನ ಪ್ರಸಾದದಿಂದಲೇ ಜೀವರು ಸರ್ವಶ್ರೇಯಸ್ಸನ್ನೂ ಪೊಂದುವರು ಬ್ರಹ್ಮರುದ್ರೇಂದ್ರಾದಿದೇವತೆಗಳಿಗೆ ಸ್ವಾಮಿಯು, ವೇದಪುರಾಣೇತಿಹಾಸಗಳಲ್ಲಿ ಮುಖ್ಯಪ್ರತಿಪಾದ್ಯನು, ಚಿಂತಾಸಂತಾಪಾದಿ ರಹಿತನು, ಭಕ್ತವತ್ಸಲನು, ಪರಮಕರುಣಾಪಾರಾವಾರನು ಆದ ಶ್ರೀ ಮನ್ನಾರಾಯಣನು ಸರ್ವೋತ್ತಮನೆಂದು ತಿಳಿಯುವುದೇ ಜೀವತರಣೋಪಾಯವು. ಶ್ರೀ ಹರಯೇನಮಃ ||.

4. ಕಾಲಸೃಷ್ಟಿ.

ಶ್ರೀ ಹರಿಯು ಅನಂತವು ಅನಾದಿಯೂ ಆದ ಕಾಲವನ್ನು ಜೀವರ ಸೃಷ್ಟಿ ಸಂಹಾರಗಳ ಅವಧಿಯನ್ನು ನಿರ್ಣಯಿಸಲೆಂದು ಯುಗಾದಿ ಅವಯವಗಳನ್ನು ವಿಂಗಡಿಸಿ, ನಿರ್ಮಿಸಿದನು.

ದೇವತೆಗಳಲೋಕದಲ್ಲಿ ಮನುಜ ಸಂವತ್ಸರವಾದರೆ ಒಂದುದಿನವಾಗುವುದು ಅಂತಹ ಹನ್ನೆರಡುಸಾವಿರ ವರ್ಷಗಳಾದರೆ ಒಂದು ಮಹಾಯುಗವೆನಿಸುವುದು. ಮಹಾಯುಗಗಳು ಎಪ್ಪತ್ತೊಂದಾದಾಗ ಒಂದು ಬ್ರಹ್ಮದಿನವೂ ಅಷ್ಟೇಮತ್ತಾದಾಗ ಬ್ರಹ್ಮರಾತ್ರಿಯೂ ಆಗಿ ಒಂದುಕಲ್ಪವೆನಿಸುವುದು. ಅಂತಹದಿನಗಳು ಮುನ್ನೂರ ಅರ ವತ್ತಾದರೆ ಬ್ರಹ್ಮದೇವನಿಗೆ ಒಂದುವರ್ಷವು. ಅಂತಹನೂರುವರ್ಷಗಳೆ ಆಯುವು ಬ್ರಹ್ಮದೇವನಿಗೆ ಶ್ರೀದೇವನಿತ್ತು ಸಾಧನಮಾಡಿಸುವನು.

ಮಹಾಯುಗದಲ್ಲಿ ಕೃತತ್ರೇತಾದ್ವಾಪರಕಲಿ ಎಂಬ ನಾಲ್ಕುಯುಗಗಳಿರುವವು. ಕೃತಯುಗದಲ್ಲಿ ನಾಲ್ಕುಸಾವಿರ ವರ್ಷಗಳು, ತ್ರೇತೆಗೆ ಮೂರುಸಾವಿರ ವರ್ಷಗಳು, ದ್ವಾಪರದಿ ಎರಡು, ಕಲಿಯಲ್ಲಿ ಒಂದು ಸಾವಿರ ದೇವತಾವರ್ಷಗಳಿದ್ದು, ಎರಡೂಕೊನೆ ಗಳಲ್ಲಿ, ನಾಲ್ಕು, ಮೂರು, ಎರಡು, ಒಂದುನೂರುವರ್ಷಗಳ ಸಂಧಿಕಾಲವಿರುವುದು. ಇಂತು ಹನ್ನೆರಡುಸಾವಿರದ ದೇವವರ್ಷಗಳು ಮಹಾಯುಗವಾಗುವುದು ಬ್ರಹ್ಮದೇವನ ನೂರುವರ್ಷವು ಶ್ರೀಶನನಿಮೇಷಕ್ಕೂ ಸಮವಾಗದು. ಶ್ರೀ ಹರಿಗೆ ಕಾಲಕೃತವಿಕಾರ ವಿಲ್ಲ, ಅವನು ಕಾಲಸ್ವಾಮಿ.

ಧರ್ಮದ ನಾಲ್ಕುಪಾದಗಳಾದ ತಪಶ್ಶೌಚದಯಾ ಸತ್ಯಗಳು. ಕೃತಯುಗದಲ್ಲಿ ಪೂರ್ಣವಾಗಿನಡೆಯುವವು ಅಧರ್ಮದನಾಲ್ಕುಪಾದಗಳಿಂದ ಅಂದರೆ ಸ್ಮಯ, ಸಂಗ, ಮದ ಅನೃತಗಳಿಂದ ಅವುಬಾಧಿತವಾಗದಿರುವವು ತ್ರೇತಾಯುಗದಲ್ಲಿ ತಪಃಪಾದವು ಸ್ಮಯದಿಂದ ಕೆಡುವುದು. ಸಾತ್ವಿಕರೂಕೂಡಸ್ಮಯ (ಅಹಂಕಾರ)ದಿಂದ ತಪೋ ಹಾನಿಯನ್ನು ಹೊಂದುವಂತಾಗುವುದೆಂದ ಮೇಲೆ, ಇನ್ನುರಾಜಸತಾಮಸರುಸ್ವತಃ ದುಷ್ಟಸ್ಮಯದಿಂದ ಯುಕ್ತರಾಗಿ ಕೆಡುವುರೆಂದು ಹೇಳಬೇಕೇ ? ಕೃತಯುಗದಲ್ಲಿಯೂ ಅಧರ್ಮಪಾದಗಳಿಂದ ಆಗುವ ಉಪದ್ರುವವನ್ನು ಸಾತ್ವಿಕೇತರರು ಪೊಂದುವರು. ದ್ವಾಪ ರದಲ್ಲಿ ಸಂಗ (ದುಷ್ಟಸಂಗದುರಭಿಮಾನ ದಿಂದ ತಪಶ್ಶೌಚಪಾದಗಳು ಕೆಡುವವು. ಕಲಿಯು ಬಂದಾಗ ಮದದಿಂದದಯೆಯೂಕೆಟ್ಟು, ಧರ್ಮದ ಸತ್ಯಪಾದವೊಂದೇ ಉಳಿ ಯುವದು. ಕಲಿಯಕೊನೆಯಲ್ಲಿ ಅನೃತದಿಂದ ಅದೂಕೆಟ್ಟು, ಅಧರ್ಮವೇರಾಜ್ಯವಾಳು ವದು. ಯುಗಕ್ರಮದಿಂದ ಧರ್ಮಪಾದಗಳಲ್ಲಿ ಅಧರ್ಮಪಾದಗಳು, ರೋಗದಂತೆ ಬೆರೆತು, ಬೆಳೆದು, ಜನರನ್ನು ಅಮಾರ್ಗಗಾಮಿಗಳನ್ನಾಗಿಸುವುದು. ಜನರು ಸ್ತೋತ್ರಪ್ರಿ ಯರೂ, ಆಚಾರಾಡಂಬರರೂ, ಸ್ವಾರ್ಥಸಾಧಕರು, ಅನೃತಭಾಷಿಗಳೂ ಆಗುವರು. ಕೃತಯುಗದಲ್ಲಿಯೂ ಅಧರ್ಮರೂಪವಾದ ದುಃಖವಿದ್ದೇಇದೆ. ಆದರೆ ಅದುಧರ್ಮಪಾದ ಹೃದಯವನ್ನು ಬಾಧಿಸಲಾರದಿರುವುದು. ಇತರಯುಗಗಳಲ್ಲಿ ಅಧರ್ಮದಬಾಧೆಯು ಧರ್ಮಪಾದಕ್ಕೂ ಆಗುತ್ತಿರುವುದು. ಫಲಾಭಿಸಂಧಿರಹಿತವೂ ಹಿಂಸಾಶೂನ್ಯವೂ ಆದ ಧರ್ಮವು ಕೃತಯುಗದ ಲಕ್ಷಣವು. ಫಲಾಭಿಸಂಧಿಯಿಂದ ಕೂಡಿಹಿಂಸೆಯಿಲ್ಲದ್ದು ತ್ರೇತಾ

ಯುಗವು. ಹಿಂಸಾರಹಿತವಾದರೂ ದಂಭದಿಂದ ಮಾಡುವುದು ದ್ವಾಪರವು. ಧರ್ಮ ಲೋಪವೇಕಲಿಲಕ್ಷಣವು ತ್ರೇತೆಯಲ್ಲಿ ಸ್ಮಯಸಂಗಗಳೆಂಬ ಎರಡು ಅಧರ್ಮಪಾದಗಳಿಂದ ಬೆರೆತ ಶೌಚದಯಾಸತ್ಯಗಳೆಂಬ ಮೂರು ಧರ್ಮಪಾದಗಳು ಚನ್ನಾಗಿನಡೆಯುವವು.

ಕೃತಯುಗದಲ್ಲಿ ವರ್ಣಗಳು ನಾಲ್ಕೂಅನಾದಿಯಂತೆ ಬೆರೆಯದೆ ಶುದ್ಧವಾಗಿರುವವು. ಇಂದ್ರಿಯಲೋಲುಪರಾದ ಜನರಿಂದ ಅವು ಮುಂದೆವಿಕಾರವನ್ನು ಹೊಂದಿ ಸಂಕರಜಾತಿಗಳು ಪುಟ್ಟುವವು. ದ್ವಾಪರದಲ್ಲಿಮೂರು ಅಧರ್ಮಪಾದಗಳು ಬಲವಾಗಿ ಎರಡು ಸತ್ಯದಯಾಪಾದಗಳಿಂದ ಮಾತ್ರ ಧರ್ಮವು ನಿಂತಿರುವುದು- ಕಲಿಯಲ್ಲಿನಾಲ್ಕು ಅಧರ್ಮಪಾದಗಳು ಬಲಿಷ್ಟವಾಗಿ ಧರ್ಮದಸತ್ಯವೆಂಬ ಒಂದುಪಾದವು ಕೂಡಕೆಡುತ್ತಾ ಹೋಗುವುದು.

ಜನರುಶಠರು, ಪಾಪರತರು. ನೀಚರು. ವೇದಬ್ರಾಹ್ಮಣನಿಂದಕರು, ಅಗಿ ವ್ರತೋಪವಾಸದಾನಗಳನ್ನು ಬಿಟ್ಟುಬಿಡುವರು. ನಾಸ್ತಿಕರು ಪ್ರಬಲರಾಗುವರು. ಕಾಮ, ಅರ್ಥ ಇವೆರಡೇ ಪುರುಷಾರ್ಥಗಳೆನಿಸುವವು. ವಿಪ್ರರು ಶೂದ್ರಸಮಾಚಾರರಾಗುವರು. ಶೂದ್ರರು ಆಚಾರಲಕ್ಷಣರೆನಿಸಿ ಉಪದೇಶಕರಾಗುವರು. ಸ್ವೇಚ್ಛಾಚಾರ ದಿಂದ ಸ್ತ್ರೀದೂಷಣವಾಗಿ, ವರ್ಣಸಂಕರವಾಗುವುದು

ಕೊನೆಗೆ ಕಲ್ಪಾವಸಾನದಲ್ಲಿ ಶ್ರೀಶನಾಜ್ಞಾಧಾರಕನಾಗಿ ರುದ್ರನು ಮಹಾಭಯಂಕರನಾಗಿ ಸರ್ವಸಂಹಾರವನ್ನೂ ಮಾಡುವನು. ಪಂಚಭೂತಗಳು ನೀರಸಗಳಾಗಿ ಅಹಂತತ್ವಮಾನಿ ರುದ್ರನಲ್ಲಿ ಸೇರುವವು . ರೂಪವು ಸೂರ್ಯನಲ್ಲಿ ಗಂಧ (ಘ್ರಾಣ)ವು ಅಶ್ವಿನೀದ್ವಯದಲ್ಲಿ, ಶಬ್ದವು ವಿನಾಯಕನಲ್ಲಿ, ರಸವುವರುಣನಲ್ಲಿ, ಸ್ಪರ್ಶವುವಾಯುವಿನಲ್ಲಿ ಸೇರಿ, ಅವರೆಲ್ಲರೂರುದ್ರನಲ್ಲಿಸೇರಿ. ಆತನ ದ್ವಾರಾಮುಖ್ಯಪ್ರಾಣನನ್ನು ಹೊಂದುವರು. ಸೂತ್ರನಾಮಕ ಮುಖ್ಯಪ್ರಾಣನು ತನ್ನೆಲ್ಲವನ್ನೂ ಶ್ರೀ ರಮಣನಿಗರ್ಪಿಸಿ, ತಾನೂ ಆತನಲ್ಲಿ ಲೀನನಾಗಿರುವನು.

ಕಾಣುವುದೆಲ್ಲವೂ ನಶ್ವರವು ಎಂದು ತಿಳಿದವನೇಜ್ಞಾನಿಯು. ಸರ್ವವೂಮಿಥ್ಯಾ ಎಂದು ತಿಳಿದವನೇ ಅನ್ಯಥಾಜ್ಞಾನಿಯು. ಜ್ಞಾನಿಗೆನರಕವಿಲ್ಲ. ಮಿಥ್ಯಾಜ್ಞಾನಿಗೆ ಸದ್ಗತಿಯಿಲ್ಲ ಶ್ರೀ ನಾರಾಯಣನು ತನ್ನಅಚಿಂತ್ಯ ಶಕ್ತಿಯಿಂದ ರಚಿಸಿರುವ ಜಗತ್ತನ್ನು, ತಾನಾಗಿ ನಾಶಪಡಿಸಿ, ಸೂಕ್ಷ್ಮತಮಜಡವನ್ನೂ, ಅಣುಭೂತ ಜೀವರನ್ನೂ ಬೇರೆ ಬೇರೆಯಾಗಿಯೇನುಂಗಿ, ಉದರದಲ್ಲಿಟ್ಟು ರಮಾಲಿಂಗಿತನಾಗಿ ಯೋಗನಿದ್ರೆಗೈಯುವ ಕಾಲವನ್ನೇ ಪ್ರಳಯವೆಂಬುವರು.

ಪ್ರಳಯವನ್ನು ಶ್ರೀಶನೇಮಾಡುವನು. ಪುನಃಸೃಷ್ಟಿಯೂ ಅವನಿಂದಲೇ ! ರಕ್ಷಕನೂ ಅವನೇ ! ಶ್ರೀಶನುಸ್ವತಂತ್ರನು. ಆನಂದಮಯನು, ಜ್ಞಾನಘನನು.

ಶ್ರೀನಾರಾಯಣನು ಮಹದಹಂಕಾರ ಶಬ್ದಸ್ಪರ್ಶರೂಪರಸಗಂಧಗಳನ್ನು ಪಂಚ ಭೂತಗಳಿಂದ ಸೆಳೆದು ಸಂಕರ್ಷಣರೂಪದಿಂದ ಭೂತಪ್ರಳಯವನ್ನು ಮಾಡುವನು. ಮಹೀಮಂಡಲವು ರಸಮಯವಾಗಿ, ಅದು ತಪ್ತವಾಗಿ, ಶೋಷಿತವಾಗಿ, ನೀರವವಾಗಿ ಶ್ರೀರಮಣನಉದರದಲ್ಲಿ ಸೂಕ್ಷ್ಮವಾಗಿರುವುದು, ಪೃಥಿವೀಭೂತವು ಜಲದಲ್ಲಿ, ಅದು ತೇಜಸ್ಸಿನಲ್ಲಿ, ಅದುವಾಯುವಿನಲ್ಲಿ, ಅದುಆಕಾಶದಲ್ಲಿ, ಅದುಅಹಂಕಾರ (ತಾಮಸ) ದಲ್ಲಿ, ಅದುಮಹತ್ತಿನಲ್ಲಿ ಲಯಪೊಂದುವುದೇ ಪ್ರಳಯವು. ದೇವತಾದೇಹಗಳು ಮನ ಸ್ತತ್ವವೂ ವೈಕಾರಿಕಾಹಂಕಾರದ್ವಾರಾ, ಇಂದ್ರಿಯ ತದ್ದೇವತೆಗಳು ತೈಜಸಾಹಂಕಾರ ದ್ವಾರಾ, ಬುದ್ಧಿಯನ್ನು ಸೇರಿ, ಅಲ್ಲಿಂದಮಹತ್ತು ಎಂಬ ಬ್ರಹ್ಮನಲ್ಲಿ ಸೇರುವವು. ಇಲ್ಲಿಗೆ ಸರ್ವಜೀವಜಡ ಪ್ರಳಯವಾಗುವುದು. ಮಹದಭಿಮಾನಿ ಮುಖ್ಯಪ್ರಾಣನೇ ಶ್ರೀಶನಅಪ್ಪಣೆಯಂತೆ, ಶ್ರೀಶನಿತ್ತಕರ್ಮ ಶಕ್ತಿಯಿಂದ, ಇಷ್ಟೆಲ್ಲಮಾಡಿ ಕೊನೆಗೆ ತಾನೂ ಆತನನ್ನುಸೇರಿ, ಆತ್ಮಾರ್ಪಣಮಾಡಿಕೊಳ್ಳುವನು ಅದೇಮಹಾಪ್ರಳಯವು. ಅದರಕಾಲಾವಧಿಯೂ ಒಂದು ಬ್ರಹ್ಮದೇವನ ಆಯುಃಪರಿಮಿತವಾಗಿದೆ.

ನದನದೀಪರ್ವತತರುಲತಾಗುಲ್ಮತೃಣಗಳು, ಪುರ, ಪತ್ತನಮಂದಿರ ಆಶ್ರಮ ಗಳು ಎಲ್ಲವೂ ತೇಜೋಬಲದಿಂದ ಸುಟ್ಟುಬೂದಿಯಾಗುವವು. ಆವಾಗ ಒಂದುನೂರು ವರ್ಷಗಳಕಾಲ, ಬಿಡದೆ ಮಳೆಬೀಳುವುದು. ಏಕಾರ್ಣವವಾಗಿ ಸರ್ಪಸತ್ವವಿವರ್ಜಿತ ವಾದಾಗ ಶ್ರೀ ಹರಿಯು ಎಲ್ಲವನ್ನೂ ಶೋಷಿಸಿ, ಪ್ರಳಯವನ್ನುಂಟುಮಾಡುವನು.

(ಮೂಲ ೯ ಅಧ್ಯಾಯ)

— ○ —

6. || ಜೀವಸೃಷ್ಟಿ ||

ಜನಮೇಜಯನು "ಮುನಿವರ್ಯ ! ಏಕಾರ್ಣವದಲ್ಲಿ ಶಯನಗೈದಿರುವ ಲಕ್ಷ್ಮೀ ರಮಣನಮಹಿಮೆ ಅಗಾಧವಾಗಿದೆ. ಯಾರೂಎಂದಿಗೂ ಆಮಹಾಪ್ರಭುವಿನ ಮಹಿಮೆ ಯನ್ನು ಪೂರ್ತಿತಿಳಿಯಲಾರದಿರುವರು. ಅಂತಹಸ್ವಾಮಿಯು ಸೃಷ್ಟಿಕಾಲವು ಬಂದಾಗ ಜೀವರನ್ನು ಎಂತು ಹೊರತೆಗೆದು, ದೇಹಯೋಗರೂಪವಾದ ಸೃಷ್ಟಿಯನ್ನು ಮಾಡು ವನು ? ಆಗಭೂತಗಳಿಲ್ಲ, ಮಾತ್ರಾಗಳಿಲ್ಲ, ಜೀವರಿಗೆ ಶರೀರವಿಲ್ಲ, ಕರ್ಮಕ್ಕೆ ಫಲದಾನ ಶಕ್ತಿಯಿಲ್ಲ, ಆಗ ಶ್ರೀ ಹರಿಯು ಅವೆಲ್ಲವನ್ನೂ ಹೇಗೆ ಸೃಜಿಸುವನು ? " ಎಂದು ಪ್ರಶ್ನಿಸಿದನು.

ವೈಶಂಪಾಯನನಿಂತೆಂದನು.

ರಾಜನ್! ಸರ್ವವು ಏಕಾರ್ಣವಾಗಿರುತ್ತಿರಲು, ವಿರಜಸ್ಕನು ಅಪಹತಪಾಪ್ಮನು, ಸತ್ಯ ಸಂಕಲ್ಪನು, ಆನಂದ ಜ್ಞಾನಘನನು ಆದ ಲಕ್ಷ್ಮೀಪತಿಯು ತನ್ನ ಚಿಚ್ಛಕ್ತಿಯಿಂದ

ಯೋಗನಿದ್ರಾ ಮುದ್ರಿತ ನಯನ ಪುಂಡರೀಕಗಳನ್ನು ತೆರೆದು ಪ್ರಕೃತಿ ಶಕ್ತಿಯಾದ ರಮಾದೇವಿಯಿಂದ ಕ್ರೀಡಿಸುವನು, ಆಗ ಪ್ರಳಯ ಕಾಲದ ಅಷ್ಟಮಾಂಶ ಮಾತ್ರ ಉಳಿದಿರುವುದು.

ಮೊದಲು ಶ್ರೀಹರಿಯು ದ್ರವ್ಯ ಕರ್ಮ ಕಾಲಗಳೆಂಬ ಮೂರನ್ನು ವ್ಯಕ್ತಪಡಿಸಿ, ಜೀವರಿಗೆ ದ್ರವ್ಯಕೃತ ಶರೀರಗಳನ್ನು ಕೊಡಲೋಸುಗ, ಪ್ರಕೃತಿಯಿಂದ ಜಡಮಹ ತ್ತತ್ವವನ್ನು ಹೊರಗೆಡಹಿ, ಅದಕ್ಕೆ ಸ್ವಾಮಿಯಾಗೆಂದು ಜೀವೋತ್ತಮನಾದ ಬ್ರಹ್ಮ ದೇವನನ್ನು ಸೃಜಿಸಿ, ನಿಯೋಗಿಸಿದನು ನಾಭಿ ಕಮಲದಲ್ಲಿ ಪುಟ್ಟಿದ ಬ್ರಹ್ಮದೇವನು ಪೂರ್ವಾದಿಮುಖ ಚತುಷ್ಟಯದಿಂದ, ಬ್ರಹ್ಮಪ್ರತಿಪಾದಕ ಋಗ್ಯಜಸ್ಸಾಮಾಥರ್ವಣ ವೇದಗಳನ್ನೂ, ವರ್ಣಗಳನ್ನೂ, ಆಶ್ರಮಗಳನ್ನೂ, ತತ್ತದಭಿಮಾನಿಗಳನ್ನೂ ಶ್ರೀ ಶನಾಜ್ಞೆಯಂತೆ ಸೃಜಿಸಿದನು.

ಮುಖದಿಂದ ಬ್ರಹ್ಮನೆಂಬ ಋತ್ವಿಜನನ್ನೂ ನಾಲ್ಕು ಕೈಗಳಿಂದ ಉದ್ಗಾತ, ಸಾಮಗ, ಹೋತಾ, ಅಧ್ವರ್ಯುಗಳನ್ನೂ, (ಮೈತ್ರಾವರಣ), ಪ್ರತಿಷ್ಠಾತಾ, ಪ್ರತಿ ಪ್ರಸ್ಥಾತಾ, ಪ್ರತಿಹರ್ತಾ, ಪೋತಾ, ಅಚ್ಛಾವಾಕ, ನೇಷ್ಟಾ, ಆಗ್ನಿಧ್ರ, ಸುಬ್ರಹ್ಮಣ್ಯಾ, ಗ್ರಾವಸ್ತೋತಾ, ಉನ್ನೇತಾ ಎಂತೆಂಬುವ ಹದಿನಾರು ಋತ್ವಿಗ್ಜನವಿಪ್ರರನ್ನೂ ಸೃಜಿಸಿದನು. ಪ್ರಣವಾರ್ಥ ಚಿಂತನೆ, ವೇದಾರ್ಥ ಭಾವನಾ, ಸತ್ಯವಚನ, ಪ್ರಾಣಾನ್ನ ಗ್ರಹಸಂಪಾದನ, ಧೀವೈಶದ್ಯ, ಪೂರ್ವಸ್ಮೃತಿ, ಸದಾಚಾರ, ಅಪಾನಜಯ, ಭಾವಿ ದುಃಖಾದಿಚಿಂತಾರಾಹಿತ್ಯ, ಶ್ರವಣಾಸಕ್ತಿ, ಪುಷ್ಟಿ, ಸಾತ್ವಿಕೀಶ್ರದ್ಧಾ, ವೇದಾಂತಪರಿ ನಿಷ್ಠಾ, ಇಂದ್ರಿಯ ಪಾಟವ, ಯಾಗಾಂಗ ರವೃದ್ಧಿ, ಭಕ್ತಿಮುಕ್ತ ಶ್ರೀಹರಿ ಸಮಾಶ್ರಯಣವೆಂಬುವ ಧರ್ಮಗಳನ್ನೂ ಸೃಜಿಸಿ, ಅವರಿಗಿತ್ತು, ದಯಃಪಾಲಿಸಿದನು. ಶ್ರೀಹರಿಯಿಂದ ಮುಖ್ಯಪ್ರಾಣ ಬ್ರಹ್ಮರು, ಅವರಿಂದ ರುದ್ರಾದಿದೇವತೆಗಳೂ, ಮರೀಚ್ಯಾದಿ, ಬ್ರಹ್ಮರ್ಷಿಗಳೂ. ಅವರಿಂದ ಇತರ ದ್ವಿಜರ್ಷಿ ಭರಾಜರ್ಷಿಗಳೂ ವೇದ ವೇದಾಂತಗಳನ್ನು ಕೇಳಿ, ದುಡಿದು, ಅಂತೆಯೇನಡೆದು ಲೋಕಮಂಗಳ ಭಾವನರಾದರು.

ಅಂತಹರಲ್ಲಿ ಮಾರ್ಕಂಡೇಯನೆಂಬ ಮಹನೀಯನು ಪ್ರಳಯಕಾಲ ವಿಲ್ಲದಾಗ ಕೂಡ, ಶ್ರೀಹರಿಯು ಕೃಪೆಮಾಡಿ ತೋರಿದ ಪ್ರಳಯವನ್ನು ತಾನಿದ್ದಲ್ಲೇ ಮನಸಾ ಪ್ರತ್ಯಕ್ಷೀಕರೆಸಿ ನೋಡಿ ಧನ್ಯನಾದನು

ಶೌನಕ! ನಿಮ್ಮ ಪೂರ್ವಜನಾದ ಮಾರ್ಕಂಡೇಯನು ಭಾರ್ಗವ ಗೋತ್ರಜನಾದ ಮಾರ್ಕಂಡುವಿನ ಸುತನು. ಮಹಾತಪಃಶ್ರೀಯುಕ್ತನು, ಬ್ರಹ್ಮಚರ್ಯವ್ರತ ಸಕ್ತನು. ಶ್ರೀಹರಿವಾಯುಗುರು ಭಕ್ತನು ಆಗಿದ್ದನು. ಶ್ರೀನರ ನಾರಾಯಣರು ಅವನ ತಪಸ್ಸಿಗೆ

ಮೆಚ್ಚಿ, ಪ್ರತ್ಯಕ್ಷರಾದರು. ಮುನಿಯು ನತಿಸಿ, ನುತಿಸಿ, ಮಹಿಮಾದರ್ಶನ ವಾಗ-ಬೇಕೆಂದನು. ಕೆಲಕಾಲವಾಯಿತು. ಇದ್ದಕ್ಕಿದ್ದಂತೆ ಅವನಿದ್ದ ಆಶ್ರಮವು ಉಕ್ಕೇರಿ ಬಂದು ಮಹೋದಧಿಯಲ್ಲಿ ಮುಳುಗಿತು. ಚಿತ್ರಾ ಎಂಬ ಶಿಲೆಯ ಮೇಲೆ ಕೂತಿದ್ದ ಮಾರ್ಕಂಡೇಯನು ಪುಷ್ಪಭದ್ರಾನದಿಯೂ ಉಕ್ಕೇರಿದಾಗ, ಸಮುದ್ರದಿ ಕೊಚ್ಚಿ ಹೋದನು. ತರಂಗಗಳು ತುರಂಗಮಗಳಾಗಿ, ಮಾತಂಗಗಳಾಗಿ ತೇಲಿಸಿ, ಮುಳುಗಿ-ಸಿದವು. ಈಶಾನ್ಯದಿಶೆಯಲ್ಲಿದ್ದ ನ್ಯಗ್ರೋಧ ತರುವಿನ ಒಂದು ಶಾಖೆಯ ಒಂದು ಎಲೆಯ ಮೇಲೆ ಒಂದು ಮುದ್ದಾದ ಕೂಸಿತ್ತು. ಏಳುಕೋಟಿ ಯೋಜನ ಪರಿಮಿತ ವಾದ ಶಿಶುವು ತನ್ನ ಪಾದಾರವಿಂದವನ್ನು ಕರಾರವಿಂದದಿಂದೆತ್ತಿ, ಮುಖಾರವಿಂದ-ದಲ್ಲಿಟ್ಟು ಚೀಪುವುದನ್ನು ನೋಡಿ ಮುನಿಚಂದ್ರನು "ಗೋವಿಂದಾ!" ಎಂದು ವಂದಿಸಿ ಮೈಮರೆತನು. ಕೂಸವನನ್ನು ತನ್ನ ಉಸಿರಿಂದ ಒಳಸೆಳೆದಾಗ, ಅಲ್ಲಿ ಅದರ ಉದರದಲ್ಲಿ ಋಷಿವರನು ಸಮಸ್ತ ಲೋಕಗಳನ್ನೂ, ದೇವದಾನವ ಮಾನವಾದಿ ಜೀವರನ್ನೂ, ನದೀಪರ್ವತಾದಿ ಜಡಗಳನ್ನೂ ಪ್ರತ್ಯಕ್ಷಿಸಿ ನೋಡಿದನು. ಪಂಚಭೇದ ಜ್ಞಾನದಿಂದ ಧನ್ಯನಾದ ಮಾರ್ಕಂಡೇಯನು ಉತ್ತರಕ್ಷಣದಲ್ಲಿ ಉಸುರಿನಿಂದ ಹೊರ ಬಂದಿದ್ದನು. ಯಥಾಪ್ರಕಾರವಾಗಿ ಪುಷ್ಪಭದ್ರಾ ನದೀತೀರದ ತನ್ನ ಆಶ್ರಮವನ್ನೂ, ಸನಿಹದ ಚಿತ್ರಾಶಿಲೆಯನ್ನೂ, ಅದರ ಮೇಲೇ ಕುರಿತು ಧ್ಯಾನಿಸುವ ತನ್ನನ್ನೂ ನೋಡಿ, ಮೈತಿಳಿದನು

ಶ್ರೀ ಹರಿಯು ಸ್ವಪ್ನದಂತೆ ತೋರಿಸಿದ ಪ್ರಳಯಕರ್ತೃಮಹಿಮೆಯನ್ನು-ನೋಡಿ, ಮಾರ್ಕಂಡೇಯನು (ಅವನ ಹೆಸರು ಘೋರಶಿರಸನೆಂದೂ ಉಂಟು), ಸ್ವಪ್ನ ದಂತೆ ಶ್ರೀಹರೀಚ್ಛಾ ನಿರ್ಮಿತವಾದ ಪ್ರಳಯ ಸೃಜನಗಳೆಲ್ಲವೂ ಪಾರಮಾರ್ಥಿಕ ಸತ್ಯಗಳೆಂದು ಮನಗಂಡು, ಭಕ್ತಿಪರವಶನಾಗಿ ಶ್ರೀಹರಿಯನ್ನು ಸ್ತುತಿಸಿದನು,

ಶ್ರೀಶನು ಪ್ರೀತನಾಗಿ ಋಷಿವರನಿಗಿಂತೆಂದನು. "ಘೋರಶಿರನೇ! ನಿಮ್ಮ ತಂದೆಯು ತೀವ್ರತಪದಿಂದನನನ್ನು ಮೆಚ್ಚಿಸಿ, ಅಮಿತಾಯುಷ್ಮನಾಗುವ ಪುತ್ರನನ್ನು ಬೇಡಿದನು. ನಾನವನಿಗೆ ನಿನ್ನನ್ನಿತ್ತೆನು. ನೀನುದೀರ್ಘಾಯುವೂ ದೀರ್ಘತಪಸ್ಕನೂ ಆಗಿರುವೆ. ಭಕ್ತನಾದವನಿಗೆ ಮೆಚ್ಚಿ ನಾನು ನನ್ನ ಪ್ರಳಯದ ಪರಾಕ್ರಮವನ್ನು ನಿನಗಾಗಿ ಮಾತ್ರ, ನಿನ್ನ ಜ್ಞಾನಚಿದಾಕಾಶದಿ ಸೃಜಿಸಿ ನೋಡಿಸಿದೆ, ನಾನಾರು? ನೀನಾರು? ಜಗವೇನು? ಎಂಬ ನಿತ್ಯಸತ್ಯವು ನಿನಗೆ ಪ್ರತ್ಯಕ್ಷವಾಯಿತಲ್ಲವೆ? ಎಲ್ಲ ಲೋಕಗಳನ್ನೂ ಜಡರಹಿತವೆಂದು ತಿಳಿ! ಜೀವರು ಶ್ರೀಶಾಧೀನರೆಂದು – ಜನನ ಮರಣಾದಿ ದೋಷಯುತರೆಂದೂ–ಜೀವ ಜಡಭಿನ್ನನೂ, ಸ್ವತಂತ್ರನು ಆದ ಶ್ರೀಶನು (ನಾನು) ಸರ್ವದೋಷ ರಹಿತನೆಂದೂ ತಿಳಿದಿರುವೆ! ಭಯ ಪಡಬೇಡ!

ಬ್ರಹ್ಮ ರುದ್ರ ಶಕ್ರ ಮುಖರಾದ ದೇವತೆಗಳೂ, ಈ ನನ್ನ ಮೂಲ ರೂಪವನ್ನು ಸಾಕಲ್ಯೇನ ತಿಳಿದಿಲ್ಲ, ಕಾಲನಾಮಕನಾಗಿ ಕೊಲ್ಲುವೆನು. ಬ್ರಹ್ಮಾದಿ ಜೀವರನ್ನು

ದೇಹ ಯೋಗವನ್ನಿತ್ತು, ಬ್ರಹ್ಮಾಂಡದಿ ತಂದು ಸೃಜಿಸುವೆನು. ಕರ್ಮಗಳನ್ನು ಸ್ವ ಯೋಗ್ಯತಾನುಸಾರವಾಗಿ ಆಯಾ ಜೀವರಿಂದ ಮಾಡಿಸಿ, ತಕ್ಕ ಫಲಗಳನ್ನು ಅವರವರಿಗೆ ಕೊಡುವ ಕರ್ಮ ಫಲ ಸ್ವಾಮಿಯಾಗಿರುವೆನು. ವೇದಗಳಲ್ಲಿ ನನ್ನ ಮಹಿಮೆಯೇ ತುಂಬಿದೆ ಧರ್ಮರೂಪನಾಗಿ ಜಗತ್ತನ್ನು ನಿಲ್ಲಿಸುವೆನು. ನನಗೆ ಯಾವ ಕರ್ಮ ಲೇಪವೂ ಇಲ್ಲ. ಸಾಂಖ್ಯ, ಯೋಗ, ಯಜ್ಞ, ದಾನ, ತಪೋವ್ರತ ವಿದ್ಯಾದಿ ಗಳೆಲ್ಲವೂ ನನ್ನ ಪ್ರೀತಿಗಾಗಿ. ಸೂರ್ಯ ಚಂದ್ರ ತಾರಾಗ್ರಹ ವಿದ್ಯುದಗ್ನಿಗಳ ತೇಜಸ್ಸು ನನ್ನ ತೇಜಸ್ಸಿನ ಪ್ರತಿಬಿಂಬಾಂಶಗಳು. ನೀರು ನನ್ನರಸಾಂಶ, ಭೂತಭವ್ಯಭವತ್ಪ್ರಭು ವಾದ ನನಗೆ ಸಮರಿಲ್ಲವೆಂದ ಮೇಲೆ ಇನ್ನೂ ಅಧಿಕರೆಲ್ಲಿರುವರು?

ಯುಗಯುಗಗಳಲ್ಲಿಯೂ ನಾನೇ (ಶ್ರೀಶನೇ) ಇಂತೇ ಸೃಜಿಸಿ, ಪಾಲಿಸಿ, ಸಂಹರಿ ಸುವೆನು. ನಿನಗೆ ನಾನು ನನ್ನ ಕುಕ್ಷಿಯಲ್ಲಿರುವ ಜಡ ಜೀವಾತ್ಮಕ ಸರ್ವ ಪ್ರಪಂಚ ನನ್ನೂ ನೋಡಿಸಿದುದು ನಿನಗಿಂತಹ ಜ್ಞಾನವಾಗಬೇಕೆಂದೇ ತಿಳಿ! ವೈಷ್ಣವ ಧರ್ಮಗಳಲ್ಲಿ ನಿಷ್ಠಾವಂತನಾಗಿರು! ಗುರುಗಳಲ್ಲಿ ಶ್ರುತಿಸ್ಮೃತಿ ಪ್ರತಿಪಾದಿತವಾಗಿರುವ ನನ್ನ ಮಹಿಮೆಯನ್ನು ಕೇಳಿ ತಿಳಿ! ನಾನೇ ಓಂ ಎಂಬ ಏಕಾಕ್ಷರ ಪ್ರತಿಪಾದ್ಯನು. ನಾನೇ ಶ್ರುತಿಪಾದಿಯಾದ ಗಾಯತ್ರೀ ಮಂತ್ರಾರ್ಥನು. ನಾನೇ ಪುರುಷ ಸೂಕ್ತದ ತ್ರಿವರ್ಗಗಳಲ್ಲಿ ನುತಿಸಲ್ಪಟ್ಟಿರುವೆನು ಇಂತು ನನ್ನನ್ನು ಉಪಾಸಿಸಿ ನೀನು ಕೊನೆಗೆ ಮುಕ್ತನಾಗುವೆ! " ಎಂದು ಶ್ರೀಹರಿಯು ಅಂತರ್ಹಿತನಾದನು. ಆ ಶ್ರೀಹರಿಯೇ ಶ್ರೀ ವ್ಯಾಸರೂಪನಾಗಿ ಅವತರಿಸಿ ಈ ಎಲ್ಲ ಮಾರ್ಕಂಡೇಯಾನುಭೂತಿಯನ್ನು ಭಾರತಾದಿ ಗ್ರಂಥಗಳಲ್ಲಿ ಬರೆದಿಟ್ಟು ನಮಗೆ (ವೈಶಂಪಾಯನನ ಮಾತಿದು) ಉಪದೇಶಿಸಿರುವನು. ಎಂತೇ ನಿಗೂಢವಾದ ಈ ದಿವ್ಯ ಗಾಥೆಯು ಪ್ರಕಾಶಿತವಾಗಿ, ಸುಜನ ಭಯ ನಿವಾರಕವೂ, ಮುಕ್ತಿ ಸುಖದಾಯಕವೂ ಆಗಿದೆ.

— O —

7 ಬ್ರಹ್ಮ ಕೃತ ಸೃಷ್ಟಿ

ಶ್ರೀ ವೈಶಂಪಾಯನನು ಜನಮೇಜಯನಿಗೆ ನಿರೂಪಿಸಿದನು.

ಶ್ರೀ ಹರಿಯು ಪ್ರಳಯೋದಧಿಯಲ್ಲಿದ್ದು ಜಡ ಬ್ರಹ್ಮಾಂಡವನ್ನು ಸೃಜಿಸಿ, ಅದರಲ್ಲಿ ಜೀವರನ್ನು ತುಂಬಿ, ಅವರಿಗೆ ದೇಹೇಂದ್ರಿಯ ಮನೋಬುದ್ಧಿಗಳನ್ನು ಕೊಟ್ಟು, ಸಾಧನ ಮಾಡಿಸಲೆಂದು ಕರುಣೆ ಮಾಡಿದನು. ಮೊದಲು ಅವ್ಯಕ್ತದ ಮೂರು ಗುಣಗಳ ಮಿಶ್ರಣಗೈದು ಮಥಿಸಿ, ವಿಕಾರಗೊಳಿಸಿದಾಗ ಬ್ರಹ್ಮದೇವನ ದೇಹವಾದ ಮಹತ್ತತ್ವವು ಏರ್ಪಟ್ಟಿತು. ಪ್ರಳಯಾರ್ಣವಮಥನದಿಂದ ವಾಯುವು

ಕ್ಷೋಭೆಗೊಳಿಸಿದಾಗ ಆಕಾಶದಿಂದ ಶಬ್ದವು ಮೊದಲು ಪುಟ್ಟಿತು ಬಲವಂತನಾದ ಮುಖ್ಯಪ್ರಾಣನು ಸೂತ್ರನಾಮಕನಾಗಿ ಶಬ್ದಗುಣಕವಾದ ಆಕಾಶದಿಂದ, ಸ್ಪರ್ಶ ಗುಣಕವಾದ ವಾಯುವಿನನ್ನೂ ಸೃಜಿಸಿದನು. ವಾಯು ಘರ್ಷದಿಂದ ಅಗ್ನಿಯು ರೂಪುಗೊಂಡಿತು. ಜಗತ್ತೆಲ್ಲ ಅಗ್ನಿಮಯವಾದಾಗ, ಶ್ರೀಹರಿ ಪ್ರಾಣರು ತಮ್ಮ ಕರುಣಾಮೃತಗಳನ್ನೆರೆದು ಅಗ್ನಿ ಶಾಂತಿಯನ್ನು ಮಾಡಿದರು. ರಸಾತ್ಮಕವೇ ಆದಾಗ ಅದನ್ನು ಹಿಂಗಿಸಿ ಗಂಧಗುಣಕವಾದ ಪೃಥಿವಿಯನ್ನೂ ಸೃಜಿಸಿದರು. ಆಗ ಭೂಚರ, ಜಲಚರ, ಗಗನಚರ ಪ್ರಾಣಿಗಳಿಗೆ ಆಶ್ರಯವು ಸಿಕ್ಕು ಅವು ಜಗದಿ (ಅಂಡದಿ) ತುಂಬಿದರು. ಅದನ್ನು ನೋಡಿ ಶ್ರೀ ರಮಾರಮಣರು ಪ್ರೀತರಾದರು. ಜೀವರಿಗೆ ಭೌತಿಕ ದೇಹಗಳನ್ನು ಕೊಡಲು ನಾಭಿಜಾತನಾದ ಬ್ರಹ್ಮದೇವನಿಗೆ ಜ್ಞಾನ ಶಕ್ತಿ ಗಳನ್ನಿತ್ತರು. ಮಾಯಾ ವಾಸುದೇವರ ಮಗನಾದ ಬ್ರಹ್ಮದೇವನು ಸತ್ಯಲೋಕ ಪತಿಯಾದನು. ಜಯಾ ಸಂಕರ್ಷಣರ ಮಗನಾದ ಪ್ರಾಣನು ಸೂತ್ರನಾಗಿ ಜಗದ ಕ್ರಿಯಾಗಳನ್ನೆಲ್ಲ ನಡೆಸಲಣಿಯಾದನು. ಕೃತಿ ಪ್ರದ್ಯುಮ್ನ ಪುತ್ರಿಯರಾದ ಬ್ರಹ್ಮಾಣೀ ಭಾರತೀಯರವರೀರ್ವರಿಗೆ ಗೃಹಿಣಿಯರಾಗಿ ಬುದ್ಧಿ ತತ್ವಾಭಿಮಾನಿಗಳಾದರು. ಶಾಂತ್ಯನಿರುದ್ಧರಿಂದ ಮುಂದಿನ ಜೀವರಿಗೆ ದೇಹ ಸಂಭವವಾಯಿತು.

ವಿಶ್ವೇಶನಿಂದ ವಿಶ್ವಸೃಷ್ಟಿಯಲ್ಲಿ ನಿಯೋಜಿತನಾದ ಚತುರ್ಮುಖನು ತಾನು ಪುಟ್ಟನಿಂತ ಪದ್ಮದಿಂದಲೇ ಎಲ್ಲ ಲೋಕಗಳನ್ನು ನಿರ್ಮಿಸಿ, ವಿವಿಧ ಜೀವರಿಗೆ ನಿವಾಸ ಗಳನ್ನು ಕಲ್ಪಿಸಿದನು ಹಿರಣ್ಮಯವಾದ ಪ್ರಕೃತಿನಾಮಕ ಪದ್ಮವೇ ಹದಿನಾಲ್ಕು ಲೋಕ ಬ್ರಹ್ಮಾಂಡವಾಯಿತು. ಪ್ರಕೃಷ್ಟವಾದ ಕೃತಿಯನ್ನು ಮಾಡುವ ಶ್ರೀ ದೇವೀ ಪುತ್ರನ ಮಡದಿಯರೂ ಪ್ರಕೃತಿಗಳೆನಿಸಿ, ಶ್ರೀ ಶ್ರೀರಮಣರ ಸೇವೆ ಮಾಡಿ ಮುಂದಿನ ಸೃಷ್ಟಿಯನ್ನು ಸಂಪನ್ನವಾಗಿಸಿದನು.

ಹಿರಣ್ಮಯ ಕಮಲ ಕೋಶದ ಕಠಿಣ ಭಾಗವೇ ಪರ್ವತಗಳಾದವು. ಹಿಮವಂತ, ಮೇರು, ನೀಲ, ನಿಷಧ, ಕೈಲಾಸ, ಮುಂಜವಂತ, ಗಂಧಮಾದನ, ತ್ರಿಕೂಟ, ಮಂದರ. ಉದಯ, ವಿಂಧ್ಯ, ಅಸ್ತ, ಮುಂತಾದ ಗಿರಿಗಳು ಎದ್ದು ನಿಂತವು. ಮಧ್ಯದ ದೇಶವೇ ಜಂಬೂದ್ವಿಪವೆನಿಸಿತು. ಸುತ್ತು ನಿಂತ ದಳಗಳ ಮಧ್ಯದ ಕಂದರಗಳೇ ದ್ವೀಪಗಳಾದವು. ಒಳಗಿಂದ ಉಕ್ಕಿಬಂದ ಜಲಗಳೇ ನದೀ ನದಗಳಾದವು. ಪದ್ಮದ ಕೇಸರಗಳೇ ಪುಣ್ಯಾರಣ್ಯಗಳಾದವು. ಪದ್ಮದ ಮೇಲಿನ ಪತ್ರಗಳಲ್ಲಿ ದೇವತೆಗಳು, ಅಧಃ ಪತ್ರಗಳಲ್ಲಿ ದೈತ್ಯ ಲೋಕಗಳು ಏರ್ಪಟ್ಟವು. ಮಧ್ಯ ಪತ್ರಗಳಲ್ಲಿ ಮಾನವ ಲೋಕವು ವಿಕಸಿತವಾಯಿತು.

ಬ್ರಹ್ಮದೇವನ ಐವತ್ತು ವರ್ಷಗಳ ಕಾಲವು ಬ್ರಹ್ಮವಿಚಾರ ರೂಪ ತಪಸ್ಸಿನಲ್ಲಿ ಕಳೆದು, ಕೊನೆಯ ದಿನದಲ್ಲಿ – ಅದೇಪಾದ್ಮಕಲ್ಪವೆಂಬರು. ಈ ಸೃಷ್ಟಿಯು ಸಾಂಗ ವಾಯತು.

ಆಗ ಮಹಾ ದುರಾತ್ಮರಾದ ಮಧು ಕೈಟಭರೆಂಬ ದೈತ್ಯರು ಪುಟ್ಟಿ, ಶ್ರೀಃ ಸಾಕ್ಷಿಯಂತೆ ಜಗದ ಜೀವರನ್ನು ಸೃಜಿಸುವ ಬ್ರಹ್ಮದೇವನನ್ನು ನೋಡಿ, ಕ್ರುದ್ಧರಾಗಿ, ಮೇಲೇರಿಬಂದರು. ತಮಸ್ಸೇ ಮಧುವು, ರಜಸ್ಸೇ ಕೈಟಭ, ಸಿಂಹ ಸಂಹನನರೂ, ಆದಿದೈತ್ಯರು ವಿರಿಂಚನನ್ನು ಸಮೀಪಿಸಿ, ಗಹಗಹಿಸಿ ನಗುತ್ತಾ ಇಂತೆಂದರು.

"ಯಾರಯ್ಯಾ ನೀನು? ಬಿಳಿಯ ಶಿರೋಷ್ಣೀಷವನ್ನಿಟ್ಟು ಬಲು ಚಂದಾಗಿರುವೆ! ಏನು ಮಾಡುತ್ತಿರುವೆ? ನಮ್ಮಿಂದ ಯುದ್ಧವನ್ನು ಮಾಡು! ನಮ್ಮ ಮುಂದೆ ನಿಂತು ಕಡಿದಾಡಿ, ಬದುಕಿ ಪೋಗುವನಿಲ್ಲ. ಯಾರು ನಿನ್ನ ರಕ್ಷಕರು? ಅವನ ಪೆಸರೇನು? ಕರೆ ಅವನನ್ನಾದರೂ!" ಎಂದು ನಿಂದಿಸಿದ ಮಂದ ಮತಿಗಳನ್ನು ನೋಡಿ, ನಳಿನ ಗರ್ಭನು ನಕ್ಕು "ಯಾರು ನನ್ನ ರಕ್ಷಕನೋ ಅವನನ್ನು ನೀವು ಕಾಣುವಿರಿ! ನಿಮ್ಮ ಯುದ್ಧ ಕಾಂಕ್ಷೆಯೂ ಕೈಗೂಡುವದು. ನಮ್ಮ ಪ್ರಭುವಾದ ಶ್ರೀ ನಾರಾಯಣನು ಮಾಯಾ ಮೋಹಿತರಿಗೆ ಸಿಗನು. ದುಃಶೀಲರಿಗೆ ಸಿಗನು. ಯಾವನು ಭಕ್ತ ರಕ್ಷಕನೋ, ಯಾವನನ್ನು ರಜಸ್ತಮೋ ದೂಷಿತ ಬುದ್ಧಿಗಳಾದ ನಿಮ್ಮಂತಹರು ತಿಳಿಯಲಾರರೋ, ಯಾವನಿಂದ ಭಕ್ತರ ವಾಂಛಿತಗಳೆಲ್ಲ ಈಡೇರುತ್ತಿವೆಯೋ, ಯಾವನ ಪ್ರೀತಿಗೋಸುಗ ನಾನುತಪವನ್ನಾಚರಿಸಿ, ಸರ್ವಲೋಕ ಜ್ಯೇಷ್ಠನೆನಿಸಿರುವೆನೋ, 'ಯಾವನ ದೆಸೆ. ಯಿಂದ ಸರ್ವ ಭೂತಗಳು ಸೃಷ್ಟಿಕಾಲದಲ್ಲಿ ಹೊರಬರುವರೋ, ಯಾರದೀ ಜಡ ಜೀವಾತ್ಮಕವಾದ ಜಗವೋ, ಯಾವನಲ್ಲಿ ಪ್ರಳಯವು ಬಂದಿತೆಂದರೆ ನಾನು, ನೀವು ಮತ್ತೆಲ್ಲರೂ ಪೊಕ್ಕು, ಭಿನ್ನ ಭಿನ್ನ ರಾಗಿಯೇ ಉದರದಿ ಬಿದ್ದಿರುವೆವೋ, ಅಂತಹ ಸ್ವತಂತ್ರನು, ಸುಖಪೂರ್ಣನು, ಸರ್ವ ಸಮರ್ಥನು ಆದ ಶ್ರೀಹರಿಯನ್ನು ಸೇರಿ ಪೋಗಿ! ನಿಮ್ಮ ಆಶೆ ತೀರಿಬಿಡುವದು. ಅವನೀಗ ಪದ್ಮನಾಭನಾಗಿರುವನು. ಅವನ ಕಿವಿಗಳಿಂದ ಗುಗ್ಗೆಯಂತೆ ಪುಟ್ಟಿಬಂದ ಕೊಳಕರಿಗೆ ಅವನ ಮಹಿಮೆ ಎಂತು ಅರ್ಥವಾದೀತು? ಎಂದು ತಿರಸ್ಕರಿಸಿದನು.

ಮಧುಕೈಟಭರಾಮಾತನ್ನಾಲಿಸಿ ಮಹಾನುಭಾವನಾದ ಕಂಜಜಾತನನ್ನು ಕೈಲಾಗದವನೆಂದು ಕಡೆಗಣಿಸಿ, ಪದ್ಮನಾಭನನ್ನು ಸೇರಿ, ಪರಿಹಸಿಸಿ, ಒಂದುಕೈಯಿಂದ ವಂದಿಸಿ "ಓ ಹೋ ಹೋ! ವಿಶ್ವಕಾರಣನೇ ನೀನು! ಪುರುಷೋತ್ತಮನೆಂಬ ಬಿರುದೇ ನಿನಗೆ! ಆಗಲಿ! ನಿನ್ನನ್ನು ನೋಡಿ, ನಿನ್ನನ್ನು ಅಳಿದು ಬಿಡಬೇಕೆಂದು ಬಂದೆವು. ನೀನೆಲ್ಲರಿಗೂ ವರಗಳನ್ನು ಕೊಡುವನೆಂದು ಕೇಳಿರುವೆವು ಇರಲಿ! ಈಗ ನಾವೇ ನಿನಗೆ ವರವನ್ನೀಯಲು ಬಂದಿರುವೆವು. ಕೇಳು ಬೇಕಾದವರನ್ನು!" ಎಂದರು.

ಶ್ರೀಹರಿಯು ಹಾಗಾದರೆ ನನಗೂ ವರವು ಬೇಕಾಗಿದೆ. ನಾನಿತ್ತ ಆಯುಃಸ್ತೇಜೋ ಬಲಗಳಿಂದ ಮತ್ತರಾಗಿರುವ ನೀವು ನನ್ನಿಂದಲೇ ಮರಣವನ್ನು ಹೊಂದು

[illegible]

[illegible]

[illegible]

[illegible]

[illegible]

ಬ್ರಹ್ಮದೇವನು ಸನಕಾದಿ ಮಾನಸ ಪುತ್ರರನ್ನು ಪಡೆದ ಮೇಲೆ, ಭ್ರೂಭಂಗದಲ್ಲಿ ರುದ್ರರನ್ನೂ ಪಡೆದನು. ರೋದನದಿಂದ ರುದ್ರನಾದ ಶಂಕರನು ಸಂಸಾರ ರೋಗದ್ರಾವಣಶೀಲನಾದ ಶ್ರೀಹರಿಯ ಸಂಕರ್ಷಣ ರೂಪದಿಂದ (ಅಂತರ್ಯಾಮಿ) ಸಂಹಾರ ಶಕ್ತಿಯನ್ನು ಪೊಂದಿದನು.

ಕಶ್ಯಪನು ಕಾಲಾ ಎಂಬವಳಲ್ಲಿ ಕಾಲಕೇಯರನ್ನೂ, ಅನಾಯುಷಾ ಎಂಬ ಪತ್ನಿಯಲ್ಲಿ ಆಧಿ ವ್ಯಾಧಿ ದೇವತೆಗಳನ್ನೂ, ವಿಶ್ವಾ ಎಂಬುವಳಲ್ಲಿ ಗಂಧರ್ವರನ್ನೂ, ಸಿಂಹಿಕೆಯಲ್ಲಿ ರಾಹುವನ್ನೂ ಪಡೆದು ಕಾರ್ಯವನ್ನು ಸಾಂಗಗೊಳಿಸಿದನು.

ಶ್ರೀಹರಿಯ ಅನಂತಾದ್ಭುತ ಶಕ್ತಿಯಿಂದಲು, ಶ್ರೀ ಚತುರ್ಮುಖ ಮುಖ್ಯ ಪ್ರಾಣರ ಪ್ರೇರಣೆಯಿಂದಲು, ಜೀವರು ಜೀವಿಸಿ, ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು ಪೊಂದಿ, ಸ್ವಯೋಗ್ಯ ಗತಿರೂಪವಾದ ಮೋಕ್ಷವನ್ನು ಸಂಪಾದಿಸಲು, ಭೌತಿಕಾದಿ ದೇಹಗಳನ್ನಿತ್ತು ಶ್ರೀಹರಿಯು ತತ್ವ ದೇವತೆಗಳಿಂದ ಶರೀರ ವ್ಯಾಪಾರವನ್ನು ನಡೆಸುತ್ತಿರುವುದೇ ಸೃಷ್ಟಿಯ ಪರಮ ಪ್ರಯೋಜನವೀ ಜೀವರಿಗೆ, ಇಂತಿದ್ದೂ ಅರ್ಥಕಾಮಗಳಿಗೆ ಮಾತ್ರ ಗಮನವಿತ್ತು, ಧರ್ಮವನ್ನು ಬಿಟ್ಟು, ಮೋಕ್ಷದೂರರಾಗುವ ಜೀವರು ಹತ ಭಾಗ್ಯರೆಂದೇ ತಿಳಿಯಬೇಕು. ಹಾಗಾಗಲು ಅವರಿಗೆ ಮೊದಲು ವೇದದ್ವೇಷ, ಆಮೇಲೆ ಅಲ್ಲಿ ನಿರೂಪಿತವಾಗಿರುವ ಧರ್ಮದಲ್ಲಿ ದ್ವೇಷ. ಅನಂತರದಲ್ಲಿ ಧರ್ಮವನ್ನು ಸರಿಯಾಗಿ ತಿಳಿಸಿ ಕೊಡುವ ಬ್ರಾಹ್ಮಣ ದ್ವೇಷ-ಇವೇ ಕಾರಣಗಳು.

ಶ್ರೀಹರಿಯು ಕೇವಲ ಕರುಣೆಯಿಂದಲೇ ಸೃಜಿಸಿ, ಪಾಲಿಸಿ, ತತ್ತದ್ಯೋಗ್ಯ ಗತಿಯನ್ನಿತ್ತಾಗ ತಮ್ಮ ಯೋಗ್ಯತಾ ಕರ್ಮಜ್ಞಾನವಿಲ್ಲದೆ, ಶ್ರೀಶನು ಪಕ್ಷಪಾತಿ ಎಂಬುವರು ಅಸುರರೇ ಸರಿ! ಸ್ವಪ್ರಯೋಜನರ ಹಿತನು, ಸ್ವಯಂ ಸಂಪೂರ್ಣನು. ನಿತ್ಯಾ ನಿತ್ಯ ಜಗದ್ಧಾತನು, ಅನಂತ ಕಲ್ಯಾಣಗುಣ ಸಂಪನ್ನನು, ಸರ್ವದೋಷ ದೂರನು, ಸ್ವತಂತ್ರನು, ದೇಶಕಾಲಗುಣಗಳಿಂದ ಅಪರಿಚ್ಛಿನ್ನನು, ಸ್ವೇಚ್ಛೆಯಿಂದ ತಾನಾಗಿ ಅವತರಿಸಿ ಬರುವ ಭಕ್ತ ರಕ್ಷಕನು, ದುಷ್ಟಜನ ಶಿಕ್ಷಕನು, ವೇದಾದಿ ನಿಖಿಲ ಸಚ್ಛಾಸ್ತ್ರ ಮಾತ್ರ ವೇದ್ಯನು, ಆದ ಶ್ರೀರಮಣನ ಮಹಿಮೆಯನ್ನು ಸಹಿಸದೆ, ಶ್ರೀಹರಿಯೂ ತಮ್ಮಂತೆ ಜನನ ಮರಣ ಯುತನು, ಪಕ್ಷಪಾತ ದೂಷಿತನು, ಅಕರುಣನು. ಎಂದಿತ್ಯಾದಿಯಾಗಿ ತಿಳಿಯುವವರು ಕೂಡ ಅಸುರರೇ! ಶ್ರೀಶನೇ ನಾನೆಂದು ಚಿಂತಿಸುವರಂತೂ ಅಸುರೋತ್ತಮರು. ಸಮಿತ್ತಿನಲ್ಲಿ ಅಗ್ನಿಯಂತೆ, ಕ್ಷೀರದಲ್ಲಿ ಘೃತದಂತೆ, ಇದ್ದೂ ಕಾಣದಿರುವ ದೇವನ ಮಹಾಮಹಿಮೆಯನ್ನು ತಿಳಿಯಲಾರದ ನಾಸ್ತಿಕರು, ಕಣ್ಣಿದ್ದ ಕುರುಡರು.

ಶ್ರೀಹರಿಯು ಬ್ರಹ್ಮಶಬ್ದ ವಾಚಕನು ಬ್ರಹ್ಮಶಬ್ದವು ಶ್ರೀಶನ ಗುಣ ಪೂರ್ಣತೆಯನ್ನು ಹೇಳುವುದು. ಅವನು ಸರ್ವತ್ರ ವ್ಯಾಪ್ತನಾಗಿ ಸರ್ವಾಧಾರವಾಗಿರುವನು. ಸರ್ವಜ್ಞನಾಗಿ ಕರ್ಮ ಫಲಗಳನ್ನೀಯುತ್ತಿರುವನು. ಸರ್ವಶಕ್ತನಾಗಿ ಸರ್ವವನ್ನಾಳುತ್ತಿರುವನು.

ಶ್ರೀಹರಿಯು ಯಾರ ಪ್ರವೇಶದೊಡನೆ ತಾನು ಪ್ರವೇಶಿಸಲು ಬೇಕೋ ಯಾರ ಉತ್ಕ್ರಾಂತಿಯೊಡನೆ ತಾನು ಹೊರ ಬರಬೇಕೋ ಎಂದು ವಿಚಾರಿಸಿ ಮುಖ್ಯ ಪ್ರಾಣನೇ ಅಂತಹನೆಂದು ನಿಶ್ಚಯಿಸಿ. ಅವನನ್ನು ಮೊದಲು ಸೃಜಿಸಿದನು. ಜೀವೋತ್ತಮನಾದ ಪ್ರಾಣನು ಶ್ರೀಹರಿಭಕ್ತಾಗ್ರ ಗಣ್ಯನು, ಶ್ರೀಶನಿತ್ತ ಕರ್ಮ ಶಕ್ತಿಯಿಂದ ಸಮಸ್ತ ಲೋಕ ಚೇಷ್ಟಕನು ಆಗಿರುವನು.

ಸೃಷ್ಟಿ ಪ್ರಾರಂಭದಲ್ಲಿ ಪ್ರಳಯ ಜಲಧಿಯಲ್ಲಿ ಮುಳುಗಿ, ಜೀವರಿಗಾಶ್ರಯವಾಗಲಾರದೆ, ಹಾಗೆಮಾಡಿ ಕರುಣಿಸೆಂದು ಮೊರೆಇಟ್ಟ ಪೃಥಿವಿಯನ್ನು ಶ್ರೀವರಾಹನು ಉದ್ಧರಿಸಿದನು. ಜನನಾಶವನ್ನು ಬಯಸುವ ಆದಿ ದೈತ್ಯನಾದ ಹಿರಣ್ಯಾಕ್ಷನನ್ನು ದಂಷ್ಟ್ರಾಗ್ರದಿಂದ ತಿವಿದು ಸಂಹರಿಸಿ, ಶ್ರೀವರಾಹ ದೇವನು ಸಮಸ್ತಜೀವ ಧಾತ್ರಿಯನ್ನು ಮೇಲಕ್ಕೆತ್ತಿದನು. ಯಜ್ಞವರಾಹನ ಪವಿತ್ರ ದೇಹದಿಂದ ಯಜ್ಞಾಗ್ನಿ, ಚರು, ಆಜ್ಯ, ಸ್ರುಕ್ ಸ್ರುವ, ಯಜ್ಞಭೂಮಿ, ದರ್ಭೆ, ಧರ್ಮಾದಿಗಳು ಹುಟ್ಟಿ ಬಂದವು. ದೇವನಿತ್ತ ದ್ರವ್ಯಗಳಿಂದ ದೇವನನ್ನು ಪೂಜಿಸಿ ಬ್ರಹ್ಮ ರುದ್ರಾದಿ ದೇವತೆಗಳು ಸಿದ್ಧರೆನಿಸಿದರು. ಅವರಂತೆ ಸಾತ್ವಿಕ ಜೀವರೂ ಸರ್ವವೂ ಶ್ರೀಹರಿಗೆ ಸಮರ್ಪಿಸಿ ಧನ್ಯರಾಗುತ್ತಿರುವರು. ಬ್ರಹ್ಮ ಅಂದರೆ ಗುಣಪೂರ್ಣನಾದ ವಿಷ್ಣುವು ಅಂತು ತಿಳಿದು ಆತ್ಮ ಸಮರ್ಪಣೆ ಮಾಡುವ ಸುಜೀವರು, ಪ್ರಕೃತಿ ಬಂಧ ವಿಮುಕ್ತರಾಗಿ ಶ್ರೀಹರಿಯ ವೈಕುಂಠದಲ್ಲಿ ದುಃಖಲೇಶವಿಲ್ಲದೆ ಸ್ವಯೋಗ್ಯ ಸುಖಪೂರ್ಣರಾಗುವರು.

ಜೀವರು ತ್ರಿವಿಧರು. ಅವರಿಗೆ ಬಂಧಕವಾದುದು ಪ್ರಕೃತಿ. ಕಾಮಕರ್ಮ ಅವಿದ್ಯಾ ಗ್ರಂಥಿಗಳಿಂದ ದೂರರಾದ ಸಾತ್ವಿಕ ಜೀವರು ಮುಕ್ತರಾಗಿ ಆನಂದವನ್ನು, ಅಹಂ ಮಮಕಾರಗಳಿಂದ ಪಾಪಿಗಳಾದ ತಾಮಸರು ನಿತ್ಯ ದುಃಖವನ್ನೂ, ಮಿಶ್ರ ಸ್ವಭಾವರಾದ ರಾಜಸ ಜೀವರು ತ್ರಿದಿವನಿರಯ ಭೂತಲಗಳಲ್ಲಿ ದುಃಖ ಮಿಶ್ರ ಸುಖವನ್ನೂ ಹೊಂದುವರು. ಶ್ರೀಹರಿಯು ತತ್ತದ್ಯೋಗ್ಯ ಗತಿಗಳನ್ನೇ ಕೊಟ್ಟು, ನಿಷ್ಪಕ್ಷಪಾತಿ ಎನಿಸಿ, ಸುಜೀವರಲ್ಲಿ ಅತ್ಯಂತ ಕರುಣೆಯನ್ನು ತೋರಿ, ಕಾಪಾಡುತ್ತಿರುವನು.

8. ಶ್ರೀಶಮಹಿಮೆ.

ಉಮಾ ಎಂದರೆ ಬ್ರಹ್ಮವಿದ್ಯೆ. ಆದರಿಂದ ಕೂಡಿದವನು ಸೋಮಃ ಅಂದರೆ ನಿತ್ಯಾಪರೋಕ್ಷೀಕೃತ ಶ್ರೀಶನಾದ ಮುಖ್ಯಪ್ರಾಣನು. ಅವನು ಲೋಕವನ್ನು ತನ್ನ ಜ್ಞಾನದಿಂದ ಪಾವನ ಗೊಳಿಸುವುದರಿಂದ ಪವಮಾನ ನೆನಿಸಿರುವವನು. ಅತ್ಯಂತೈಶ್ವರ್ಯ ಪ್ರದನಾಗಿ ಇಂದು ನೆಂದೂಖ್ಯಾತನಾಗಿರುವ ಮುಖ್ಯಪ್ರಾಣನು, ಶ್ರೀಹರಿಯನ್ನು ಪೂಜಿಸಿ ಅಭಿಷೇಕಿಸಿದನು. ಬ್ರಹ್ಮಾಂಡ ಬಾಹ್ಯಜಲಧಾರೆಯು ಕೆಳಗೆ ಹರಿಯುವಾಗ ಮಾಡಿದ ನಾದವು ವಿದ್ಯಮಾನ ಶ್ರೀಶಗುಣವರ್ಣನ ರೂಪವಾಗಿತ್ತು. ನಾದದಿಂದ ನದಿಯಾಗಿ, ಗಾಂ=ಭೂಮಿಯನ್ನು ಕುರಿತು ಬಂದದ್ದರಿಂದ ಗಂಗೆಯಾಗಿ, ಅನೇಕ ನದೀರೂಪಗಳಾಗಿ ದೇವನದಿಯು ಜಗವನ್ನು ಪಾವನಗೊಳಿಸಿದಳು. ಮತ್ತು ಜಲಗಳಿಂದ ಸಸ್ಯ ಸಂಪತ್ತಿಯನ್ನೊದಗಿಸಿದಳು.

ಶ್ರೀ ಬ್ರಹ್ಮದೇವನ ನಾಲ್ಕು ಮುಖಗಳಿಂದ ಬಂದ ಓಂ ಕಾರವು–ನಾಲ್ಕು ದಿಕ್ಕಿನಲ್ಲಿ ವ್ಯಾಹೃತಿಗಳಾಗಿ ಮೊಳಗಿತು. ಭೂಃ=ನಿರ್ದೋಷನು, ಭುವಃ=ಜ್ಞಾನಘನನು, ಸ್ವಃ=ಆನಂದ ಪೂರ್ಣನು, ಮಹಃ=ಸರ್ವೋತ್ತಮನು=ಎಂದು ಶ್ರೀಹರಿಯ ಗುಣಗಳನ್ನು ವರ್ಣಿಸುವ ವ್ಯಾಹೃತಿಗಳಿಂದ ಗಾಯತ್ರಿಯು, ನಾಲ್ಕು ವೇದಗಳೂ ಆವಿರ್ಭವಿಸಿ, ಶ್ರೀಶಪೂಜಾಸಾಧನಗಳಾದವು.

ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸಗಳೆಂಬ ಆಶ್ರಮ ಚತುಷ್ಟಯವು, ಅವರವರ ಧರ್ಮಗಳು ನಿರೂಪಿತವಾದವು ಧರ್ಮಪಾದಳು ನಾಲ್ಕು–ತಪಃಸತ್ಯದಯಾ ಶೌಚಗಳು ನೆಲೆಗೊಂಡವು. ತಮ್ಮನ್ನು ನಡೆಸಿ ರಕ್ಷಿಸುವವರನ್ನು ಧರ್ಮಗಳು ನಡೆದು ರಕ್ಷಿಸುತ್ತಿರುವವು ಧರ್ಮವನ್ನು ನಡೆಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳು, ತತ್ತದ್ಯೋಗ್ಯವೃತ್ತಿಗಳೂ ವಿವರಿಸಲ್ಪಟ್ಟವು. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ಶ್ರೀ ನಾರಾಯಣನ ಮೂರ್ತಿಗಳಿಂದ ಜೀವರಿಗೆ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳು ಕೈಗೂಡುವಂತೆ ಶ್ರೀಶನು ಕರುಣಿಸಿದನು

ಸಕಲ ಜೀವರಿಗೆ ಬಿಂಬನಾಗಿರುವ ಶ್ರೀಹರಿಯು, ವಿವಿಧವರ್ಣಕಾಚಗಳಲ್ಲಿ ತೂರಿಬಂದ ರವಿಕಿರಣಗಳಂತೆ, ತಾನು ನಿರ್ಲಿಪ್ತನಾಗಿದ್ದು, ಆಯಾಜೀವರಿಂದ ತದ್ಯೋಗ್ಯಕರ್ಮಗಳನ್ನೇಮಾಡಿಸಿ, ತಕ್ಕ ಫಲವನ್ನೀಯುತ್ತಿರುವುದು ಶ್ರೀ ನಾರಾಯಣನ ಅತುಲ ಮಹಿಮೆಃಅಂತೆಯೇ ಅವನು ವೈಷಮ್ಯರಹಿತನು.

ಶ್ರೀಹರಿಯ ಉಸಿರಂತೆ ಹೊರಬಂದ ವೇದಗಳು ಅವನ ಮಹಿಮೆಯನ್ನೇ ಅನೇಕ ವಿಧವಾಗಿ ಪೊಗಳುತ್ತಿರುವವು. ತಸ್ಯಯಜರೇವಶಿರಃ ಇತ್ಯಾದಿಯಲಗಿ

ಪೇಳುವ ವೇದಗಳು ಶ್ರೀಹರಿಯ ಅಂಗಾಂಗಗಳಿಂದ ಆವಿರ್ಭೂತವಾಗಿ ಅವನ ಪ್ರೀತಿಗೆ ವಿಷಯವಾಗಿರುವವು. ಶ್ರೀದೇವಿಯೇ ಶ್ರೀ ಭೂ ದುರ್ಗಾ ರೂಪಳಾಗಿ ತ್ರಯಿ ಎಂಬುವ ವೇದಗಳನ್ನು ಉಚ್ಚರಿಸಿ, ಪ್ರಥಮರ್ಷಿಯಾಗಿರುವಳು. ಏಕರ್ಷಿ ಎನಿಸಿದ ಮುಖ್ಯಪ್ರಾಣನು ವೇದಗಳಿಗೆ ಮುಖ್ಯ ಋಷಿಯಾಗಿರುವನು.

ಶ್ರೀಹರಿಭಕ್ತರು ವೈಷ್ಣವರೆನಿಸಿ, ಮುಖ್ಯಪ್ರಾಣನದ್ವಾರಾ ತಮ್ಮ ಸತ್ಕರ್ಮ ಫಲವನ್ನು ಶ್ರೀರಮಣನಿಗರ್ಪಿಸಿ, ಶುದ್ಧ ಮನಸ್ಕರಾಗುವರು. ಈಗ ಪವಿತ್ರರಾದ ಜೀವರು, ಗುರುವರರನ್ನು ಆಶ್ರಯಿಸಿ ಶ್ರೀಹರಿಯ ಜ್ಞಾನಪ್ರದವಾದ ವೇದಾದಿ ಶಾಸ್ತ್ರಗಳನ್ನು ಶ್ರವಣ ಮನನಗಳಿಂದ ತಿಳಿದು, ಜ್ಞಾನಿಗಳೆನಿಸುವರು. ಸರ್ವತೋಧಿಕವು, ನಿರಂತರವು, ನಿರಪೇಕ್ಷವೂ ಆದ ಶ್ರೀಹರಿಭಕ್ತಿ ಎಂಬ ಭಾಗ್ಯವು ಅವರಿಗಾಗ ಸಿಕ್ಕು ಜಗವೆಲ್ಲವೂ ನಶ್ವರವು ಶ್ರೀಶಾಧೀನವು-ತಾವು ಶ್ರೀ ಹರಿದಾಸರು ಎಂಬ ಅನುಭವವು ಬರುವುದು. ಆಯಿತವರ ಉದ್ಧಾರವಾಗಲೇ ಎಂದು ತಿಳಿ! ಜನಮೇಜಯ!

ಬೇಕು ಬೇಕು ಎಂಬ ಕಾಮದಾಸನಿಗೆ ಉದ್ಧಾರವಿಲ್ಲ. ಸಾಕು! ಸಾಕು ಎಂಬ ವಿರಕ್ತನಿಗೆ ನಾಶವಿಲ್ಲ. ಶ್ರೀಹರಿಭಕ್ತನಿಗೆ ಮತ್ತೆ ಮಾತೃಗರ್ಭವಾಸ ದುಃಖವಿಲ್ಲ ಪಂಚೇಂದ್ರಿಯುಗಳಿವೆ. ಅವು ಇಂದ್ರಿಯ ದೇವತೆಗಳ ಅಧೀನ. ಪಂಚಪ್ರಾಣಗಳಿವೆ, ಅವು ಮುಖ್ಯಪ್ರಾಣನ ಅಧೀನ. ಪಂಚಮಾತ್ರೆಗಳಿವೆ. ಅವು ಭೂತಗಳಿಂದ ಬರಬೇಕು. ಪಂಚಾಂತಃಕರಣಗಳಿವೆ! ಅವು ರುದ್ರ ಕಾಮಶೇಷ ಭಾರತೀ ಶ್ರೀದೇವಿಯರ ಅಧೀನ. ಇನ್ನು ಜೀವನೂ ಇದ್ದಾನೆ, ಅವನು ಮೇಲೆ ಪೇಳಿದ ಎಲ್ಲರ ಅಧೀನ. ಇಂತು ಅಸ್ವತಂತ್ರನಾಗಿದ್ದೂ, ದುರಭಿಮಾನ ದೂಷಿತ ಚಿತ್ತನಾದ ಜೀವನಿಗೆ ಎಂತು ಸುಖವಾದೀತು? ಶ್ರೀಹರಿಯ ಅಧೀನವೆಲ್ಲರು, ಎಲ್ಲವೂ ಎಂದು ತಿಳಿದವನೇ ಮುಕ್ತಪ್ರಾಯನು. ಎಲ್ಲವೂ ನಾನು ನನ್ನದು ಎಂಬುವನೇ ಬದ್ಧನು.

ಶ್ರೀಹರಿಯ ಪರಾಕ್ರಮವು ಅವಕ್ರಜಾಗೃತವಾಗಿರಲು, ಅದನ್ನು ಕಾಣದ ದುರಹಂಕಾರಿಗೆ, ತನ್ನದಾದ ದಾರಾದಿಗಳೂ, ತಾನೇ ಆದ ದೇಹವೂ, ತನ್ನ ಹಿಂದೆ ಬರುವದಿಲ್ಲ ಎಂಬ ಅರಿವು ಮೂಡದು. ಮಹಾ ಪ್ರಳಯದಲ್ಲಿ ಭೂಮಿಯು ಗಂಧರಹಿತವಾಗಿ ಜಲದಲ್ಲಿ ಲಯವಾಗುವುದು. ಜಲವು ರಸಗುಣವನ್ನು ಕಳೆದು ತೇಜಸ್ಸಿನಲ್ಲಿಯು, ತೇಜಸ್ಸು ರೂಪಗುಣರಹಿತವಾಗಿ ವಾಯುವಿನಲ್ಲಿಯು, ವಾಯುವು ಸ್ಪರ್ಶಗುಣವನ್ನು ಕಳೆದುಕೊಂಡು ಆಕಾಶದಲ್ಲಿಯು, ಆಕಾಶವು ಶಬ್ದ ಗುಣರಹಿತವಾಗಿ ಅಹಂತತ್ವದಲ್ಲಿ ಲಯವೊಂದುವುದು. ಅದು ಮಹತ್ತಿನಲ್ಲಿ, ಅದು ಅವ್ಯಕ್ತದಲ್ಲಿ ಸೇರಿ ಅತ್ಯಂತ ಸೂಕ್ಷ್ಮವಾಗಿ, ಶ್ರೀಹರಿಯ ಉದರವನ್ನು ಹೊಕ್ಕು ಬಿಡುವುದು ಈ

ತತ್ವಗಳ ದೇವತೆಗಳಿಗೆ ಉತ್ತಮರಲ್ಲಿ ದೇಹ ಲಯವಾಗುವದು. ಕೊನೆಗೆ ಎಲ್ಲರೂ ಮುಖ್ಯಪ್ರಾಣನ ದ್ವಾರಾ ಬ್ರಹ್ಮ ದೇವನನ್ನು ಸೇರುವರು. ಆ ಮಹಾನುಭಾವನು ಶ್ರೀಹರಿಯಲ್ಲಿ ಸರ್ವಾಂಗ ಸಾಯುಜ್ಯವನ್ನು ಹೊಂದಿ, ನಿರ್ದುಃಖಾನಂದವನ್ನು ಪೊಂದುವನು ಇಂತು ಶ್ರೀಹರಿಯ ಮಹಾಮಹಿಮೆಯುಃ ನಿರಂತರ ನಿತಾಂತವಾಗಿರ್ಪತ್ತಿದ್ದರೂ ಕಾಣದೆ ದುರಹಂಕಾರಿಗಳಾದ ದುಷ್ಟ ಜೀವರು ನಿತ್ಯ ನರಕವನ್ನೇ ಹೊಂದುವರು.

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ || ಆದಾವಂತೇಮಧ್ಯೇ ಚಹರಿಃ ಸರ್ವತ್ರಗೀಯತೇ || ಶ್ರೀಹರಿಮಹಿಮೆಯನ್ನೇ ಸ್ವರವರ್ಣಪದ ವಾಕ್ಯ ರೂಪವಾದ ಸ್ವರ ವೇದಾದಿ ಶಾಸ್ತ್ರಗಳೂ ನಿರೂಪಿಸುತ್ತಿರುವವು - ಶ್ರೀಮದ್ವೇಶಾರ್ಪಿತ ಮಸ್ತು.

ಸೃಷ್ಟಿಕಾಲದ ಶ್ರೀಹರಿಯ ಮಹಿಮೆಯನ್ನೂ ಕೇಳು ! ಆಕಾಶದಿ ಪಂಚ ಭೂತಗಳು, ತನ್ಮಾತ್ರಾಗಳಿಂದ ಜಗತ್ತು ನಿರ್ಮಿತವಾಗಿದೆ. ಇರುವುದೆಲ್ಲವೂ ತೇಜೋಬನ್ನಾತ್ಮಕವೇ! ಬೇರಿಲ್ಲ ಮಣ್ಣು, ನೀರು ಬೆಂಕಿಗಳಿಂದ ಮಾಡಿದ ಗಡಿಗೆ, ಅದರಲ್ಲಿ ಇವೆ ಆಕಾಶವಾಯುಗಳು. ಅಂತೆಯೇ ಜಗವೆಲ್ಲವೂ ತೇಜ ಅಪ್ ಅನ್ನ (ಪೃಥಿವಿ) ಗಳಿಂದ ಮಾಡಲ್ಪಟ್ಟು ಮುಖ್ಯವಾಯು, ಪ್ರಕಾಶಮಾನ ನಾರಾಯಣರಿಂದ ವ್ಯಾಪ್ತ ವಾಗಿ, ಅವರ ಅಧೀನವಾಗಿದೆ.

ಸ್ವತಃ ಅವ್ಯಕ್ತ ಸ್ವಭಾವನೇ ಆದರೂ ಶ್ರೀಹರಿಯು ಭಕ್ತರಗೋಸುಗ ವ್ಯಕ್ತ ನೆನಿಸಿ ತಪೋದಗ್ಧಕಿಲ್ಬಿಷರಾದ ಮಹನೀಯರಿಗೆ ದಿವ್ಯ ಚಕ್ಷುಸ್ಸಿನಿಂದ ಕಾಣ ಸಿಗುವನು. ಶ್ರೀಶನನ್ನು ಮಾಂಸಲವಾದ ಭೌತಿಕಚಕ್ಷುರಾದಿ ಇಂದ್ರಿಯಗಳಿಂದ ತಿಳಿಯಲಾಗದು. ವಾಸುದೇವಾದಿ ಚತುರ್ಮೂರ್ತಿಯು, ವಿಶ್ವಾದಿ ಚತುರ್ಮೂರ್ತಿಯು, ಮತ್ಸ್ಯಾದಿ ದಶಮೂರ್ತಿಯು, ಅಜಾದಿ ಅನಂತಮೂರ್ತಿಯು, ವಿಶ್ವಾದಿ ಸಹಸ್ರಮೂರ್ತಿಯು ಆಗಿ ಶ್ರೀನಾರಾಯಣನು ಜಗದ್ರಕ್ಷಣವನ್ನು ನೋಡಿಕೊಳ್ಳುತ್ತಿರುವನು. ಪ್ರತಿ ಜೀವನಲ್ಲಿಯೂ ಬಿಂಬರೂಪದಿಂದ ಇದ್ದು ಜೀವವ್ಯಾಪಾರಕ್ಕೆ ಪ್ರೇರಕನಾಗಿರುವನು. ಇಂತಹ ಸ್ವಾಮಿಯಿಂದ ಬಂದ ಬ್ರಹ್ಮಜೀವರು ಋಜುಯೋಗಿಗಳು. ಒಬ್ಬನಾದಮೇಲೆ ಒಬ್ಬನಂತೆ ಬ್ರಹ್ಮಪದವಿಯನ್ನು ಪೊಂದಿ, ಶ್ರೀಹರಿಯ ಸೃಷ್ಟಿಕಾರ್ಯದಲ್ಲಿ ಅಂಗಭೂತರಾಗಿ ಸಾಧನೆಗೈದು ಅವರು ಮುಕ್ತರಾಗುವರು. ಆಗ ಮುಖ್ಯಪ್ರಾಣನ ಪದವಿಯಲ್ಲಿರುವ ಋಜೋತ್ತಮರು ಬ್ರಹ್ಮರಾಗುವರು. ಇಂತು ಪ್ರವಾಹವು ಹರಿಯುತ್ತಲೇ ಶ್ರೀಹರಿ ಮಹಿಮೆಯನ್ನು ಸಾರುತ್ತಲಿರುವುದು. (ಮೂಲ 18 ಅಧ್ಯಾಯಃ)

ಶ್ರೀ ಬ್ರಹ್ಮದೇವನು ಪರಮವೈಷ್ಣವನು. ಆತನ ಭಕ್ತಿಯು ಅಚಲವಾದುದು. ಸುಜೀವರ ಮೋಕ್ಷವಿಷಯದಲ್ಲಿ ಪರಮ ನಿಷ್ಠನು ವೇದಗಳನ್ನು ಸಾಂಗವಾಗಿ ಓದಿ ಶ್ರೀಹರಿಯ ವಿಪುಲ ಜ್ಞಾನವನ್ನು ಸಂಪಾದಿಸಿ, ಕಾಯೇನ ಮನಸಾವಾಚಾ ಪರಿಶುದ್ಧನಾಗಿರುವನು. ಅಂತೆಯೇ ಮುಖ್ಯಪ್ರಾಣನೂ ಉತ್ತಮ ಭಗವದ್ಭಕ್ತನು. ಆತನಿಗೂ ಅಜ್ಞಾನ ಮತ್ತು ಅನ್ಯಥಾಜ್ಞಾನದ ಸೋಂಕಿಲ್ಲ. ಶ್ರೀಹರಿಯಿಂದ ಪ್ರಥಮ ಸೃಷ್ಟನಾಗಿರುವ ಪ್ರಾಣದೇವನು, ಕ್ರಮವಾಗಿ ಆಕಾಶ, ವಾಯು, ತೇಜೋ, ಜಲ, ಪೃಥಿವಿಗಳನ್ನು ಶ್ರೀಹರಿಯಿಂದ ಕೂಡಿ ಪ್ರವೇಶಿಸಿದನು.

ಆಕಾಶದಶಬ್ದವು, ಅವಕಾಶಪ್ರದತ್ವವು ವ್ಯಾಪ್ತಿಯು–ಶ್ರೀಹರಿಯ ಆಕಾಶ ನಾಮವನ್ನು ವಿವರಿಸುತ್ತಿದೆ. ಸರ್ವನಾಮಧಾರಕನು ಸರ್ವಶಕ್ತನಾದ ಶ್ರೀಹರಿಯೇ ಆಕಾಶನಾಗಿ ಭೌತಾಕಾಶವನ್ನು ಸೃಜಿಸಿ, ಅದರಲ್ಲಿ ಹೊಕ್ಕು, ಅದಕ್ಕೆ ಶಬ್ದಾದಿ ಗುಣಗಳನ್ನಿತ್ತು, ತದ್ಭಿನ್ನನಾಗಿ ಪಾಲಿಸುವನು. ಇಂತೆಯೇ ಎಲ್ಲಭೂತಗಳಲ್ಲಿದ್ದು, ಆಯಾ ಭೂತದೇವತೆಗಳಿಗೆ ಗೋಚರವಾಗದ ಮಹಾಮಹಿಮನಾಗಿ, ನಿಯಾಮಕ ನಾಗಿ, ಪ್ರತಿಮೆಯಲ್ಲಂತೆ ಅದರಲ್ಲಿದ್ದು ತನ್ನ ಪೆಸರನ್ನೇ ಆದಕ್ಕೆ ಕೊಡುವ ಮಹಾಪ್ರಭುವಿನನ್ನು ತಿಳಿಯಲಾರದೆ ಅಜ್ಞಾನಿಗಳು ಅವನೇ ಭೂತ ಸ್ವರೂಪನು, ಅವನೇ ಜೀವನು, ಅವನೇ ಪ್ರಕೃತಿಯು ಎಂದಿತ್ಯಾದಿ ದುಷ್ಟವಾದಗಳನ್ನು ಮಾಡಿ ಕೆಡುವರು.

ಶುಚಿವ್ರತರು, ದಂಭರಹಿತರು, ಶಾಂತರು, ಇಂದ್ರಿಯ ಜಯವಂತರು ಆದ ಚಾತುರ್ವರ್ಣದ ಸುಜನರು ಶ್ರೀಹರಿಪ್ರೀತಿಗಾಗಿ ಸತ್ಕರ್ಮಗಳನ್ನು ಮಾಡಿ, ಶ್ರೀಮಧ್ವೇಶನಿಗೆ ಅರ್ಪಿಸಿ ಧನ್ಯರಾಗುವರು. ವೇದಗಳು ವಿಷ್ಣುಪ್ರತಿಪಾದಕಗಳು, ಯಜ್ಞಗಳು ಶ್ರೀ ಹರಿಪೂಜೆಗಳು, ತಪಸ್ಸಿನ ಫಲವಾದ ಜ್ಞಾನವು ಶ್ರೀ ಹರಿದರ್ಶಕವು, ಎಲ್ಲವೂ ಶ್ರೀ ಹರಿಪ್ರಧಾನಕವಾಗಿದೆ. ಅವನಿಲ್ಲದೆ ಯಾವುದೂ ಇಲ್ಲ.

ಪಂಚಭೂತಗಳಲ್ಲಿರುವ ಪರಮಾದ್ಭುತ ಶಕ್ತಿಯನ್ನು ನೋಡಿ, ಅವುಗಳ ಸೃಜನ ಕರ್ತನಾದ ಶ್ರೀಶನಮಹಿಮೆಯನ್ನು ತಿಳಿಯಬಹುದು.ಆಕಾಶವು ಎಲ್ಲಿ ಚರಾಚರಗಳಿಗೆ ಆಶ್ರಯವಾಗಿದೆ. ಶಬ್ದವು ಅದರಿಂದ ಹುಟ್ಟಿ ಕೇಳಬರುತ್ತಿದೆ. ಆಕಾಶಜವಾಯುವಿಗೆ ಶಬ್ದಸ್ಪರ್ಶಗಳಿವೆ. ವಾಯುವು ಚೇಷ್ಟಕವೂ, ಪ್ರಾಣಧಾರಕವೂ, ಆಗಿದೆ ಅದರಿಂದ ಬಂದ ತೇಜವು ಜಗದ್ದಾಹಕವಾಗಿದೆ. ಅದರ ಗುಣಗಳು ರೂಪಸ್ಪರ್ಶಶಬ್ದಗಳು. ಆಹಾರಪಾಚಕವು, ತೇಜಃಪ್ರದವೂ ಆದ ತೇಜೋಭೂತದ ಮಗನೇ ಅಪ್ಪು=ಅಂದರೆ ಜಲತತ್ವವು. ಜಲದಲ್ಲಿ ಶಬ್ದಸ್ಪರ್ಶರೂಪಗಳಿವೆ ಜಲದಿಂದ ಪ್ರಾಣಿಗಳಿಗೆ ಜೀವನ. ಜಲದಿಂದ ರುಚಿ, ಜಲದಿಂದ ಶುಚಿ. ಇಂತಹ ಜಲದಿಂದ ಪುಟ್ಟಿದ ಪೃಥಿವೀ ತತ್ವವು

ಶಬ್ದಸ್ಪರ್ಶ ರೂಪರಸಗಂಧಯುಕ್ತವಾಗಿ, ಸರ್ವಜೀವಧಾರಕವ ಪೋಷಕವು ಆಗಿ, ಇದು ಭೂತ ಸೃಷ್ಟಿಕರ್ತನಾದ ಶ್ರೀನಾರಾಯಣನ ಮಹಿಮೆ.

ಶ್ರೀಶನು ತನ್ನ ಅವಯವಗಳಿಂದ ದೇವಜೀವರನ್ನು ಸೃಜಿಸಿ, ಅವರ್ಗೆ ಅಧಿಕಾರವನ್ನಿತ್ತನು. ಅವನ ಅಪರೋಕ್ಷದಿಂದ ಅಭಯರಾಗಿ, ಅದ್ಭುತಶಕ್ತಿ ಯುಕ್ತರಾದ ತತ್ವದೇವತೆಗಳು, ಜೀವರ ಶರೀರಗತರಾಗಿ ತಂತಮ್ಮ ಅಧಿಕೃತ ಸ್ಥಾನ ಗಳಲ್ಲಿದ್ದು, ತತ್ತದ್ವ್ಯಾಪಾರವನ್ನು ಮಾಡಿ, ಜೀವರಿಂದ ಮಾಡಿಸಿ, ತಾವು ಶ್ರೀಹರಿ ಸೇವೆಗೈದು ಸಿದ್ಧರಾಗುವರು.

ಚಕ್ಷುರಿಂದ್ರಿಯ, ರೂಪ, ಸೂರ್ಯ ಇವು ಮೂರು ಶ್ರೀಹರಿಯ ಚಕ್ಷುಸ್ಸಿನಿಂದ ಹೊರಬಂದು ಜೀವರಲ್ಲಿ ಆಧ್ಯಾತ್ಮಿಕ, ಅಧಿಭೌತಿಕ, ಆಧಿದೈವಿಕ ಎಂಬ ಮೂರು ವಿಧವಾದ ವ್ಯಾಪಾರವನ್ನು ಮಾಡಿಸಿದಾಗ ಜೀವರಿಗೆ ರೂಪಜ್ಞಾನವಾಗುವದು ಅಂತೆಯೇ ಎಲ್ಲ ಇಂದ್ರಿಯಗಳಿಂದು ತಿಳಿ!

ಮನಸ್ಸಿನಿಂದ ಸ್ಕಂದೇಂದ್ರರನ್ನೂ, ಕಣ್ಣಿಂದ ಸೂರ್ಯನನ್ನು ಕಿವಿಯಿಂದ ಚಂದ್ರಾದಿ ದಿಗ್ದೇವತೆಗಳನ್ನು, ಮೂಗಿನಿಂದ ಅಶ್ವಿನೀದ್ವಯವನ್ನು, ನಾಲಿಗೆಯಿಂದ ವರುಣನನ್ನು, ಚರ್ಮದಿಂದ ಆಹಂಕಾರಿಕ ಪ್ರಾಣನನ್ನು, ಸೃಜಿಸಿದ ಶ್ರೀರಮಣನು. ಕೈಯಿಂದ ದಕ್ಷನನ್ನು, ಕಾಲಿನಿಂದ ಜಯಂತನನ್ನು, ವಾಕ್ಕಿನಿಂದ ವಹ್ನಿಯನ್ನು, ವಾಯುವಿನಿಂದ- ಮಿತ್ರಯಮನಿರೃತಿಗಳನ್ನು, ಉಪಸ್ಥೆಯಿಂದ ಮನುರಾಜನನ್ನು ಸೃಜಿಸಿದನು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನರೆಂಬ ಮುಖ್ಯವಾಯು ಸುರರಾದ ಪಂಚಪ್ರಾಣರು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಗೆ ನಿಯಾಮಕರಾಗಿ ನಿಯೋಜಿಸಲ್ಪಟ್ಟರು. ಪೃಥಿವಿಗೆ ಶನಿರಾಜನು, ಧರಾದೇವಿಯು, ಜಲಕ್ಕೆ ವರುಣನು, ತೇಜಸ್ಸಿಗೆ ಅಗ್ನಿಯು, ವಾಯುವಿಗೆ ಭೂತವಾಯುವು, ಆಕಾಶಕ್ಕೆ ಮಹಾ ಗಣಪತಿಯು ಸ್ವಾಮಿಯಾದರು ಮನಸ್ಸಿನಮೇಲೆ ನಿಂತು ಆಳುವ ಅಹಂಕಾರದ ಮೂರು ಭಾಗದ ನಿಯಾಮಕರು ಗರುಡಶೇಷ ರುದ್ರರಾದರು. ಅವರ ಸ್ವಾಮಿನಿಯೇ ಬುದ್ಧಿತತ್ವಮಾನಿನಿಯರಾದ ಭಾರತೀ ಸರಸ್ವತಿಯರು. ಅವರು ಮಹತ್ತತ್ವನಿ ಯಾಮಕರಾದ ಬ್ರಹ್ಮವಾಯುಗಳ ಅಧೀನರು ಪ್ರಾಣವಿರಿಂಚರು ಪ್ರಕೃತಿಮಾನಿನಿ ಯಾದ ಶ್ರೀರಮೆಯ ಅಧೀನರು. ಶ್ರೀರಮಾದೇವಿಯು ಶ್ರೀಶಾಧೀನಳು. ನಿಂತು ಸರ್ವಲೋಕ ನಿಯಾಮಕನು, ಸರ್ವಜೀವಾಧಾರನು, ಸರ್ವನಾಮಗತ ಮುಖ್ಯಾರ್ಥನು, ಸರ್ವವಿಲಕ್ಷಣನು ಸರ್ವಸ್ವಾಮಿ ಅಂತರ್ಯಾಮಿಯು ಆದ ಶ್ರೀನಾರಾಯಣನ ಸೃಜನಾದಿ ಮಹಿಮೆಯನ್ನೂ ನಿನಗರುಹಿ ನಾನು ಧನ್ಯನಾದೆನು. ಶ್ರೀಹರಯೇ ನಮಃ

(ಮೂಲ 20 ಅಧ್ಯಾಯ)- ಶ್ರೀಮದ್ವೇಶಾರ್ಪಿತಮಸ್ತು ”

9. ದೇವಾದಿಜೀವತಾರತಮ್ಯಂ

ಶ್ರೀ ವೈಶಂಪಾಯನನು ಜನಮೇಜಯನಿಗೆ ಶ್ರೀಹರಿಯ ಆಜ್ಞೆಯಂತೆ ಚತುರ್ಮುಖನು ಮಾಡಿದ ಸೃಷ್ಟಿಯಲ್ಲಿರುವ ಜೀವರ ತಾರತಮ್ಯವನ್ನು ನಿರೂಪಿಸಿದನು. ಸೃಷ್ಟಿಕಾಲದಲ್ಲಿ ಹೇಗೋ, ಹಾಗೇ ಮುಕ್ತಿಯಲ್ಲಿಯೂ ಕೂಡ ತಾರತಮ್ಯವು ಪಾರಮಾರ್ಥಿಕವಾಗೇ ಇದೆ.

ಪದ್ಮಾಭನೇತ್ರಂ ಗುಣಪೂರ್ಣಗಾತ್ರಂ । ಲಕ್ಷ್ಮೀಕಳತ್ರಂ ಸುರವೈರಿ ಶತ್ರುಂ । ವಾಯೋಸ್ಸುಮಿತ್ರಂ ಜಗತಃ ಪವಿತ್ರಂ, ಶ್ರೀವಿಷ್ಣುರತ್ನಂ ಪ್ರಣಮಾಮಿ ನಿತ್ಯಂ "

ಮಮಸ್ವಾಮೀಹರಿನಿತ್ಯಂ । ದಾಸೋಹಂ ಸರ್ವದಾ ಹರೇಃ ॥ ಬ್ರಹ್ಮಾದ್ಯಾ ದೇವತಾಸ್ಸರ್ವಾಃ । ಗುರವೋ ಮೇಯಥಾಕ್ರಮಂ ॥ ಎಂಬ ಪ್ರಮಾಣದಂತೆ ಶ್ರೀಹರಿಯೇ ಸರ್ವೋತ್ತಮನು. ಅವನ ದಾಸರು ಸಮಸ್ತ ಜೀವರು. ಇಷ್ಟು ತಿಳಿದರೆ ಸಾಲದು. ಶ್ರೀದೇವಿಯು ನಿತ್ಯಮುಕ್ತಳು. ಆಕೆಗೆ ಸಂಸಾರದ ಜನನ ಮರಣಾದಿಗಳು ಅವತಾರಗಳಲ್ಲಿಯೂ ಇಲ್ಲ. ಶ್ರೀ ಲಕ್ಷ್ಮೀದೇವಿಯು ಶ್ರೀ ನಾರಾಯಣನನ್ನು ಬ್ರಹ್ಮಾದಿಗಳಿಗಿಂತ ಸಹಸ್ರಗುಣಿತವಾದ ಜ್ಞಾನದಿಂದ ತಿಳಿದಿರುವಳು. ಆದರೆ ಸಾಕಲ್ಯೇನ ತಿಳಿದಿಲ್ಲ. ಗುಣಗಳಿಂದ ಅಸಮಳಾದರೂ, ಜಗಜ್ಜನನಿಯು ದೇಶ ಕಾಲಗಳಿಂದ ಶ್ರೀಹರಿಗೆ ಸಮಳೆನಿಸಿ, ವಿರಾಜಿಸುವಳು. ದುಃಖ ಸ್ಪರ್ಶವಿಲ್ಲದ ಆನಂದವನ್ನು ರಮೆಯು ಪೊಂದಿ, ಅನಂತಗುಣಗಳಿಂದ ಶ್ರೀಶನಿಗೆ ಅವರಳಾಗಿರುವಳು.

ಜೀವರಲ್ಲಿ ಉತ್ತಮರಾದ ಬ್ರಹ್ಮದೇವರು ಮುಖ್ಯಪ್ರಾಣನಿಗೆ ಸಮರು. ಅವರು ಮತ್ತು ಅವರೀರ್ವರ ಪತ್ನಿಯರಾದ ವಾಣಿಭಾರತೀಯರು ಕೂಡ ಅವಿಚ್ಛಿನ್ನ ಭಕ್ತರು. ನಿತ್ಯಾಪರೋಕ್ಷಿಗಳು. ಗರ್ಭವಾಸಾದಿ ದುಃಖರಹಿತರು. ಬಹು ಕರಣಾರಸಭರಿತರು. ಇತರ ದೇವತೆಗಳಲ್ಲಿರುವ ತಾರತಮ್ಯವನ್ನು ಕಾಲತಃ ಗುಣತಃ ನಿರೂಪಿಸಿ, ಅವರ ಅಧಿಕಾರವಿಚಾರವನ್ನು ಕೇಳು !

ಮೊದಲು ಶ್ರೀಹರಿಯು ಶುಭಲಕ್ಷಣಗಳನ್ನು ಪೇಳುವೆನು. ಅವನಲ್ಲಿಯೂ ಶ್ರೀ ಬ್ರಹ್ಮವಾಯು ವಾಣೀಭಾರತಿಯರಲ್ಲಿಯೂ ಅಶುಭ ಲಕ್ಷಣಗಳಿಲ್ಲ ಷಣ್ಣವತ್ಯಂಗುಲಃ ಸಪ್ತಪಾದಃ ಚತುರ್ಭುಜಃ ॥ 2 ಸ್ನಿಗ್ಧವರ್ತುಲಮುಖಃ ॥ 3 ಉನ್ನತಹನುಃ ॥ 4 ತೀಕ್ಷ್ಣ ಸೂಕ್ಷ್ಮದಂತಃ ॥ 5 ರಕ್ತಾಧರಃ ॥ 6 ರಕ್ತಕರಃ ॥ 7 ರಕ್ತನಖರಃ ॥ 8 ರಕ್ತಜಿಹ್ವಾಗ್ರಃ ॥ 9 ತನುವಲಿತ್ರಯಯುತೋದರಃ ॥ 10 ಶಂಖಚಕ್ರಪದ್ಮಾದಿ ರೇಖಾಯುತಕರಃ ॥ 11 ನಿಮ್ನನಾಭಿಃ ॥ 12 ತಾಮ್ರಪಾದ ತಲಃ ॥ 13 ನಿಮ್ನಗುಲ್ಫಃ ॥ 14 ಸುವಾಜ್ಯರೂಪಃ ॥ 15 ನೇತ್ರಪದ್ಮಃ ॥ 16 ಅಜಾನುಬಾಹುಃ ॥ 17 ವಿಶಾಲವಕ್ಷಾಃ ॥ 18 ಸಿಂಹಸ್ಕಂದಃ ॥ 19 ಸೂಕ್ಷ್ಮಾಸ್ಯಃ ॥

20 ಸುಪ್ರಸನ್ನದೃಷ್ಟಿಃ || 21 ಹ್ರಸ್ವಸ್ಪೃಥುಮೃದುಲಿಂಗಃ || 22 ಸಮಾನಪಾದಃ || 23 ಸಮಜಾನುಃ || 24 ಸಮಜಠರಃ || 25 ಸಮಕಟಿಃ || 26 ಸಮಹಸ್ತಃ || 27 ಸಮಕರ್ಣಃ || 28 ಶಂಖಗಲಃ || 29 ವಲಿತ್ರಯಯುತಕಂಠಃ || 30 ಪ್ರಲಂಬ ಮೃದುಕೇಶಃ || 31 ಉನ್ನತಲಲಾಟಃ || 32 ಚಂಪಕನಾಸಿಕಃ || . ಸಂಪೂರ್ಣ ಸುಂದರಗಳು ಎಲ್ಲವು. ಅನಂತ 32 ಲಕ್ಷಣ ಶ್ರೀಹರಿಯು. ಅಂತೆಯೇ ಲಕ್ಷ್ಮೀದೇವಿಯು ಶ್ರೀಶಪತ್ನಿಯು. ಬ್ರಹ್ಮವಾಯು ವಾಣೀಭಾರತಿಯರಿಗೂ 32 ಲಕ್ಷಣಗಳುಂಟು. (ಯಥಾಕ್ರಮ ಸೌಂದರ್ಯವಿಕಾಸಲಾವಣ್ಯ ಸೌಷ್ಟವಗಳಿಂದ)-

ರುದ್ರಾದಯಃ 28 || ಷಣ್ಮಹಿಷಿಯರು 27 || ಕಿಂಚಿತ್ ನ್ಯೂನತೆಯಿದ್ದರೂ ದೋಷಗಳಿರುವದಿಲ್ಲ.

ಇಂದ್ರ 25|| ನಾಸಿಕ್ಯ 24 – ಶಚೀ 23– ಪ್ರವಹ 22 –ಯಮ 21– ವರುಣ 20– ಅಗ್ನಿ 19– ವೈವಸ್ವತ 18-- ಮಿತ್ರ 17-- ಕುಬೇರ 16-- ಪಾವಕ 15— ಗಂಗಾ 14— ಬುಧ 13— ಶನಿ 12— ಪುಷ್ಕರ 11— ಅಗ್ನಿಪುತ್ರಾಃ 16000 ಸ್ತ್ರೀಯರು - 10 – ಚಿರಪಿತೃಗಳು 9 - ದೇವಗಂಧರ್ವರು, 8 – ಮನುಷ್ಯ ಗಂಧರ್ವರು 7 - ಕ್ಷಿತಿಪರು 6 - ಇತರೇಯಥಾಯೋಗ್ಯಂ—ಎಂದು ಲಕ್ಷಣವಿವರವು ನಿರೂಪಿತನಾಗಿದೆ.

ಇತ್ಯಾದೀನಿಚಕರ್ಮಾಣಿ ವಿಷ್ಣೋಃ ಪ್ರೀತಿಕರಾಣಿವೈ ||
ಏತಾನಿ ಕೃತವಾನ್ ಸಮ್ಯಕ್ ಪುರುಷೋ ಹರಿವಲ್ಲಭಃ ||

ಈ ಅಧ್ಯಾಯದಲ್ಲಿ ಹರಿವಂಶವು ಗಾರುಡಬ್ರಹ್ಮಕಾಂಡದ ಸಮವಾಗಿ ವರ್ಣಿತವಾಗಿ, ಶ್ರೀ ಮಧ್ವೇಶ ಚರಣಾರವಿಂದದಲ್ಲಿ ಸಮರ್ಪಿತವಾಗಿದೆ.

ಶ್ರೀ ಚತುರ್ಮುಖನು ಮಾಡಿದ ಸೃಷ್ಟಿಕ್ರಮ—

ಸಂಖ್ಯಾ	ಕಕ್ಷಾ	ತತ್ವ	ದೇವತಾ	ಅಂಗ	ಯಾರಾದ ಮೇಲೆ	ಎಷ್ಟು ವರ್ಷ	ಗುಣತಃ ಎಷ್ಟುಕಮ್ಮಿ	ಯಾರಕಿಂತ
1	1	ಮಹತ್	ಬ್ರಹ್ಮಾ ವಾಯುು	ವಿಜ್ಞಾನಕರ್ಮ	(ತಾನು)	10		
2	2	ಅವ್ಯಕ್ತ	ಸರಸ್ವತೀಭಾರತೀ	ಬಲಗೈ	ವಾಯುು	1×1	100	ವಾಯುವು
3	3	ರಾಜಸಾಹಂ	ಶೇಷಃ	ಭಾರತೀ		200	100	ವಾಣಿಕಿಂತ
4		ಸಾತ್ವಿಕಾಹಂ	ಗರುಡಃ	ಶೇಷ		1000	100	ಭಾರತಿ
5		ತಾಮಸಾಹಂ	ರುದ್ರಃ	ವನಃ	ಗರುಡ	1000	100	ಭಾರತಿ
6	4	,,	ವಾರುಣೀ		ಶೇಷಃ	10	10	ಶೇಷ
7		,,	ಸೌಪರ್ಣೀ		ಗರುಡಃ	10	10	ಗರುಡ
8		,,	ಪಾರ್ವತೀ		ರುದ್ರ	10	10	ರುದ್ರ
9	5	ಮನಃ	ಇಂದ್ರಃ	ದಕ್ಷಿಣವಾಯು	ಪಾರ್ವತೀ	100	10	ಪಾರ್ವತೀ
10		ಮನಃ	ಕಾಮಃ	ವಾಮಬಾಹು	ಇಂದ್ರ	30	$\frac{1}{2}$	ಇಂದ್ರ
11	6	ತ್ವಕಾ	ಅಹಂಕಾರಿಕಪ್ರಾಣ	ದ. ಅನಾಮಿಕಾ	ಕಾಮ	10	10	ಇಂದ್ರ
12	7		ಶಚೀ	ಎಡ, ಬಾಹು	ಇಂದ್ರ	10	10	ಅಹಂ, ಪ್ರಾಣ
13			ರತೀ	,,	ಕಾಮ	10	=	ಶಚೀಸಮಾ
14		ವಾಣಿಶಿಶ್ನ	ದಕ್ಷಃ	ಬಲಅಂಗುಷ್ಠ			ಸಮಃ	ರತೀ
15		ಜ್ಞಾನ	ಬೃಹಸ್ಪತಿಃ		ಅಹಂಪ್ರಾಣ	25	ಸಮಃ	ರತೀ
16			ಅನಿರುದ್ಧಃ	ಮಧ್ಯಬೆರಳು	ದಕ್ಷ	25	ಸಮಃ	ರತೀ

17		ಉಪಸ್ಥ	ಸ್ವಾಯಂಭುವ ಮನುಃ	ಮನುಃ	ಗುರು	5	ಸಮಃ	ಶಚೀ
18	8		ಪ್ರವಹ	ತಂಬೆರಳು	ಅನಿರುದ್ಧ	100	5	ಶಚೀ
19			ಭೂತವಾಯು				5	ಶಚೀ
20		ಘ್ರಾಣ	ನಾಸಿಕ್ಯವಾಯು				5	ರತೀ
21	9	ಸ್ಪರ್ಶ	ಯಮ		ಪ್ರವಹ	100	2	ಪ್ರವಹ
22			ಶತರೂಪಾ		ಮನು	5	ಸಮಾ	ಯಮ
23		ದಿಕ್	ಚಂದ್ರ	ಬಲಗಿವಿ	ಯಮ	30	ಸಮ	ಯಮ
24		ಬಲಚಕ್ಷು	ಸೂರ್ಯ	ಬಲಗಣ್ಣು	ಚಂದ್ರ	20	ಸಮ	ಯಮ
25	10	ರಸನ	ವರುಣ	ನಾಲಿಗೆ	ಸೂರ್ಯ	100	$1\frac{1}{2}$	ಯಮ
26			ನಾರದ	ಉತ್ಸಂಗ	ವರುಣ	10	$\frac{1}{4}$	ವರುಣ
27	11		ಭೃಗು	ಭ್ರೂ	ಅಗ್ನಿ	10	$\frac{1}{4}$	ವರುಣ
28		ವಾಕ್	ಅಗ್ನಿ	ವಾಕ್	ನಾರದ	60	ಸಮ	ಭೃಗು
29	12		ಪ್ರಸೂತಿ	ಎಡಅಂಗುಷ್ಠ			ಸಮಾ	ಅಗ್ನಿ
30	12		ಜಠರಾಗ್ನಿ					
31	13		ವಸಿಷ್ಠಃ		ಅಗ್ನಿ	10	ನ್ಯೂನ	ಅಗ್ನಿ
32			ಮರೀಚಿಃ		,,	10	ಸಮ	ವಸಿಷ್ಠ
33	13		ಅತ್ರಿ		ಕಶ್ಯಪ	10	ಸಮ	ಮರೀಚಿ
34			ಅಂಗಿರಾಃ		ಅತ್ರಿ	10	ಸಮ	ಅತ್ರಿ
35			ಪುಲಸ್ತ್ಯ		ಅಂಗಿರಾಃ	10	ಸಮ	ಅಂಗಿರಾಃ

36			ಪುಲಹ		ಪುಲಸ್ತ್ಯ	10	ಸಮ	ಪುಲಸ್ತ್ಯ
37			ಕ್ರತು		ಪುಲಹ	10	ಸಮ	ಪುಲಹ
38			ವೈವಸ್ವತಮನುಃ		ಕ್ರತು	10	ಸಮ	ಅತ್ರಿ
39			ವಿಶ್ವಾಮಿತ್ರಃ				ಸಮ	ಅತ್ರಿ
40	14	ವಾಯು	ಮಿತ್ರ				ನ್ಯೂನಃ	ವಿಶ್ವಾಮಿತ್ರ
41			ಭೀಷ್ಮಕ	(ರಾಮಯುಕ್)				
42			ತಾರಾ	(ಕೃಪೀ)	ಗುರು	5	ಸಮಾ	ಮಿತ್ರ
43		ಕೋಣೇಶ	ನಿರೃತಿಃ				ಸಮ	ತಾರಾ
44			ಪ್ರಾವಹೀ		ಪ್ರವಹ	10	ಸಮಾ	ನಿರೃತಿ
45	15		ವಿಷ್ವಕ್ಸೇನ	ವಾಯುಪುತ್ರ	ಮನು	100	ನ್ಯೂನ	ಮಿತ್ರ
46		ನಾಸಿಕಾ	ಅಶ್ವಿನೌ				ಸಮೌ	ವಿಷ್ವಕ್ಸೇನ
47		ಆಕಾಶ	ಗಣಪತಿ		ವಿಷ್ವಕ್ಸೇನ	14	ನ್ಯೂನ	ಮಿತ್ರ
48			ಕುಬೇರ	ಚರ್ಮರಂಧ್ರ	ಗಣಪ	8	ನ್ಯೂನ	ಮಿತ್ರ
49			ಸಪ್ತನವಃ (ಅಗ್ನಿಬಿಟ್ಟು)				ಸಮಾ	ಅಶ್ವಿನಾ
50			ದಶರುದ್ರಾಃ (ರುದ್ರನಬಿಟ್ಟು)				ಸಮಾಃ	ಕುಬೇರ
51			47 ಮರುದ್ಗಣಾಃ (ಆಹಂ ಪ್ರವಹೌವಿನಾ)				ಸಮಾಃ	ವಿಷ್ವಕ್ಸೇನ
52			ವಿಶ್ವೇದೇವಾಃ ದಶ				ಸಮಾಃ	ಕುಬೇರ
53			ಋಭವಃ				ಸಮಾಃ	ಕುಬೇರ
54			ಪಿತರಃ	ತ್ರಮಃ			ಸಮಾಃ	ವಿಷ್ವಕ್ಸೇನ

55	16		ಜಯಾದಿಪಾರ್ಷದಾಃ		ವಿಷ್ವಕ್ಸೇನ	100	ನ್ಯೂನಾಃ	ಗಣಪತಿ
56	17		ಪಾವಕಃ	(ಅಗ್ನಿಪುತ್ರಪ್ರಧಾನಃ)			100	ಅಗ್ನಿ
57			ಮನವಃ	ಏಕಾದಶ			ಸಮಾಃ	ಪಾವಕ
58			ಪಿತರಃ	ಸಪ್ತ			ಸಮಾಃ	ಪಾವಕ
59			ಚ್ಯವನ				ಸಮ	ಪಾವಕ
60			ಉಚಥ್ಯಃ				ಸಮ	ಪಾವಕ
61			ಬಲ್ಯಾದಿಕರ್ಮದೇವಾಃ		ಜಯ	30	ಸಮಾಃ	ಉಚಥ್ಯ
62			ಗಂಧರ್ವಾ	ಅಷ್ಟ			ಸಮಾಃ	ಬಲಿ
63			ಪ್ರಹ್ಲಾದಃ				ಸಮಃ	ಬಲಿ
64	18		ಗಂಗಾ		ವರುಣ	20	ನ್ಯೂನಾ	ಪಾವಕ
65	18	ಮಂತ್ರ	ಪರ್ಜನ್ಯ		ಬಲ್ಯಾದಿ	10	ಸಮಃ	ಗಂಗಾ
66			ಶ್ಯಾಮಲಾ	ಯಮಪತ್ನೀ		8	ಸಮಾ	ಗಂಗಾ
67			ರೋಹಿಣೀ	ಚಂದ್ರಪತ್ನೀ		9	ಸಮಾ	ಗಂಗಾ
68			ಸಂಜ್ಞಾ	ಸೂರ್ಯಪತ್ನೀ	ಎಡೆನೇತ್ರ	6	ಸಮಾ	ಗಂಗಾ
69		ಬ್ರಹ್ಮಾಂಡ	ಉಷಾ	ಅನಿರುದ್ಧಪತ್ನೀ		5	ಸಮಾ	ಗಂಗಾ
70		ಮಂತ್ರ	ಸ್ವಾಹಾ	ಅಗ್ನಿಪತ್ನೀ	ಎಡಕಿವಿ	5	2	ಗಂಗಾ
71	19	ಜಲ	ಬುಧ				ನ್ಯೂನ	ಸ್ವಾಹಾ
72	20	ನಾಮ	ಉಷಾ	ಅಶ್ವಿಭಾರ್ಯಾ			ನ್ಯೂನಾ	ಬುಧ 10 ಸ್ವಾಹಾ
73	21	ಭೂ	ಶನಿ				ನ್ಯೂನ	ಉಷಾ

74	22	ಕರ್ಮ	ಪುಷ್ಕರ	ಪರ್ಜನ್ಯ	10	ನ್ಯೂನ	ಶನಿ
75	23		ಅಜಾನಜಾಃ ದೇವಾಃ			ನ್ಯೂನಾಃ	ಪುಷ್ಕರ
	24		ವಿರಾಧ—ತುಂಬುರು—ದನು—ಚಿತ್ರರಥ				
			ಧೃತರಾಷ್ಟ್ರ—ಕಿಶೋರ—ಹೂಹೂ				
			ಹಾಹಾ—ವಿದ್ಯಾಧರ—ಉಗ್ರಸೇನ				
		ಗಂಧರ್ವಾಃ	ವಿಶ್ವಾವಸು—ಪರಾವಸು—ಚಿತ್ರಸೇನ			100	ಕರ್ಮಜಾಃ
			ಗೋಪಾಲ—ಬಲ—ಆದಿ 100		—	ಸಮಾಃ	ಅಜಾನಜ
		ಅಪ್ಸರಾಃ	ಘೃತಾಚೀ—ಮೇನಕಾ,ರಂಭಾ				
	25		ಊರ್ವಶೀ—ತಿಲೋತ್ತಮಾ, ಸುಕೇಶೀ—			ಸಮಾಃ	ಅಜಾನಜ
			ಶಂಬರೀ—ಮಂಜುಘೋಷಾ—ಪಿಂಗಲಾ				
			1000 ಅಪ್ಸರಸಃ				
	26		ಅನ್ಯೇಋಷಯಃ			ಸಮಾಃ	ಅಜಾನಜಾಃ
			(ವಿಶ್ವಾಮಿತ್ರವಸಿಷ್ಠನಾರದಚ್ಯವನೋ ಚಥೈಭೃಗು—ಬಿಟ್ಟು)				
			ಋಷಯಃ—ಶತರ್ಚಿನಃ—ಕಶ್ಯಪ—ಮಾಧ್ಯಮ—ಪರಾಶರ—				
			ಪಾವಮಾನ್ಯಃ—ಪ್ರಗಾಥ—ಕ್ಷುದ್ರಸೂಕ್ತ—ಮಹಾಸೂಕ್ತ—ದಾಲ್ಭ್ಯ				
			ದೇವಲ—ಗೃತ್ಸಮದ—ಆಸುರಿ—ಭರದ್ವಾಜ—ಮುದ್ಗಲ—ಕೃಪ—				
			ಉದ್ದಾಲಕ—ಋಷ್ಯಶೃಂಗ—ಶಂ[illegible]—ಸತ್ಯವ್ರತ—ಸುಯಜ್ಞ				
			ಬಾಭ್ರವ್ಯ—ಮಾಂಡೂಕ, ಬಾಷ್ಕಲ—ಧರ್ಮಾಚಾರ್ಯ—ದಾರ್ಢ್ಯಕ				
			ಚ್ಯುತ—ಅಗಸ್ತ್ಯ—ಹರಿತ—ಕಣ್ವ—ವಿರೂಪ—ವಿಷ್ಣುವರ್ಧನ—				

	ಆತ್ರೇಯ—ಶ್ರೀವತ್ಸ—ವತ್ಸ—ಭಾರ್ಗವ—ಔರ್ವ, ಜಾಬಾಲಿ ವೀತಿಹವ್ಯ—ಶೌನಕ ಇತ್ಯಾದಯಃ	ಸಮಾಃ	ಅಜಾನಜ
27	ಅಗ್ನಿಪುತ್ರಾಃ 16000 ಕೃಷ್ಣಪತ್ನ್ಯಃ	ಸಮಾಃ	ಅಜಾನಜ
27	ಕಶೇರು ತಾಸಾಂಶ್ರೇಷ್ಠಾ=	ಗುಣಾಧಿಕಾ–	ಇತರಾಃ
28	ಪಿತರಃ 100+		
29	ದೇವಗಂಧರ್ವಾಃ 8+100 ಸಂಖ್ಯಾ	(8) 100	ಪಿತರಃ
30	ಮನುಜಗಂಧರ್ವಾಃ	100	ದೇವಗಂಧರ್ವರು
31	ಕ್ಷಿತಿಪರು	100	ಮನುಜಗಂಧರ್ವರು
32	ಮನುಷ್ಯೋತ್ತಮರು—ಅಸಂಖ್ಯಾಕಾಃ	100	ರಾಜರು.

ದೈತ್ಯರಲ್ಲಿಯೂ ತಾರತಮ್ಯವಿದೆ. ಕ್ರಮ– ಊನಗುಣಗಳಿಂತಿವೆ ಕಲಿ– ಕಲಿಭಾರ್ಯಾ (100)– ವಿಪ್ರಚಿತ್ತಿ (10)– ಕಾಲನೇಮಿ (100)– ಮಧುಕೈಟಭರು (5) ಹಿರಣ್ಯಕಶಿಪು (+3) ಹಿರಣ್ಯಾಕ್ಷ (–3). ಮಣಿಮಾನ್ (ಸಮ) ಬಕ.– ತಾರಕ (20). ಶಂಬರ (6) ಸಾಲ್ವ. ಬಾಣ ದ್ವಾಪರ (ಬಾಣಸಮಃ)= ಹಿಡಿಂಬ ($\frac{1}{2}$ ಶಂಬರ)– ನಮುಚಿ– (10.) ಪಾಕ ಇಲ್ವಲ ವಾತಾಪಿ (3) ಧೇನುಕ ($1\frac{1}{2}$)–ಕೇಶೀ ($\frac{1}{2}$)– ತೃಣಾವರ್ತ= ಲವಣ (10)– ಧುಂಧುಮಾರ (5)– ಹಂಸ= ಡಿಭಿಕ (8)– ಪೌಂಡ್ರಕ= ವೇನ (1) ಕುಂಭಾಂಡ ಕೂಪಕರ್ಣರು (1)– ರುಕ್ಮಿ (100)– ಶತಧನ್ವಾ (100)= ಕಿರ್ಮೀರಃ ಜರಾಸಂಧ= ದುಶ್ಯಾಸನ= ಬಲಿದೈತ್ಯ= ವಿಕರ್ಣ ಅನಂತರ ಇಂದ್ರಿಯಮಾನಿದೈತ್ಯರು. ೩೯

ತತ್ವಾಭಿಮಾನಿನೋದೇವಾನೇವಂ ಸೃಷ್ಟ್ವಾಹರಿಃ ಸ್ವಯಂ
ಕ್ರೀಡಯಾಮಾಸದೇವೇಶೋ ತತ್ತ್ವೇಷು ರಮಯಾಸಹ ॥
ಮಮಸ್ವಾಮೀ ಹರಿರ್ನಿತ್ಯಂ ದಾಸೋಹಂ ಸರ್ವದಾ ಹರೇಃ
ಬ್ರಹ್ಮಾದ್ಯಾ ದೇವತಾಸ್ಸರ್ವಾ ಗುರವೋಮೇ ಯಥಾಕ್ರಮಂ ॥

ಶ್ರೀಹರಿಯು ಸರ್ವಸ್ವಾಮಿಯು– ತತ್ತ್ವದ್ಯೋಗ್ಯತಾನುಸಾರ ಪ್ರವರ್ತಕನು. ಶ್ರೀಶಾರ್ಪಿತಮಸ್ತು ॥.

10. ಶ್ರೀಶಾವತಾರವೈಭವಂ

ಶ್ರೀ ಜನಮೇಜಯನು "ಸ್ವಾಮಿ ! ಶ್ರೀಹರಿಯ ಅವತಾರ ವಿಭವವನ್ನು ಕೇಳಲಿಚ್ಛಿಸುವೆನು" ಎನಲಾಗಿ, ಶ್ರೀವೈಶಂಪಾಯನನು ವರ್ಣಿಸಿದನು.

ಶ್ರೀ ಮೂಲರೂಪಿ ನಾರಾಯಣನು ಎಲ್ಲಅವತಾರಗಳಲ್ಲಿಯೂ ಭೇದರಹಿತನಾಗಿರುವನು. ಆತನ ವಾಸುದೇವರೂಪದಿಂದ ಮಾಯಾದೇವೀ ಪುತ್ರನಾಗಿ ಬಂದ ಆದ್ಯ ಬ್ರಹ್ಮನು, ಜಯಾಸಂಕರ್ಷಣರ ಪುತ್ರನಾದ ಮುಖ್ಯಪ್ರಾಣನಿಂದಕೂಡಿ ಜಗನ್ನಿರ್ಮಾಣ ಕಾರ್ಯದಲ್ಲಿ ತೊಡಗಿದನು. ಬ್ರಹ್ಮಾಂಡದಿ ತುಂಬಿನಿಂತ ವಿರಿಂಚನು ಪುರುಷನೆನಿಸಿರುವನು. ಆವಾಣೀಪತಿಯು ಕಾಲನಿಯಾಮಕನಾದಾಗ ಸಂವತ್ಸರನೆನಿಸಿದನು. ಆತನೇ ವೇದವಿಚಾರಶೀಲನಾಗಿ ಚತುರ್ಮುಖನೆನಿಸಿರುವನು. ಸೂತ್ರನಾಮಕ ಮುಖ್ಯಪ್ರಾಣನೂ ಬ್ರಹ್ಮನಂತೆ ಶ್ರೀಹರಿಗೆ ಪ್ರಥಮಪ್ರೀತಿ ಪಾತ್ರನಾಗಿರುವನು.

ಶ್ರೀ ರಮಣನ ಆಜ್ಞೆಯಂತೆ ಆಸ್ವಾಮಿಯಿತ್ತ ಜ್ಞಾನಬಲದಿಂದ ಬ್ರಹ್ಮದೇವನು ವಿಶ್ವಚರಾಚರಜಗವನ್ನೆಲ್ಲ ನಿರ್ಮಿಸಿದನು. ಆ ಶ್ರಾವಯ (4) ಅಸ್ತುಶ್ರೌಷಟ್ (4), ಯಜ (2), ಯೇಯಜಾಮಹೇ (5), ವಷಟ್ (2), ಎಂಬ ಹದಿನೇಳಕ್ಷರಗಳ 5 ಮಂತ್ರಗಳಿಂದ ಶ್ರೀ ಹರಿಯನ್ನು ಶ್ರೀ ಹರಿಯೇ ಕೊಟ್ಟ ದರ್ಭ, ಆಜ್ಯ, ಪಶು, ಚರ್ವಾದಿದ್ರವ್ಯಗಳಿಂದ ಪೂಜಿಸಿದನು. ಆತನನ್ನು ಅನುಸರಿಸಿ ಇತರದೇವ ಋಷಿಗಳೂ ಶ್ರೀ ಹರಿಯನ್ನು ಯಜ್ಞಗಳಿಂದ ಪೂಜಿಸಿ ಧನ್ಯರಾದರು. ಯಜ್ಞಾಂಗಸಾಧನಗಳಿಂದ ಸಮಿತ್ತು, ಸೋಮಕಲಶ. ಪಾತ್ರೆಗಳು. ಖಲ, ಯವ, ವ್ರೀಹಿ, ಆಜ್ಯ, ಪೂರ್ಣಪಾತ್ರೆ, ಸ್ರುಕ್ ಸ್ರುವಗಳು. ಕುಂಡಗಳು, ಪಶುಗಳು, ಋತ್ವಿಜವರ್ಗಮುಂತಾದುವನ್ನೂ ನಿರ್ಮಿಸಿ ಬ್ರಹ್ಮದೇವನು ಶ್ರೀಹರಿಯ ಯಜ್ಞವನ್ನು ಸಂಪೂರ್ಣಗೊಳಿಸಿದನು ಯಜ್ಞವನ್ನು ಮುಗಿಸಿ ಬ್ರಹ್ಮನು ಸರ್ವಭೂಮಂಡಲವನ್ನು ದಕ್ಷಿಣೆಯಾಗಿ ಕೊಟ್ಟನು.

ಬ್ರಹ್ಮದೇವನುಮಾಡಿದ ಸರ್ವಸಮರ್ಪಣಯುಕ್ತ ಶ್ರೀಹರಿ ಪೂಜಾರೂಪವಾದ ಯಜ್ಞವನ್ನುನೋಡಿ ಸಹಿಸದೆ ಮಧುನಾಮಕ ದೈತ್ಯನು, ದೇವತೆಗಳನ್ನು ಮುತ್ತಿ, ಹಿಂಸಿಸತೊಡಗಿದನು. ನಾಸ್ತಿಕರಿಗೆ ಯಜ್ಞವೆಂದರೆ ದ್ವೇಷವಲ್ಲವೇ ? ಆಗ ನಡೆದ ದೇವದಾನವಯುದ್ಧವು ಅತಿಭಯಂಕರವಾಯಿತು.

ಮಧುದೈತ್ಯನು ಧರ್ಮವ್ಯತಿಕರವನ್ನು ಮಾಡಿದರೇನೇ, ದೇವತೆಗಳಿಗೂ ವಿಪ್ರರಿಗೂ ವ್ಯಥೆಯಾಗುವುದೆಂದು ಹಠದಿಂದ, ವಿಪ್ರರನ್ನು ಯಜ್ಞಮಾಡದಂತೆಯೂ, ಕ್ಷತ್ರಿಯರನ್ನು ಧರ್ಮಯುದ್ಧಮಾಡದಂತೆಯೂ, ವೈಶ್ಯರನ್ನು ದಾನಮಾಡದಂತೆಯೂ, ಶೂದ್ರರನ್ನು ಕುಶಲ ಕರ್ಮಗಳನ್ನು ಮಾಡದಂತೆಯೂ, ತಡೆದು ಮೀರಿಮಾಡಿದವರನ್ನು ಹಿಂಸಿ

ಸಿದನು. ಗೋವುಗಳನ್ನು ಕೊಂದನು. ತೀರ್ಥಗಳನ್ನು ಮಲಿನಗೊಳಿಸಿದನು. ಜನರವೃತ್ತಿಗಳನ್ನು ಅಸ್ತವ್ಯಸ್ತಗೊಳಿಸಿದನು. ವೇದಗಳಿಗೆ ಅಪಾರ್ಥಗಳನ್ನು ರಚಿಸಿ ಸಾರಿದನು.

ಆಗ ದೇವತೆಗಳ ಮೊರೆಕೇಳಿ, ಮುರಾರಿಯು ಹಯಗ್ರೀವರೂಪದಿಂದ ಅವನನ್ನು ದಂಡಿಸಬಂದನು. ಶ್ರೀಹಯವದನನರೂಪವು ವೇದಮಯವಾಗಿತ್ತು ಅಂದರೆ ವೇದ ಪ್ರತಿಪಾದ್ಯವಾಗಿ ಸರ್ವೋತ್ತಮವೆನಿಸಿತು. ಆತನಲಲಾಟದಿ ರುದ್ರನಿದ್ದನು ಹೃದಯದಿ ಬ್ರಹ್ಮನಿದ್ದನು ಕಣ್ಣುಗಳಲ್ಲಿ ಚಂದ್ರಸೂರ್ಯರಿದ್ದರು. ಸೂರ್ಯಕಿರಣಗಳು ಬಾಲವಲ್ಲಿ ಆಶ್ರಯಿಸಿದ್ದವು ಸರ್ವಸಂಧಿಗಳಲ್ಲಿ ದೇವತೆಗಳಿದ್ದರು- ಇಂತು ಸರ್ವದೇವಮಯನಾದ ಶ್ರೀಹಯಗ್ರೀವನ ಉಸಿರೇ ವೇದಗಳು. ಮುಖ್ಯಪ್ರಾಣನೇ ಆತನಪ್ರಾಣಶಕ್ತಿಯಿಂದ ಪುಟ್ಟಿ, ತದಧೀನನಾಗಿದ್ದನು. ಧರ್ಮಪಾದಗಳಾದ ತಪಸ್ಸತ್ಯದಯಾ ಶೌಚಗಳೇ ಶ್ರೀ ದೇವನಪಾದಗಳು.

ಇಂತಹ ದೇವದೇವನು ಪುಷ್ಕರತೀರ್ಥದಲ್ಲಿ ಮಧುದೈತ್ಯನನ್ನು ಸಂಹರಿಸಿ, ಸಕಲ ಸುಜನರಿಗೆ ಹರ್ಷವನ್ನು ತಂದಿತ್ತನು. ಮಧು ಮೇದಸ್ಸಿನಿಂದತುಂಬಿ ಭೂಮಿಯು ಮೇದಿನಿ ಎನಿಸಿ ಸಾರವಂತವಾಯಿತು.

ಶ್ರೀ ಮಧುಸೂದನನು ಪುಷ್ಕರಕ್ಷೇತ್ರದಲ್ಲಿನಿಂತು ದಿವ್ಯತಪವನ್ನು ಮಾಡಿದನು. ಎಂಟುಸಾವಿರದ ಎಂಟುನೂರುವರ್ಷಗಳ ಕಾಲವಾಮಹಾಮಹಿಮನು ಮಾಡಿದ ತಪೋಬಲದಿಂದ, ಮೇದಿನಿಯು ಶುದ್ಧವಾಯಿತು ಸುಜನರು ರಾಗದ್ವೇಷಗಳನ್ನು ಬಿಟ್ಟು, ಧರ್ಮದಲ್ಲಿ ನಡೆದರು. ಗೋವುಗಳು ಬಹುಕ್ಷೀರ ಪ್ರದವಾದವು. ವತ್ಸರದಲ್ಲಿ ಮೂರುಬೆಳೆಗಳಾದವು. ಲೋಕಕ್ಷೇಮವಾಗಲೆಂದು ಶ್ರೀ ವಿಷ್ಣುವು ತಪವನ್ನುಮಾಡಿ, ಅದರ ಫಲವಿಂತಹದೆಂದು ಜನರಿಗೆತೋರಿಸಿ. ಅವರನ್ನು ಧರ್ಮದಲ್ಲಿನಡೆಸಿದನು.

ತಪೋಮೇಹೃದಯಂ ಸಾಕ್ಷಾತ್ ತಪಸಾಧಾರ್ಯತೇಜಗತ್- ತಪಸಾಚೀಯತೇ ಬ್ರಹ್ಮ- ಸತಪೋತಪ್ಯತ- ಇತ್ಯಾದಿವೇದ ವಚನಗಳು ಶ್ರೀ ವಿಷ್ಣುವು ಜ್ಞಾನರೂಪವಾದ ತಪಸ್ಸನ್ನು ಮಾಡಿದನೇಆಗಲಿ, ಇತರರಂತೆ ಆಲೋಚನಾರೂಪವಾದ ತಪವನ್ನಲ್ಲ ಎಂದು ತಿಳಿಸುತ್ತಿವೆ. ಪೂರ್ಣಕಾಮನಾದ ಶ್ರೀಶನಿಗೆ ತಪಸ್ಸಿನಿಂದ ಆಗುವ ಪ್ರಯೋಜನವಿರುವುದಿಲ್ಲ

ಶ್ರೀಹರಿಯ ತಪೋಬಲದಿಂದ ಅಭಿವೃದ್ಧವಾದ ಧರ್ಮವೃದ್ಧಿಯನ್ನೂ, ಜನಮನಃಶಾಂತಿಯನ್ನೂ ಕಂಡು ದೈತ್ಯರುಸಹಿಸದೆ, ತಮ್ಮಮಾಯಾಶಕ್ತಿಯಿಂದ ಅಗ್ನಿಜ್ವಾಲೆಗಳನ್ನು ಸೃಜಿಸಿ, ಜಗವನ್ನು ದಹಿಸಿದರು. ಮುಂದೆ ಮೇಘರೂಪರಾಗಿ ಮಳೆಗರೆದು, ಜಗವನ್ನು ಪ್ರವಾಹದಲ್ಲಿಕೊಚ್ಚಿಹಾಕಿದರು. ಶ್ರೀ ವಿಷ್ಣುವಾಗ ಅಗ್ನಿಕೋಟಿ ಪ್ರತಾಪನಾಗಿ ಅವರನ್ನು ಸುಡತೊಡಗಿದನು. ಋಷಿಗಳುಮಂತ್ರವಿಧಿಗಳಿಂದ ಹೋಮಿಸಿ ಅಗ್ನಿ

ದೇವನನ್ನು ಪ್ರದೀಪಿಸಿದರು. ಬ್ರಹ್ಮದಂಡವೆನಿಸಿಬ್ರಾಹ್ಮಣವೂ ಅಗ್ನಿಶಿಖವೂ ಆದತಪಸ್ಸು ಸತ್ಯವಚನ ಶಕ್ತಿಯಿಂದ ವಿಪ್ರರುದಿತಿಜಾದಿದುಷ್ಟರನ್ನು ನಿಸ್ತೇಜಸ್ಕರನ್ನಾಗಿಸಿದರು.

ಆಗ ಶ್ರೀ ವಿಷ್ಣುವುವಿವಿಧಾಯುಧಗಳನ್ನು ತನ್ನ ಪ್ರಭಾವದಿಂದ ಸೃಜಿಸಿ, ಎಲ್ಲ ದೇವತೆಗಳಿಗಿತ್ತು. ಅವರಿಗೆ ಶಕ್ತಿಪ್ರದನಾದನು ವಿಷ್ಣುವು ಮುಸಲಲಾಂಗಲಖಡ್ಗ ಚಕ್ರಗಳನ್ನೂ ನರ (ಶೇಷ)ನು ಲಾಂಗಲಮುಸಲಗಳನ್ನೂ ಹಿಡಿದು ವಿಜೃಂಭಿಸಿದರು. ರುದ್ರನುಶೂಲಪಿನಾಕಗಳನ್ನೂ, ಇಂದ್ರನು ವಜ್ರವನ್ನೂ, ಯಮನು ಕಾಲದಂಡವನ್ನೂ ವರುಣನು ಪಾಶವನ್ನೂ, ಕೃಷ್ಣನು ಪರಶುವನ್ನೂ, ಹಿಡಿದು ದೈತ್ಯರನ್ನು ಮುತ್ತಿದರು ಅಚಿಂತ್ಯಮಹಿಮನಾದ ಶ್ರೀವಿಷ್ಣುವು ಆಯಾದೇವತೆಗಳಲ್ಲಿ ತನ್ನಾಮ ಶಕ್ತಿಕ್ರಿಯಾಪ್ರದನಾಗಿನಿಂತು ಅವರನ್ನು ಹುರಿದುಂಬಿಸಿದನು. ವಿಶ್ವಕರ್ಮನು ದೇವತೆಗಳಿಗೆ ರಥ ಕವಚ, ಚರ್ಮ (ಗುರಾಣಿ, ಗಳನ್ನೊದಗಿಸಿದನು. ಸ್ವಕೀಯವಾದ ಪ್ರಭಾವದಿಂದ ಶ್ರೀ ನಾರಾಯಣನು ರೌದ್ರ, ಐಂದ್ರ, ಆಗ್ನೇಯ. ವಾಯುವ್ಯ, ಪಾಶುಪತ, ವಾರುಣ, ಯಾಮ್ಯಗಳೇ ಮುಂತಾದ ಅಸ್ತ್ರಗಳನ್ನು ವೇದಮಂತ್ರಗಳಿಂದ ಉಜ್ಜೀವಿಸಿ, ಆಯಾದೇವತೆಗಳಿಗಿತ್ತನು.

ದೈತ್ಯರೂ ಅದೇಹೆಸರುಳ್ಳ ತಂತಮ್ಮ ಅಸ್ತ್ರಗಳನ್ನು ನಿರ್ಮಿಸಿ, ಆಯುಧರಥಾದಿಸರ್ವ ಸಾಧನಸಹಿತರಾಗಿ ಪುಷ್ಕರಕ್ಷೇತ್ರದಲ್ಲಿ ದೇವತೆಗಳೊಡನೆ ಕಾದಾಡಿದರು. ಶ್ರೀವಿಷ್ಣು ಸಹಾಯಯುಕ್ತರಾದ ದೇವತೆಗಳಿಗೆ ಜಯವಾಯಿತು. ದೈತ್ಯರು ಸೋತು ಪಲಾಯನ ಪರಾಯಣರಾದರು ಅವರಿಗೆ ಆಗರಾಜನಾಗಿದ್ದ ಬಲಿಯು ಅವರನ್ನೊಟ್ಟುಗೂಡಿಸಿ, ತಮ್ಮ ಪರಾಜಯ ಕಾರಣವೇನೆಂದು ವಿಚಾರಮಾಡಿದನು. ಅಮೃತಪಾನದಿಂದಲು, ಹರಿಯ ಸಹಾಯದಿಂದಲು ದೇವತೆಗಳು ಜಯಶೀಲರಾಗಿರುವರೆಂದು ತಿಳಿದು, ಬಲ್ಯಾದಿ ದೈತ್ಯರು ಅಮೃತೋತ್ಪಾದನಕ್ಕೆಂದು ಪ್ರಯತ್ನಿಸಿದರು. ಶ್ರೀಹರಿಯ ಆಜ್ಞೆಯಂತೆ ದೇವತೆಗಳೂ ಪ್ರಯತ್ನಿಸಿದರು ಮಂದರವನ್ನೆತ್ತಿತಂದರು ಸಮುದ್ರದಲ್ಲಿಟ್ಟರು. ವಾಸುಕಿಯನ್ನು ಮಂದರಕ್ಕೆ ಸುತ್ತಿದರು. ಉಭಯರೂ ಮಥಿಸಿದರು. ಅಮೃತವೂ ಉತ್ಪನ್ನವಾಯಿತು. ಆದರೆ ಅಮೃತಪಾನವನ್ನು ಪೊಂದಿದವರು ದೇವತೆಗಳು. ದೈತ್ಯರು ಸಮಾನಬಲಸಾಧನ ಪ್ರಯತ್ನರಾಗಿದ್ದೂ, ಶ್ರೀಹರಿಪಾದ ಪದ್ಮಾಶ್ರಯರಾಗದ ಕಾರಣದಿಂದ ಫಲವನ್ನು ಹೊಂದದೆ ಹೋದರು.

ಶ್ರೀಹರಿತೇಜೋಬೃಂಹಿತರಾದ ದೇವತೆಗಳಿಗೂ, ನಿಷ್ಫಲರಾಗಿ ಕೆರಳಿ ಮೇಲೇರಿಬಂದ ದೈತ್ಯರಿಗೂ ಭಯಂಕರಯುದ್ಧವಾಯಿತು. ದೇವತೆಗಳಿಗೆ ಜಯವಾಗಲೆಂದು ಋಷಿಗಳು ಯಜ್ಞಗಳನ್ನು ಮಾಡಿದರು. ದಕ್ಷನುಯಜಮಾನನಾಗಿದ್ದು. ರುದ್ರಭಾಗವನ್ನು ಕೊಡದೆ ಮಾಡುವ ಯಜ್ಞವನ್ನು ಸಹಿಸದೆ ರುದ್ರಪಾರ್ಷದರು ದೈತ್ಯಪಕ್ಷವನ್ನು ವಹಿಸಿ, ಯಜ್ಞಗಳನ್ನು ನಾಶಗೊಳಿಸಿದರು. ಯೂಪಗಳನ್ನು ಮುರಿದುಗಡಹಿದರು.

ಪತ್ನೀಶಾಲೆಗೆಬೆಂಕಿ ಹಚ್ಚಿದರು. ಹವಿಸ್ಸುಗಳನ್ನು ಹರಿಸಿತಿಂದರು. ಪಶುಗಳನ್ನು ಭಕ್ಷಿಸಿದರು ಕಲಶಗಳನ್ನು ಉರುಳಿಸಿದರು. ಕುಂಡಗಳಲ್ಲಿ ಮಲಮೂತ್ರಗಳನ್ನು ಹಾಕಿದರು. ಅರಣಿ ಸ್ರುಕ್‌ಸ್ರುವಗಳನ್ನು ಸುಟ್ಟರು. ಯಜ್ಞಾಭಿಮಾನಿಯು ಜಿಂಕೆಯ ರೂಪವನ್ನು ಧರಿಸಿ, ಓಡತೊಡಗಿತು. ಆಗ ರುದ್ರನು ಕ್ರುದ್ಧನಾಗಿ ಬ್ರಹ್ಮದೇವನು ತನಗೆ ಕೊಟ್ಟಿದ್ದ ಅಜಗವವೆಂಬಧನುಸ್ಸನ್ನು ಹಿಡಿದು ಯಜ್ಞಭಂಜಕರಾದ ದೈತ್ಯಪ್ರಥಮರಿಗೆ ಸಹಾಯಕನಾಗಿನಿಂತನು. ಯಜ್ಞನುಬ್ರಹ್ಮನಿಗೆ ಶರಣಾದನು. ಬ್ರಹ್ಮನು ಯಜ್ಞವನ್ನು ಮಹಾಮೃಗವನ್ನುಮಾಡಿ ಅಂತರಿಕ್ಷದಿ ನಕ್ಷತ್ರರೂಪದಿಂದ ನಿಲ್ಲಿಸಿದನು ರುದ್ರನು ಮಹಾವ್ಯಾಧನಾಗಿ ಅದನ್ನು ಇಂದಿಗೂಹಿಂಬಾಲಿಸಿ ಹೋಗುತ್ತಿರುವನು.

ಯಜ್ಞಸಂರಕ್ಷಣೆಗಾಗಿ ಬದ್ಧದೀಕ್ಷನಾಗಿಬಂದ ವಿಷ್ಣುವಿಗೂ, ದೈತ್ಯಪಕ್ಷೀಯನಾಗಿ ಯಜ್ಞಧ್ವಂಸಕನಾಗಿ ನಿಂತರುದ್ರನಿಗೂ ಘೋರಸಮರವಾಯಿತು. ಋಷಿಗಳು ಲೋಕಕ್ಷಯವಾಗುವುದೆಂದುಹೆದರಿ, ಶಾಂತಿಸೂಕ್ತಗಳನ್ನು ಪಠಿಸುತ್ತಾಪ್ರಾರ್ಥಿಸಿದರು ರುದ್ರನು ತೀಕ್ಷ್ಣಕರಗಳಿಂದ ವಿಷ್ಣುವಿನನ್ನು ಪೀಡಿಸಿದನು ಆದರೂ ಸರ್ವಲೋಕೇಶನಾದ ವಿಷ್ಣುವುಗಾಳಿಗೆ ಅಲುಗದಬೆಟ್ಟದಂತೆ ನಿಶ್ಚಲನಾಗಿ ನಗುತ್ತಾರುದ್ರನನ್ನು ಬ್ರಹ್ಮದಂಡದಿಂದ ಹೊಡೆದನು. ಮತ್ತು ಆತನಕಂಠದೇಶದಲ್ಲಿ ಹಿಡಿದು ಅಲ್ಲಾಡಲು ಬಾರದಂತೆ ಮಾಡಿದನು ರುದ್ರನಾಗ ವಿಷ್ಣುಮಹಿಮೆಯನ್ನರಿತು, ಕೈಜೋಡಿಸಿ "ಪ್ರಭೋ ! ನಾರಾಯಣ ! ಸರ್ವಜಗತ್ಕಾರಣನಾದ ನಿನ್ನಿಂದರಣಕಣಕ್ಕಿಳಿದನನ್ನ ತಪ್ಪನ್ನು ಮನ್ನಿಸು ! ನನಗೂನನ್ನತಂದೆಯಾದ ಬ್ರಹ್ಮನಿಗೂ ಕೂಡಗುರುವು ಅಂತರ್ಯಾಮಿಯೂ ಆದನಿನ್ನಮಹಿಮೆ ಅಗಾಧವಾಗಿದೆ ಸರ್ವಕರ್ಮಫಲಪ್ರದನು, ಸರ್ವಭೂತನಿಯಾಮಕನು, ಸರ್ವಚರಾಚರಪಾಲಕನು ಆದನಿನಗೆ ನಮಸ್ಕಾರವು !" ಎಂದುಬೇಡಿ, ಯುದ್ಧವಿರತನಾದನು.

ಆದರೂಬಿಡದೆ ಮೇಲೇರಿಬಂದ ನಂದಿಯನ್ನು ನೋಡಿ ನಗುನಗುತ್ತಾನಾರಾಯಣನು ನಂದಿಯನ್ನು ಸ್ತಂಭಿಸಿನಿಲ್ಲಿಸಿಬಿಟ್ಟನು. ಸರ್ವಭೂತಪತಿಯು, ಅಚಿಂತ್ಯಮಹಿಮನು, ಅಜೇಯವಿಕ್ರಮನು, ಅರಿಂದಮನುಆದ ಶ್ರೀಹರಿಯುತಾನಾಗಿ ಪ್ರಸನ್ನನಾಗಿ ರುದ್ರನಿಂದ ಯಜ್ಞವು ಪುನರುಜ್ಜೀವಿಸುವಂತೆಮಾಡಿ, ರುದ್ರಭಾಗವಾಗಿ ಹುತಶೇಷವನ್ನಿತ್ತು, ಕರುಣಿಸಿದನು. ರುದ್ರದೇವನಿಗೆ ಯಜ್ಞಭಾಗದೊಡನೆ, ದಕ್ಷನಿಗೆ ಯಜ್ಞಫಲವೂ, ಯಜ್ಞಾಂಗಗಳಿಗೆ ಸಾಂಗತೆಯೂ, ದೇವತೆಗಳಿಗೆ ಸಮಾಧಾನವೂ, ಸರ್ವಲೋಕಗಳಿಗೆ ಕ್ಷೇಮವೂ ಉಂಟಾಯಿತು. ಶ್ರೀ ಕೃಷ್ಣಾರ್ಪಿತಮಸ್ತು ||

— ೦ —

11. ವರಾಹ ವೈಭವಂ

ಶ್ರೀವೈಶಂಪಾಯನನು ಶ್ರೀಹರಿಯ ಅವತಾರಗಳನ್ನು ವರ್ಣಿಸುತ್ತಾ ಶ್ರೀವರಾಹಚರಿತೆಯನ್ನು ನಿರೂಪಿಸಿದನು. "ಯಸ್ಯರೂಪಂ ಬಿಭ್ರದಿಮಾಂ ಅವಿಂದತ್ ಗುಹಾಂ ಪ್ರವಿಷ್ಟಾಂ ಸಲಿಲಸ್ಯಮಧ್ಯತಃ" ಯಾವ ಶ್ರೀ ಮಧುಸೂದನನು ವರಾಹ ರೂಪತನ್ನು ಧರಿಸಿದವನಾಗಿ, ಪ್ರಳಯಜಲಧಿಮಗ್ನವಾಗಿದ್ದ ಈ ಭೂಮಿಯನ್ನು ಹೊಂದಿಉದ್ಧರಿಸಿದನು ಶ್ರುತ್ಯರ್ಥ||.

ಬ್ರಹ್ಮನಸಹಸ್ರಯುಗ ಸಂಮಿತವಾದ ಕಲ್ಪವು ಸಮಾಪ್ತವಾಗಿ, ಮಹಾಪ್ರಳಯವಾಯಿತು. ಆಗಭೂತ ಸಂಚಾರವಿಲ್ಲ. ಜೀವಸರ್ವಸ್ವವೂ ಶ್ರೀ ರಮಣನ ಉದರಗತವಾಯಿತು. ಶ್ರೀ ಹರಿಯು ಸೃಷ್ಟಿಕಾಲವನ್ನು ಪ್ರತೀಕ್ಷಿಸಿ, ರಮಾಲಿಂಗಿತಗಾತ್ರನಾಗಿ ವಟಪತ್ರ ಪುಟದಲ್ಲಿಯೋಗ ನಿದ್ರಾಮುದ್ರಿತ ನಮನನಾಗಿದ್ದನು. ಉದಕವಾಯುವಟಪತ್ರರೂಪಳಾಗಿ ರಮಾದೇವಿಯು ಶಯ್ಯಾಸಖಿಯಾಗಿ ಶ್ರೀಹರಿಯ ಶೋಭೆಯಿಂದ ಸಂಪೂರ್ಣ ವರಗಾತ್ರಳಾಗಿ ರಮಿಸಿದಳು.

ಸೃಷ್ಟಿಕಾಲವುಬಂತು. ಸರ್ವಜ್ಞನು, ಕಾಲಸ್ವಾಮಿಯು ಆದ ಶ್ರೀಶನದನ್ನರಿತು ಸೃಜನಕಾರ್ಯ ಸುಮುಖಳಾಗುವಂತೆ ರಮೆಯನ್ನು ಪ್ರೇರಿಸಿ ಕ್ರೀಡಿಸಿದನು. ಪ್ರಳಯದಲ್ಲಿ ಸರ್ವಚಡಚೇತನ ರಾಶಿಗಳೆಲ್ಲವೂ ಶ್ರೀಹರಿವಶವಾಗಿರುವುದನ್ನು ಚನ್ನಾಗಿತಿಳಿಯಲು ಬರುವುದು. ಆದರೆ ಸೃಷ್ಟಿಯಾದ ಮೇಲೆ ಕೆಲಜೀವರು ಸ್ವಯೋಗ್ಯತೆಯಂತೆ ವಿಪರೀತವಾಗಿತಿಳಿವರು. ಕೆಲವರು ಶ್ರೀಶನು ಇಲ್ಲವೆಂದರೆ, ಕೆಲರು ಇರುವನೆಂದು ಒಪ್ಪಿದರೂ, ಅವನೇಜೀವನೆಂಬುವರು ಸುಜೀವರು ಹಾಗಲ್ಲ. ಅವರು ಸರ್ವವೂ ಶ್ರೀಹಯುವಶದಲ್ಲಿದೆ ಪ್ರಳಯದಲ್ಲಂತೆ ಸೃಷ್ಟಿಕಾಲದಲ್ಲಿಯೂ ಶ್ರೀರಮಣನು ಸರ್ವಪ್ರಭುವು, ಜೀವಜಡವಿಲಕ್ಷಣನು ಆಗಿರುವನೆಂದು ಸರಿಯಾಗಿತಿಳಿಯುವರು.

ದೇವತೆಗಳು ನಾರಾಯಣಪರರ. (ಅವನ ಭಕ್ತರು) ಕ್ರಿಯೆಗಳೂ ನಾರಾಯಣಪರವು (ಅವನಿಗೆ ಅರ್ಪಿತವಾಗಬೇಕು) ಯಜ್ಞವು ನಾರಾಯಣಪರವು (ಅವನಿಂದ ಫಲವನ್ನು ಹೊಂದಬೇಕು, ಶ್ರುತಿಯು ನಾರಾಯಣಪರವು (ಅವನನ್ನೇ ಸರ್ವೋತ್ತಮನೆಂದು ಸಾರುವವು) ಧರ್ಮವು ನಾರಾಯಣಪರವು (ಅವನಪ್ರೀತಿಗಾಗಿ ಆಚಣೀಯವು) ಜ್ಞಾನವು ನಾರಾಯಣಪರವು (ಅವನ ಸರ್ವೋತ್ತಮತ್ವನಿರೂಪಕವು) ತಪಸ್ಸು ನಾರಾಯಣಪರವು (ಅವನ ಪ್ರೀತಿಗಾಗಿ ಕರ್ತವ್ಯವು) ಗತಿಯು ನಾರಾಯಣಪರವು (ಅವನಿಂದ ಬರುವಮೋಕ್ಷವೇಗತಿ).

ಇಂತು ತಿಳಿದು ವೇದಪುರಾಣೇತಿಹಾಸ ಚತುರರಾದ ವಿಬುಧರುಪೇಳಲು, ಇತರರು ಅಂತೆಯೇ ಅನುಸಂಧಾನಿಸಿ, ಪ್ರವರ್ತಿಸುವರು. ಇಂತಹರಮಾಕಾಂತನ ಮಹಿಮೆ

ಯನ್ನು ದೇವತೆಗಳು ಸಾಕಲ್ಯೇನತಿಳಿಯರು. ಋಷಿಗಳೂ ತಿಳಿಯಲಾರರೆಂದ ಮೇಲೆ ಇನ್ನು ಮನುಜರಪಾಡೇನು ? ಸಪ್ತಋಷಿಗಳೂ, ನವಪ್ರಜೇಶರು, ಬ್ರಹ್ಮಾದಿದೇವತೆಗಳು, ವಸುರುದ್ರಾದಿತ್ಯರು, ಮರುತ್ತುಗಳು, ಅಶ್ವಿನೀದ್ವಯವು, ಮೊದಲಾದ ಮಹಾವೈಷ್ಣವರು ಮಾತ್ರ ಶ್ರೀಹರಿಮಹಿಯನ್ನು ಯಥಾಶಕ್ತಿಯಾಗಿಯೂ ಯಥಾಯೋಗ್ಯವಾಗಿಯೂತಿಳಿದು ಭಜಿಸುತ್ತಿರುವರು.

ಶ್ರೀಹರಿಯು ಬ್ರಹ್ಮಾಂಡವನ್ನು ಸೃಜಿಸಿದನು. ಬ್ರಹ್ಮಜೀವನನ್ನು ಅದರ ಅಭಿಮಾನಿಯಾಗಿರಿಸಿ, ಆತನದ್ವಾರಾ ಸರ್ವಭೂತ ದೇಹಗಳನ್ನೂ ಅಂದರೆ ಪಿಂಡಾಂಡಗಳನ್ನೂ ಸೃಜಿಸಿದನು. ಲೋಕವ್ಯಾಪಾರವಾಗಬೇಕೆಂದು ಅದರಲ್ಲಿ ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ, ವಾಕ್, ಪಾಣಿ, ಪಾದಪಾಯೂಪಸ್ಥಗಳೆಂಬ ಒಂಬತ್ತು ಛಿದ್ರಗಳನ್ನುಮಾಡಿ, ಶಬ್ದಸರ್ಶರೂಪ ರಸಗಂಧಾನುಭವವೂ, ಆದಾನ, ಗಮನ, ವಚನ ವಿಸರ್ಜನಗಳೆಂಬ ವ್ಯಾಪಾರವೂ ಆಗುವಂತೆ ಅನುಗ್ರಹಿಸಿದನು. ಬ್ರಹ್ಮಾಂಡದಲ್ಲಿ ಊರ್ಧ್ವಮಧ್ಯಮಾಧೋಲೋಕಗಳನ್ನು ಕಲ್ಪಿಸಿದಾಗ ಆದಛಿದ್ರಗಳಲ್ಲಿ ಪರ್ವತ ಕಂದರಗಳನ್ನೂ. ದಿಕ್ಕುವಿದಿಕ್ಕುಗಳನ್ನೂ, ಮಧ್ಯದಲ್ಲಿಮೇರು ಪರ್ವತವು ನಿರ್ಮಿತವಾಯಿತು. ಬ್ರಹ್ಮಾಂಡ ಬಹಿರುದಕವು ಸೂಕ್ಷ್ಮಛಿದ್ರಗಳಲ್ಲಿ ತೂರಿಬಂದಾಗ ಭೂಮಿಯು ಜಲಮಯವಾಯಿತು. ಭೂತಗಳಸ್ಥಿತಿಯುದುರ್ಭರವಾಯಿತು. ಭೂತಲವು ನೀರಿನಲ್ಲಿ ಕುಗ್ಗತೊಡಗಿತು. ಭೂದೇವಿಯು ಶ್ರೀಹರಿಗೆ ಶರಣಾದಳು.

"ಶ್ರೀನಾಥ! ಮನ್ನಾಥ! ತ್ರಿವಿಕ್ರಮ! ಅಮಿತವಿಕ್ರಮ! ಮಹಾನೃಸಿಂಹ! ಚತುರ್ಭುಜ! ಶ್ರೀಶಾರ್ಙ್ಗಚಕ್ರಾಸಿಗದಾಧರ! ಪುರುಷೋತ್ತಮ! ನಿನಗೆನಮಃ ನೀನೇಜಗದ್ಧಾರಕನು ಸಂಹಾರಕನೂ ಅಹುದು. ನಿನ್ನಿಂದ ಪ್ರೇರಿತರಾಗಿ ಇತರದೇವತೆಗಳೂ, ನಾನೂ, ಭೂತಗಳನ್ನು ಧರಿಸುತ್ತಿರುವೆವು ನಿನ್ನಿಂದಧಾರ್ಯವಾಗದ, ನಿನ್ನ ಅಧೀನವಾಗದವಸ್ತುವೀಹದಿನಾಲ್ಕು ಲೋಕಗಳಲ್ಲಿಲ್ಲ ಎಲ್ಲಿಯೂಇಲ್ಲ! ನನ್ನನ್ನು ಎತ್ತಿಪಿಡಿದು, ಕಾಪಾಡು! ದುಷ್ಟದಾನವರಿಂದ ಪೀಡಿತಳಾಗಿ, ಶರಣೀಕರಣೀಯನಾದ ಶ್ರೀರಮಣೀವರನನ್ನು ಬೇಡುತ್ತಿರುವೆನು"

ಆಗ ಶ್ರೀಧರನು ಭೂಮಿಯು ಮಗ್ನವಾಗದಂತೆ ಎಂಟು ದಿಕ್ಕುಗಳಲ್ಲಿ ಪರ್ವತಗಳನ್ನು ವಿಭಜಿಸಿಸ್ಥಾಪಿಸಿದನು. ಧರಾಧರಗಳು ಭೂಮಿಗೆ ಆಧಾರಸ್ತಂಭಗಳಾಗಿ ನಿಂತವು ಮೇರು, ಉದಯ, ಅಸ್ತ, ಮಂದರ, ಗಂಧಮಾಧನ ಪಾರಿಯಾತ್ರ, ಹಿಮಾಲಯ, ತ್ರಿಕೂಟ. ಮಹೇಂದ್ರಾದಿ ಪರ್ವತಗಳು ಧರೆಯನ್ನು ಧರಿಸುವುದಲ್ಲದೆ ತಮ್ಮಲ್ಲಿದ್ದ ಧಾತು, ಸಸ್ಯ, ವೃಕ್ಷ, ಲೋಹ, ರತ್ನ, ನಿರ್ಝರಾದಿಗಳಿಂದ ಜೀವರಿಗೆ ಉಪಕರಿಸಿದವು

ಜೀವರಿಗೆ ಉತ್ತಮನು, ವಿಷ್ಣುಪ್ರಥಮ ಪುತ್ರನುಆದ ಬ್ರಹ್ಮದೇವನು ಶ್ರೀಹರಿ ಪ್ರೇರಣೆಯಿಂದ ಮಿಕ್ಕಜಗವನ್ನು ಸೃಜಿಸಿ, ಸ್ಥಾಪಿಸಿದನು. ಶ್ರೀಹರಿಯಿಂದ ಮೊದಲು

ಉಚ್ಚ್ರರಿತವಾದ ಓಂ ಕಾರವನ್ನೂ ತದಙ್ಗಭೂತವಾದ (ಅ. ಉ. ಮ) ಭೂಃ ಭುವಃ ಸ್ವಃ ಎಂಬ ವ್ಯಾಹೃತಿಗಳನ್ನೂ ಕಲಿತು, ಅದೇ ಹೆಸರನ್ನು ಮೂರು ಲೋಕಗಳಿಗಿತ್ತನು. ಮಹಃ ಎಂಬ ಚತುರ್ಥವ್ಯಾಹೃತಿಯಿಂದ ಶ್ರೀಹರಿಯ ಸರ್ವೋತ್ತಮತ್ವ, ವ್ಯಾಪ್ತಿ, ಪ್ರಕಾಶ, ಆನಂದ, ವೀರ್ಯಾದಿ ಅನಂತಗುಣಗಳನ್ನು ತಿಳಿದು, ಇತರರಿಗೆ ಉಪದೇಶಿಸಿದನು.

ಬ್ರಹ್ಮನಿಂದ ಮಹರಾದಿವ್ಯಾಹೃತ್ಯರ್ಥ ಭೂತವಾದ ಗಾಯತ್ರಿಯನ್ನೂ, ಅದರ ವಿವರಣವಾದ ಪುರುಷಸೂಕ್ತವನ್ನೂ, ಅದರವ್ಯಾಖ್ಯಾನವೆನಿಸಿದ ನಾಲ್ಕು ವೇದಗಳನ್ನೂ ಸನಕಾದಿಸುತಚತುಷ್ಟಯವು ಕೇಳಿ,ತಿಳಿದರು ಏವನೇ ಮತನಾದ ಮಹಾದೇವನೂ ಸಾಂಗವಾಗಿ ಅಧ್ಯಯನಗೈದು, ಇತರ ಋಷಿಗಳಿಗೆ ಹೇಳಿಕೊಟ್ಟನು. ಮರೀಚ್ಯಾದಿ ಪ್ರಜಾಪತಿಗಳೂ, ಅವರ ಮಕ್ಕಳಾದ ಕಶ್ಯಪಾದಿಗಳೂ, ಭೂಲೋಕದ ದ್ವಿಜರಿಗೆ ವೇದವನ್ನು ಉಪದೇಶಿಸಿದರು.

ಕಶ್ಯಪನು ವೇದಾಧ್ಯಯನವನ್ನೂ, ಸಂತಾನವೃದ್ಧಿಯನ್ನೂ ಸಂಪಾದಿಸಿ. ಲೋಕದಶ್ರೇಯಸ್ಸಿಗೆ ಕಾರಣನಾದನು.ಅದಿತಿ, ದಿತಿ, ಕಾಲಾ, ಅನಾಯು, ಸಿಂಹಿಕಾ, ಮುನಿ, ಕ್ರೋಧಾ, ಸುರಭಿ, ವಿನತಾ, ಕದ್ರೂ, ಸುರಸಾ, ದನು, ಪ್ರಾಧಾ-ಎಂಬ ಹದಿಮೂರು ಪತ್ನಿಯರಲ್ಲಿ, ಕ್ರಮವಾಗಿ, ದೇವತೆಗಳನ್ನು, ದೈತ್ಯರನ್ನು, ಸಂವತ್ಸರಾದಿ ಕಾಲಾಭಿಮಾನಿಗಳನ್ನು, ಆಧಿವ್ಯಾಧಿಗಳನ್ನು, ರಾಹುವನ್ನು, ತಪೋವ್ರತಗಳನ್ನು, ಕ್ರೋಧವಶರನ್ನು, ಗವಾದಿಪಶುಗಳನ್ನು, ಪಕ್ಷಿಗಳನ್ನು, ಸರ್ಪಗಳನ್ನು, ನಾಗರನ್ನು, ದಾನವರನ್ನು, ಧಾರಕರನ್ನೂ ತಾನೂತನ್ನ ಪತ್ನಿಯರು ಹಿಂದಿನ ಕಲ್ಪದ ಸ್ಮೃತಿಯನ್ನು ಪಡೆದು, ಬ್ರಹ್ಮದೇವನ ಅನುಗ್ರಹದಿಂದ ಆಯಾರೂಪಗಳನ್ನು ಧರಿಸಿ, ಆಯಾಜೀವ ದೇಹಗಳನ್ನು ಪಡೆದರು. ಅವರಿಂದ ತ್ರಿಲೋಕಗಳು ಪೂರ್ಣವಾದವು. ತಮಃ ಪ್ರಚುರರಾದ ದೈತ್ಯದಾನವನಾಗಾದಿಗಳು ಅತಲಾದಿಕೆಳಲೋಕದಲ್ಲಿ ವಸಿಸಿದರು ಅವರಂತೆ ಅತಿಭಾರರಾಗದ ಮನುಜರು ಮಧ್ಯಲೋಕದಿನಿಂತರು. ಲಘುಕಾಯರಾದ (ಸಾತ್ವಿಕ) ದೇವಗಂಧರ್ವ ವಿಹಗಾದಿಗಳು ಭುವರಾದಿ ಮೇಲಿನಲೋಕದಲ್ಲಿ ವಿರಾಜಿಸಿದರು

ಇಂದ್ರನುಸ್ವರ್ಗದಲ್ಲಿ ರಾಜ್ಯಾಭಿಷಿಕ್ತನಾಗಿ ಚಕ್ರಪಾಣಿಯಾದ ವಿಷ್ಣುವಿನ ಆಶ್ರಯವನ್ನು ಪಡೆದುಬಲಿಷ್ಠನಾದನು. ಚಂದ್ರನು ಯಜ್ಞಗಳಿಗೆ, ತಪಸ್ಸಿಗೆ, ನಕ್ಷತ್ರಗಳಿಗೆ, ಓಷಧಿಗಳಿಗೆ, ದ್ವಿಜರಿಗೆ ರಾಜನಾದನು. ಪ್ರಜಾಪತಿಗಳಿಗೆದಕ್ಷನು, ಜಲಗಳಿಗೆ ವರುಣನು, ಪಿತೃಗಳಿಗೆ ಅರ್ಯಮನು, ಗಂಧಗಳಿಗೂ, ಶಬ್ದಾಕಾಶಗಳಿಗೂ, ಬಲವೀರ್ಯಜ್ಞಾನಗಳಿಗೂ, ಸರ್ವಶರೀರಿಗಳಿಗೂ ಮುಖ್ಯಪ್ರಾಣನು, ಪತಿಯಾಗಿ ಪಾಲಿಸಿದರು. ಭೂತಪಿಶಾಚಗಳಿಗೂ, ಮರಣಕ್ಕು, ವ್ರತಗಳಿಗೂ, ತಪಸ್ಸಿಗೂಮಹಾ ದೇವನು ಅಧಿಪತಿಯಾದನು. ಯಕ್ಷರಾಕ್ಷಸಗುಹ್ಯಕರಿಗೂ, ಧನಕ್ಕು ಕುಬೇರನುಸ್ವಾಮಿಯಾದನು.

ಸರ್ಪಗಳಿಗೆ ಶೇಷನು ಗಂಧರ್ವರಿಗೆ ಚಿತ್ರರಥನು, ಸಾಗರನದೀನದ ಜಲಾದಿಗಳಿಗೆ ಪರ್ಜನ್ಯನು, ಅಪ್ಸರಸೆಯರಿಗೆ ಕಾಮನು, ಪಶುಗಳಿಗೆ ನಂದಿಯು, ಪಕ್ಷಿಗಳಿಗೆ ಗರುಡನು. ದೈತ್ಯ ದಾನವರಿಗೆ ಹಿರಣ್ಯಾಕ್ಷಹಿರಣ್ಯಕಶಿಪುದ್ವಯವು, ಉತ್ಪಾತಗಳಿಗೆ ರಾಹುವು, ಕಲಾಕಾಷ್ಠ ಮುಹೂರ್ತಗಳಿಗೂ, ದಿನಪಕ್ಷಮಾಸಾಯನಗಳಿಗೂ, ತಿಥಿವಾರ ಯೋಗಕರಣಗಳಿಗೂ ಸಂವತ್ಸರ ನಾಮಕ ವಿರಿಂಚನು ಪ್ರಭುವಾದರು ಇಂತುಸರ್ವಪದಾರ್ಥಗಳಿಗೂ ಅಧಿಪರಾದದೇವಾದಿಗಳು, ತಮ್ಮ ಅಧಿಕಾರಶಕ್ತಿನಾಮಗಳನ್ನು ಶ್ರೀನಾರಾಯಣನಿಂದ ಹೊಂದಿರುವರು. ಸರ್ವವಿಲಕ್ಷಣನು, ಸರ್ವನಾಮ ಮುಖ್ಯಾರ್ಥಭೂತನು. ಸರ್ವಕಲ್ಯಾಣಗುಣ ಪೂರ್ಣನು, ಸರ್ವನಿಯಾಮಕನು, ಸರ್ವಶಕ್ತಿಪ್ರದನು, ಆದ ಶ್ರೀಹರಿಯ ವಿಭೂತಿ ವೈಭವವನ್ನಿಂತು ನಿನಗೆನಿರೂಪಿಸಿದೆನು. ಮುಂದೆಅವನ ದುಷ್ಟಶಿಕ್ಷಕವಾದವರಾಹ ನೃಸಿಂಹ ರೂಪಗಳ ವಿಭವವನ್ನು ವಿವರಿಸುವೆನು.

‖ ಶ್ರೀಮಧ್ವೇಶಾರ್ಪಿತಮಸ್ತು ‖ (ಮೂಲ ೩೭ ಅಧ್ಯಾಯಃ)

12. ವರಾಹ ವಿಭವ.

ಶ್ರೀ ಮಾಧವನ ಅವತಾರದ್ವಯವನ್ನು ನಿರೂಪಿಸುವೆನು. ಹಿಂದೆ ಕೃತಯುಗದಲ್ಲಿ ಪರ್ವತಾಭಿಮಾನಿ ದೇವತೆಗಳು ಪಕ್ಕಗಳುಳ್ಳವರಾಗಿ, ಹಾರಿ, ಬೇಕಾದೆಡೆ ಕೂತು ಕೆಳಗೆಸಿಕ್ಕುಬಿದ್ದ ಪುಣ್ಯಾಶ್ರಮಾರಾಮ ಗ್ರಾಮಗಳನ್ನು ನಾಶಗೊಳಿಸಿದರು. ಭೂಭಾರವಹನಕರ್ತ್ತವ್ಯವನ್ನು ಕಡೆಗಣಿಸಿ, ಅವರು ರಾಕ್ಷಸರನ್ನು ರೇಗಿಸಿ, ದೇವತೆಗಳ ಮೇಲೆ ದಂಡೆತ್ತಿಬರುವಂತೆ ಮಾಡಿದರು, "ಮೊದಲು ಹುಟ್ಟಿದುದರಿಂದ ಪೂರ್ವದೇವರೆಂದು ಕರೆಯಲ್ಪಡುವ ದೈತ್ಯವರರೇ ! ನೀವು ಶ್ರೇಷ್ಠರು ಮತ್ತು ಜ್ಯೇಷ್ಠರು ಆದರೂ ನಿಮಗೆ ಆಧಿಪತ್ಯವು ಸಿಗಲಿಲ್ಲ ಬ್ರಹ್ಮದೇವನ ಅನತಿಯಂತೆ ದೇವತೆಗಳು ಸ್ವರ್ಗಾದಿ ಮೇಲಿನ ಲೋಕಗಳಲ್ಲಿದ್ದು, ಮಿಕ್ಕಮಾನವದಾನವರನ್ನು ಕೆಳತುಳಿದು. ಆಳುತ್ತಿರುವರು ಇದು ಸರಿಯಲ್ಲ !" ಎಂದ ಪರ್ವತರಾಜರಮಾತು ದೈತ್ಯದಾನವರಿಗೆ ರುಚಿಸಿತು. ಸ್ವರ್ಗದ ಕಿಂತಲು ಅಧಿಕ ಸಂಪತ್ಸಮೃದ್ಧವಾದ ಸುತಲಾದಿಗಳು ಕೈಲಿದ್ದರೂ, ಸಾಕೆನಿಸದೆ ಅವರು. ವರರಾದ ದೇವತೆಗಳನ್ನು ಮುತ್ತಿ ತಮ್ಮಪರಾಕ್ರಮ ದೌರ್ಜನ್ಯಸಾಹಸಗಳಿಂದ ಅವರನ್ನು ಸೋಲಿಸಿ, ಸ್ವರ್ಗವನ್ನು ಆಕ್ರಮಿಸಿನಿಂತರು. ತಮ್ಮಸ್ವಭಾವದಂತೆ ದುರ್ವರ್ತನರೂ ಆದರು. ಧರ್ಮಕರ್ಮಗಳು ಅವನ್ನುನಿರೂಪಿಸುವ ವೇದಾದಿಶಾಸ್ತ್ರಗಳು ಅವರ ಅವಹೇಳನಕ್ಕೆತುತ್ತಾದವು. ಸದ್ವರ್ತನ ಸತೀತ್ವ, ಸಹನೆಗಳವರಿಗೆ ತುಚ್ಛವೆನಿಸಿದವು, ಸುಜನರನ್ನು ಹಿಂಸಿಸುವುದೇ ಅವರಮನೋರಂಜಕವಾಯಿತು. ನಿರಪರಾಧಿಗಳನ್ನು ಸಾಪರಾಧಿಗಳೆಂದರು. ಧರ್ಮವನ್ನು ಅಧರ್ಮವೆಂದರು. ಯಜ್ಞದಾನ ತಪೋವ್ರತಾಧ್ಯಯನ ಶೀಲರನ್ನು ತಿರಸ್ಕರಿಸಿ ಅವರ ಜೀವನವನ್ನು ಹರಿಸಿದರು.

ದೈತ್ಯರಾಜನಾದ ಹಿರಣ್ಯಾಕ್ಷನು, ವಿವಿಧನಿಶಿತಾಯುಧ ಸಂಪನ್ನನಾದ ದೈತ್ಯ ದಾನವಸೇನೆಯಿಂದ ಅಸ್ವರ್ಗಸುತಲವನ್ನಾಕ್ರಮಿಸಿ, ಭೂಮಂಡಲವೆಲ್ಲವೂ ದೈತ್ಯರ ಸೊತ್ತು, ಇನ್ನಾರದೂ ಅಲ್ಲ ಎಂದು ಘೋಷಿಸಿ, ಅಕ್ರಮಿಸಿ, ಅಕ್ರಮವರ್ತನನಾಗಿ ವಿಜೃಂಭಿಸಿದನು. ಧೂಮ್ರಕೇಶನು, ಹರಿಶ್ಮಶ್ರುವು, ರಕ್ತಸಂಧ್ಯಾಮೇಘ ಸಂಕಾಶನು, ನೀಲಪೀತಾಂಬರಧರನು, ದಂಷ್ಟ್ರಾಕರಾಳವದನನು, ಆದಹಿರಣ್ಯಾಕ್ಷನನ್ನು ನೋಡಿ, ಉದ್ಯತಾಯುಧ ಪಾಣಿಗಳಾದಅವನ ರಾಕ್ಷಸಸೈನಿಕರನ್ನು ಕಂಡು, ದೇವಮಾನವರು ಹೆದರಿ ಓಡಿದರು. ಪಶುಪಕ್ಷಿಗಳೂ ಅವರಕ್ರೂರ ದೃಷ್ಟಿಗೆ ಬೀಳದಿರಲಿಲ್ಲ. ಹೆಂಡವವರ ಪಾನೀಯವು. ಗೋಮಾಂಸವವರಭಕ್ಷ್ಯವು. ಸುಜನರು ಅವರವೈರಿಗಳು. ಧರ್ಮವು. ಸತ್ಯವೆಂದರೆ ಅವರಿಗೆಗೊತ್ತಿಲ್ಲ. ಹಿಂಸಾಸೂಯಾನಿಂದನಗಳೇ ಅವರದಿನ ಕೃತ್ಯವಾಯಿತು.

ಇದನ್ನು ಕಂಡುಮನುಜರಲ್ಲಿದಯೆದೋರಿ ಇಂದ್ರಾದಿ ದೇವತೆಗಳು ಶ್ರೀ ವಿಷ್ಣುವಿಗೆ ಶರಣಾದರು. ಓಂಕಾರಗತ ಸರ್ವಸದ್ಗುಣ ಮೂರ್ತಿಯಾದ ನಾರಾಯಣನು ವರಾಹನಾಗಿ ಅವತರಿಸಿದನು ಬೆಟ್ಟದಂತೆದ್ದ ಶ್ವೇತ ವರಾಹ ಮೂರ್ತಿಯನ್ನು ನೋಡಿ, ದಿತಿಜರು ದಿಕ್ಕೆಟ್ಟು ಓಡಿದರು. ಶ್ರೀ ಹರಿಯ ಶಂಖಧ್ವಾನದಿಂದ ಅವರ ಗುಂಡಿಗೆ ಒಡೆಯಿತು. ಆತನ ಚಕ್ರಧಾರೆಯಿಂದ ಲೋಕಪೀಡ ಕರತಲೆಗಳು ಉದುರಿಬಿದ್ದವು. ಶ್ರೀಶನಗದಾಘಾತಗಳಿಂದ ಪಾತಕಿಗಳ ಪಾತವಾಯಿತು.

ಮಹಾದೇವನು, ಮಹಾಬುದ್ಧಿಯು, ಮಹಾಯೋಗಿಯು ಮಹೇಶ್ವರನು, ಸರ್ವವೇದಗತಗುಹ್ಯನಾಮ ಮುಖ್ಯಾರ್ಥನು, ಸಜ್ಜನಸೇವಿತನು, ಯಜ್ಞನಾಮಕನಾಗಿ ಯಜ್ಞರಕ್ಷಕನು, ಯಜ್ಞಫಲಪ್ರದನು, ಯಜ್ಞದತ್ತಹವಿರಾದಿ ಪ್ರಥಮ ಭೋಕ್ತನು, ಸುರಮುನಿಸುಜನ ಶರಣೀಕರಣೀಯನು, ಆದ ಶ್ರೀ ವರಾಹನನ್ನು ನೋಡಿ ದೈತ್ಯಕುಲವೆಲ್ಲವೂ ಆಕುಲವಾಯಿತು ಅದನ್ನು ನೋಡಿ ಹಿರಣ್ಯಾಕ್ಷನು ಅಂದರೆ ಕೇವಲಬಂಗಾರ, ವಸನ, ಪಾನ, ಭೋಜನಾದಿವಿಷವಿಷಯಗಳಲ್ಲಿ ಮಾತ್ರ ದೃಷ್ಟಿ ಇಟ್ಟವನು ಕುಪಿತನಾದನು. ಸೂರ್ಯಚಂದ್ರಮರ ಮಧ್ಯದಲ್ಲಿರುವ ನೀಲಮೇಘದಂತೆ ಕೈಲಿಪಿಡಿದ ಚಕ್ರಶಂಖಗಳಮಧ್ಯದಿ ಶ್ರೀ ವರಾಹನು ಶೋಭಿಸಿದನು

ದೈತ್ಯರುಪ್ರಯೋಗಿಸಿದ ಶಸ್ತ್ರಾಸ್ತ್ರಗಳಿಂದ ಸ್ವಲ್ಪವೂಚಲಿಸದೆನಿಂತ ವರಾಹನನ್ನು ಕಂಡು ಕೆಂಡವಾಗಿ ಆದಿದೈತ್ಯನು ಮಹಾಶಕ್ತಿಯನ್ನು ಪಿಡಿದು ವಿಷ್ಣುವಿನ ಎದೆಗೆ ಗುರಿಯಿಟ್ಟು ಹೊಡೆದನು. ಶ್ರೀಹರಿಯು ಅದನ್ನು ಹುಂಕಾರದಿಂದಲೇ ಕೆಡಹಿ, ತನ್ನ ದಿವ್ಯಚಕ್ರದಿಂದ ಹಿರಣ್ಯಾಕ್ಷನಶಿರವನ್ನು (ದಂಷ್ಟ್ರಾಗ್ರದಿಂದ ಸೀಳಿ) ಕತ್ತರಿಸಿ ಕೆಡಹಿದನು ದೈತ್ಯದಾನವರದನ್ನು ನೋಡಿ ಹತಾಶರಾಗಿ ಹತ್ತುದಿಕ್ಕಿಗೆ ಓಡಿಹೋದರು. ಯುಗಾಂತದಲ್ಲಿ ದಂಡಪಾಣಿಯಾದ ಕಾಲನಂತೆ, ವರಾಹನು ಚಕ್ರಪಾಣಿಯಾಗಿ ವಿರಾಜಿಸಿ, ತನ್ನನ್ನು ನಂಬಿದ ಸುರಸುಜನರಿಗೆ ಸುಖವನ್ನಿತ್ತನು.

"ನಿನ್ನ ಪ್ರಸಾದದಿಂದ ದೇವ ! ನಮಗೆ ಅಭಯವಾಯಿತು. ಮುಂದೆ ನಾವೇನು ಮಾಡಬೇಕು ಆಜ್ಞಾಪಿಸು" ಎಂದುಬೇಡಿದ ದೇವತೆಗಳನ್ನು ನೋಡಿ, ಕರುಣಾರಸಭರಿತ ಪುಂಡರೀಕನಯನನಾದ ಶ್ರೀ ವರಾಹನು ಇಂತೆಂದನು.

"ಸೃಷ್ಟಿಕಾಲದಲ್ಲಿ ಎಲ್ಲ ದೇವಮಾನವದಾನವ ಜೀವರಿಗೂ ಅವರವರ ಯೋಗ್ಯತೆಯಂತೆ ಯಾವಲೋಕಗಳನ್ನು ಕಲ್ಪಿಸಿಕೊಟ್ಟು, ಅಲ್ಲೇ ಎಲ್ಲವನ್ನಿತ್ತು ರಕ್ಷಿಸುತ್ತಿರುವೆನೋ, ಆಯಾನಿಮ್ಮನಿಮ್ಮ ಲೋಕಗಳಲ್ಲಿ ಸುಖವಾಗಿರಿ ! ಅಂತಿದ್ದರೆ ನಾನು ಪ್ರೀತನಾಗುವೆನು. ಅವರಯೋಗ್ಯತೆಯನ್ನು ಮೀರಿ, ಗರ್ವದಿಂದ ಇತರರಿಗೆ ಪೀಡೆಯನ್ನಿತ್ತಾಗಮಾತ್ರ, ನಾನುದಾನವರನ್ನು ಮಟ್ಟಕ್ಕಿ, ಪ್ರಪಂಚದ ಸಮತೆಯನ್ನು ಕಾಪಾಡಬೇಕಾಗಿ ಬರುವುದು. ತಪೋಜ್ಞಾನ ಶಕ್ತಿಗಳಿಂದ ದೇವತೆಗಳು ಸ್ವರ್ಗದಲ್ಲಿರಲಿ ! ಯಜದಾನ ಸತ್ಯಗಳಿಂದ ಮಾನವರು ಭುವಿಯಲ್ಲಿರಲಿ ! ದಮ, ಅನಸೂಯಾ, ದಯಾಯುಕ್ತರಾಗಿ ದಾನವರು ಸುತಲಾದಿಗಳಲ್ಲಿರಲಿ !" ಎಂದು ಆಜ್ಞಾಪಿಸಿ ಶ್ರೀ ವರಾಹನು ಅಸುರರು ಕದ್ದಿದ್ದ ಸ್ವಸ್ವಾಧಿಕಾರಗಳನ್ನು ಸುರರಿಗಿತ್ತು, ಸಂಭಾವಿಸಿದನು. ಶ್ರೀ ವರಾಹನಿಂತು ಸರ್ವಲೋಕಸ್ಥಿತಿಯನ್ನು ಸಂಪಾದಿಸಿ, ಅಂತರ್ಹಿತನಾದನು. ಇಂದ್ರಾದಿ ದೇವತೆಗಳು ತಂತಮ್ಮ ಲೋಕಪದವೀಭೋಗಗಳನ್ನು ಕೊಟ್ಟಸ್ವಾಮಿಗೆ ನಮಸ್ಕರಿಸಿದರು.

ಸುರರನ್ನು ಬಾಧಿಸುವಂತೆ ಅಸುರರನ್ನು ಪ್ರೇರೇಪಿಸಿದ ಪರ್ವತರಾಜರ ಪಕ್ಷಗಳನ್ನು ವಜ್ರದಿಂದ ಕತ್ತರಿಸಿ, ಧರಣೀಧರರನ್ನು ಇದ್ದಲ್ಲಿಸ್ಥಿರವಾಗಿ ನಿಲ್ಲಿಸಿ, ಮಹೇಂದ್ರನು ವಾಯುದೇವನ ಶಾಸನದಂತೆ ಮೈನಾಕನನ್ನು ಮಾತ್ರ ಪಕ್ಷಯುಕ್ತನನ್ನಾಗಿ ಬಿಟ್ಟು ಪಾತಾಳದ್ವಾರ ರಂಧ್ರಗಳಿಂದ ದಿತಿಜರು ಮೇಲೆರಿಬಂದಂತೆ ಪರಿಘಾ (ಅಗಳಿ) ಕಾರವಾಗಿಸ್ಥಾಪಿಸಿದನು.

ಸಜ್ಜನಜಯಪ್ರದವು, ದುರ್ಜನ ಶಿಕ್ಷಾಪ್ರದವುಆದ ಶ್ರೀ ವರಾಹನ ಪ್ರಭಾವವನ್ನು ಹೇಳಿ, ಕೇಳಿದವರು, ಜಯಶೀಲ, ಬಲ, ಸಂಪದಾರೋಗ್ಯಗಳನ್ನು ಪೊಂದಿ ಸುಖಿಸುವರು.

O

13. ಶ್ರೀ ನೃಸಿಂಹ ವೈಭವ.

ಜನಮೇಜಯ ! ಈಗನಿನಗೆ ಆದಿಹಿರಣ್ಯಕಶಿಪುವಿನನ್ನು ಸೀಳಿಕೊಂದ ಶ್ರೀ ನೃಸಿಂಹನ ಪ್ರಾದುರ್ಭಾವ ವಿಭವವನ್ನು ವಣಿಸುವೆನು.

ಹಿರಣ್ಯಾಕ್ಷವಧೆಯಿಂದ ಕುಪಿತನಾದ ಹಿರಣ್ಯಕಸಿಪುವು ಬಲುವರ್ಷಗಳಕಾಲ ತೀವ್ರತಪವನ್ನಾಚರಿಸಿದನು. ಆವವಮೌನ, ವ್ರತ, ಬ್ರಹ್ಮಚರ್ಯ, ದೇಹಶೋಷಣಾದಿ

ತಪವನ್ನುಕಂಡು, ಕರುಣೆಗೊಂಡು ಬ್ರಹ್ಮದೇವನು ಪ್ರತ್ಯಕ್ಷನಾಗಿ "ಪ್ರೀತನಾಗಿರುವೆನ್ನ ನಿನ್ನತೀಕ್ಷ್ಣತಪದಿಂದ ! ಕೇಳುಬೇಕಾದವರವನ್ನು !" ಎಂದನು. ದೈತ್ಯನು "ದೇವ ! ದೇವಾಸುರಮಾನವದಾನವ ಗಂಧರ್ವಪಿಶಾಚ ಯಕ್ಷಾದಿಗಳಿಂದ ನನಗೆಮರಣವಾಗದಿರಲಿ ! ಋಷಿಗಳು ಕ್ರುದ್ಧರಾಗಿ ಇಟ್ಟಶಾಪಗಳು ಎನ್ನಲ್ಲಿ ನಿರರ್ಥಕವಾಗಲಿ ! ಶುಷ್ಕ ಅಥವಾ ಆರ್ದ್ರವಸ್ತುಗಳಿಂದ, ಶಸ್ತ್ರಾಸ್ತ್ರಗಳಿಂದ ನಾನು ಸಾಯದಿರಲಿ ! ಸ್ವರ್ಗಭೂಪಾತಾಲಗಳಲ್ಲಿ ನನಗೆಮರಣಬಾರದಿರಲಿ ? ಒಂದು ವೇಳೆಒಬ್ಬವೀರನು ಸಭೃತ್ಯಬಲವಾಹನನಾದನನ್ನನ್ನು ಕೈಯಹೊಡೆತದಿಂದ ಕೊಲ್ಲಲು ಸಮರ್ಥನಾದಾಗ ನನಗೆಮರಣವಾಗಲಿ !" ಎಂದು ವರಗಳನ್ನು ಬೇಡಿದನು "ರವಿಸೋಮಾಗ್ನಿವರುಣದಿಗಾಕಾಶಶಕ್ರಯಮಾದಿ ದೇವತೆಗಳ ಅಧಿಕಾರವು ನಿನ್ನವಶವಾಗಿರಲಿ ! ಸರ್ವದಿವ್ಯಾಸ್ತ್ರಗಳೂ ನನಗೆಸಿಗಲಿ" ಎಂದೂಬೇಡಿದ ದೈತ್ಯನಿಗಾವರಗಳನ್ನಿತ್ತು, ವಿಧಿಯು ಸುಧಾಶನರಿಂದ ಕೂಡಿಕೊಂಡು ಸತ್ಯಲೋಕಕ್ಕೆ ತೆರಳಿದನು.

ವರದಾನವನ್ನುಕೇಳಿ, ಹಿರಣ್ಯಕಶಿಪುವಿನ ಬಾಧೆಗೆಹೆದರಿದದೇವ ಋಷಿ ಸುಜನರನ್ನು ನೋಡಿ ಬ್ರಹ್ಮನು "ತಪಃಫಲವು ಕೊಡಬೇಕಲ್ಲವೇ ? ಆಗಲಿ, ವರಗರ್ವಿತನಾದ" ದುಷ್ಟದೈತ್ಯನು ಸುಜನಹಿಂಸೆಮಾಡಿ, ತಾನೇಹತನಾಗುವನು. ಎಂದು ಆಶ್ವಾಸಿಸಿಕಳಿಸಿದನು.

ಹಿರಣ್ಯಕಶಿಪುವು ವರಗರ್ವಿತನಾದನು. ತನಗೆಎದುರಿಲ್ಲವೆಂಬುದನ್ನರಿತು, ದುಷ್ಟದೈತ್ಯನು. ಧರ್ಮಪರಾಯಣರಾದ ಸುಜನರನ್ನು ಪೀಡಿಸಿದನು, ಸತ್ಯ, ದಮ, ಶಮ· ವ್ರತ, ಯಜ್ಞಗಳನ್ನು ನಡೆಸುವದ್ವಿಜಾದಿ ಸಜ್ಜನರನ್ನು ಕೊಂದನು. ಮೂರ್ಲೋಕಗಳಲ್ಲಿಯೂ ತನ್ನಶಾಸನದಲ್ಲಿ ಅಧರ್ಮ, ಹಿಂಸೆ, ಸುಲಿಗೆ, ಮಾನಹಾನಿ, ಅಸೂಯೆ· ಅಸತ್ಯ, ಮದ್ಯಪಾನ, ಗೋಹಿಂಸಾ, ದೇವದ್ವಿಜದ್ರೋಹಗನ್ನು ಅವ್ಯಾಹತವಾಗಿ ನಡೆಸಿದನು. ದುರ್ಜನರಕ್ಷೆ, ಸುಜನಶಿಕ್ಷೆಗಳೇ ಅವನ ರಾಜ್ಯನಿಬಂಧನಗಳಾದವು.

ಅದನ್ನುಕಂಡು, ಆಕ್ರಂದನಪರಾಯಣರಾದ ಜನರನ್ನು ಉದ್ಧರಿಸಲು ಮನಮಾಡಿ, ದೇವತೆಗಳು, ಬ್ರಹ್ಮರುದ್ರಶಕ್ರಮುಖರಾಗಿ ಶ್ರೀಹರಿಗೆ ಶರಣಾದರು. "ದೇವದೇವ! ಪದ್ಮಪತ್ರವಿಶಾಲಕ್ಷ! ಶತ್ರುಪಕ್ಷಶಿಕ್ಷ! ದೈತ್ಯರಾಜನ ಉಪದ್ರವದಿಂದನಮ್ಮನ್ನೂ, ಭೂಮಿಯ ಜನರನ್ನೂಕಾಪಾಡು ?" ಎಂದು ಪ್ರಾರ್ಥಿಸಿದರು

ಶ್ರೀಶನು "ದೇವತೆಗಳಿರಾ ! ಭಯಪಡಬೇಡಿ ? ಪಾಪಿ ದೈತ್ಯನನ್ನು ವಧಿಸಿನಿಮಗೆಲ್ಲ ಅಭಯವನ್ನು ನೀಡುವೆನು" ಎಂದು ನುಡಿದನು. ಬ್ರಹ್ಮವರವನ್ನು ಅದರ ನಿಬಂಧನಗಳನ್ನು ಚಿಂತಿಸಿ, ಪ್ರಭುವಾದ ಶ್ರೀಹರಿಯುನರನೂಅಲ್ಲದ ಮೃಗವೂಅಲ್ಲದ ನರನೂಆಗಿ ಮೃಗವೂಆದ ನರಸಿಂಹ ರೂಪವನ್ನು ಸ್ವೀಕರಿಸಿ, ಪ್ರಾದುರ್ಭವಿಸಿದನು, ಹಿರಣ್ಯಕಶಿಪುವಿನ ಸಭೆಯಲ್ಲಿ ಆವಿರ್ಭವಿಸಿದ ಶ್ರೀನೃಸಿಂಹನನ್ನುನೋಡಿ. ದೈತ್ಯರುಬೆಕ್ಕಸಬೆರಗಾದರು.

ತೇಜಸ್ಸಿನಿಂದ ಸೂರ್ಯನೋ, ಕಾಂತಿಯಿಂದ ಚಂದ್ರನೋ ಎಂಬಂತೆ ಬೆಳಗುವ ನರಸಿಂಹನು, ಸರ್ವಲೋಕಗಳ ಅದ್ಭುತಪದಾರ್ಥಗಳ ಬೀಡಾದ ರಾಕ್ಷಸನ ಸಭಾಮಂದಿರವನ್ನು ಪ್ರವೇಶಿಸಿದನು.

ಬಲಿ, ನರಕ, ವಿಪ್ರಚಿತ್ತಿ, ಗವಿಷ್ಠ, ಶಠ, ಕ್ರಥನ, ವಿರೂಪ, ಮೇಘವಾಸ, ವಿಕಟಾಕ್ಷಮುಂತಾದ ದೈತ್ಯರುಸಭೆಯಲ್ಲಿ ತಮ್ಮರಾಜನುತಮಗಿತ್ತನೂತನ ಪ್ರಾಧಿಕಾರಗಳನ್ನುಹೊಂದಿ, ದಿವ್ಯಾಸನಗಳಲ್ಲಿ ಕೂತಿದ್ದರು. ಮೇನಕಾ, ರಂಭಾ, ಘೃತಾಚೀ, ಮಿಶ್ರಕೇಶಿ, ಊರ್ವಶೀಮುಂತಾದ ಅಪ್ಸರೆಯರು ಗಂಧರ್ವರಗಾನ ಮೇಳಗಳಿಗೆ ತಕ್ಕಂತೆ ಕುಣಿಯುತ್ತಿದ್ದರು. ಮಧುಮೈರೇಯಪಾನವು ಸ್ವೇಚ್ಛೆಯಾಗಿ ನಡೆದಿತ್ತು.

ಇಂತು ಸಂತಸದಿಂದಿರುವ ದೈತ್ಯಕುಂಜರಗಳಿಗೆ ಅಂತಕನಾಗಿಬಂದ ಗೋವಿಂದನ ನರಸಿಂಹರೂಪವನ್ನುನೋಡಿ "ಏನಿದು ಭಯಂಕರವಾಗಿದೆ ! ಯಾರಿರಬಹುದು ! ದಂಷ್ಟ್ರಾಕರಾಳಮುಖವು, ವಿಸ್ತೃತಸಟಾಕಲಾಪವೂ, ಕೋಟಿಸೂರ್ಯಪ್ರಭವು, ಮಹಾಗಿರಿಸನ್ನಿಭವುಳ್ಳ ಈ ದೇವನೇಕೆಬಂದಿರುವನು ?" ಎಂದು ಗೊಂದಲಕ್ಕೀಡಾದ ದೈತ್ಯರನ್ನುನೋಡಿ, ಪ್ರಹ್ಲಾದನು ಇಂತೆಂದನು "ದೈತ್ಯಪುಂಗವರೇ ! ಕೇಳಿರಿ ! ಇವನು ನರಸಿಂಹನು. ಇಂತಹರೂಪವನ್ನು ಯಾರುಎಂದೂಕೇಳಿಲ್ಲ, ಕಂಡಿಲ್ಲ, ದಿವ್ಯನರಸಿಂಹರೂಪವನ್ನು ಶ್ರೀ ವಿಷ್ಣುವೇ ದೈತ್ಯಾಂತಕನಾಗಲು ಧರಿಸಿಬಂತಿದೆ. ವಿಷ್ಣುವಿಗಲ್ಲದೇ ಮತ್ತಾವ ದೇವತೆಗಳಿಗೂ ಈ ಪ್ರಭಾವಬಲ ಪೌರುಷಗಳಿಲ್ಲ, ಇವನ ದೇಹದಲ್ಲಿ ಸರ್ವಪ್ರಪಂಚವೇ ಅಡಗಿ ಆಶ್ರಯಿಸಿನಿಂತಿದೆ. ಹಿಮವದಾದಿ ಪರ್ವತಗಳನ್ನೂ, ಬ್ರಹ್ಮರುದ್ರ ಮಹೇಂದ್ರಾದಿದೇವತೆಗಳನ್ನೂ, ಮನ್ವಾದಿ ಪ್ರಜೇಶರನ್ನೂ, ಆದಿತ್ಯಾದಿಗ್ರಹಗಳನ್ನೂ, ಕ್ರೋಧಕಾಮ ದರ್ಪದಂಭಗಳನ್ನೂ (ದೈತ್ಯರನ್ನೂ) ಈ ಮಹಾತ್ಮನಲ್ಲಿ ವಿಭಿನ್ನವಾಗಿರುವುದನ್ನೂ ನಾನುನೋಡುತ್ತಿರುವೆನು. (೪೩ ಅಧ್ಯಾಯ ಮೂಲ) ದೈತ್ಯರಿಗೆ ಅವರು ಮಾಡಿದ ಪರಾಕ್ರಮಣ, ಪರಹಿಂಸೆ, ಪರಮಾಧರ್ಮಗಳಫಲವನ್ನು ಉಣಿಸಲು ಶ್ರೀ ವಿಷ್ಣುವೇ ಬಂದಿರುವನು !" ಎಂದು ಹೇಳಿದ ಪ್ರಹ್ಲಾದನ ವಚನವನ್ನಾಲಿಸಿ ದೈತ್ಯರು ಎದೆಗುಂದಿದರು.

ದೈತ್ಯರಾಜನು ಆಸಿಂಹವನ್ನು ಹಿಡಿದುಕೊಳ್ಳುವಂತೆ ತನ್ನಭಟರಿಗೆ ಆಜ್ಞಾಪಿಸಿದನು. ಉದ್ಯತಾಯುಧಪಾಣಿಗಳಾಗಿ ಮೇಲೆರಿಬಂದ ದಿತಿಜರು ಶ್ರೀ ನರಹರಿಯ ಹುಂಕಾರದಿಂದಲೇ ಎದೆಒಡೆದು ಸತ್ತರು. ಶ್ರೀಹರಿಯು ಕೈಯನ್ನೆತ್ತಿದಿತಿಜನಸಭೆಯನ್ನು ಗುದ್ದಿಕೆಡಹಿದನು. ಪಾಪಿದೈತ್ಯನುಬಿಟ್ಟ ಸರ್ವಾಸ್ತ್ರಗಳೂ ಶ್ರೀಹರಿಯಲ್ಲಿ ಒಂದು ಕೇಸರವನ್ನೂ ಕೊಂಕಿಸಲಾಗದೆ ವ್ಯರ್ಥವಾದವು. ಬ್ರಹ್ಮಶಿರ, ಐಷೀಕಾ ರೌದ್ರಾದಿ ದಿವ್ಯಾಸ್ತ್ರಗಳೂ ನೃಸಿಂಹನನ್ನುತಾಕಿ, ಕೆಳಬಿದ್ದವು. ಶ್ರೀಹರಿಯು ಗರ್ಜಿಸಿದನು. ಸಭೆಯದಿತಿ ಪುತ್ರರೆಲ್ಲವಿತ್ರಸ್ತರಾಗಿ ಓಡಿಹೋದರು, ಹಿಮವಂತನಂತೆ ಚಲಿಸದೆ ನಿಂತಿದ್ದ

ಅನಂತನನ್ನು ನೋಡಿ ಹಿರಣ್ಯನು ಶಕ್ತಿಯನ್ನೊಗೆದನು. ಶ್ರೀಹರಿಯು ಕಣ್ಣಿನ ಕಿಡಿಗಳಿಂದಲೇ ಶಕ್ತಿಯು ಚೂರಾಗಿ ಬಿತ್ತು. ಅಸುರರು ಗರೆದ ಶಿಲಾವರ್ಷ, ಹಿಮವರ್ಷ, ಜಲವರ್ಷಗಳು ಶ್ರೀನೃಸಿಂಹನಲ್ಲಿ ವ್ಯರ್ಥವಾದವು. ನರಿಗಳ ಕೂಗಿಗೆ ಸಿಂಹವು ಹೆದರುವುದೇ !

ದೈತ್ಯನು ಮಾಯೆಯಿಂದ ಕತ್ತಲನ್ನು ಸೃಜಿಸಿದನು. ಶ್ರೀಹರಿಯು ಮಾಯಾವೈಭವದಿಂದ ಕತ್ತಲು ಸೀಳಿ, ಬೇಕುಹರಿವಂತೆ ಮಾಡಿದನು. ಮಾಯಾದೇವಿ ಪತಿಯಾದ ಶ್ರೀನೃಸಿಂಹನಲ್ಲಿ ಎಲ್ಲ ಅಸುರೀಮಾಯೆಗಳೂ ವ್ಯರ್ಥವಾದವು.

ಹಿರಣ್ಯಾಕನ ಆಯುಧಾಗಾರದಲ್ಲಿ ಜೇನುಗೂಡುಗಳು ಬೆಳೆದು ತುಂಬಿದವು. ಅವನ ಶಯನಾಗಾರದಿಂದ ಹೊಗೆ ಎದ್ದಿತು. ಗ್ರಹಗಳು ಏಳು ಒಂದೆಡೆ ಕಲೆತು, ಚಂದ್ರನನ್ನು ಸುತ್ತಿ ನಿಂತವು. ಆಕಾಶದಿಂದ ಕೊಳ್ಳಿಗಳು ಉದುರಿದವು. ದೈತ್ಯನು ಶುಕ್ರಾಚಾರ್ಯರನ್ನು ಕರೆಯಿಸಿ ಕೇಳಲು, ಅವರಿಂತೆಂದರು "ರಾಜನ್ ! ಇಂತಹ ದುಶ್ಶಕುನಗಳ ಫಲವೆಂದರೆ ರಾಜ್ಯನಾಶ ಅಥವಾ ರಾಜನಾಶ, ಅಂತೂ ಮಹದ್ಭಯವು ದೈತ್ಯರಿಗೆ ಉಂಟಾಗಲಿದೆ" ಎಂದು ಪೇಳಿ ಹೋದರು.

ದೈತ್ಯರಾಜನೂ ಚಿಂತಾಕ್ರಾಂತನಾದನು. ಬ್ರಹ್ಮನಿತ್ತವರದಂತೆ ಶ್ರೀನೃಸಿಂಹಾಕೃತಿಯಿಂದ ಬಂದ ಶ್ರೀಹರಿಯಿಂದ ಸರ್ವಾಸುರ ವಿನಾಶವಾಗಲಿದೆ ಎಂದೂ ತಿಳಿದನು. ಆದರೂ ಧೈರ್ಯದಿಂದ ದೈತ್ಯಸಿಂಹನು ಶ್ರೀನೃಸಿಂಹನನ್ನು ಮುತ್ತಬಂದನು. ತುಟಿಕಚ್ಚಿ ಕೋರೆತೀಡಿ, ಗುಡುಗುವ ಮೇಘದಂತೆ ಮೇಲೇರಿಬಂದ ದೈತ್ಯನನ್ನು ಶ್ರೀನೃಸಿಂಹನು ಅವಲೀಲೆಯಿಂದ ಹಿಡಿದು, ಗುಡಿಗಿ ನಖರಗಳಿಂದ ಅವನನ್ನು ಸೀಳಿ ಸಂಹರಿಸಿದನು.

ದೇವತೆಗಳು ಪೂಮಳೆಗರೆದು ದೇವ ದೇವನನ್ನು ವೇದ ಮಂತ್ರಗಳಿಂದ ಪೊಗಳಿದರು. ಋಷಿಗಳು ಸ್ವಸ್ತಿವಾಚನಗಳನ್ನು ಮಾಡಿದರು. ಸುಜನರಿಗೆಲ್ಲ ಆನಂದವಾಯಿತು. ಆದಿ ದೇವನು ಸನಾತನನು, ಭಕ್ತರಕ್ಷಕನು ದುಷ್ಟಶಿಕ್ಷಕನು, ತ್ರ್ಯಕ್ಷನು ಲೋಕವಿಲಕ್ಷಣನು, ಆದ ಶ್ರೀನೃಸಿಂಹನು ಕರುಣಾರಸಭರಿತ ವೀಕ್ಷಣನಾಗಿ, ಅನುಗ್ರಹಿಸಿದನು.

ಶ್ರೀ ದೇವನ ರಕ್ಷಣೆಯನ್ನು ಪಡೆದು ಕೃತಾರ್ಥರಾದ ದೇವತೆಗಳು ಸ್ವಾಮಿಗೆ ಕೃತಜ್ಞರಾಗಿ ಇಂತು ನುತಿಸಿದರು."ದೇವೇಶ! ರಮೇಶ! ನಮ್ಮನ್ನು ಸಲಹಿದ ಈ ನಿನ್ನ ನರಹರಿ ರೂಪವು ಸಕಲ ದುರಿತ ಹರವಾಗಿದೆ. ನಿನ್ನದಯೆಯಿಂದ ನಾವು ನಮ್ಮ ಸ್ಥಾನಗಳನ್ನು ಹೊಂದುವಂತಾಯಿತು" ಎಂದರು.

ಶ್ರೀ ಬ್ರಹ್ಮದೇವನು "ಶ್ರೀನಾರಾಯಣ ! ನಮೋಸ್ತು ! ನೀನು ಸ್ವಯಂ ಅವ್ಯಕ್ತನೇ ಆದರೂ ಭಕ್ತರಕ್ಷಣೆಗೆಂದು ಅವತಾರಗಳನ್ನು ಧರಿಸಿ, ವ್ಯಕ್ತನೂ ಆಗುವೆ!

ನಮಗೆ ನೀನೆ ಗತಿ! ನೀನೆ ಪ್ರಭುವು! ಚತುರ್ಯುಗಸಹಸ್ರಗಳಾದ ಮೇಲೆ ಜಗವನ್ನೆಲ್ಲ ಸಂಹರಿಸಿ ಒಳಗಿಟ್ಟು, ಪ್ರಳಯ ಪ್ರವರ್ತಕನಾಗಿರುವೆ! ಸೃಷ್ಟಿ ಪ್ರವರ್ತಕನಾಗಿ ಜಗವನ್ನು ವಾಸುದೇವ; ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೂಪಚತುಷ್ಟಯನಾಗಿ ಪಾಲಿಸಿ, ಸಂಹರಿಸಿ, ಸೃಜಿಸಿ ನಡೆಸುವೆ! ವಿಶ್ವತೈಜಸಪ್ರಾಜ್ಞತುರ್ಯ ರೂಪ ಚತುಷ್ಟಯನಾಗಿ ಜೀವರ ಜಾಗ್ರತ್‍ಸ್ವಪ್ನ ನಿದ್ರಾಸಮಾಧಿಮುಕ್ತಿರೂಪ ಅವಸ್ಥೆಗಳನ್ನು ನೀಡುವೆ! ಅನಾದಿಮಧ್ಯನಿಧನನು, ಸರ್ವಸ್ವಾಮಿಯು ಸರ್ವಾಂತರ್ಯಾಮಿಯು ಆದ ಪುರುಷೋತ್ತಮನೇ! ನಿನಗೆ ಅನಂತ ನಮಸ್ಕಾರಗಳು. ಬ್ರಹ್ಮರುದ್ರೇಂದ್ರಾದಿಸರ್ವಚೇತನರ ನಾಮಮುಖ್ಯಾರ್ಥಭೂತನಾಗಿ, ನೀನೇ ಆಯಾ ದೇವತಾದಿಗಳಿಗೆ ಅವರ ನಾಮರೂಪಕ್ರಿಯೆಗಳನ್ನು ಕೊಟ್ಟು ನಡೆಸುವ ಪ್ರಭುವಾಗಿರುವೆ. ಪರರಿಗೆ ಪರನು, ಪರಮಾತ್ಮನು, ಪರಮ ವಿಲಕ್ಷಣನು, ಸರ್ವಕಾರಣಗಳಿಗೆ ಶಕ್ತಿಪ್ರದನು, ಕಾರ್ಯಸ್ವಾಮಿಯೂ, ಅಪಕ್ಷಯಾದಿ ಸರ್ವದೋಷರಹಿತನು, ಆನಂದಮಯನು ಆದ ಶ್ರೀನೃಸಿಂಹ! ನಿನಗೆ ನಮಸ್ಕಾರಗಳು" ಎಂದು ನುತಿಸಿದನು.

ಗಂಧರ್ವರು ಹಾಡಿದರು, ಅಪ್ಸರೆಯರಾಡಿದರು. ದೇವದುಂದುಭಿಗಳು ಮೊಳಗಿದವು. ಶ್ರೀನೃಸಿಂಹನನ್ನು ನಂದನದ ಮಂದಾರಾದಿ ಸುಮಗಳಿಂದ ಅಭಿವರ್ಷಿಸಿ, ದೇವತೆಗಳು ಧನ್ಯರಾದರು; ಋಷಿಗಳು ಕೃತಾರ್ಥರಾದರು ; ಸುಜನರು ಸಂತುಷ್ಟರಾದರು. ಇಂತು ಶ್ರೀನೃಸಿಂಹನ ಪವಿತ್ರ ಚರಿತ್ರವನ್ನು ನಿನಗೆ ನಿರೂಪಿಸಿ, ನಾನೂ ಧನ್ಯನಾದೆನು. ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಾರ್ಪಿತಮಸ್ತು." (೪೯ ಅಧ್ಯಾಯ ಮೂಲ)

O

14. ಶ್ರೀವಾಮನವೈಭವಂ ದೇವದಾನವರಣ.

ರಾಜನ್ ಕೇಳು! ಕಶ್ಯಪನ ಪತ್ನಿಯರಾದ ದಿತಿ, ಅದಿತಿಯರಲ್ಲಿ ದೈತ್ಯರು, ದೇವತೆಗಳು ಜನಿಸಿದರು. ಧಾತಾ ಅರ್ಯಮ, ಮಿತ್ರ, ವರುಣ ಅಂಶ, ಭಗ ಇಂದ್ರ, ವಿವಸ್ವಾನ್ ಪೂಷಾ, ಪರ್ಜನ್ಯ ತ್ವಷ್ಟಾ, ವಿಷ್ಣು, (ಉರುಕ್ರಮ) ಎಂಬ ದ್ವಾದಶಾದಿತ್ಯರು ಅದಿತಿಯ ಸುತರು, ದಿತಿಯಸುತರು ಬಲುವಿಕ್ರಮರು-ಬಹುಸಂಖ್ಯಾಕರು, ಅವರಲ್ಲಿ ಹಿರಣ್ಯಕಶಿಪು, ಹಿರಣ್ಯಾಕ್ಷರು ಪ್ರಮುಖರು. ಹಿರಣ್ಯಕಶಿಪುವಿಗೆ ಕಯಾಧೂದೇವಿಯಲ್ಲಿ ಪ್ರಹ್ಲಾದ, ಅನುಹ್ಲಾದ, ಸಂಹ್ಲಾದ, ಹ್ಲಾದರೆಂಬ ನಾಲ್ವರು ಸುತರಾದರು. ಪ್ರಹ್ಲಾದ ಸುತನಾದ ವಿರೋಚನನ ಮಗನೇ ಬಲಿಯು. ಅವನ ಮಗನಾದ ಬಾಣನು ಶ್ರೀಕೃಷ್ಣವಿರೋಧದಿಂದ ಸಾಯಲಿದ್ದವನು, ರುದ್ರದೇವನ ಪ್ರಾರ್ಥನೆಯನ್ನು ಮನ್ನಿಸಿದ ಶ್ರೀಶನಕರುಣೆಯಿಂದ ದ್ವಿಬಾಹುನಾಗಿ ಉಳಿದನು. ಆ ಕಥೆಯನ್ನು ನಿನಗೆ ನಾನು ಹೇಳರುವೆನು.

ಈಗ ಬಲಿರಾಜನ ವಿಕ್ರಮವನ್ನು ವಶ್ಯಗೊಳಿಸಿದ ತ್ರಿವಿಕ್ರಮನ ಪರಾಕ್ರಮವನ್ನು ವರ್ಣಿಸುವೆನು. ದೈತ್ಯರಿಂದ ಅಭಿಷಿಕ್ತನಾಗಿ ದೈತ್ಯೇಂದ್ರನಾದ ಬಲಿಯು ವಿಕ್ರಮಿಸಿ, ಸ್ವರ್ಗವನ್ನೇ ಆಕ್ರಮಿಸಿ ಮುತ್ತಿದನು. ಆಗ ಅತಿಭಯಂಕರವಾದ ಅಮರಾಸುರ ಯುದ್ಧವಾಯಿತು. ಮಹಾಪದ್ಮ, ನಿಕುಂಭ, ಹಿರಣ್ಯ,ವಜ್ರನಾಭ ಶಿಬಿ, ಜಟೀ ವಿಕಟ ವ್ಯಾಘ್ರಾಕ್ಷ, ಪ್ರಿಯ ಹರಣ, ವಿರೂಪಾಕ್ಷ ಮಹೋದರ, ವಿಕ್ಷರ ವ್ಯಾಲ ಧೇನುಕ, ಕಾಲಲೋಚನ ತಾಲಜಂಘ, ಸೂಚೀವಕ್ತ್ರ, ಕಲಶೋದರ ಮುಂತಾದ ದುಷ್ಟ ದೈತ್ಯರಿಂದ ಪ್ರೇರಿತನಾಗಿ, ತಾತನಾದ ಹಿರಣ್ಯಕಶಿಪುವಿನನ್ನು ತ್ರಿಲೋಕ ವಲ್ಲಭನೆಂದು ಸ್ಮರಿಸಿ, ಭ್ರಮಿಸಿ, ಬಲಿರಾಜನು, ಸುರರಾಜನನ್ನು ಆಹವ ರಂಗಕ್ಕೆ ಆಹ್ವಾನಿಸಿದನು.

ಬಲಿರಾಜನ ರಥವನ್ನು ಸುಬಾಹು ಮೇಘನಾದ ಭೀಮಗರ್ಭ ಕನಕಮೂರ್ಧಕೇತು ಮುಂತರೆಂಬ ದೈತ್ಯರು ರಕ್ಷಿಸುತ್ತಾ, ಹಿಂಬಾಲಿಸಿದರು. ನಮುಚಿದಾನವರಾಜನು ಅರವತ್ತು ಸಾವಿರರಥಗಳಿಂದ ಕೂಡಿ ಕದನ ರಂಗದಿ ಬಂದಿಳಿದನು. ವ್ಯಾಘ್ರ ಯೋಜಿತವಾದ ಅವನ ರಥವು ಸಕಲ ಶಸ್ತ್ರಾಸ್ತ್ರ ಸಂಪೂರ್ಣವಾಗಿ ಅಮರಭಯಂಕರವಾಯಿತು. ಮಯಾಸುರನು ನಾನಾಯುಧ ಧರನಾದ ಕಾಂಚನರಥವನ್ನೇರಿ ಲಕ್ಷರಾಕ್ಷಸ ಭಟರಿಂದ ಭಾವನಸಿದ್ಧನಾದನು. ಪುಲೋಮನು ಆಯಸರಥದಲ್ಲಿ ಕೂಡಿ ಅರವತ್ತು ಸಾವಿರ ಭಟವರರಿಂದ ಕೂಡಿ ರಣಕಣಕ್ಕಿಳಿದನು. ಹಯಗ್ರೀವ ದೈತ್ಯನು ಲಕ್ಷರಥಿಕರಿಂದ ಕೂಡಿ ರಣಕ್ಷೋಣಿಗಿಳಿದನು. ಇಂತಹ ಅಂತಕಸದೃಶರಾದ ದೈತ್ಯದಾನವವಾಹಿನಿಯು ಸಮುದ್ರದಂತೆ ಉಕ್ಕೇರಿಬರುತ್ತಿರಲು ಬಲಿರಾಜನು ತನ್ನ ಪಿತಾಮಹನು ಅಮಿತತೇಜಸಂಪನ್ನನು ಆದ ಪ್ರಹ್ಲಾದನ ದಿವ್ಯಾಶೀರ್ವಾದಗಳನ್ನು ಪಡೆದು, ರಣರಂಗದಿ ನಿಂತು ಸಿಂಹನಾದವನ್ನು ಗೈದು ವಿಜೃಂಭಿಸಿದನು. ಶಂಬರಾಸುರನು ಮಾಯಾಯುದ್ಧ ವಿಶಾರದನಾದ ತನ್ನ ಮೂರು ಲಕ್ಷಭಟರಿಂದಬಂದು ಬಲಿಗೆ ಬಲಗೈಯಾಗಿನಿಂತನು. ಅನುಹ್ಲಾದನೂ ಲಕ್ಷರಥಿಕರನ್ನು ತಂದು ರಣಕ್ಕೆಂದು ಬಂದನು, ಅಸಿರೋಮಾ, ಹರಿಶ್ಮಶ್ರು ವಿಕೃತ, ರಾಹು, ವಿಪ್ರಚಿತ್ತಿ ವೃಷಪರ್ವಾ ಶತಾಕ್ಷ, ಮುಂತಾದ ಪ್ರಚಂಡದಾನವಗಣಯುತನಾದ ಬಲಿರಾಜನು ಉಲ್ಕಾ ಸಹಸ್ರಯುತನಾದ ಚಂಡಕಿರಣನಂತೆ ವಿರಾಜಿಸಿದನು.

ಬಲಿರಾಜನ ವಿಜಯಕ್ಕೆಂದು ಶುಕ್ರಾದಿ ಪುರೋಹಿತರು ಮಂತ್ರಗಳನ್ನು ಜಪಿಸಿದರು, ಓಷಧೀಶುಭ ದ್ರವ್ಯಗಳಿಂದಲು, ಜಪ ಹೋಮಗಳಿಂದಲು ಬಲಿರಾಜ ವಿಜಯವನ್ನು ಆಶಾಶಿಸುವ ವಿಪ್ರನರರನ್ನು ಕನಕವಸನರತ್ನ ಗೋಭೂದಾನಗಳಿಂದ ಸಂತೋಷಪಡಿಸಿ ಬಲಿರಾಜನು ರಣರಂಗದಿ ಬಂದು ನಿಂತನು. ತ್ರಿಲೋಕಭಯಂಕರನಾಗಿರ ಉರಿಯುವ ಬಲಿಯುಬಲವನ್ನೂ ಬಲವನ್ನೂ ಕಂಡು ಸುರಸೇನಾಪತಿಗಳು ವಿತ್ರಸ್ತ ಹೃದಯರಾದರು.

ಸುರಾಧಿಪನೂ ಹಿಂಜರಿಯದೆ ಮರುದ್ಗಣಗವನ್ನೂ ವಿಶ್ವೇದೇವತೆಗಳನ್ನೂ ವಸುರುದ್ರಾದಿತ್ಯರನ್ನೂ ಯಕ್ಷರಕ್ಷೋಗಂಧರ್ವ ಕಿನ್ನರರನ್ನೂ, ಸಿದ್ಧಸಾಧ್ಯರನ್ನೂ ರಾಜರ್ಷಿವರನ್ನೂ ದೈತ್ಯನಾಶವನ್ನು ಸಾಧಿಸಲು ಆಹ್ವಾನಿಸಿದನು ಎಂಟು ದಿಕ್ಪಾಲರೂ ತಂತಮ್ಮ ವಾಹನಗಳನ್ನೇರಿ ರಣಕ್ಕೆ ಅಣಿಯಾಗಿ ನಿಂತಾಗ ದೈತ್ಯರೂ ಎದೆಗುಂದಿದರು ಬ್ರಹ್ಮರ್ಷಿವರರು ಪಾಕಶಾಸನನ ವಿಜಯವನ್ನಾಶಿಸಿದರು.

ಸುರಾಧಿಪನು ಐರಾವತವನ್ನೂ, ಅಗ್ನಿಯು ಮೇಷವನ್ನೂ, ಯಮರಾಜನು, ಮಹಿಷವನ್ನೂ, ನಿರೃತಿಯು ಮನುಜನನ್ನೂ, ವರುಣನು ಮಕರಿಯನ್ನೂ, ವಾಯುವು ಹರಿಣವನ್ನೂ, ಕುಬೇರನು ಕುದುರೆಯನ್ನೂ, ಈಶಾನನು ನಂದಿಯನ್ನೂ ಪವಿ, ವಜ್ರ, ಅಗ್ನಿಕುಂಡ, ಕಾಲದಂಡ,ಖ ಮುದ್ಗರ, ಪಾಶ ಗದಾ, ಪರಿಘ ತ್ರಿಶೂಲಗಳನ್ನು ಧರಿಸಿ ಎಂಟು ಕಡೆಯಿಂದ ಮಹಾ ಸೈನ್ಯ ಸಮೇತರಾಗಿ ಮುತ್ತಿ ದಿತಿಸುತ ಸೇನಾತತಿಯನ್ನು ಹತವನ್ನಾಗಿಸಿ ಮೆರೆದರು.

ದೇವಾಸುರಯುದ್ಧವು ಜಗದ್ಭಯಂಕರವಾಯಿತು. ಸಮುದ್ರ ದ್ವಯಸೇ ಉಕ್ಕೇರಿ ಎದುರ್ಗೊಂಡಂತೆ ವಿಜೃಂಭಿಸಿದ ದೇವದಾನವ ಸೇನಾದ್ವಯವು ಸಿಂಹ ಗರ್ಜನಗಳಿಂದಲು ಬೇರಿ ಘಾಂಕಾರಗಳಿಂದಲು ದಿಗ್ದಿದಿಕ್ಕುಗಳನ್ನು ಪ್ರತಿಧ್ವನಿಸುವಂತೆ ವ್ಯಾಪಿಸಿದವು.

ಬಲಿರಾಜನು ಸುರರಾಜನನ್ನೆದುರಿಸಿದನು ಪ್ರಳಯಕಾಲತಲ್ಲಂತೆ ಮಹೋತ್ಪಾತಗಳು ತಲೆದೋರಿ ಸುರರಿಗೆ ಅಪಜಯವನ್ನೂ, ಸುರಾದಿಗಳಿಗೆ ಜಯವನ್ನೂ ಸೂಚಿಸಿದವು. ಯುದ್ಧವು ಯಜ್ಞದಂತೆ ಕಂಡಾಗ, ಬಲಿಯು ಕಾಲನಾಮಕ ಶ್ರೀಹರಿಬಲಯುಕ್ತನಾಗಿ ಯಜಮಾನನೆನಿಸಿದನು. ದೈತ್ಯಸತ್ತಮನಾದ ಪ್ರಹ್ಲಾದನು ಯಜ್ಞನೇತಾ ಆದನು, ವಿರೋಚನನು ಅಧ್ವರ್ಯನಾದನು. ನಮುಚಿಯು ಹೋತನಾದನು. ವೃತ್ರನು ಸ್ತೋತಾ ಎನಿಸಿದನು. ಐಂದ್ರ, ಪಾಶುಪತ ಬ್ರಾಹ್ಮ ಮುಂತಾದ ಅಸ್ತ್ರಜಪ ಪ್ರಯೋಗಗಳು ಸಾಮಗಾನವಾದವು.ಮಯನು ಉದ್ಗಾತನಾದನು. ವೈರವಹ್ನಿ ಕುಂಡಗಳು ಉರಿದೆದ್ದವು. ಶಂಖ, ಕಾಹಳ, ಭೇರೀ ಶಬ್ದಗಳು ಸ್ತುತಿಗಳಾದವು. ರಥದಂಡಗಳು ಯೂಪಗಳಾದವು. ತುರಗ, ಮದಗಜಗಳು ಪಶುಗಳಾದವು. ಹಯಗ್ರೀವಜಂಭಕೇಶೀ ಮಹಾಬಲರು ಸದಸ್ಯರಾದರು. ಶಂಬರನು ಶಾಮಿತ್ರ ಕರ್ಮನಿರತನಾದನು. ಇಂತು ಯುದ್ಧಯಜ್ಞವು ವಿಜೃಂಭಿಸಿ ನಡೆದಾಗ ದೇವತೆಗಳು ಸೋತು ಪಲಾಯನ ಪರಾಯಣರಾದರು.

ಬಲಿ ದೈತ್ಯನಿಗೆ ವಸುಗಳು ಸೋತರು. ನಮುಚಿಗೆ ಆದಿತ್ಯರು ಸೋತರು. ಮಯನಿಗೆ ತ್ವಷ್ಟನು ಸೋತನು. ಹಯಗ್ರೀವನಿಗೆ ಪೂಷಾದಿತ್ಯನು ಸೋತನು. ಕುಜಂಭನಿಗೆ ಸಕಲದೇವ ಸೇನೆಯು ಸೋತು ರಣರಂಗದಿಂದ ಓಡಿತು. ಆಗ ಮಹೇಂದ್ರನು ಕುಪಿತನಾಗಿ ಓಡುವ ದೇವಸೇನೆಯನ್ನು ನೋಡಿ ಧೃತಿಗೆಡದೆ ಬಲಿಯನ್ನು ಮುತ್ತಿ ಆಗ್ನೇಯಾಸ್ತ್ರವನ್ನು ಬಿಟ್ಟನು. ಬಲಿ ರಾಜನು ವಾರುಣಾಸ್ತ್ರದಿಂದ ಅದನ್ನು ಆರಿಸಿ

ದನು. ಇಂದ್ರನು ತನ್ನ ದಿವ್ಯಾಸ್ತ್ರಗಳನ್ನು ಬಲಿಯು ವ್ಯರ್ಥಗೊಳಿಸುವುದನ್ನು ಕಂಡು, ಕೆಂಡವಾಗಿ ವಜ್ರಾಯುಧವನ್ನೆತ್ತಿ ಹೊಡೆಯಲು ಸಿದ್ಧನಾದನು.

ಆಗ ಅಸುರೇಶನನ್ನು ತಡೆಯುತ್ತಾ ಆಕಾಶವಾಣಿಯು ಇಂತೆಂದಿತು "ಮಹೇಂದ್ರ, ವಜ್ರವನ್ನು ಬಿಡಬೇಡ ರಣದಿಂದ ಹಿಂದಿರುಗು! ಬಲಿರಾಜನೀಗ ಬ್ರಹ್ಮವರದಿಂದಲೂ, ಶುಕ್ರಾಚಾರ್ಯರ ಗುರುಬಲದಿಂದಲು ಬಲವತ್ತರನಾಗಿರುವನು. ಈಗ ಅವನನ್ನು, ಗೆಲ್ಲಲಾಗದು ಸತ್ಯ ಧರ್ಮ ತಪೋದಾನಗಳಿಂದ ತೇಜಃಪರಿಬೃಂಹಿತನಾದ ಬಲಿಗೆ ಸ್ವರ್ಗವನ್ನು ಬಿಟ್ಟು ಕೆಲಕಾಲ ಅಡಗಿರು! ನಿನ್ನ ಕಷ್ಟವನ್ನು ಪರಿಹರಿಸುವ ದೇವನಿರುವನು. ಆ ಪರಮಪುರುಷನು ವೇದ ಮುಖ್ಯ ಶ್ರುತಿಪಾದ್ಯನು, ಬ್ರಹ್ಮರುದ್ರಾದಿದೇವ ವಂದಿತಪದಾರವಿಂದನು, ಬ್ರಾಹ್ಮಣಸುಜನ ಪರಿಪಾಲನು ಧರ್ಮರಕ್ಷಕನು, ದುಷ್ಟಶಿಕ್ಷಕನು ಆಗಿರುವನು. ಶಂಖಚಕ್ರಗದಾಪಾಣಿಯು ಪೀತಾಂಬರನು, ಆದ ದೇವೋತ್ತಮನಿಂದ ಅಸುರ ಪರಾಜಯವೂ, ಸುರಸುಖವೂ ಸಿದ್ಧಿಸುವುದು" ಎಂದು ನುಡಿದ ಅಂಬರ ವಚನಗಳಿಂದ ಸಮಾಶ್ವಸಿತನಾಗಿ ಮಹೇಂದ್ರನು ರಣಾಂಗಣವನ್ನು ಬಿಟ್ಟು, ಸರ್ವದೇವ ನಿಕರದಿಂದಕೂಡಿ, ಅಂತರ್ಹಿತನಾದನು.

ಜಯಶಾಲಿಯಾದ ಬಲಿರಾಜನು ಸಿಂಹ ಗರ್ಜನೆಗೈದು ಸುರಧಾನಿಯನ್ನಾಕ್ರಮಿಸಿದನು. ದೈತ್ಯದಾನವರ ವಿಜಯ ಧ್ವಾನಗಳಿಂದ ಸ್ವರ್ಗ ಲೋಕಾಕಾಶವು ತುಂಬಿ, ಪ್ರತಿಧ್ವನಿಸಿತು. ಬಲಿಯು ಇಂದ್ರನಾಗಿ, ತನ್ನವರಿಗೆ ಇತರ ದೇವತಾ ಪದವಿಗಳನ್ನಿತ್ತು ಸ್ವರ್ಗ ಮರ್ತ್ಯ ಸುತಲಗಳಿಗೆ ಚಕ್ರವರ್ತಿಯಾಗಿ ರಾಜ್ಯವಾಳಿದನು ಶುಕ್ರಾಚಾರ್ಯರಿಂದ ಅಭಿಷಿಕ್ತನಾಗಿ ಬಲಿರಾಜನು ಧರ್ಮದ ನಾಲ್ಕುಪಾದಗಳನ್ನು ಚೆನ್ನಾಗಿ ನಡೆಸಿದನು ಋಷಿವರರ ಯಜ್ಞಗಳು ಚೆನ್ನಾಗಿ ನಡೆದವು ಅದರಿಂದ ಮಳೆಗಳು ಸರಿಯಾಗಿ ಸುರಿದು ಬೆಳೆಗಳು ಸಮೃದ್ಧವಾದವು. ಜನರು ಸ್ವಧರ್ಮದಲ್ಲಿ ನಡೆದು ಪಾಪ ವಿಮುಖರಾದರು. ಬ್ರಾಹ್ಮಣರು ರಾಜ ಪೋಷಿತರಾಗಿ ವೇದಾಧ್ಯಯನ, ಯಜ್ಞಕರಣ, ಪಾಠ ಪ್ರವಚನಗಳಿಂದ ಲೋಕಹಿತವನ್ನು ಸಾಧಿಸಿದರು.

ಬಲಿರಾಜನ ಸುಗುಣಗಳಿಗೆ ಪ್ರೀತಳಾಗಿ ಶ್ರೀದೇವಿಯು ತಾನಾಗಿ ಒಲಿದು ಬಂದು ಅವನಿಗಿಂತೆಂದಳು. "ರಾಜನ್! ನಿನ್ನ ಧೈರ್ಯ, ಶೌರ್ಯ, ಗಾಂಭೀರ್ಯ, ಧರ್ಮಶ್ರದ್ಧೆಗಳಿಂದ ಪ್ರೀತಳಾಗಿರುವೆನು. ಸತ್ಯ ಧರ್ಮ ದಾನ ದಯಾ, ಶೀಲಗಳಿದ್ದ ನಿನ್ನಲ್ಲಿ ನಿಲ್ಲಲುಬಂದಿರುವೆನು. ಪ್ರಹ್ಲಾದನಂತಹ ಭಗವದ್ಭಕ್ತನ ಮೊಮ್ಮನಾಗಿರುವೆ! ಅವನಂತೆ ಧರ್ಮಸತ್ಯಗಳನ್ನು ಬಿಡದಿರುವೆ!' ಎಂದು ಶ್ರೀದೇವಿಯು ಬಲಿರಾಜನ ಮನೆಯಲ್ಲಿಯೂ ಮನದಲ್ಲಿಯೂ ಮಾಧವನಿಂಡ ಕೂಡಿನಿವಸಿಸಿದಳು. ಶ್ರೀದೇವಿಯನ್ನನುಸರಿಸಿ ಶ್ರೀ, ಕೀರ್ತಿ, ಧೃತಿ, ದ್ಯುತಿ, ಪ್ರಭಾ, ಭೂತಿ, ನೀತಿ, ವಿದ್ಯಾ ದಯಾ, ಸ್ಮೃತಿ ಮೇಧಾ ಶ್ರುತಿ, ಪ್ರೀತಿ ಇಲಾ, ಶಾಂತಿ, ಪುಷ್ಟಿ, ತುಷ್ಟಿ ಮುಂತಾದ ದೇವತೆಗಳು ಬಂದು ಬಲಿಯಲ್ಲಿ ನಿಂದು ಅನುಗ್ರಹಿಸಿದರು. ಬಲಿರಾಜನು ಇಂದ್ರಾರ್ಕಗುಣಮಣಿಗಳಿಂದ ಅಲಂಕೃತನಾಗಿ ಎದುರಿಲ್ಲದೆ ಮೆರೆದು, ಅಪಾರ ಯಶೋಭಾಗ್ಯಗಳನ್ನುಗಳಿಸಿದನು

15. ವಾಮನ ವೈಭವಂ|| ಅಭಯಪ್ರದಾನ

ಶ್ರೀ ಜನಮೇಜಯನು "ವೈಶಂಪಾಯನಮುನೀಂದ್ರ ! ಸೋತುಹೋದ ಸುರವರೇನು ಮಾಡಿದರು ? ಬಲಿಯನ್ನಗೆದ್ದು ಸುರರಾಜನು ಸ್ವರ್ಗರಾಜ್ಯವನ್ನೆಂತು ತಿರುಗಿಪಡೆದನು ?" ಎಂದು ಪ್ರಶ್ನಿಸಲು ವ್ಯಾಸದೇವಶಿಷ್ಯನಾದ ವೈಶಂಪಾಯನ ನಿಂತು ವಾಮನ ಪ್ರಾದುರ್ಭೂತಿಯನ್ನು ವರ್ಣಿಸಿದನು

ಆಕಾಶವಾಣಿಯ ವಚನವನ್ನು ಆಲಿಸಿ, ಪ್ರಾಣ ದೇವನ ವಚನವದೆಂದು ತಿಳಿದು ಪಾಲಿಸಿ,ಪಾಕ ಶಾಸನನು ಪರಾಜಿತ ಪಾವಕಾದಿವೃಂದಾರಕರು ಹಿಂದೆ ಅನುಸರಿಸಿ ಬರುತ್ತಿರಲು, ಪ್ರಾಚೀದಿಕ್ಕಿಗೆ ಪಯಣಿಸಿ, ದೇವಮಾತೆಯ ಆಶ್ರಮವನ್ನು ಸೇರಿದರು. ಅದಿತಿಯು ಅವರ ಅವಸ್ಥೆಯನ್ನು ಕೇಳಿ, ಆರ್ತಳಾಗಿ ಇಂತೆಂದಳು.

"ಪುತ್ರ ! ವೈರೋಚನಿಯನ್ನು ರಣರಂಗದಿ ಗೆಲ್ಲಲಾಗದೆ ಇಂತಹ ಪರಾಭೂತಿಯು ಒದಗಿದೆ. ಈಗ ನಮಗೆ ಸಹಸ್ರ ಶಿರಸ್ಕನಾದ ನಾರಾಯಣನಲ್ಲದೆ ಮತ್ತಾರೂ ರಕ್ಷಕರಿಲ್ಲ. ಶ್ರೀ ಹರಿಯು ಪ್ರಸನ್ನನಾಗಿ, ನಮ್ಮ ಸಿರಿ ಸಂಪತ್ತುಗಳನ್ನು ನಮಗೆ ತಂದು ಕೊಡಲು ಸಮರ್ಥನಾಗಿರುವನು. ನಿಮ್ಮ ತಂದೆಯೊಡಗೂಡಿ, ಆಲೋಚಿಸಿ, ಮುಂದಿನ ಕಾರ್ಯವನ್ನು ಮಾಡಿ !" ಎಂದು ತಾವೂ ಅವರೊಡನೆ ಕಶ್ಯಪನ ತಪೋವನಕ್ಕೆಂದು ಹೊರಟಳು.

ತ್ರಿಷವಣಸ್ನಾನ ಪವಿತ್ರಗಾತ್ರನು, ತೋಯಜಾಕ್ಷನಿಗೆ ಪ್ರೀತಿಪಾತ್ರನು ಭಾಸ್ಕರ ಸಮತೇಜನು, ಬದ್ಧ ಕೃಷ್ಣಾಜಿನನು, ನ್ಯಸ್ತದಂಡನು, ಧೃತದ್ವಾದಶೋರ್ಧ್ವಪುಂಡ್ರನು ಆದ ಕಶ್ಯಪನ. ಸುರಾಧಿಪನ ಆಧಿಯನ್ನು ಆಲಿಸಿ, ಶ್ರೀಶನ ಬಂಧಕ ಶಕ್ತಿಯ ಪ್ರಭಾವಕ್ಕೆ ತಲೆಬಾಗಿ, ಬ್ರಹ್ಮಲೋಕವನ್ನು ಸೇರ್ಪೋದನು. ತೃತೀಯ ಪ್ರಜಾಪತಿಯು, ಸುರಾಸುರವಂದಿತನು ಆದ ಕಶ್ಯಪನನ್ನನುಸರಿಸಿ, ಸಕಲ ದೇವತೆಗಳು ಸುರಗುರುವಿನ ವರಚರಣನಲಿನಗಳಿಗೆ ನಮಿಸಿ ಶಿರಬಾಗಿ ನಿಂತರು.

ಷಟ್ ಸಾಮಗಾನನಿನದಿತವು, ವೀಣಾವೇಣುನಿಕ್ವಾಣ ಕ್ವಣನವು, ಹರಿವರ್ಣನ ನಿಷ್ಣಾತ ವೇದ ವಿದ್ವರ ವಚನ ಮಂಜುಲವು ಆದ ಬ್ರಹ್ಮ ಸಭೆಯನ್ನು ನೋಡಿ. ಬ್ರಹ್ಮದೇವನ ದರ್ಶನದಿಂದ ದೇವತೆಗಳು ಧನ್ಯರಾದರು. ಐಕ್ಯವಾದ, ನಾನಾತ್ವವಾದ ಯೋಗ ಸಾಂಖ್ಯ, ಲೋಕಾಯತಿಕವಾದಗಳನ್ನು ಲೀಲೆಗಾಗಿ ಮಂಡಿಸಿ, ಉತ್ತಮರಿಂದ ಖಂಡಿತವಾದ ಆ ದುರ್ಮತಗಳ ನಿಸ್ಸಾರತೆಯನ್ನು ಪ್ರಕಟಿಸಿ, ತತ್ವವಾದವನ್ನು ದೃಢೀಕರಿಸಿ, ಜ್ಞಾನವನ್ನು ಪ್ರಸರಿಸಿ, ಶ್ರೀಚತುರ್ಮುಖನ ಮೆಚ್ಚುಗೆಯನ್ನು ಪಡೆಯುವ ವೈಷ್ಣವ ವಿದ್ವಜ್ಜನರ ವಾಗಮೃತವನ್ನು ಕಿವಿಗಿಂಪಾಗಿ ಕೇಳಿ, ದೇವತೆಗಳು ತಮ್ಮ ಶೋಕ ಕಾರಣವನ್ನು ಸರ್ವಜ್ಞನಿಗೆ ವಿಜ್ಞಾಪಿಸಿದರು.

ಬ್ರಹ್ಮದೇವನು "ದೇವತೆಗಳಿರಾ ! ಗೊತ್ತಿದೆ ನಿಮ್ಮ ಗತಿವಿಲಾಸವು. ಶ್ರೀ ಹರಿಯ ಚಿತ್ತದಂತೆ ಸುಖದುಃಖಗಳಲಾಸ್ಯವು ಜೀವರನ್ನು ಕಾಣಿಸುತ್ತಿದೆ, ತ್ರಿಲೋಕ ವಿಜಯಿಯಾದ ಶ್ರೀ ದೇವನೇ ಈಗ ಅಸುರ ವಿಜಯಿಯಾಗಿ ನಿಮ್ಮನ್ನು ಕಾಪಾಡ ಬಲ್ಲವನು. ಸರ್ವಚರಾಚರ ಲೋಕಗಳನ್ನು ಸೃಜಿಸುವ ನನಗೆ ಆ ಶಕ್ತಿಯು ನನ್ನನ್ನು ನಾಭೀ ಕಮಲದಿಂದ ಪಡೆದ ನಾರಾಯಣನಿಂದ ಬಂದುದಾಗಿದೆ. ನಾನು, ನನ್ನ ಮಗನಾದರುದ್ರನು ಅವನ ದಾಸಾನುದಾಸರು ಆ ಸ್ವಾಮಿಯಯನ್ನು ಶರಣಾಗಿಪೋಗೋಣ! ಕ್ಷೀರಪಯೋನಿಧಿಯತೀರದಿ, ಅಮೃತ ಲೋಕದ ನಿಧಿಯು, ಸರ್ವ ಸುಜನಶೇವಧಿಯು ಆದ ಶ್ರೀವಾಸುದೇವನೇ ನಮಗೆಗತಿ!" ಎಂದು ಬ್ರಹ್ಮದೇವನು ಅವರೆಲ್ಲರಿಂದ ಕೂಡಿ, ಸಿರಿಯರಸನ ಪರಾಮೃತ ನಿಲಯುವನ್ನು ಸೇರಿದನು.

ಕಶ್ಯಪರ್ಷಿವರನು ತಾತನಾದ ಚತುರ್ಮುಖನ ಅಪ್ಪಣೆ ಪಡೆದು, ಶ್ರೀಹರಿಯ ನ್ನಿಂತು ಸ್ತುತಿಸಿದನು.

ಶ್ರೀ ಹರೇ ! ನಮೋನಮಃ ದೇವದೇವೇಶ ! ಏಕಶೃಂಗ ! ವರಾಹ ! ವೃಷಾ ರ್ಚಿಸ! ಸಿಂಧುವೃಷ!ವೃಷಾಕಪಿ !ಸುಖಸಹ! ಸುರನಿರ್ಮಿತ ! ಅನಿರ್ಮಿತ. ಭದ್ರ ! ಕಪಿಲ!ವಿಷ್ವಕ್ಸೇನ !ಧ್ರುವ !ಧರ್ಮ ! ಧರ್ಮರಾಜ !ವೈಕುಂಠ! ಕ್ರೇತಾವರ್ತ ! ಅನಾ ದಿಮಧ್ಯನಿಧನ ! ಧನಂಜಯ ! (೨೦) ಶುಚಿಶ್ರವ ! ಅಗ್ನಿಜ ! ವೃಷ್ಣಿಜ ! ಅಜ ! ಅಜಯ ! ಮೃತೇಶಯ ! ಸನಾತನ ! ವಿಧಾತ ! ತ್ರಿಕಾಮ ! ತ್ರಿಧಾಮ ! ತ್ರಿಕ ಕುತ್ ! ಕಕುದ್ಮಿನ್ ! ದುಂದುಭಿ ! ಮಹಾನಾಭ ! ಲೋಕನಾಥ ! ಪದ್ಮನಾಭ ! ವಿರಿಂಚ ! ವರಿಷ್ಠ, ಬಹುರೂಪ, ವಿರೂಪ, ವಿಶ್ವರೂಪ, ಕ್ಷಯ, ಅಕ್ಷಯ, ಸತ್ಯಾಕ್ಷರ ಹಂಸಾಕ್ಷರ ! (೪೫) ಹವ್ಯಭುಕ್, ಖಂಡಪರಶು, ಶುಕ್ರ, ಮುಂಜಕೇಶ, ಹಂಸ, ಮಹಾಹಂಸ, ಮಹದಕ್ಷರ, ಹೃಷೀಕೇಶ ! ಸೂಕ್ಷ್ಮ, ಪರ ಸೂಕ್ಷ್ಮ, ತುರಾಷಾಟ್ ವಿಶ್ವಮೂರ್ತಿ, ಸುರಾಗ್ರಜ, ನೀಲ, ಸಿಸ್ತಮ, ಬಲೇಮ, ರನೋರಜ, ಸತ್ವಧಾಮ, ಸರ್ವಲೋಕ,ಸರ್ವಲೋಕ ಪ್ರತಿಷ್ಠ, ಸುತಪ, ತಪೋಗ್ರ, ಅಗ್ರ, ಅಗ್ರಜ,ಧರ್ಮನಾಭ,ಗಭಸ್ತಿ, ನಾಭ, ಧರ್ಮನೇಮ, ಸತ್ಯಧಾಮ, ಸತ್ಯಾಕ್ಷರ, ಗಭಸ್ತಿನೇಮ, ವಿಪಾಷ್ಮಾ ,ಚಂದ್ರಾಂಥ ಸಮುದ್ರವಾಸ, ಅಜೈಕಪಾದ. ಸಹಸ್ರ ಶೀರ್ಷ, ಸಹಸ್ರಸಂಮಿತ, ಮಹಾಶೀರ್ಷ. ಸಹಸ್ರದೃಕ್, ಸಹಸ್ರಪಾದ (೮೬) ಅಧೋಮುಖ, ಮಹಾಮುಖ, ಮಹಾಪುರುಷ ಪುರುಷೋತ್ತಮ, ಸಹಸ್ರಬಾಹು, ಸಹಸ್ರಮೂರ್ತಿ, ಸಹಸ್ರಮುಖ, ಸಹಸ್ರಾಕ್ಷ, ಸಹಸ್ರಭೊಜ, ಸಹಸ್ರಭುವ, ವಿಶ್ವೇ ದೇವ, ವಿಶ್ವ ಸಂಭವ, ದೇವಸೌಭಗ, ಆದಿಗತಿ, ವಿಶ್ವ, ಪುಷ್ಪಹಾಸ, ಪರಮವರದ, ಓಂಕಾರ, ವಷಟ್ಕಾರ, ಔಷಟ್ಕಾರ, ಮುಖ ಪ್ರಾಶನ, ಶತಧಾರ, ಸಹಸ್ರಧಾರ, ಭೂರ್ದ, ಭುವರ್ಧ, ಸ್ವರ್ದ, ಭೂರ್ಭುವಃ ಸ್ವರ್ದ, ಸ್ವಧಾ, ಸ್ವಾಹಾ, ಬ್ರಹ್ಮಮಯ, ಬ್ರಹ್ಮಶಯ, ಪೃಥಿವೀ, ದ್ಯೌ, ಪೂಷಾ, ಮಾತರಿಶ್ವಾ, ಧರ್ಮ , ಮಘವಾ, ಹೋತಾ, ಪೋತಾ, ನೇತಾ, ಹಂತಾ, ಮಂತಾ,

ಪರಾತ್ಪರ, ವಿಶ್ವವಾಕ್, ಧಾತಾ, ಪರಮಧಾಮಾ, ಸ್ರುರ್, ಸ್ರುವ, ಧಾಂತ, ಗಣ್ಯ, ಇಷ್ಟ, ಈಡ್ಯ, ಈಶ್ಯ, ತ್ವಷ್ಟಾ, ಸವಿತ್ರ್, ಗತಿ, ಗತಿಮಾನ್. ಮೋಕ್ಷ, ಗುಹ್ಯ, ಸಿದ್ಧ, ಧನ್ಯ ಯೂಪ,ಸೋಮ,ದಕ್ಷಿಣಾ, ದೀಕ್ಷಾ,ಸ್ಥವಿಷ್ಠ,ಸ್ಥವಿರ, ಹಿರಣ್ಯಗರ್ಭ,ಹಿರಣ್ಯ, ನಾಭ, ಹಿರಣ್ಯ, ನಾರಾಯಣ. ಆದಿತ್ಯವರ್ಣ, ಪುರೋತ್ತಮ, ಪದ್ಮನಾಭ, ಪದ್ಮೇಶ, ಪದ್ಮಾಕ್ಷ, ಪದ್ಮಗರ್ಭ, ಶುಕ್ಲ, ವಿಶ್ವತೋಮುಖ, ವಿಶ್ವಾಕ್ಷ, ವಿಶ್ವಸಂಭವ, ವಿಶ್ವ ಭುಕ್, ಭೂರಿವಿಕ್ರಮ, ವಿಶ್ವಂಭರ, ಪವಿತ್ರ, ವಿಶಾರದ, ಅಮೃತೇಂಧನ, ಸುರಾಸುರ ಗುರೋ ಮಹದಾದಿದೇವ, ಊರ್ಧ್ವ ಕರ್ಮನ್, ಪೂತಾತ್ಮ, ವಿಶ್ವಸೃಕ್ ಅಮೃತೇಶ, ವಿಶ್ವಪತಿಘೃತಾಚಿ,ದ್ರುಹಿಣವಂಶವರ್ಧನ,ವಿಶ್ವಪಾ, ಶ್ರೀ ಹರೇ! ನಮೋನಮಃ (೨೦೦)||

ಇಂತು ಅನ್ವರ್ಥಗಳಾದ ಗುಣಕರ್ಮನಾಮಗಳಿಂದ ನುತಿಸಿದ ಕಶ್ಯಪನಿಗೆ ಪ್ರೈದೋರಿ ನಿಂತ ರಮಾಕಾಂತನು ಮೇಘಗಂಭೀರ ಸುಸ್ವರದಿಂದ ಇಂತೆಂದನು. "ಪ್ರೀತನಾಗಿರುವೆನು ! ದೇವತೆಗಳಿರಾ ! ಬೇಡಿರಿ ಬೇಕಾದವರವನ್ನು ! ಆಗ ಕಶ್ಯಪನು ಕೈ ಜೋಡಿಸಿ "ಕೈಟಭ ಮರ್ದನ, ದೇವ ಕುಲವರ್ಧನ ! ವಾಸವನಿಗೆ ಅನುಜನಾಗು ನಮ್ಮಿಬ್ಬರಿಗೆ ಪುತ್ರನಾಗು ! ಮಕ್ಕಳಿಗೆ ಬಂದ ಕಷ್ಟಕ್ಕಾಗಿ ಮರುಗುವ ಮಡದಿಗೆ ಸಮಾಧಾನವನ್ನು ತಂದು ಕೊಡು !" ಎಂದನು. ಅದಿತಿಯೂ ಪತಿಯ ಕೋರಿಕೆಯನ್ನೇ ಪುನರುಚ್ಚರಿಸಿದಳು. ದೇವತೆಗಳೂ ಅಂತು ಮಾಡಿ ಕಷ್ಟಾಂತವನ್ನು ಮಾಡೆಂದರು.

ಶ್ರೀ ವಿಷ್ಣುವು "ಆಗಲಿ ! ನಿಮ್ಮ ಶತ್ರುಗಳು ನಷ್ಟರಾದರೆಂದು ತಿಳಿಯಿರಿ ! ನಿಮ್ಮ ಯಜ್ಞಭಾಗಗಳನ್ನು ಅಪಹರಿಸಿದ ದೈತ್ಯರು ದುರಾಕ್ರಮಣದಿಂದ ಅಂದೇ ಸತ್ತರೆಂದೂ ತಿಳಿಯಿರಿ ! ಅದಿತಿಕಶ್ಯಪರಿಗೆ ಮಗನಾಗಿ ಪರಾಕ್ರಮದಿಂದ ಜಯಿಸಲಾಗದ ದೈತ್ಯ ರಾಜನನ್ನು ಉಪಾಯದಿಂದ ತ್ರಿವಿಕ್ರಮನಾಗಿ ಜಯಿಸಿ, ನಿಮ್ಮ ರಾಜ್ಯ ಹವಿಃ ಪುಣ್ಯ ಭಾಗಗಳನ್ನು ನಿಮಗೆ ತಂದು ಕೊಡುವೆನು !" ಎಂದು ಅವರನ್ನೆಲ್ಲ ಸಂತೈಸಿಕಳಿಸಿದನು

16. ವಾಮನಾವತಾರಃ ||

ಶ್ರೀ ವೈಶಂಪಾಯನನು ಜನಮೇಜಯನಿಗೆ ನಿರೂಪಿಸಿದನು.

ಶ್ರೀ ಹರಿಯು ತನ್ನ ಮಾತಿನಂತೆ ಅದಿತಿ ಕಶ್ಯಪರಿಗೆ ಮಗನಂತಾಗಿ ಪ್ರಾದುರ್ಭವಿಸಿದನು. ಭಾದ್ರಪದ ಶುಕ್ಲದ್ವಾದಶಿಯ ಅಭಿಜಿನ್ಮುಹೂರ್ತ, ಶ್ರವಣನಕ್ಷತ್ರದಲ್ಲಿ ಶ್ರೀಹರಿಯು ವಾಮನನಾಗಿ ಅವತರಿಸಿದಾಗ ಸರ್ವ ಸುರಾದಿ ಸುಜನರು ಸಂತೋಷವನ್ನೂ, ಸರ್ವ ದೈತ್ಯಾದಿ ಕುಜನರು ಭಯವನ್ನೂ ಒಂದೇ ಸಲ ಹೊಂದಿದರು.

ಕಶ್ಯಪ, ಭರದ್ವಾಜ, ಗೌತಮ ವಿಶ್ವಾಮಿತ್ರ, ಜಮದಗ್ನಿ, ವಸಿಷ್ಠ, ಅತ್ರಿ, ಮರೀಚಿ: ಅಂಗಿರಾ, ಪುಲಸ್ತ್ಯ, ಪುಲಹ, ಕ್ರತು ದಕ್ಷ, ಔರ್ವ, ಕಕ್ಷೀವಾನ್, ಚ್ಯವನ; ಗಾರ್ಗ್ಯ. ಪೃಥು, ದೇವಬಾಹು, ಹಿರಣ್ಯರೋಮ. ವೇದಶಿರ, ವಿರಜ, ಮುಂತಾದ ಮುನಿಗಳು ಶ್ರೀ ಹರಿಯ ಅವತಾರ ಸುಸಮಯದಲ್ಲಿ ವೇದಮಂತ್ರಗಳಿಂದ ಸ್ತುತಿಸಿದರು.

ತುಂಬುರು, ಪದ್ಮಶ್ರುತಿ, ಚಿತ್ರಶಿರ, ಊರ್ಣಾಯು, ಅನಘ ಸೂರ್ಯವರ್ಚಾ ಸೋಮವರ್ಚಾ, ಶಾಲಿಶಿರ ಪರ್ಜನ್ಯ ಹಾ ಹಾ, ಹೂ ಹೂ, ಹಂಸ ಮುಂತಾದ ದೇವ ಗಂಧರ್ವರು ನಾರದರ ಹಿಂದೆ ನಿಂತು ಗಾನ ಮಾಡಿದರು.

ಸುಮಧ್ಯಾ ಚಾರುಮಧ್ಯಾ ಅನೂಕಾ. ಜಾಮಿ ಮಿಶ್ರಕೇಶೀ ಅಲಂಬುಷಾ ಶುಚಿಕಾ, ತಿಲೋತ್ತಮಾ, ಅದ್ರಿಕಾ, ಲಕ್ಷಣಾ, ರಂಭಾ, ಮನೋರಮಾ ಅಸಿತಾ, ಊರ್ವಶೀ, ಮೇನಕಾ, ಘೃತಾಚೀ, ಚಿತ್ರಲೇಖಾ ಸುಗ್ರೀವಾ, ಸುಲೋಚನಾ, ಸುಲಕ್ಷಣಾ ಪ್ರಮಾಥಿನೀ, ಪುಂಡರೀಕಾ. ನಂದಾ, ಶಾರದ್ವತೀ, ಸಹಜನ್ಯಾ ಪುಂಜಿಕಸ್ಥಲಾ ಮೊದಲಾದ ಅಪ್ಸರಾ ಜನರು ಜನಮನೋನಯನಾನಂದ ಪ್ರದರಾಗಿ ನರ್ತಿಸಿದರು.

ಧಾತಾ, ಅರ್ಯಮಾ, ಮಿತ್ರ, ವರುಣ, ಅಂಶು, ಭಗ, ಇಂದ್ರ ವಿವಸ್ವಾನ್ ಪೂಷಾ, ತ್ವಷ್ಟಾ, ಸವಿತಾ. ಮುಂತಾದ (ವಿಷ್ಣುವಿನನ್ನು ಬಿಟ್ಟು) ಏಕಾದಶ ಸಂಖ್ಯಾಯುತರಾದ ಆದಿತ್ಯರು, ಮೃಗವ್ಯಾಧ, ಸರ್ಪ, ನಿರೃತಿ ಮಹಾಬಲ ಅಜೈಕಪಾತ್ ಅಹಿರ್ಬುಧ್ನ್ಯ, ಪಿನಾಕೀ, ಅಪರಾಜಿತ, ಕಪಾಲೀ ಸ್ಥಾಣುಗಳೆಂಬ ದಶರುದ್ರರಿಂದ ಕೂಡಿದ ಮಹಾದೇವನು, ನಾಸತ್ಯ ದಸ್ರರೆಂಬ ಅಶ್ವಿನೀ ದ್ವಯವು, ಮರುತ್ತರು ನಲವತ್ತೊಂಬತ್ತು ಜನರು, ಹದಿಮೂರು ವಿಶ್ವೇದೇವತೆಗಳು, ಎಪ್ಪತ್ತು ಗಣಸಾಧ್ಯರು ಅಪ್ಪೇಸಿದ್ಧರು, ವಾಸುಕಿ ಪ್ರಮುಖರಾದ ನಾಗರು, ತಾರ್ಕ್ಷ್ಯ, ಅರಿಷ್ಟನೇಮಿ ಅನಂತ, ಸುಪರ್ಣ, ಮುಂತಾದ ಗರುಡರು, ಅರುಣ ಆರುಣಿ ಮುಂತಾದ ಪಕ್ಷಿರಾಜರು,—ಇಂತು ಸರ್ವ ಸುಪರ್ವಾದಿ ಸುಜನರು ಅಖರ್ವಗರ್ವದಿಂದ ಮೆರೆವ ದಿತಿಜರ ನಿರ್ವಹಣ ವಿಕ್ರಮನಾದ ವಾಮನನ ಖರ್ವಮೂರ್ತಿಯನ್ನು ನೋಡಿ, ಆನಂದಪೊಂದಿ ಬ್ರಹ್ಮರುದ್ರಾದಿಸುರ ಮುಖ್ಯರ ಹಿಂದೆ ನಿಂತು, ಸ್ತುತಿಸಿ ನಮಸ್ಕರಿಸಿದರು.

ನವನೀರದ ನೀಲಭಾಸನು, ಅರುಣಕಿರಣಾನುಕಾರಿ ಸುಶುಭ್ರವಾಸನು, ಶ್ರೀವತ್ಸದಕ್ಷನು ಶರದುದಿತಸರಸಿಜ ದಳ ಸಮವಿಶಾಲಾಕ್ಷನು, ಸುರರ್ಷಿಗಣ ದುರ್ಧರ್ಷ ಬ್ರಹ್ಮವರ್ಚಸ್ಕನು, ಸುರಸುಜನಶ್ರೇಯಃ ಕಲಿತ ಮನಸ್ಕನು ಮೃದುಮಂಜುಲವಚಸ್ಕನು ಸುಂದರಶಿರಸ್ಕನು, ಆದ ಶ್ರೀ ವಾಮನ ಮೂರ್ತಿ ತನ್ನ ಭಕ್ತ ಜನರ ಆರ್ತಿ ಸಂಹರ್ತನಾಗಿ ನಗುನಗುತ್ತಾ ಅವರನ್ನು ವೀಕ್ಷಿಸಿದನು.

ಯಾವ ವಿಕುಂಠ ಮಹಿಮನು ಪುಣ್ಯಕರ್ಮಿಗಳಿಗೆ ಉತ್ತಮ ಗತಿಯೋ, ಯಾವ ಸಮದರ್ಶನನು ಪಾಪಿದಿತಿಜಾದಿಗಳಿಗೆ ತಮಃ ಪ್ರದನೋ, ಯಾವ ಯೋಗೀಶ್ವರನು

ಯೋಗ ಸಿದ್ಧಗಾದ ಮಹಾತ್ಮರ ಉದ್ಧಾರಕನೋ ಯಾವ ಅನಂತ ಗುಣ ಪೂರ್ಣನು
ವೇದವಿದ್ವರ ಮುಖವರ್ಣಿತಮಹಾಮಹಿಮನೋ, ಯಾವ ಕರುಣಾ ಸಿಂಧುವು, ಸಂಸಾರ
ತಾಪತಪ್ತ ದೀನ ಜನಬಂಧುವೋ ಯಾವ ಲೋಕೇಶನು ಯಜ್ಞಯಾಗಾದಿ ಸತ್ಕರ್ಮನಿ
ರತರಿಗೆ ಸ್ವರ್ಗಾದಿ ದಿವ್ಯ ಭೋಗ ಪ್ರದನೋ, ಯಾವ ಮುಕುಂದನು, ತನ್ನ ಪಾದಾರ
ವಿಂದ ಭಜಕರಿಗೆ ಜನ್ಮ ಮೃತ್ಯು ಜರಾ ವ್ಯಾಧಿ ದುಃಖಾದಿದೋಷ ವಿಧ್ವಂಸಕನೋ,
ಯಾವ ಅನಂತನು, ಅನೇಕಾವತಾರಗಳಿಂದ ನಾನಾರೂಪಯುತನಾಗಿ ತತ್ತದುಪಾಸ
ನಾ ಯೋಗ್ಯಫಲವನ್ನವರವರಿಗೆ ನೀಡುವ ನಿಷ್ಪಕ್ಷಪಾತಿಯೋ, ಯಾವ ದೇವೇಶನ
ದಾಸರಿಗೆ ಯಾವ ವಿಧವಾದ ಭಯಗಳಿಲ್ಲವೋ, ಅಂತಹ ಶ್ರೀ ರಮಣನು ವಾಮನ
ನಾಗಿ ನಿಂತು ಸುರಕಾಂತರಿಗಿಂತೆಂದನು.

"ದೇವಋಷಿ ಪಿತೃರಾಜ ಸುಜನರೇ ! ಏನಾಗಬೇಕು ನನ್ನಿಂದ ಕೇಳಿರಿ !
ನಿಮ್ಮ ವಾಂಛಿತಗಳೆಲ್ಲ ಈಡೇರಿದವೆಂದು ತಿಳಿಯಿರಿ !" ಶ್ರೀ ಮುಕುಂದನ ಮುಖಾರ
ವಿಂದದಿಂದ ಬಂದ ಮಂದ್ರ ಮಧುರ ವಚನದಿಂದಲೇ ಸರ್ವಶಂಕಾತಂಕಕಳಂಕ
ವಿರಹಿತರಾದ ದೇವತೆಗಳಾತನಿಗಿಂತು ಬಿನ್ನವಿಸಿದರು.

"ದೇವಾಧಿದೇವ ! ಭವಚ್ಚರಣಾದವಿಂದ ಸೇವಾನುಭಾವವನ್ನು ಅನುಭವಿ
ಸುವೆವು. ಸ್ವಾಮೀ! ಸರ್ವಜ್ಞನಿಗೆ ವಿಜ್ಞಾಪಿಸಲು ಏನಿದೆ? ಸುರನರ ಸುರಾರಿಗಳಿಗೆ ನೀನಿತ್ತ
ಸ್ವರ್ಗಮರ್ತ್ಯಸುತಲಲೋಕಗಳಲ್ಲಿ ಅವರವರು ಕ್ರಮವಾಗಿ ನಿವಸಿರುವುದು ಧರ್ಮಸಮ್ಮ
ತವಾಗಿದೆ. ಸುರೇತರರೀಗ ಮೇಲೇರಿ ಬಂದು ಸುರರನ್ನು ಕೆಳಗೆ ತುಳಿದಿರುವುದರಿಂದ,
ಮಧ್ಯದಲ್ಲಿರುವ ಮನುಜರಿಗೆ ಮಹದುಃಖದಾಯಕವಾಗಿದೆ. ಧರ್ಮ ಕರ್ಮಗಳ ಫಲಪ್ರದ
ನಾದ ನಿನಗೆ ಅವರವರನ್ನು ಅಲ್ಲಲ್ಲೆ ನಿಲ್ಲಿಸಿ ಸಮನೆನಿಸಿ ಮೆರೆವುದು ಉಚಿತವಾಗಿದೆ.
ಇಂತಹ ದುಷ್ಟದಮನ ಕಾರ್ಯವನ್ನುಮಾಡಿ ಸಕಲ ಹಿತವನ್ನು ಸಾಧಿಸುವುದು
ಸರ್ವೋತ್ತಮನಿಗೇ ಶಕ್ಯವಾಗಿದೆ. ನಮ್ಮ ಪ್ರಿಯವನ್ನು ನೀನೇ ಯೋಚಿಸಿಮಾಡು
ಎಂದು ಪ್ರಾರ್ಥಿಸಿದರು.

ಶ್ರೀ ವಾಮನನನು ಬಲಿರಾಜನಿಂದ ಅಪಹೃತವಾಗಿದ್ದ ಸುರಸಂಪತ್ತನ್ನವ
ನಿಂದ ಕಸಿದು, ಕಾಶ್ಯಪರಾದ ಅದಿತೇಯರಿಗೆ ಕೊಡಬೇಕೆಂದು ನಿಶ್ಚಯಿಸಿದನು.
ಗುರ್ವನುಗ್ರಹದಿಂದ ನಿಗ್ರಹಿಸಲಾಗದೆ, ವಿಗ್ರಹವಿಲ್ಲದ ಪ್ರತಿಗ್ರಹಬಲದಿಂದ ದಿತಿಜರನ್ನು
ಪರಾಭವಿಸಲೆಣಿಸಿ, ಶ್ರೀ ವಾಮನನು ಬಲಿರಾಜನ ಯಜ್ಞವಾಟಕ್ಕೆ ದಯಮಾಡಿ
ಸಿದನು. ಬೃಹಸ್ಪತಿಯೇ ವಾಮನ ಮೂರ್ತಿಯನ್ನು ನರ್ಮದೆಯ ತೀರದ ಭೃಗುಕಚ್ಛ
ವೆಂಬ ಬಲಿರಾಜನ ಯಜ್ಞ ಪ್ರದೇಶಕ್ಕೆ ಕರೆತಂದನು.

ಮೌಂಜೀಬಂಧನನು, ದಾನವ ಜಯಸಂಧನು, ಯಜ್ಞೋಪವೀತಿಯು, ವಿಗತ
ಭೀತಿಯು ಛತ್ರದಂಡ ಕಮಂಡಲನು ತೇಜಃಪೂರಿತದಿಙ್ಮಂಡಲನು ವೃದ್ಧ

ನೀರದಾಭಿನವ ಶ್ಯಾಮಲನು, ಅಧ್ವರ್ಯುವೇಷಧರನು, ಮನೋಹರಗಾತ್ರನು, ಪುಂಡರೀಕಾಯತ ನೇತ್ರನು ಆದ ಶ್ರೀವಾಮನನು ಬಲಿರಾಜನ ಯಜ್ಞವಾಟಿಯನ್ನು ಪ್ರವೇಶಿಸಿದಾಗ ಸಹಸ್ರ ಸೂರ್ಯನೇ ಮೂರ್ತಿಧರನಾಗಿ ಬಂದಂತಾಯಿತು. ಯಜ್ಞಕರ್ತೃಗಳಾದ ಸದಸ್ಯರು ಸಂಭ್ರಾಂತರಾಗಿ ಎದ್ದು ಶಿರಬಾಗಿ ನಿಂತರು.

ವಾಮನನು ವಾಗಮೃತವಾಹಿನಿಯು ದಿತಿಜ ಪುರೋಹಿತರ ಪಾಪವನ್ನು ಮುಚ್ಚಿಸಿತು. ಶುಕ್ರರು ವಕ್ರಕರ್ಮರಾದರು. ಸಾಮಗರು ಸ್ವರಸಮಗತಿಯಿಂದ ಜಪಿಸಿದರು. ಹೋತನು ಭೀತನಾದನು. ಯಜಮಾನನು ಸಜಲಪಾತ್ರನಾಗಿ ಎದುರ್ಗೊಂಡು ಕರೆತಂದು, ಆಸನದಿ ಕೂಡಿಸಿ, ಯಥೋಚಿತ ಸತ್ಕಾರಗಳನ್ನಿತ್ತು ಪೂಜಿಸಿದನು. ಬಲಿರಾಜನು ಅತ್ಯಧಿಕ ಸಂಭ್ರಮಾನ್ವಿತನಾಗಿ ಕೈಜೋಡಿಸಿ ನಿಂತು, "ಯಾರಯ್ಯಾ ಮಹಾನುಭಾವ! ನೀನು? ಎಲ್ಲಿಂದ ಬಂದೆ? ಏಕೆ? ಯಾರು ನಿನ್ನ ತಂದೆ? ಪ್ರಿಯದರ್ಶನನಾದ ನಿನ್ನ ಪಾದಧೂಳಿಸ್ಪರ್ಶದಿಂದ ನನ್ನ ಯಜ್ಞಶಾಲೆ, ಮಂದಿರ, ದೇಹ ಪರಿವಾರವೆಲ್ಲವೂ ಪಾವನವಾಯಿತು. ನನ್ನ ಈ ಯಜ್ಞವಿಂದೇ ನಿನ್ನ ಆಗಮನದಿಂದ ಪೂರ್ಣವಾಯಿತು. ಬಾಲನಾಗಿಯೂ, ಜ್ಞಾನವಿಜ್ಞಾನಕೋವಿದನಾಗಿರುವೆ! ದೇವ ಋಷಿ ಗಂಧರ್ವಾದಿಗಳಲ್ಲಿ ನಿನ್ನಂತಹ ಮನೋಜ್ಞನನ್ನು, ನಾನು ಕಂಡಿಲ್ಲ. ಯಾರಾದರೇನು! ನಿನಗೆ ನನ್ನ ಸಹಸ್ರನಮಸ್ಕಾರಗಳು! ಏನಾಗಬೇಕೆನ್ನಿಂದ? ಏನನ್ನು ಕೊಟ್ಟರೆ ನೀನು ಪ್ರಸನ್ನನಾಗುವೆ? ಹೇಳು" ಎಂದನು.

ಬಲಿರಾಜನ ಮಹೋದಾರ ಮಧುರವಚನಗಳಿಂದ ಆನಂದಿತನಾದ ಅನಂತ ಮಹಿಮನು ನಸುನಕ್ಕು ದಿತಿಜ ಚಕ್ರವರ್ತಿಗಿಂತೆಂದನು.

"ರಾಜನ್! ನಿನ್ನ ಯಜ್ಞವು ಅಭೂತಪೂರ್ವವಾಗಿದೆ. ನನಗೆ ಬಲು ಸಂತಸವಾಗಿದೆ ನಿನ್ನ ಯಜ್ಞದಿಂದ ಮತ್ತು ನಿನ್ನ ಮಧುರವಚನದಿಂದ! ಹಿಂದೆ ಸುರೇಂದ್ರ! ಯಮರಾಜ ವರುಣರು ಮಾಡಿದ್ದ ಯಜ್ಞಗಳಂತೆ ಈ ನಿನ್ನ ಯಜ್ಞವೂ ಸರ್ವಾಂಗ ಸಂಪೂರ್ಣವಾಗಿದೆ. ನೂರನೇ ಅಶ್ವಮೇಧವಲ್ಲವೇ ಇದು! ಅಹುದು ದೇವಶ್ರೇಷ್ಠನು ಮಾರುತನಂತೆ! ಮನುಜ ಶ್ರೇಷ್ಠನು ಬ್ರಾಹ್ಮಣನಂತೆ ಸರ್ವಶ್ರೇಷ್ಠನು ವಿಷ್ಣುವಂತೆ ಅಂತೆಯೇ ಕ್ರತುಶ್ರೇಷ್ಠವು ಅಶ್ವಮೇಧವಾಗಿದೆ. ಇರಲಿ, ನಾನಾರೆಂದೆ? ನಾನಾರವನೂ ಅಲ್ಲ. ನನಗೆ ಹಿರಿಯರಾರೂ ಇಲ್ಲ. ನಾನು ಬಂದಿರುವುದು ನನಗಾಗಿಯೂ ಅಲ್ಲ. ಈಗ ನಾನು ಬೇಡುವುದು ಮೂರುಪಾದಗಳಿಂದ ಎತ್ತಿ ಅಳೆದುಕೊಂಬಲಾಗುವ, ಭೂಮಿಯನ್ನು ಕೊಡುವೆಯಾ?" ಎಂದು ಬೇಡಿದ ಶ್ರೀಶನಿಗೆ ಬಲಿರಾಜನು "ಮೂರೇಕೆ? ಮೂರು ಸಾವಿರವಾದರೂ ಕೊಡುವೆನು! ಸ್ವೀಕರಿಸು" ಎಂದನು.

ಆಗ ಶುಕ್ರಾಚಾರ್ಯನು ಓಡಿಬಂದು ಬಲಿರಾಜನನ್ನು ವಾರಿಸುತ್ತಾ ಇಂತೆಂದನು. "ರಾಜನ್! ಇವನಾರೆಂದು ತಿಳಿದೆ! ಭಗವಾನ್ ಸಾಕ್ಷಾತ್ ಶ್ರೀಹರಿಯೇ ಇಂತು

ವಾಮನನಾಗಿ ಬಂದಿರುವನು. ನೀಕೊಡುವ ಪಾದತ್ರಯ ಪರಿಮಿತ ಭೂಮಿ ಎಂದರೆ ಮೂರು ಲೋಕಗಳೆಂದು ತಿಳಿ! ತ್ರಿಪಾತ್ ಅಸ್ಯ ಅಮೃತಂದಿವಿ" ಎಂಬ ವೇದವಾಣಿಯನ್ನು ! ಮರೆತೆಯಾ ? ಕೊಡಬೇಡ ಈ ಕೆಡುದಾನವನ್ನು ಕೆಡಬೇಡ ಕೊಟ್ಟು ! ಕೇಳೆನ್ನ ಮಾತನ್ನು" ಆ ಮಾತನ್ನಾಲಿಸಿದ ಬಲಿರಾಜನಿಗೆ ಆನಂದವಾಯಿತು. "ಗುರುಗಳೇ! ಸರ್ವಲೋಕೇಶ್ವರನು ವಿಪ್ರರೂಪದಿಂದ ಬಂದು ಯಾಚಿಸುತ್ತಿರಲು, ಇಂತಹ ಸತ್ಪಾತ್ರನು ಅದೂ ನೂರನೇ ಅಶ್ವಮೇಧದ ಅವಭೃಥ ಪೂರ್ತಿಸಮಯದಲ್ಲಿ, ಪುಣ್ಯಾಕರವಾದ ಭೃಗುಕಚ್ಛಕ್ಷೇತ್ರದಲ್ಲಿ ದಾನವಾಗಿ ಸರ್ವಸ್ವವನ್ನಿತ್ತು ಸರ್ವೇಶನ ಪ್ರೀತಿಯನ್ನು ಸಂಪಾದಿಸುವ ಸದವಕಾಶ ನನಗೆ ತಾನಾಗಿ ಶ್ರೀಶಕೃಪೆಯಿಂದ ಬಂದಿದೆ, ಪಾಪಿ ದಿತಿಜಸುತನಾದ ನನ್ನಂತಹಪಾಮರನಿಗೆ ತಾವು ನಿತ್ಯವೂ ಹವಿರ್ಭಾಗಗಳಿಂದ ತಣಿಸಲು ಹವಣಿಸುವ ಶ್ರೀರಮಾರಮಣನು ಪುಣ್ಯವನ್ನೀಯಲೆಣಿಸಿ ಬಂದಾಗ ಕೊಟ್ಟ ಮಾತಿಗೆ ತಪ್ಪಿ, ತಾತ ಪ್ರಹ್ಲಾದನ ಅಪ್ರೀತಿಗೆ ಕಾರಣನಾಗುವುದು ಉಚಿತವೇ? ನೀವೇಯೋಚಿಸಿ ಹೇಳಿ!" ಎಂದು ಗುರುಶಾಪವನ್ನೂ ಲೆಕ್ಕಿಸದೆ ಮೂರುಪಾದಗಳ ಭೂಮಿಯನ್ನು ಧಾರಾಪೂರ್ವಕವಾಗಿ ದಾನಮಾಡಿದನು.

|| 17 ಶ್ರೀವಾಮನ ತ್ರಿವಿಕ್ರಮಂ||

ಶ್ರೀವೈಶಂಪಾಯನನು ಜನಮೇಜಯನಿಗೆ ನಿರೂಪಿಸಿದನು "ರಾಜನ್ ! ದಾನವನ್ನಿತ್ತ ಬಲಿರಾಜನದಾರ್ಢ್ಯವನ್ನು ದೇವದೇವನರಿತಿದ್ದರೂ, ಬಲಿ ತಾತನಾದ ಪ್ರಹ್ಲಾದನು ಮೊಮ್ಮಗನ ಮನಸ್ಸನ್ನು ಮಾಧವನಿಗರ್ಪಿಸಲೆಂದು ಪರೀಕ್ಷಿಸುತ್ತಾ ಇಂತು ನುಡಿದನು.

"ವತ್ಸ ! ಬಲಿ ! ಕೇಳಿಲ್ಲಿ ! ದಾನವನ್ನೇನೋ ಕೊಟ್ಟೆ ! ಇವನು ನರಸಿಂಹನು. ಈಗ ವಾಮನನಾಗಿ ದಾನಪಡೆದಿರುವನು, ಮುಂದೆತ್ರಿವಿಕ್ರಮನೂ ಆಗಿ ನಿನ್ನಐಶ್ವರ್ಯವನ್ನೆಲ್ಲಾ ಕಸಿದು ದೇವೇಂದ್ರನಿಗೀಯುವನು. ಈ ದಾನದಿಂದ ನೀನು ಕೆಡುವುದಲ್ಲದೇ ದೈತ್ಯರನ್ನೆಲ್ಲ ಕೆಡಿಸಿದೆ!"ಬಂದ ತಾತನ ಮಾತಿಗೆ ಬಲಿರಾಜನು "ತಾತ! ಕೊಟ್ಟಮಾತಿಗೆ ತಪ್ಪುವಪಾಪಿಯು ನರಕಗಳಲ್ಲಿ ಬೀಳುವನು. ಇದು ನಿನಗೂ ಗೊತ್ತು! ಏನಾದರಾಗಲಿ ಉತ್ತಮಪಾತ್ರನಿಗೆ ಸರ್ವಸ್ವವನ್ನೀಯುವೆನು !" ಎಂದು ದಾನಧಾರೆಯನ್ನು ಶ್ರೀವಾಮನನ ಕರಕಮಲಗಳಲ್ಲಿ ಬಿಟ್ಟನು.

ತತ್‌ಕ್ಷಣವೇ ವಾಮನನು ಅವಾಮನನಾದನು. ತ್ರಿವಿಕ್ರಮನಾಗಿ ಮೂರು ಕ್ರಮ (ಪಾದವಿಕ್ಷೇಪ)ಗಳಿಂದ ಮೂರ್ಲೋಕಗಳನ್ನೂ ಆಕ್ರಮಿಸಿ ನಿಂತನು. ದ್ಯುಲೋಕವು ಶಿರವಾಗಿ, ಚಂದ್ರಾದಿತ್ಯರು ನೇತ್ರಗಳಾಗಿ, ತಟಿಲ್ಲತೆಗಳೇ ದೃಷ್ಟಿಯಾಗಿ, ಮೇಘಗಳೇ ಕೇಶಗಳಾಗಿ, ದಿಕ್ಕುಗಳು ಶ್ರೋತ್ರಗಳಾಗಿ, ಅಶ್ವಿನಿಗಳು ನಾನಾ ರಂಧ್ರಗಳಾಗಿ ಮುಖ್ಯವಾಯುವೇ ಪ್ರಾಣವಾಗಿ, ಮಹಾದೇವನೇ ಮನಸ್ಸಾಗಿ, ಅಗ್ನಿಯೇ ಮುಖವಾಗಿ, ಇಂದ್ರಾದಿಲೋಕಪಾಲರೇ ಬಾಹುಗಳಾಗಿ, ನಿಂತಿರಲು ತದ್ಭಿನ್ನನೂ ತನ್ನಾಮಪ್ರದನು ತತ್ಪರಿಪಾಲಕನು ಆದ ಶ್ರೀತ್ರಿವಿಕ್ರಮನನ್ನು ನೋಡಿಸಕಲ ದೇವದಾನವಮಾನವರೂ ಬೆರಗಾಗಿನಿಂತರು.

[illegible]

[illegible]

[illegible]

[illegible]

[illegible]

ವಿಲ್ಲದಹವಿಸ್ಸು ! ಇವುಗಳಿಂದ ಬರುವ ಫಲವು ನಿನ್ನದಾಗಲಿ ! ದೈತ್ಯಶತ್ರುವು ! ಹೇಳಿ ಕೊಂಡ ಪುಣ್ಯ, ಮಾಡಿಕೊಂಡಯಜ್ಞ ತಪೋಃಸ್ತೋತ್ರಾದಿಗಳು, ಇವೂ ನಿನಗೇ ಸೇರು ವವು !" ಎಂದನು.

ಶ್ರೀಶನಾಜ್ಞೆಯಂತೆ ನಾಗ ಬಂಧಗಳಿಂದ ಗರುಡನು ಬಲಿರಾಜನನ್ನು ಬಂಧಿಸಿ ದ್ದನು. ನಾರದದಿಂದ ಉಪದಿಷ್ಟವಾದ "ಮೋಕ್ಷವಿಂಶತಿ" ಎಂಬ ಸ್ತುತಿಯನ್ನು ಪಠಿಸಿ ಬಲಿರಾಜನು, ಕಂಬಲಾಶ್ವತರಾದಿ ನಾಗರಬಂಧದಿಂದ ಮುಕ್ತನಾದನು ಶ್ರೀಶನಾಜ್ಞೆಯನ್ನು ಶಿರಸಾವಹಿಸಿ ಬಲಿಯು ಪ್ರಹ್ಲಾದನಿಂದ ಕೂಡಿ ಸುತಲವನ್ನು ಸೇರಿದನು

ಶ್ರೀ ಹರಿಯು ಸ್ವರ್ಗದ ಪೂರ್ವ ಭಾಗವನ್ನು ಮಹೇಂದ್ರನಿಗೂ, ದಕ್ಷಿಣ ಭಾಗ ವನ್ನು ಯಮರಾಜನಿಗೂ, ಪಶ್ಚಿಮವನ್ನು ವರುಣನಿಗೂ, ಉತ್ತರವನ್ನು ಕುಬೇರ ನಿಗೂ ಕೊಟ್ಟು, ಮೂಲೆಗಳನ್ನು ಅಗ್ನಿ ನಿರೃತಿ ವಾಯು ಶಿವರಿಗಿತ್ತು, ಮಿಕ್ಕೆಲ್ಲದಿಶಾ ಭಾಗವನ್ನೂ ಚಂದ್ರನಿಗೆ ಕೊಟ್ಟನು. ಇಂತು ತನ್ನ ಅವತಾರ ಪ್ರಯೋಜನವನ್ನು ಅವಲೀಲೆಯಿಂದ ಸಾಧಿಸಿ, ಶ್ರೀ ಹರಿಯು ಅದಿತ ಕಶ್ಯಪರಿಗೆ ಆನಂದವನ್ನು ತಂದನು. ಶತಕ್ರತುವಿನನ್ನು ಅನುಸರಿಸಿ ದೇವತೆಗಳೆಲ್ಲರೂ ಮತ್ತೆ ತಂತಮ್ಮಹವಿರ್ಭಾಗಾದಿಗಳ ನ್ನೂ ಹೊಂದಿ, ಆನಂದದಿಂದ ತ್ರಿವಿಕ್ರಮನ ವಿಕ್ರಮವನ್ನು ಪಾಡಿ ಪೊಗಳಿದರು.

ಈಗ ನಿನಗೆ ಮೋಕ್ಷವಿಂಶತಿಯನ್ನು ವರ್ಣಿಸುವೇನು ! ಕೇಳು !

"ಓಂ ನಮೋಭಗವತೇ ವಾಸುದೇವಾಯ ಓಂ || ಅನಂತ, ಅಕ್ಷಯ, ಮಹಾತ್ಮ, ಜಲೇಶಯ, ಪದ್ಮನಾಭ, ಕಾಲಕಾಲ ! ಪ್ರಳಯದಲ್ಲಿ ನೀನೋರ್ವನೇ ಸ್ವತಂತ್ರನಾಗಿ ವಿರಾಜಿಸುವೆ ! ಈ ಸತ್ಯ ವಚನದ ಬಲದಿಂದ ನನಗೆ ಬಂಧ ವಿಮೋಚನವಾಗಲಿ ! ಬ್ರಹ್ಮರುದ್ರೇಂದ್ರವಾಯು ವಹ್ನಿ ಮರುದಾದಿಗಳೂ, ಜಲ ಸ್ಥಲ ಗಗನ ಚರಗಳೂ, ಸರಿತ್ಸಮುದ್ರಗಿರಿ ದುರ್ಗಗಳೂ ನಿನ್ನ ನ್ನಾಶ್ರಯಿಸಿ ನಿಂತಿವೆ ಎಂಬ ಸತ್ಯವೇ ನನಗೆ ಮೋಚಕವಾಗಲಿ ! ನೀನೇ ಸರ್ವೋತ್ತಮನು, ನೀನೇ ಸರ್ವ ವಿಲಕ್ಷಣನು, ನೀನೇ ಸರ್ವಾಂತರ್ಯಾಮಿಯು, ನೀನೇ ಜಗಜ್ಜನ್ಮಸ್ಥಿಯ ಪ್ರಳಯರಚನಾ ಶೀಲನು, ನೀನೇ ಲೀಲಾಲೋಲನು, ನೀನೇ ವರಾಹಾದಿರೂಪಗಳಿಂದ ಧರ್ಮವನ್ನುಳಿಸಲು ದುಷ್ಟ ಶಿಕ್ಷಾ ಶಿಷ್ಟ ರಕ್ಷಣಗಳನ್ನು ಮಾಡುವ ಪ್ರಭುವು, ಈ ಒಂದೊಂದು ಸತ್ಯವೂ ನನಗೆ ಬಂಧ ಮೋಚಕವಾಗಲಿ ! ಯಜ್ಞವನ್ನು ರಕ್ಷಿಸುವೆ ಯಜ್ಞವರಾಹನಾಗಿ ! ಪಿತೃಗಳನ್ನು ಪಾಲಿಸುವೆ ಧರ್ಮರಾಜನಲ್ಲಿ ಧರ್ಮರೂಪನಾಗಿ ! ಹಿರಣ್ಯಾಕ್ಷ ಸಂಹಾರಕನಾಗಿ ಭೂಮಿ ಯನ್ನುದ್ಧರಿಸಿದೆ ! ಲೀಲೆಯಿಂದ ಹಿರಣ್ಯ ಕಶಿಪುವನ್ನು ಕೊಂದೆ ! ಪ್ರಹ್ಲಾದನನ್ನು ಸಲಹಿದೆ ! ಹಯ ಶಿರನಾಗಿ ಮಧು ಕೈಟಭರನ್ನು ವಧಿಸಿ, ವೇಧನಿಗೆ ವಿಧಿಗಳನ್ನು ತಂದಿತ್ತೆ ! ದೇವಾದಾನವಗಂಧರ್ವಮುನಿ ಮಾನವರಾರೂ ನಿನ್ನ ಮಹಿಮೆಯನ್ನು

ಶಾಕಲ್ಯೇನ ತಿಳಿಯಲಾರರು, ಅವಾಂತರತಮನೆನಿಸಿ ವೇದಗಳನ್ನು ವಿಭಜಿಸಿ, ವೇದಾರ್ಥಗಳನ್ನು ಸುಜನರಿಗೆ ವಿವರಿಸಿದೆ ! ವ್ಯಾಸದೇವ ! ಈ ಎಲ್ಲ ಸತ್ಯಗಳಿಂದ ನನಗೆ ಬಂಧವಿಮುಕ್ತಿಯೂ, ಭವಬಂಧ ವಿಮುಕ್ತಿಯೂ ಆಗಲಿ ! ಆಗುವಂತೆ ಅನುಗ್ರಹಿಸು ನಿನಗೆ ನಮೋ ನಮಃ ! ಗುರುಶಾಪದಿಂದ ಜಾತ್ಯಂಧನಾಗಿದ್ದ ದೀರ್ಘತಮನೆಂಬ ಮುನಿವರನು ನಿನ್ನ ದಯದಿಂದ ಉಭಯ ನೇತ್ರನಾದನು. ಗಜೇಂದ್ರವರದ ! ಬ್ರಹ್ಮಣ್ಯ ದೇವ ! ಬ್ರಾಹ್ಮಣ ಪ್ರಿಯ ! ಈ ಸತ್ಯವಚನಗಳಿಂದ ನಾನು ರಕ್ಷಿತನಾಗುವೆನು, ನಿನ್ನ ವಾಹನನಾದ ಗರುಡ, ಆಯುಧಗಳಾದ ಶಂಖ ಚಕ್ರ ಗದಾ ಖಡ್ಗಗಳು, ನನ್ನಿಂದ ನಮಸ್ಕೃತರಾಗಿ, ಪ್ರಸನ್ನರಾಗಲಿ !" ಇಂತು ನುತಿಸಿದ ಬಲಿರಾಜನ ಸ್ತುತಿಯಿಂದ ಪ್ರೀತನಾದ ವಾಮನರೂಪೀ ಶ್ರೀ ಹರಿಯು ಗರುಡನಿಂದ ಅವನ ನಾಗ ಪಾಶಗಳನ್ನು ಬಿಡಿಸಿ, ಸಲಹಿದನು. ಈ ಸ್ತುತಿಯನ್ನು ಭಕ್ತಿಯಿಂದ ಪಠಿಸಿದವರು, ಮತ್ತು ಕೇಳಿದವರು ಕೂಡ ಸರ್ವಪಾಪ ಮುಕ್ತರಾಗಿ, ವಿಮುಕ್ತರಾಗುವರು.

ಇಂತು ಶ್ರೀ ವಾಮನ ವೈಭವವನ್ನು ನಿನಗೆ ವರ್ಣಿಸಿದೆನು ರಾಜನ್ ! ಇದನ್ನು ಓದಿ, ಕೇಳಿ, ಭಕ್ತಿಯಿಂದ ಮನನ ಧ್ಯಾನಗಳನ್ನು ಮಾಡಿದ ಸುಜನರು ಶ್ರೀ ವಾಮನ ಮೂರ್ತಿಯದಿವ್ಯ ಕರುಣೆಗೆ ಪಾತ್ರರಾಗಿ ಆರೋಗ್ಯ, ಭಾಗ್ಯ, ವೈರಾಗ್ಯಗಳನ್ನು ಪೊಂದಿಸುಖಿಸುವರು.

○

18 ಶ್ರೀ ರುಕ್ಮಿಣೀ ಕೃಷ್ಣದೇವರ ಕೈಲಾಸ ಯಾತ್ರೆ

ಶ್ರೀ ಜನಮೇಜಯನು "ಮಹರ್ಷೀ ವೈಶಂಪಾಯನ ! ಶ್ರೀ ಕೇಶವನು ಶಿವನನ್ನು ಕುರಿತು ತಪವನ್ನು ಮಾಡಿ ಪುತ್ರನನ್ನು ಪಡೆದನೆಂದು ಕೇಳಿರುವೆನು. ಸರ್ವದೇವವಂದಿತ ಚರಣಾರವಿಂದನಾದ ಗೋವಿಂದನು ಇನ್ನೊಬ್ಬ ದೇವನಿಗೆ ವಂದಿಸಿ ನುತಿಸಿ ತಪಗೈದು ಮೆಚ್ಚಿಸಿದನೆಂದರೆ ನಂಬಲುಬಾರದಂತಿದೆ ! ಶ್ರೀ ರಮಣನು ಬೇರೆಯವರಿಂದ ವರಗಳನ್ನು ಬೇಡುವುದೆಂದರೇನು ? ಆತನು ಮೊಮ್ಮಗನನ್ನು ಯಾಚಿಸಿದ ವಿಚಿತ್ರ ವೃತ್ತಾಂತವು ಮನಮೋಹಕವಾಗಿದೆ. ದಯಮಾಡಿ ಅದನ್ನು ನನಗೆ ವಿವರಿಸಿ" ಎಂದು ಪ್ರಶ್ನಿಸಲು, ಸುರೇಶನಿಗೆ ವಂದಿಸಿ, ಸುರುಗುರು ಸಮನಾದ ವೈಶಂಪಾಯನನಿಂತೆಂದನು.

"ಶ್ರೀ ಕೃಷ್ಣನು ಶ್ರೀ ರುಕ್ಮಿಣೀ ದೇವಿಯಿಂದ ಕೂಡಿ ಕೈಲಾಸಗಿರಿಯನ್ನು ಸೇರಿ, ತಪಗೈದು, ನಂದನನನ್ನು ತಂದ ಸುಂದರ ಕಥೆಯನ್ನು ನನಮತಿಗೆ ತೋರಿದಷ್ಟು ಶ್ರೀ ವ್ಯಾಸದೇವರದಯದಿಂದ ನಿನಗೆ ವರ್ಣಿಸುವೆನು. ಶ್ರದ್ಧೆಯಿಂದ ಕೇಳು.

ನರಕಾಂತಕನು ದ್ವಾರಕಾನಗರದಲ್ಲಿ ಸುಖವಾಗಿದ್ದು, ಒಂದು ದಿನ ಶ್ರೀ ರುಕ್ಮಿಣಿಯು ಅಂತಃಪುರದಲ್ಲಿ ಆಕೆಯನ್ನು ತನ್ನ ವಿನೋದವಚನಗಳಿಂದ ಸಂತಸಪಡುತ್ತಿದ್ದನು. ದೇವಿಯು ದೈವಸತ್ಪುರುಷನಾದ ದೇವನನ್ನು ನೋಡಿ 'ನಾಥ! ಇಷ್ಟು ವರ್ಷಗಳಾದರೂ ನನಗೆ ಸಂತಾನವಾಗಲಿಲ್ಲ. ಸರ್ವರಿಗೂ ವರಪ್ರದಾನದ ನಿನ್ನಿಂದ ಪುತ್ರವರವನ್ನು ಬೇಡುತ್ತಿರುವೆನು. ಬಲರೂಪ ಗುಣಾನ್ವಿತನು, ವೃಷ್ಣಿ ವಂಶವರ್ಧನನು, ಶತ್ರುಜನಮರ್ದನನು ಆದ ಮಗನು ನನಗಾಗುವಂತೆ ಕರುಣಿಸು!" ಎಂದು ಪ್ರಾರ್ಥಿಸಿದಳು.

ಹೃದಯಂಗಮನಾದ ದಯಿತೆಯ ಮಾತಿಗೆ ಮನಸೋತು ಮಾಧವನು ಮಾನಿನಿಗೆಂತೆಂದನು. ಪ್ರಿಯೇ! 'ಪುತ್ರೇಣಲೋಕಾನ್ ಜಯತಿ ಎಂದು ವೇದವಚನವಿದೆ. ಪುತ್ ಎಂದರೆ ನರಕವು! ಅದರಿಂದ ರಕ್ಷಿಸುವನು ಸುಪುತ್ರನೆನಿಸುವನು. ಕುಪುತ್ರನಾದರೆ ನಾರಕಾದಿ ದುಃಖಕಾರಣನಾಗುವನು. ಪತಿರೇವ ಜಾಯಾಯಾಂ ಭವತಿ ಪತಿಯ ಒಂದಂಶವೇ ರೇತೋಧಾ ಎನಿಸುವ ಅವನಿಂದ ಜಾಯಾ=ಜನ್ಮವನ್ನೀವ ತಾಯಿಯಲ್ಲಿ ಬಂದು ಹತ್ತು ತಿಂಗಳಾದ ಮೇಲೆ ಮಗನೆಂಬ ರೂಪದಿಂದ ಹೊರಬಂದು ವಂಶವರ್ಧಕನಾಗುತ್ತಾನೆಂದು ಆತ್ಮಾವೈಪುತ್ರನಾಮಾಸಿ ಎಂಬ ಶ್ರುತವಚನಗಳು ಸಾರುತ್ತಿವೆ, ವಿದ್ಯಾವಿನಯಯುಕ್ತನು, ಮಾತಾ ಪಿತೃಜನಾನುರಕ್ತನು, ಧರ್ಮಪಾಲನ ಶಕ್ತನು ಆದ ಪುತ್ರನು ನಿನಗಾಗುವನು. ಅದಕ್ಕಾಗಿ ನಾವೀರ್ವರು ಕೈಲಾಸಗಿರಿಯನ್ನು ಸೇರಿ ತೀವ್ರತಪಗೈದು ಶಂಕರನಿಂದ ಪುತ್ರನನ್ನು ಬೇಡಿ ಪಡೆದು ಬರುವುದು ಈಗಲೋಕವಿದಿತ ಕರ್ತವ್ಯವೆನಿಸಿದೆ. ಬದರಿಕಾಶ್ರಮ, ಕೈಲಾಸಗಿರಿ ಮಾನಸಸರ. ಅಲಕಾನಗರಗಳನ್ನು ನೋಡಿ ಆನಂದಿಸಿದಂತೆಯೂ ಆಗುತ್ತೆ. ನಾಳೆಯೇ ನಮ್ಮ ಕೈಲಾಸಗಿರಿ ಯಾತ್ರೆಯು ಎಂದು ಆಕೆಯನ್ನು ಸಂತೈಸಿದನು.

ಮರುದಿನ ಬೆಳಗಾಯಿತು. ಶ್ರೀನಿವಾಸನು ಮಂಗಳಸ್ನಾನವನ್ನು ಮಾಡಿದನು. ಶ್ರೀದೇವಿಯಿಂದ ಕೂಡಿ ಸಂಧ್ಯಾ ಪೂಜಾಹೋಮಾದಿ ಪ್ರಾತಃಕೃತ್ಯಗಳನ್ನು ನಡೆಸಿದನು. ಭೂದೇವರಿಗೆ ಗೋವಸ್ತ್ರ ಕಾಂಚನಗಳನ್ನು ದಾನವಾಗಿತ್ತನು. ತಾನು ಯಾದವ ಪುಂಗವರಿಂದ ಅಪ್ಪಣೆ ಪಡೆಯಲೆಂದು ಆಸ್ಥಾನ ಮಂಟಪವನ್ನು ಪ್ರವೇಶಿದನು. ಉಚಿತ ಸತ್ಕಾರಗಳಾದನಂತರ ಬಲಭದ್ರ ಸಾತ್ಯಕಿ ಕೃತವರ್ಮರನ್ನು ನೋಡಿ ಉದ್ಧವನಿಗೆ ಸತ್ಕಾರವನ್ನು ಮಾಡಿ ಎಲ್ಲರು ಕೇಳುತ್ತಿರಲು ಅವರಿಗಿಂತೆಂದನು.

"ಬಲಭದ್ರ ಅಣ್ಣ! ಸಂತಾನಾಕಾಂಕ್ಷಿಯಾಗಿ ಶಂಕರನನ್ನು ಸೇವಿಸಬೇಕೆಂದಿದೆ! ಅಂತಹ ಸದಾಚಾರವನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯವೆನಿಸಿದೆ! ಆದುದರಿಂದ ರುಕ್ಮಿಣೀ ಸಮೇತನಾಗಿ ಶಂಕರ ನಿಕೇತವಾದ ಕೈಲಾಸಗಿರಿಗೆಂದು ಹೊರಡಲಿರುವೆನು! ನಮ್ಮನ್ನು ಆಶೀರ್ವದಿಸಿ ಕಳಿಸು! ನಾನಿಲ್ಲದಿದ್ದಾಗ ಪೌಂಡ್ರಕನು ನಮ್ಮವರನ್ನೂ ನಗರ

ವನ್ನೂ ಪೀಡಿಸಲು ಬರಬಹುದು. ಅಂತಹ ಸಮಯವನ್ನು ನಿರೀಕ್ಷಿಸಿ, ಆ ದೈತ್ಯಾಧಮನು ದಂಡೆತ್ತಿಬಂದಾಗ ನೀನು ಅವನನ್ನು ದಂಡಿಸಿ, ನಗರವನ್ನು ಕಾಪಾಡಬೇಕು. ಸಾನಂದ ಹಸ್ತನಾದ ನಿನ್ನಮುಂದೆ ದೇವತೆಗಳೂ ರಣಕಣದಲ್ಲಿ ನಿಲ್ಲಲಾರರು. ಸಾತ್ಯಕೀ, ದೇವಾಸುರರನ್ನೂ ಅವರು ತಾವಾಗಿ ಎದುರಿಸಿದಾಗ ಗೆದ್ದು ಓಡಿಸುವ ಪರಾಕ್ರಮವು ನಿನಗಿದೆ. ಕೇಡುಬಗೆವ ಕೂಳರನ್ನು ಕದನದಿ ಕಡಿದಾಡಿ ಯದು ಭೂಮಿಯನು ರಕ್ಷಿಸು! ಕೃತವರ್ಮ ! ನೀನೂ ಸಾಮಾನ್ಯನಲ್ಲ. ಮೂರನೆಯ ಕಣ್ಣಿಲ್ಲದ ಪುರಹರನಂತೆ ಸಲೆರೇಗಿ ಶತ್ರುನಿರ್ಮೂಲನವನ್ನು ಸಾಧಿಸುವವನಿಗೆ ಸ್ವಜನರಕ್ಷಣವು ದುಷ್ಕರವೇನೂ ಅಲ್ಲ. ಇನ್ನು ಉದ್ಧವ! ನಿನಗೆ ನಾ ಹೇಳುವಂತಹ ಪ್ರಮೇಯವಿಲ್ಲ. ಬೃಹಸ್ಪತಿಯ ಶಿಷ್ಯನೂ, ಆತನಂತೆ ಬುದ್ಧಿವಂತನೂ ಆದ ನಿನ್ನ ಯುಕ್ತಿ, ನೀತಿ, ಚಾತುರ್ಯಗಳಿಂದ ಸಕಲ ಸುಹೃಜ್ಜನರ ಮಾನಪ್ರಾಣಗಳನ್ನು ಉಳಿಸಿ, ಶತ್ರುಜನರನ್ನು ಅಳಿಸು!

ನಾನೂ ಸುಜನ ರಕ್ಷಣೆ, ಕುಜನ ಶಿಕ್ಷಣೆ, ಧರ್ಮಸ್ಥಾಪನೆಗಳೇ ಗುರಿಯಾಗಿಟ್ಟುಕೊಂಡು ಅವತರಿಸಿದ! ದೇವಸುಜನ ಪ್ರಯೋಜನಗಳನ್ನು ಸಾಧಿಸಿರುವೆನು. ಹುಟ್ಟಿದಂದಿನಿಂದ ಕೆಟ್ಟವರನ್ನು ಮಟ್ಟಕ್ಕಿ ನಿಮ್ಮಗಳೆಲ್ಲರ ಹಿತವನ್ನು ಸಂಪಾದಿಸಿದೆನು. ನಿಮಗೆ ತಿಳಿಯದುದೇನಿದೆ. ನೀವೆಲ್ಲರೂ ಬಲ್ಲವರೇ ಆಗಿರುವಿರಿ! ಆದರೂ ವಿಜ್ಞಾಪಿಸುತ್ತಿರುವೆನು. ನನ್ನ ಮಾತನ್ನಾಲಿಸಿ, ಲಾಲಿಸಿರಿ ! ಪೂತನೆಯನ್ನು ಘಾತಿಸಿದೆನು. ತೃಣಾವರ್ತನನ್ನು ತೃಣೀಕರಿಸಿದೆನು. ಶಕಟವನ್ನು ವಿಕಟಗೊಳಿಸಿದೆನು ಬಕನನ್ನು ಸೀಳಿದೆನು. ಕಾಳಿಯನನ್ನು ದೂರಸರಿಸಿ ಯಮುನೆಯನ್ನು ಶುದ್ಧಗೊಳಿಸಿದೆನು. ಧೇನುಕ ಪ್ರಲಂಬ ಶಂಖಚೂಡ ಶತಧನ್ವ ಕೇಶಿ ಅರಿಷ್ಟ ಚಾಣೂರಮುಷ್ಟಿಕರುಕೊನೆಗೆ ಕಂಸ–ಇಂತಹಪಾಪಿಗಳನ್ನು ಕಾಲಿಂದ ಸವರಿ ಕಾಲನ ಮನೆಗೆ ಕಳಿಸಿದೆನು. ಆ ಯಾದವನಾದರೂ ಯಾದವರಾಜನಾಗಿ, ರಾಜನಾದ ಉಗ್ರಸೇನನನ್ನು ತಂದೆಯೆನ್ನದೆ ಸೆರೆಯಲ್ಲಿಟ್ಟ ಕಂಸನನ್ನು ನೆನೆಸಿದಾಗ, ನಿಮಗೀಗಲೂ ಭಯವಾಗುವಂತಿದೆ ಅಲ್ಲವೆ. ಅಂತಹ ದುಷ್ಟನನ್ನು ಕೊಂದು ಅವನ ಮಾವನಾದ ಜರಾಸಂಧನನ್ನು ನನ್ನ ಪ್ರಿಯ ಭೀಮಸೇನನಿಂದ ಕೊಲ್ಲಿಸಿ, ಬಲಿಯಾಗಲಿರುವ ಸಾವಿರಾರು ರಾಜನ್ಯರನ್ನು ಉಳಿಸಿ, ಅವರವರ ಊರುಗಳಿಗೆ ಕಳಿಸಿದೆನು. ಪ್ರಜಾಪೀಡಕನಾದ ಸೃಗಾಲನನ್ನು ಅಣ್ಣನೆಂದು ನೋಡದೆ ರಣರಂಗದಲ್ಲಿ ಸೃಗಾಲಾದಿಶ್ವಾಪದಗಳಿಗೆ ತುತ್ತಾಗಿಸಿದೆನು. ಇದೆಲ್ಲವೂ ನಿಮ್ಮಹಿತಕ್ಕಾಗಿ ಹೆಗ್ಗಳಿಕೆಗಾಗಿ ಹೇಳಿಕೊಂಬುವ ಅಗತ್ಯವೆನಗಿಲ್ಲ. ನನ್ನ ಕರ್ತವ್ಯವನ್ನು ಮಾಡಿದೆನಿದು ನಿಜ !

ಅಂತೆಯೇ ಸಂತಾನಾರ್ಥಿನಿಯಾದಕಾಂತೆಯ ಕೋರಿಕೆಯನ್ನೂ ಸಲ್ಲಿಸಬೇಕಲ್ಲವೇ ಶಂಕರನು ಭಕ್ತಕಿಂಕರನು. ಆತನೂ ನಮ್ಮಾರ್ಗದರ್ಶನವಾಗಬೇಕೆಂದು ಹಂಬಲಿಸುತ್ತಿರುವನು. ಆದುದರಿಂದ ಇಂದೇ ಕೈಲಾಸ ಗಿರಿಗೆಂದು ಹೊರಟಿರುವೆನು. ಇಂದುಧರನ ಕೃಪೆಯಿಂದ ಮತ್ತೆ ಮನ್ಮಥನು ನಮ್ಮ ಮಗನಾಗಿ ಜನಿಸಲಿ! ಅನಂಗನುನಾಂಗ

ನಾಗಲಿ! ನಮ್ಮನ್ನು ಆಶೀರ್ವದಿಸಿ ಬೀಳ್ಕೊಡಿರಿ! ಹಿರಿಯರು ಜಯವಾಗಲೆಂದು ಹರಸಿರಿ! ಎಂದು ನುಡಿದನು.

ಪೌಂಡ್ರಕನು ವಸುದೇವನವಂಗನೇ ಅವನು ಕಾಶಿರಾಜ ದುಹಿತೆಯಾದ ಗಾಂದಿನಿಯಲ್ಲಿ ಹುಟ್ಟಿ, ಮಾತಾಮಹನಿಗೆ ಮಗನಂತಾಗಿ ವಾರಣಾಸಿಯಲ್ಲಿ ರಾಜ್ಯವಾಳುತ್ತಿದ್ದನು. ಕೃಷ್ಣಜನನಿಯಾದ ದೇವಕಿಯನ್ನು ಮದುವೆಯಾದಂದಿನಿಂದ, ತಂದೆಯು ತನ್ನ ತಾಯಿಯನ್ನು ನೋಡಲು ಬಂದಿಲ್ಲವೆಂಬ ಅಸೂಯೆ ನರಕಜರಾಸಂಧರನ್ನು ನಾಶಪಡಿಸಿದನೆಂಬ ಸಿಟ್ಟು, ತಾನೇ ವೇದಪ್ರತಿಪಾದ್ಯನಾದ ಪರಬ್ರಹ್ಮವಾಸುದೇವನೆಂಬ ಭ್ರಮೆ ಮೂರೂ ಕಲೆತು ಪೌಂಡ್ರಕನು ನಿಷ್ಕಾರಣ ವೈರವನ್ನು ಶ್ರೀಕೃಷ್ಣನಲ್ಲಿಯೂ, ಅವನ ಅನುಚರರಲ್ಲಿಯೂ ಮಾಡಿ, ದ್ವಾರಕಾ ನಗರವನ್ನು ಮುತ್ತಲು ಹವಣಿಸುತ್ತಿರುವನೆಂದು ಎಲ್ಲ ಯಾದವರೂ ಅರಿತಿದ್ದರು.

ಅಂತೆಯೇ ಸಾತ್ಯಕಿಯು ಶ್ರೀಕೃಷ್ಣನ ವಚನಗಳನ್ನಾಲಿಸಿ, ಸ್ವಾಮಿಗಿಂತೆಂದನು "ದೇವ ದೇವ ! ನಿನ್ನ ಮಾತನ್ನು ಅಕ್ಷರಶಃ ಪಾಲಿಸುವೆವು. ನೀನು ಆಲೋಚಿಸುವ ಅಗತ್ಯವಿಲ್ಲ ನೀನು ಬರುವವರೆವಿಗೂ ನಮ್ಮ ಸರ್ವಶಕ್ತಿಗಳನ್ನು ಉಪಯೋಗಿಸಿ, ಪುರವನ್ನೂ, ಪುರಜನರನ್ನೂ ರಕ್ಷಿಸುವೆವು ಪೌಂಡ್ರಕನೇತಕಲಿ ! ಮೂರ್ಜಗದ ದಾನವ ಮಾನವರಾಗಲಿ ! ಹೆದರದೆನಿಂತು ಕಾದುವೆವು. ಬಲದೇವನ ಮುಸಲ ಹಲಾಯುಧಗಳಿವೆ ! ಉದ್ಧವನ ಬುದ್ಧಿ ಬಲವಿದೆ. ನೀನು ನಿಶ್ಚಿಂತನಾಗಿ ಹೋಗಿ ಬಾ ! ಎಂದು ಬಿನ್ನವಿಸಿದನು.

ಉದ್ಧವನೂ "ಏನಿದು ಪ್ರಭೋ ! ನನ್ನ ಬುದ್ಧಿಯ ಶಕ್ತಿಯನ್ನು ನೀನು ಹೊಗಳಬೇಕೇ ? ನೀನಿತ್ತ ಬುದ್ಧಿ ವೈಶದ್ಯವನ್ನು ನಿನ್ನ ಸೇವೆಗೆಂದು ಸಮರ್ಪಿಸಲು ಸಿದ್ಧನಿರುವ ಈ ನಿನ್ನ ದಾಸನು ಸಾವಿರಗಣ್ಣಿನ ಇಂದ್ರನಂತೆ ನಿನ್ನವರನ್ನು ಎಲ್ಲ ಶತ್ರುಗಳ ಕುಯುಕ್ತಿಗಳಿಂದ ಕಾಪಾಡುವೆನು. ಹೋಗಿ ಬಾ ! ಕೃಷ್ಣ ! ಜಿತಕಾರ್ಯನಾಗಿ ಬಾ !" ಎಂದು ವಂದಿಸಿದನು.

" ಬಲವಂತನಾದ ಶತ್ರುವಿನೊಡನೆ ಸೆಣಸಾಟಸಲ್ಲದು. ಅವನಲ್ಲಿ ಸಾಮದಾನಗಳನ್ನು ಪ್ರಯೋಗಿಸಿ, ಕಳಿಸಬೇಕು. ಸಮಬಲನಲ್ಲಿ ಸಾಮವು ಕಾರ್ಯಸಾಧಕವಾಗದೆ ಹೀನಬಲನಾದ ಶತ್ರುವನ್ನು ನಿಗ್ರಹಿಸಬೇಕು. ಅವನು ಶರಣಾಗಿ ಬಂದರೆ ಅನುಗ್ರಹಿಸಬೇಕು. ಬಲವಂತನು ದಾನಕ್ಕೆ ಬಾಗದ ಧನವಂತನೋ ಸಾಮಕ್ಕೆ ಮಣಿಯದ ಶಠನೋ ಆಗಿದ್ದಾಗ ಮಾತ್ರ ದಂಡವೇ ಪ್ರಯೋಜ್ಯವೆನಿಸುವುದು ಈಗ ದಂಡೆತ್ತಿ ಬರಲಿರುವ ಪೌಂಡ್ರಕನು ಮೂರ್ಖನಾದುದರಿಂದ ಕೇವಲ ದಂಡವಿಷಯನೇ ಸರಿ "ಎಂದು ವಿವರಿಸಿ ಹೇಳಿದ ಉದ್ಧವನ ಮಾತನ್ನು ಬಲದೇವಾದಿಗಳು ಅನುಮೋದಿಸಿ, ಕೃಷ್ಣನ ಊಹೆಯಂತೆ, ಪೌಂಡ್ರಕನು ಬಂದು ಮುತ್ತಿದರೆ- ತಾವು ಅಪ್ರಮತ್ತರಾಗಿ ನಗರ ರಕ್ಷಣೆಗೈಯುವರೆಂದು ಭರವಸೆಯಿತ್ತು ಶ್ರೀಕೃಷ್ಣನನ್ನು ಜಯಜಯಧ್ವಾನಗಳಿಂದ ಬೀಳ್ಕೊಟ್ಟರು.

ಶ್ರೀಶನು ಪಕ್ಷೀಶನನ್ನು ನೆನೆಸಿದನು. ತತ್‌ಕ್ಷಣವೇ ಬಂದ ವಿನತಾನಂದನನು, ಗೋವಿಂದನಿಗೆ ವಂದಿಸಿ ಕಾರ್ಯವೇನೆಂದನು.

ಸಾಮವೇದವಾನಿಯು, ಸಾಮಗಾನನಿಪುಣನು. ಬಲವಿಕ್ರಮ ಸಂಪನ್ನನು, ಪಿಂಗಳ ವರ್ಣನು, ಸುವರ್ಣಪಕ್ಷನು, ತಾಮ್ರತುಂಡನು, ಇಂದ್ರಜಯ ಶೀಲನು, ಪನ್ನಗ ವೈರಿಯು, ಆದ ಗರುಡನು ಮೊಣಕಾಲೂರಿ! ಶ್ರೀಕೃಷ್ಣನ ಮುಂದೆ ಕೈಗಳನ್ನು ಜೋಡಿಸಿ ನಿಂತು "ದೇವದೇವೇಶ! ಸ್ವಾಮಿನ್! ಗೋವಿಂದ! ಗೋವಿಂದ! ನಮೋ ನಮಃ ಏನಾಗಬೇಕು ಈ ನಿನ್ನ ಕಿಂಕರನಿಂದ!" ಎಂದು ವಿನಮ್ರನಾಗಿ ನಿಂತನು.

ಶ್ರೀಕೃಷ್ಣನು ತನ್ನ ಅಮೃತಹಸ್ತದಿಂದ ಗರುಡನನ್ನು ಮುಟ್ಟಿ ಪ್ರೀತಿಯಿಂದ "ಗರುಡ! ರುದ್ರನನ್ನು ನೋಡಬೇಕೆನಿಸಿದೆ. ಕೈಲಾಸಗಿರಿಗೆ ಹೊರಡಬೇಕು" ಎಂದನು ಗರುಡನು ಶ್ರೀರುಕ್ಮಿಣಿ ಕೃಷ್ಣರನ್ನು ತನ್ನ ಹೆಗಲ ಮೇಲೆ ಕೂಡಿಸಿಕೊಂಡು, ಹಾರಿದನು. ಶ್ರೀಶರು ಸರ್ವರಿಯಾದವರನ್ನು ಕೈಬೀಸಿ, ಅಪ್ಪಣೆ ಪಡೆದು, ಆಕಾಶ ಮಾರ್ಗದಿ, ಗರುಡಾರೂಢರಾಗಿ ತೆರಳಿದರು.

೧೯. ಪಿಶಾಚ ಪ್ರಾರ್ಥನೆ

ಶ್ರೀಕೃಷ್ಣನು ರುಕ್ಮಿಣೀ ಸಹಿತನಾಗಿ ಗರುಡನನ್ನೇರಿ ಈಶಾನ್ಯದಿಕ್ಕಿಗೆ ಪಯಣಿಸಿ, ಕೈಲಾಸಗಿರಿಯನ್ನು ಸಮೀಪಿಸಿದನು. "ಜಯದೇವ! ಜಗನ್ನಾಥ! ಭೂತಭಾವನ! ದೈತ್ಯದಾನವನಾಶನ! ಹರೇ! ದುರಿತಾರೇ! ಮುರಾರೇ! ಆದಿಕರ್ತ! ಪುರಾಣ ಪುರುಷ! ಶ್ರೀಲಕ್ಷ್ಮೀನೃಸಿಂಹ! ಸಕಲೇಶ! ಭಕ್ತಪ್ರಿಯ! ಅಚಿಂತ್ಯಾದ್ಭುತಮಹಾ ಮಹಿಮ! ಜಯ ಜಯ"! ಎಂದು ದೇವಗಂಧರ್ವಯುನಿಗಳು ಅಂಬರದಿ ನಿಂತು ನುತಿಸಿ ಪೂಮಳೆಗರೆದರು.

ಪೂರ್ವದಲ್ಲಿ ಶ್ರೀನಾರಾಯಣರ್ಷಿರೂಪದಿಂದ ತಾನೇ ತಪಗೈದು ಲೋಕಹಿತವನ್ನು ಸಾಧಿಸಲು ನಿಂತಿರುವ ಶ್ರೀನರನಾರಾಯಣಾಶ್ರಮವನ್ನು ಸೇರಿ ಶ್ರೀಶನು ವಿಶ್ರಮಿಸಿದನು.

ಬ್ರಹ್ಮವಿದ್ಯಾನಿವಾರಕವಿದೆಂದು ತೋರಿಸಲು ಲೋಕಶಿಕ್ಷಕನಾದ ಶ್ರೀರಾಮನು ರಾವಣ ಹತ್ಯಾನಿವಾರಕವಾದುದೆಂದು ಆ ಸ್ಥಲದಲ್ಲಿ ನಿಂತು ತಪಸ್ಸು ಮಾಡಿದ್ದನು. ದೇವೇಂದ್ರನು ವೃತ್ರವಧ ಜನಿತವಾದ ಪಾಪದಿಂದ ಪರಿಮುಕ್ತನಾಗಲು ತಪಸ್ಸನ್ನು ಮಾಡಿದ ಸ್ಥಲವದು. ನರನಾರಾಯಣಾಶ್ರಮವು ಸರ್ವಪಾಪನಾಶಕವು, ಸರ್ವಪುಣ್ಯಪ್ರದವು ಆದ ಪುಣ್ಯಕ್ಷೇತ್ರವೆಂದೇ, ಬಹುಋಷಿಗಳು ಅಲ್ಲಿ ನೆಲೆಸಿ, ತಪಗೈದು ಸಿದ್ಧರಾಗಿ ಹೋದರು. ಅಂತಹ ವಿಶಾಲಾ ಎಂದು ಪ್ರಸಿದ್ಧವಾದ ಬದರೀ ಕ್ಷೇತ್ರವನ್ನು ಶ್ರೀಕೃಷ್ಣನು ಸೇರಿದಾಗ ಸಾಯಂಕಾಲವಾಯಿತು.

ಮುನಿಜನರು ಅಗ್ನಿಹೋತ್ರನಿರತರಾಗಿದ್ದರು. ಅವರ ವೇದಸ್ವರವು ಕಿವಿಗಿಂಪಾಗಿ ಪಸರಿಸಿತು. ವಿಹಂಗಮಗಳು ಸೀಡಗಳಲ್ಲಿ ನಿವಸಿಸಿ ಕಲಕಲರವ ಮಧುರವಾಗಿದ್ದವು.

ಸಿದ್ಧರು ಸಮಾಧಿನಿರತರಾಗಿದ್ದರು. ಅಗ್ನಿಹೋತ್ರಗಳು ಶಾಂತವಾಗಿ ಸಪ್ತಜ್ವಾಲಾಯುತ ವಾಗಿ, ಸುರಭಿಹೋಮಗಂಧವನ್ನು ಸೂಸುತ್ತಿದ್ದವು. ಬಂದ ಅತಿಥಿಜನರ ಪೂಜೆಗಳಿಂದ ಕುಟೀರಾಂಗಣಗಳು ಮಂಗಳ ದ್ರವ್ಯಭರಿತವಾಗಿದ್ದವು.

ಶ್ರೀಕೃಷ್ಣನು ಬಂದದ್ದನ್ನು ನೋಡಿ,ಮುನಿಜನರು ಸಂಭ್ರಮದಿಂದ ಎದ್ದುಬಂದು, ಎದುರ್ಗೊಂಡು, ಸ್ವಾಗತವಿತ್ತರು. ಕೈ ಹಿಡಿದು ಆದರದಿಂದ ಕರೆತಂದರು. ದೀರ್ಘ ತಪ್ಪಸ್ಸಿನಿಂದ ಕೃಶಗಾತ್ರರು, ಸಮಾಧಿ ಪವಿತ್ರರು, ಜಟಾ ಮಂಡಿತರು, ಧಮನಿ ಸಂತತರು. ನೀರಸರು, ವೇದವಿದ್ಯಾನಿಷ್ಣಾತರು, ಸದಾ ವಿಷ್ಣು ಧ್ಯಾನ ಪರರು, ಆದ ಮುನಿಗಳನ್ನು ಶ್ರೀಶರು ನೋಡಿದರು. ವಸಿಷ್ಠ, ವಾಮದೇವ, ರೈಭ್ಯ, ಜಾಬಾಲಿ, ಕಾಶ್ಯಪ, ಕಣ್ವ, ಭರದ್ವಾಜ, ಗೌತಮ, ಅತ್ರಿ, ಅಶ್ವಶಿರಾ, ಶಂಖ, ಲಿಖಿತ, ಕುಣಿ, ಯಾಜ್ಞವಲ್ಕ್ಯ, ಕಕ್ಷೀವಾನ್, ಅಂಗಿರಾ, ಅಸಿತದೇವಲ, ವಾಲ್ಮೀಕಿ, ಮುಂತಾದ ಮಹರ್ಷಿಗಳೂ ಶ್ರೀಶರನ್ನು ನೋಡಿ, ಆನಂದ ತುಂದಿಲರಾದರು. ಭಕ್ತಿ ನಮ್ರರಾಗಿ ವಂದಿಸಿ, "ಇಂದು ನಮ್ಮ ತಪಃ ಫಲ ವೀರೀತಿಯಾಗಿ ತಾನಾಗಿ ನಾವಿದ್ದಲ್ಲಿಗೇ ಬಂದು ! ಧನ್ಯರಾದೆವು. ಕೃಷ್ಣ ! ಜಗಜ್ಜನನಿ ! ನಿಮಗೆ ನಮಸ್ಕಾರ ವಿಷ್ಣುವಾಹ ಪಕ್ಷಿರಾಜ ನಿನಗೆನಮಃ ಸುಸ್ವಾಗತವು ನಿಮಗೆ" ಎಂದರು. "ಕೃಷ್ಣ ! ವಿಷ್ಣೋ ! ಹೃಷೀಕೇಶ ! ವಾಸುದೇವ ! ನಮೋಸ್ತುತೇ ! ಗೋವಿಂದ ! ಪುಂಡರೀಕಾಕ್ಷ ತ್ರಾಹಿ ಪಾಹಿ ಜಗತ್ಪತೇ !" ಎಂದು ಆಸನಪಾದ್ಯಾರ್ಘ್ಯಗಳನ್ನಿತ್ತು ಸತ್ಕರಿಸಿ ಋಷಿ ಜನರ ಯೋಗಕ್ಷೇಮವನ್ನು, ತಪೋಲಾಭವನ್ನೂ ವಿಚಾರಿಸಿ ಶ್ರೀಕೃಷ್ಣನು ಪ್ರೀತನಾದನು.

ಮರುದಿನವೇ ಶ್ರೀ ಕೃಷ್ಣ ರುಕ್ಮಿಣಿಯರು ಋಷಿ ಜನರನ್ನು ಬೀಳ್ಕೊಂಡು ಗಂಗಾ (ಅಲಕನಂದಾ) ನದಿಯ ಉತ್ತರ ತೀರವನ್ನು ಸೇರಿ, ತಪೋದೀಕ್ಷಿತರಾದರು. ಪದ್ಮನಿಭೇಕ್ಷಣನು ಸಮಾಧ್ಯವಸ್ಥೆಯನ್ನು ಮುಟ್ಟಿ, ನಿಮೀಲಿತ ನೇತ್ರನಾದನು ನಿರ್ವಾತಸ್ಥಳದಿ ಇದ್ದ ದೀಪದಂತೆ ಚಲಿಸದೆ ಏನನ್ನೋ ಧ್ಯಾನಿಸುವ ಜಗನ್ನಾಥನನ್ನು ರುಕ್ಮಿಣೀ ಗರುಡರು ಉಪಚರಿಸಿದರು.

ಇಂತಿರಲು ಇದ್ದಕ್ಕಿದ್ದಂತೆ ಮಹಾ ಘೋರ ಶಬ್ದವು ದಿಕ್ಕುಗಳನ್ನು ಸೀಳಿ ಕೊಂಡು ಬಂತು. ಹಿಡಿ ! ಹಿಡಿ ! ಕೊಲ್ಲು ! ಆ ಮೃಗಳನ್ನು ಈ ಕಡೆ ತಿರುಗಿಸಿರಿ ! ಶಾರ್ಙ್ಗಧನುರ್ಧರನಾದ ನಮ್ಮ ಸ್ವಾಮಿ ಶ್ರೀಹರಿಯು ಪ್ರೀತನಾಗಲಿ ! ಎಂಬುವ ಶಬ್ದಗಳೊಡನೆ ಕೃಷ್ಣ ! ದೇವೇಶ ! ನಿನಗೆ ನಮೋ ನಮಃ ಮಾಧವ ! ಕೇಶವ ಎಂದು ನಿನ್ನ ಕಾಂಬುವ ಭಾಗ್ಯವೆ ಮಗೆ ಬಂದೀತು ! ಗೋವಿಂದ ! ದಯಮಾಡು ದರ್ಶನಭಾಗ್ಯವನ್ನು ನೀಡು ! ಎಂಬ ಸ್ತುತಿವಚನಗಳೂ ಕೇಳ ಬಂದವು.

ಶ್ರೀಶನ ಸಮಾಧಿಯು ಭಂಗವಾಯಿತು. "ಏನೀ ಶಬ್ದ ? ಏನೀ ಭಯಂಕರ ಗರ್ಜನ ? ಯಾರು ಬೇಟೆಯಾಡುತ್ತ ಬರುವರು ? ನನ್ನ ಸ್ತುತಿ ಶಬ್ದವು ಬರುತ್ತಿದೆ ! ಎಲ್ಲಿಂದ ?" ಎಂದಾಲೋಚಿಸುವ ಶ್ರೀಕೃಷ್ಣನು ಅನೇಕ ಶಶ ವರಾಹ ಸಿಂಹ ಶರಭಾದಿ ಮೃಗಗಳು ಗಾಯಗೊಂಡು ಭೀತಿಯಿಂದ ಓಡಿ ಹೋಗುವದನ್ನೂ ಅವನ್ನು ಹಿಂಬಾಲಿಸಿ ಬರುವ ವಿಕೃತಾಕಾರರಾದ ಪಿಶಾಚಗಣವನ್ನು ಕಂಡು ಆಶ್ಚರ್ಯ ಪಟ್ಟನು ನಾಯಿಗಳು ನಾಲಿಗೆ ಚಾಚಿ ಓಡಿ ಬಂದವು. ಮೃಗಗಳನ್ನು ಹಿಡಿದು ಕಡಿದವು. ಅವುಗಳ ಹಿಂದೆ ಬಂದ ಕ್ರೂರರು ಆ ಮೃಗಗಳ ಕುತ್ತಿಗೆ ಸೀಳಿ, ಹರಿವ ರಕ್ತವನ್ನು ಕೈಗಳಿಂದೆತ್ತಿ ಕುಡಿದರು. ಮಾಂಸಖಂಡಗಳನ್ನು ಕಿತ್ತಿ ತಿಂದರು. ನೋಡ ನೋಡುತ್ತಿರಲು ಕೆಲಮೃಗಗಳು ಕೃಷ್ಣನನ್ನು ಸುತ್ತಿನಿಂತು ದೀನ ನೇತ್ರವದನಗಳಿಂದ ರಕ್ಷಿಸೆಂದು ಯಾಚಿಸಿದವು. ಶ್ರೀ ಕೃಷ್ಣನು ದಯಾವೀಕ್ಷಣದಿಂದ ಅವುಗಳಿಗೆ ಅಭಯವಿತ್ತು, ಬೇಟೆಗಾರರಾರೆಂದು ನೋಡಿದನು. (original ೭೮ ಅಧ್ಯಾಯ) ?

ಅನೇಕ ಪಿಶಾಚಗಣವೇ ಕೃಷ್ಣನನ್ನು ಆವರಿಸಿ ನಿಂತಿತು. ಅವರಲ್ಲಿ ಇಬ್ಬರು ಬಹು ಭೀಕರರಾಗಿದ್ದರು ಅವರ ಕಣ್ಣುಗಳು ಉರಿವ ಗೋಲಗಳಾಗಿದ್ದವು. ತಲೆಗೂದಲು ಕೆಂಪಗೆ ಸೆಟೆದಿತ್ತು. ನಾಲಿಗೆಚಾಚಿ, ತುಟಿಗಳ ಸವರುತ್ತಾ ಅವರು ಹುಲಿಗಳಂತೆ ಕಂಡರು. ಬಲ ಕೈಯಲ್ಲಿ ಮಾಂಸ ಪಿಂಡಗಳನ್ನೂ, ಎಡಗೈಯಲ್ಲಿ ರಕ್ತದ ಗಡಿಗೆಯನ್ನೂ ಹಿಡಿದು ಹಾ ಹಾ ! ಹೋ ಹೋ ! ಎಂದು ಅಟ್ಟಹಾಸ ಮಾಡುತ್ತ ಅವರೀರ್ವರು ಕೃಷ್ಣನನ್ನು ಸಮೀಪಿಸಿದರು. ಮೈಯಲ್ಲಿ ಸುತ್ತಿದ ಕರುಳ ಮಾಲೆಗಳ ದುರ್ಗಂಧವು ದುಸ್ಸಹವಾಗಿತ್ತು. "ಕೃಷ್ಣ ! ಕೃಷ್ಣ ! ಬಾರಪ್ಪ ! ನಿನ್ನ ದರ್ಶನವನ್ನು ಕೊಡು !" ಎಲ್ಲಿರುವೆ ? ಎಂದು ನಮ್ಮ ಉದ್ಧಾರ ! ಈ ಪಾಪಿ ಜನ್ಮದಿಂದ ಎಂದು ಬಿಡುಗಡೆ ?" ಎಂದು ಬೇಡುತ್ತಾ ಅವರಿಂತೆಂದರು.

"ಪದ್ಮಪಲಾಶಾಕ್ಷ ! ಸುರಾಧ್ಯಕ್ಷ ! ಇಂದ್ರಾನುಜ ! ನಿನ್ನನ್ನು ವೇದ ವಿದರು ಬ್ರಹ್ಮ ನೆಂಬುವರು. ಗುಣಪೂರ್ಣನಾದುದರಿಂದ ಬ್ರಹ್ಮನೆನಿಸುವ ನಿನಗೆ ನಮ್ಮಲ್ಲಿ ದಯಾಗುಣರಸವೇಕೆ ಹರಿಯದಿದೆ ? ಜನ್ಮ ರಹಿತ ! ವಿಶ್ವಸೃಷ್ಟಾ, ದೃಷ್ಟರಕ್ಷ ! ರಮಾಭಕ್ತ ! ನಿನ್ನ ನೋಡಲು ಕಾತುರರಾಗಿರುವೆವೋ ಸ್ವಾಮಿ ! ಹರಿಯು ಪಾಪಹರನಂತೆ ! ಘೋರದಶೆಯಲ್ಲಿದ್ದು ಪಾಪಸಂಕಿಲದಿನರಳುವ ನಮ್ಮನ್ನೇಕೆ ಉದ್ಧರಿಸದಿರುವೆ ? ಯಾವ ಅನಂತ ಜನ್ಮಗಳ ಕ್ರೂರ ಪಾಪಗಳೋ ನಮ್ಮನ್ನು ಪಿಶಾಚಯೋನಿಯಲ್ಲಿದ್ದ ನಾವು ಮೃಗಗಳನ್ನಂತೆ ಕಿತ್ತಿತಿನ್ನುತ್ತಿವೆ. ಎಂದು ಕೊನೆ ದೇವಾ ? ಎಂದು ಕಾಂಬುವೆವು ನಿನ್ನಮಂಗಳ ಮೂರ್ತಿಯನ್ನು ?

ಅನೇಕ ಯೋನಿಗತ ಜೀವರಲ್ಲಿ ಮನುಜರು ಉತ್ತಮರೆನ್ನುವರು. ಅಂತಹ ಸಾಧನ ಶರೀರವನ್ನು ನೀನಿತ್ತಾಗಲೂ ಸಾರ್ಥಕ ಮಾಡಿಕೊಳ್ಳಲಾರದೆ ಕೆಡುತ್ತಿರುವರು.

ಎಂತಹ ಆಶ್ಚರ್ಯವಿದು ಬಾಲ್ಯದಲ್ಲಿ ಅಜ್ಞಾನ-ಆಟಪಾಟ-ಓದು ಮೋದ! ಯೌವನ ಬಂತೆಂದರೆ ಕಣ್ಣು ಕಾಣದೆ ಕೊಬ್ಬಿ ಕುಣಿದಾಟ! ಅರ್ಥಕಾಮಗಳಿಗಾಗಿ ಹರದಾಟ ಮುಪ್ಪಂ ಕವಿದಾಗ ನಿಶ್ಶಕ್ತತೆ ರೋಗ-ಚಿಂತೆ-ಇಂತು ಕಾಲವೆಲ್ಲವೂ ವ್ಯರ್ಥವಾಗಿ ಬಿಡುವುದೆಂದ ಮೇಲೆ ಮನುಜರು ಶ್ರೇಯಃಸ್ಸಾಧನವನ್ನಾದರೂ ಏನು ಮಾಡುವರು! ಕರ ಫಲರೂಪನಾಗಿ ಬಂದ ನಾನಾ ಯೋನಿಗಳಲ್ಲಿ ಬಂದು ದುಃಖಿಸುವ ಮಾನವರಿಗೆವಿರಾಗ ಜ್ಞಾನಭಕ್ತಿಗಳಿಗೆ ಬಲು ದೂರ. ಸಂಸಾರವೆಂಬ ಪಾಶವನ್ನು ಬಿಗಿದುಕೊಂಡು ತಾಪತ್ರಯ ಕೂಪದಲ್ಲಿ ಬಿದ್ದು, ಬಂಧು ಜನರೆಂಬಕೆಸರಿನಲ್ಲಿ ನಿಂತು, ನೊಂದಿರುವ ಜೀವರಿಗೆ ಶ್ರೀ ಹರೇ ನಿನ್ನ ದಯೆಯೆಂಬ ಏಣಿಯೇಗತಿ! ಕಳ್ಳತನ, ಸುಳ್ಳು, ಜಂಬ, ಅಸೂಯೆ ಇತ್ಯಾದಿ ಶತ್ರುಗಳ ಕೈಲಿಸಿಕ್ಕಿ ನರಳುವ ನರರಿಗೆ ನೀನೇ ಉದ್ಧಾರಕನು, ಆದಿದೇವನು ಪುರಾಣ ಪುರುಷನುಸರ್ವೋತ್ತಮನು, ರಮಾರಮಣನು ಆದ ಶ್ರೀ ಹರೇ! ನೀನಾಗಿ ನಿನ್ನ ಮಗನಾದ ಮುಖ್ಯ ಪ್ರಾಣನಿಂದ ನಮಗೆ ಜ್ಞಾನ ದೀಪವನ್ನು ಹಿಡಿದೆತ್ತಿ ತೋರಿಸು! ಮುಕ್ತಿ ಮಾರ್ಗದಿ ಬೀಳದಂತೆ ನಡೆಸು! ಮಾಡಿರುವ ಪಾಪವನ್ನು ಹರಿಸು. ಗೋವಿಂದ ಎನ್ನುತ್ತಾ ಶ್ರೀ ಕೃಷ್ಣನನ್ನು ಸಮೀಪಿಸಿದರು.

ದೀಪಿಕಾ ಸಹಸ್ರ ಜ್ವಾಲೆಗಳಿಂದ ಮಹಾನಿಶೀಥವು ಕೂಡ ಹಗಲಂತಾಗಿತ್ತು! ಅವರು ಶ್ರೀ ಕೃಷ್ಣನನ್ನು ನೋಡಿ ಆಶ್ಚರ್ಯಭಯ ಸಂಭ್ರಮಾನ್ವಿತರಾಗಿ ಇಂತೆಂದರು. ಶ್ರೀಶನೂ ಮಂದಸ್ಮಿತ ಸುಂದರ ವದನಾರವಿಂದನಾಗಿ ಅವರನ್ನು ದಯದಿಂದ ವೀಕ್ಷಿಸಿದನು. ಅವರಲ್ಲಿ ದೊಡ್ಡವನು ಮುಂದೆ ಬಂದು 'ಯಾರಯ್ಯಾ ನೀನು? ಮನುಜನಂತಿರುವೆ! ಆದರೂ ದೇವನಂತೆತೋರುವೆ! ಎಲ್ಲಿಂದ ಬಂದೆ? ಘೋರ ಮೃಗಾಕುಲವೂ ಪಿಶಾಚಗಣ ಸಂಕುಲವೂ ಆದ ಈ ಮಹಾರಣ್ಯಕ್ಕೆ ಏಕೆಬಂದೆ? ಅದೂ ಮಹಾರಾತ್ರಿಯ ಈ ವೇಳೆಯಲ್ಲಿ ಇಲ್ಲೇಕೆನಿಂದೆ? ಯಾರಿವರು ನಿನ್ನೊಡನಿರುವ ಸುಂದರೀಪರ್ಣರು? ಅಥವಾ ನಮ್ಮಲ್ಲಿ ದಯೆದೋರಿ ಉದ್ಧರಿಸಲು ಬಂದ ಸಾಕ್ಷಾತ್ ಕೃಷ್ಣನೇ ನೀನಿರಬಹುದೇ? ಇಲ್ಲವೇ ಇಂದ್ರನೋ? ಕುಬೇರನೋ? ಯಮನೋ? ನಮಗೇನೋ ನಿನ್ನ ಕಂಡು ಆನಂದಾನುಭವವಾಗಿದೆ. ಹೇಳು ನಿನ್ನ ವೃತ್ತಾಂತವನ್ನು!' ಎಂದು ಕೇಳಿ, ಕೈ ಜೋಡಿಸಿ, ನಿಂತನು.

ಶ್ರೀ ಕೃಷ್ಣನು "ಯದುವಂಶದಲ್ಲಿ ಅವತರಿಸಿ ಬಂದಿರುವೆನು. ನನ್ನನ್ನು ಕೃಷ್ಣನೆಂಬರು. ದುಷ್ಟ ಜನರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮವನ್ನು ಕಾಪಾಡುವುದೆ, ನನ್ನ ಕೆಲಸ, ಈಗಲಂತೂ ಕೈಲಾಸಗಿರಿಗೆ ಶಂಕರನನ್ನು ನೋಡಲೆಂದು ಹೋಗುತ್ತಿರುವೆನು. ಇರಲಿ! ನೀವಿರ್ವರು ಯಾರು? ನಿಮಗೆ ಈ ಭಯಂಕರ ಜನ್ಮವೇಕೆ ಬಂತು! ಇದು ಬದರೀಧಾಮವೆಂಬುವ ಪುಣ್ಯಭೂಮಿ. ಇಲ್ಲಿ ಹಿಂಸೆ, ಅನಾಚಾರ, ಅಸತ್ಯ, ಕಾಪಟ್ಯಗಳಿಗೆ ಎಡೆಯಿಲ್ಲ. ಬೇಟೆ ನಾಯಿಗಳೇಕೆ ಬಂದಿವೆ? ಪಿಶಾಚಗಣ

ವೆಂತು ಬಂತು ? ಮೃಗಗಳನ್ನು ಕೊಲ್ಲಬಹುದೇ ? ಶೂದ್ರರಿಗೆ ಇಲ್ಲಿ ಪ್ರವೇಶವಿಲ್ಲ. ಈಗ ಹೇಳುತ್ತಿರುವೆನು. ಈ ಪುಣ್ಯವನರಕ್ಷಣೆಗಾಗಿ ನಾನು ದೀಕ್ಷಿತನಾಗಿ ನಿಂತಿರುವೆನು. ಅಶ್ರಮಾಪಚಾರವನ್ನೆಸಗಿದವರನ್ನು ತಪ್ಪದೆ ದಂಡಿಸುವೆನು. ತಿಳಿಯಿರಿ !" ಎಂದನು.

O

20. ಪಿಶಾಚ ವಿಮೋಚನ

ಶ್ರೀವೈಶಂಪಾಯನನು ಜನಮೇಜಯನಿಗೆ ನಿರೂಪಿಸಿದನು. ರಾಜನ್ ! ಶ್ರೀಕೃಷ್ಣನ ಮಾತನ್ನಾಲಿಸಿ. ದೊಡ್ಡ ಪಿಶಾಚನು ಇಂತೆದನು. ‘ ಶ್ರೀಕೃಷ್ಣನಿಗೆ ನನ್ನ ಪ್ರಭುವಾದ ಶ್ರೀಹರಿಗೆ ನಮಸ್ಕರಿಸಿ ನನ್ನ ಮತ್ತು ಈ ನನ್ನ ತಮ್ಮನ ಕಥೆಯನ್ನು ಪೇಳುವೆನು ಕೇಳು ನನ್ನ ಹೆಸರು ಘಂಟಾಕರ್ಣನೆಂದಿದೆ. ನಾನು ಕುಬೇರನ ಅನುಚರನು. ಅಂತಕನಿಗೂ ಅಂತಕನಂತಿರುವ ನನ್ನ ಘೋರ ರೂಪವಿಲ್ಲಿ ನಿನಗೆ ಕಾಣುತ್ತಲಿದೆ. ಬೇಟೆಯಿಂದ ಜೀವನಮಾಡುವ ನಮಗೆ ಮಾಂಸವೇ ಆಹಾರ, ಮದ್ಯರಕ್ತಗಳೇ ಪಾನೀಯವು. ನನ್ನ ಬೇಟೆ ಆಹಾರ-ವಿಹಾರ ಭೋಜನ ವಚನಗಳೆಲ್ಲವೂ ಶ್ರೀ ವಿಷ್ಣುಪೂಜೆ ಎಂದೇ ತಿಳಿದಿರುವೆನು ನನ್ನದೇ ಈ ಶುನಕಗಣವೀಸೇನಾನಿವಹವು ಭೂತ ಸೇವಿತವಾಗಿರುವ ಕೈಲಾಸಗಿರಿಯಿಂದ ಬೇಟೆಯನಾಡುತ್ತ ಬಂದಿರುವೆನು. ನನ್ನ ಪಾಪ ಕರ್ಮದ ಫಲವಾಗಿ ನನಗೀ ಪಿಶಾಚ ವೇಶವು ಸಂಭವಸಿದೆ.

ವಿಷ್ಣುವೈಷ್ಣವ ದ್ವೇಷವೇ ನನ್ನನ್ನು ಈ ಪಾಪಿಯೋನಿಯಲ್ಲಿ ಕೆಡಹಿದೆ. ವಿಷ್ಣು ದ್ವೇಷದ ಪರಾವಧಿ ನನ್ನಲ್ಲಿ ಎಷ್ಟಿತ್ತೆಂದರೆ ಕೇಳು! ನಂಬು! ಯನಾದರೂ ಅಕಸ್ಮಾತ್ತಾಗಿ ‘ರಾಮ ! ಕೃಷ್ಣ ! ಗೋವಿಂದ" ಎಂಬುವರೇನೋ ! ಹಾಗವರೆನ್ನುವ ಭಗವನ್ನಾಮ ನನಗೆ ಕೇಳಿಸಬಾರದೆಂದು ಹಠಗಾರನಾದ ನಾನು, ನನ್ನ ಎರಡು ಕಿವಿಗಳಲ್ಲಿ ಘಂಟೆಗಳನ್ನು ಜೋತುಗಟ್ಟಿ, ಅವನ್ನು ಠಣ್ ಠಣ್ ಎಂದು ಶಬ್ದಿಸುತ್ತಾ, ಸಂಚರಿಸುತ್ತಿದ್ದೆನು. ಮಹಾನುಭಾವನಾದ ಶಿವನನ್ನು ಕುರಿತು ಕೈಲಾಸಗಿರಿಯಲ್ಲಿ ತೀವ್ರತಪವನ್ನು ಮಾಡಿದೆನು ಶಿವನು ಪ್ರಸನ್ನನಾಗಿ ವರವನ್ನು ಬೇಡೆಂದನು. ಆಗ ನಾನು ಮುಕ್ತಿಯನ್ನು ಕರುಣಿಸಿ ಕೊಡೆಂದು ಬೇಡಿದನು. ಅದನ್ನು ಕೇಳಿ ಶಿವನು ನಕ್ಕು ‘ವತ್ಸ ! ನಾನು ಭೋಗಪ್ರದನು. ಮುಕ್ತಿಯನ್ನು ಕೊಡುವವನು ಶ್ರೀ ನಾರಾಯಣನು. ಇತರರಲ್ಲ. ಆ ಸರ್ವೋತ್ತಮನನ್ನೇ ಭಜಿಸು ! ನಿನಗೆ ಮುಕ್ತಿಯಾಗುವದು. ಅವನಲ್ಲಿ ಬೇಡಿ, ನಿನಗೆ ಅವನ ದರ್ಶನವಾಗುವಂತೆ ಮಾಡುವೆನು, ಬದರಿಕಾಶ್ರಮದಲ್ಲಿ ಶ್ರೀಹರಿಯು ನಿನಗೆ ಕಾಣಿಸಿಕೊಂಡು ಮುಕ್ತಿಯನ್ನು ದಯಪಾಲಿಸುವನು" ಎಂದು ನನ್ನನ್ನು ಇಲ್ಲಿಗೆ ಕಳಿಸಿದನು.

ಶ್ರೀಕೃಷ್ಣನೇ ಸರ್ವೋತ್ತಮನು ಅವನಿಗೆ ಸಮರಿಲ್ಲವೆಂದ ಮೇಲೆ ಅಧಿಕರಿನ್ನೆಲ್ಲಿ ಎಂದು ನಿಶ್ಚಯಿಸಿ ನನ್ನ ಎಲ್ಲ ಹಿಂದಿನ ಕುಹಕ ಬುದ್ಧಿಯನ್ನು ಬಿಟ್ಟು ಅವನನ್ನು

ನೋಡುವ ಕಾತರತೆಯಿಂದ ಇಲ್ಲಿಗೆ ಬಂದಿರುವೆನು. ಇನ್ನೊಂದು ಮಾತಿದೆ ಕೇಳು ! ನಿನಗೆ ಶ್ರೀದ್ವಾರಕಾಧೀಶನಾಗಿರುವ ಶ್ರೀಕೃಷ್ಣನ ವೃತ್ತಾಂತವು ಗೊತ್ತಿದೆಯಾ ? ಇಲ್ಲದಿದ್ದರೆ ಕೇಳು.

ಪಶ್ಚಿಮ ಸಮುದ್ರದ ತೀರವಂತೆ ಅಲ್ಲಿ ಕುಶಸ್ಥಲಿ ಎಂಬ ನಗರವಿತ್ತಂತೆ-ಅದನ್ನು ವಿಸ್ತರಿಸಿ ದ್ವಾರಕಾಪುರಿ ಎನಿಸಿ ಅಲ್ಲಿ ವಸಿಸುವ ವಾಸುದೇವನೇ ನನ್ನ ಪ್ರಭುವು. ಅವನು ಜಗತ್ಪ್ರಭುವು, ಸೃಷ್ಟಿಸ್ಥಿತಿಲಯಬಂಧಗಳನ್ನು ಮಾಡಿ ಅಜ್ಞಾನ ಜ್ಞಾನಗಳನ್ನು ಕೊಟ್ಟು ಒಳಗಿದ್ದು ನಿಯಮಿಸಿ ಕೊನೆಗೆ ಕರುಣಿಸಿ ಯೋಗ್ಯ ಜೀವರಿಗೆ ಮುಕ್ತಿಯನ್ನು ಕೊಟ್ಟು ಪೊರೆವ ಪುರುಷೋತ್ತಮನೇ ಕೃಷ್ಣನಾಗಿ ಅವತರಿಸಿರುವನು. ಜಗದಾದಿ ಕಾರಣನಾದ ಆ ನಾರಾಯಣನನ್ನು ನೋಡಿ ತಣಿಯಲು ಹವಣಿಸುವ ನಮಗೆ-ನಮ್ಮಂತಹ ಪಾಪಿಗಳಿಗೆ ಅವನು ಕಾಣಿಸುವನೇ ? ಕರುಣಿಸುವನೇ ? ಮೋಕ್ಷಾನಂದವನ್ನು ಉಣಿಸುವನೇ?

ಸಮಸ್ತಕರ್ತನು ದಾನವ ಹರ್ತನು ಆದ ಲಕ್ಷ್ಮೀಭರ್ತನನ್ನು ನೋಡಬೇಕು. ವರದನು, ದೇವವರೇಣ್ಯನು ಕರುಣಾರ್ಣವನು ಬ್ರಹ್ಮರುದ್ರೇಂದ್ರಾದಿದೇವ ಭರಣನು ಆದ ಶ್ರೀರಮಣನದರ್ಶನ ನಮಗಾಗಬೇಕು.

ಎಲ್ಲ ವಿಶ್ವವು ಯಾವನ ಉದರದಿಂದ ಹೊರಬಂದು ಪಾಲಿತವೂ ಆಗಿ ಕೊನೆಗೆ ಲಯವನ್ನು ಹೊಂದಿ ಮತ್ತೆ ಉದರೈಕದೇಶದಲ್ಲಿ ಸೇರಿ ತತಧೀನವಾಗೇ ಇರುವುದೋ ಅಂತಹ ಜಗಜ್ಜನಕನನ್ನು ನೋಡಬೇಕೆನಿಸಿದೆ. ಅಜಸ್ಯಕರ್ತಾ, ಭುವನಸ್ಯಗೋಪ್ತಾ, ಯೋಗಿ ಜನದುರಿತ ಹರ್ತಾ ಎನಿಸಿದ ಶ್ರೀವಾಸುದೇವನನ್ನು ಕಾಣುವ ಹಂಬಲ ಹುಲುಸಾಗಿದೆ. ವಟಪತ್ರ ಪುಟದಲ್ಲಿ ಪುಟ್ಟಕೂಸಾಗಿ ಮಲಗಿ, ತನ್ನ ಪಾದಾರವಿಂದವನ್ನು ಕರಾರವಿಂದದಿಂದ ಮೇಲಕ್ಕೆತ್ತಿ ವದನಾರವಿಂದದಲ್ಲಿಟ್ಟು ಚೀಪುವ ಮಾರ್ಕಂಡೇಯ ವರದನನ್ನು ಎಂತು ಕಾಂಬುವೆವು ? ನಾಭಿಯಲ್ಲಿ ಪದ್ಮವನ್ನೂ, ಅದರಲ್ಲಿ ಮಗನನ್ನೂ, ಅವನಿಂದ ಹದಿನಾಲ್ಕು ಲೋಕಗಳನ್ನೂ ಸಮಸ್ತ ಜೀವ ದೇಹಗಳನ್ನೂ ನಿರ್ಮಿಸಿದ ಸರ್ವಕರ್ತನಾದ ಹರಿ ಹರೀ ! ಎಂದು ನಿನ್ನನ್ನು ನೋಡುವೆನಯ್ಯಾ ! ಜೀಯ್ಯಾ ! ವರಾಹನಾಗಿ ಭೂಮಂಡಲವನ್ನು ಲೀಲೆಯಾಗಿ ಎತ್ತಿಪಿಡಿದ ನಿನಗೆ ನಮ್ಮನ್ನು ಎತ್ತಿಪಿಡಿದು ಕಾಪಾಡಲಾಗದೇ ? ಸ್ವಾಮೀ ! ಯಜ್ಞಪತಿಯು ಯಜ್ಞಫಲಪ್ರದನು ಯಜ್ಞನಾಮಕನು ಆದ ದೇವ ದೇವ ! ನಾವಿಲ್ಲಿಮಾಡುವ ಸರ್ವಕರ್ಮಗಳನ್ನೂ ನಿನ್ನ ಯಜ್ಞವೆಂದೇ ಅನುಸಂಧಾನದಿಂದ ಮಾಡುತ್ತಿರುವುದು ನಿನಗೆ-ಸರ್ವಜ್ಞನಿಗೆ ಗೊತ್ತಿಲ್ಲವೇ ?

ಕೆಲವರು ಒಬ್ಬನೇ ಎಂಬರು (ನಾರಾಯಣ) ಕೆಲವರು ನಾಲ್ಕು ಎಂಬುವರು (ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ, ವಾಸುದೇವ) ಕೆಲವರು ಹತ್ತೆಂಬರು (ಮತ್ಸ್ಯ ಕೂರ್ಮವರಾಹಾದಿ). ಕೆಲವರು ನೂರೆಂಬರು (ಶಿಂಶುಮಾರಾದಿ) ಕೆಲವರು ಸಾವಿರವೆಂಬವರು (ವಿಶ್ವಾದಿ) ; ಕೆಲವರು ಅನಂತವೆಂಬುವರು (ಅಜಾದಿ). ಎಲ್ಲವೂ ನಿಜ. ಅವೆಲ್ಲ ನಿನ್ನ ರೂಪ ವಿಶೇಷಗಳು-ಸ್ವಗತಭೇದರಹಿತಗಳು. ಅಷ್ಟನ್ನೆಲ್ಲ ನೋಡುವ ಇಷ್ಟವಿದೆ ; ಯೋಗ್ಯತೆ ಇಲ್ಲ ; ಕೃಷ್ಣಾ ! ನೀನು ಒಬ್ಬನನ್ನು ಸಕಲೇಷ್ಟವನ್ನೂ ಸಲ್ಲಿಸುವ

ಸರ್ವಸ್ವಾಮಿಯಾಗಿರುವೆ ! ನಿನ್ನನ್ನು ನೋಡಿದ ಕಣ್ಣಿಗೆ ಮತ್ತೇನೂ ರುಚಿಸುವುದಿಲ್ಲ. ಅಮೃತ ಪಾನವನ್ನೂ ಮಾಡಿಬಿಟ್ಟು, ಮತ್ತೆ ನೀರು ಕುಡಿಯಲಾಸೆಯಾಗುವುದೇ ? ಎಲ್ಲಿರುವನಾ ನನ್ನ ಕೃಷ್ಣ ? ಎಂತು ಕಾಣಸಿಗುವನು ? ಏನ ಮಾಡಿದರೆ ಪ್ರೀತನಾಗುವನು. ಮಹಾದೇವನ ಮಾತಿನಂತೆ ಬಂದೆವು. ಮಹಾದೇವದೇವನನ್ನು ನೋಡೇಬಿಡುವೆವು".

ಇಂತು ನುಡಿದು ಘಂಟಾಕರ್ಣನು ತನ್ನ ತಮ್ಮನಿಂದ ಕೂಡಿ, ಒಂದು ಶುಚಿ ಪ್ರದೇಶವನ್ನು ಆರಿಸಿ ಅಲ್ಲಿಕೂತು ಶ್ರೀ ಕೃಷ್ಣ ಧ್ಯಾನತತ್ಪರನಾದನು. ಆಚಮಿಸಿ ಎಲಬು ಕರುಳುಗಳನ್ನು ಕಿತ್ತೊಗೆದು, ಅಲಕ ನಂದೆಯಲ್ಲಿ ಮಿಂದು ಸುಖಾಸನದಲ್ಲಿ ಕೂತನು.

ಓಂ ನಮೋ ಭಗವತೇತಸ್ಮೈವಾಸುದೇವಾಯ ಚಕ್ರಿಣೇ ! ನಮಸ್ತೇಗದಿನೇ ತುಭ್ಯಂ ಶಂಖಿನೇ ಚಕ್ರಿಣೇ ನಮಃ || ಓಂ ನಮೋ ನಾರಾಯಣಾಯ ವಿಷ್ಣವೇ ಪ್ರಭ ವಿಷ್ಣವೇ ! ಜನ್ಮ ಈ ದೃಶಂ ಮಮಸ್ವಾಮಿನ್ ಮಾಭೂತ್ ದುಃಖಾಸ್ಪದಂಹರೇ ! ದೇವ ದೂತೋಭವಿಷ್ಯಾಮಿ ಸ್ಮರಣಾತ್ತವ ಶ್ರೀ ಹರೇ | ವಿಭೋ ! ನಿನ್ನ ಚಕ್ರದಿಂದ ನನ್ನ ದೇಹವು ಬಿದ್ದು ಹೋಗಲಿ ! ಯಾಚಕರಿಗೆ ಕಲ್ಪವೃಕ್ಷವಂತೆ ನೀನು ! ನನಗೆ ಎಲ್ಲಿ ಯಾವ ಜನ್ಮವೇ ಬರಲಿ, ಶ್ರೀಶಾ ! ನನ್ನ ಹೃದಯದಲ್ಲಿರುವ ನಿನ್ನ ಸ್ಮರಣೆ ಮಾತ್ರ ಮರೆಯದಂತೆ ಕಾಪಾಡು ತಂದೇ ! ನನ್ನ ಮರಣ ಸಮಯದಲ್ಲಿ ಗಜೇಂದ್ರ ವರದನ ಸ್ಮರಣೆ ಬರಲಿ ! ನಾನು ಸ್ನಾನಮಾಡುವಾಗ ಗಂಗಾ ಜನಕನ ನೆನಪಿರಲಿ ! ಊಟಮಾಡುವಾಗ ಗೋವಿಂದ ಗೋವಿಂದ ಎಂದು ನನ್ನನಾಲಿಗೆ ನುಡಿಯುತ್ತಾ, ಊಟದ ರುಚಿಯನ್ನಲ್ಲ—ನಿನ್ನ ನಾಮದ ರುಚಿಯನ್ನು ಸವಿಯಲಿ ! ಸೂರ್ಯ ದೇವನು ನನ್ನ ಕಣ್ಣಿಗೆ ನಿನ್ನ ಮೂರುತಿಯನ್ನೇ ತೋರಿಸಲಿ ! ಕುಬೇರನೂ, ಅಹಂಕಾರಿಕ ಪ್ರಾಣನೂ ನನಗೆ ನಿನ್ನ ಮಂಗಳ ಸ್ಪರ್ಶವನ್ನೀಯಲಿ ! ದಿಗ್ದೇವತೆಗಳೂ ಚಂದ್ರನೂ ನನ್ನ ಕಿವಿಗೆ ನಿನ್ನ ಸ್ತುತಿಯೇ ಗೋಚರವಾಗುವಂತೆ ಸಲಹಲಿ ! ದಕ್ಷನು ನನ್ನ ಕೈಯಿಂದ ನಿನ್ನ ಪೂಜೆಯನ್ನು ಮಾಡಿಸಲಿ ! ಜಯಂತನು ಪಾದದಲ್ಲಿದ್ದು ನಿನ್ನ ಪ್ರದಕ್ಷಿಣೆ ಯಾತ್ರೆಯನ್ನೂ ಮಾಡಿಸಲಿ ! ದೇವ ದೇವ ! ವರುಣನು ಅಗ್ನಿಯು ನಾಲಿಗೆಯಲ್ಲಿ ನಿಂತು, ನಿನ್ನ ನಿವೇದಿತವನ್ನೇ ಉಣಿಸಲಿ ! ನಿನ್ನ ನಾಮವನ್ನೇ ನುಡಿಸಲಿ ! ಅಶ್ವಿನಿಗಳು ಮೂಗಿನಲ್ಲಿ ನಿಂತು ಭಗವದರ್ಪಿತತುಲಸೀ ಪುಷ್ಪಾದಿಗಳನ್ನು ಮೂಸಿಸಲಿ! ಸರ್ವೇಂದ್ರಿಯ ಪ್ರೇರಕನಾದ ಶಿವನು ಮನಸ್ಸಿನಲ್ಲಿದ್ದು ನಿನ್ನ ಪಾವನ ಸ್ಮರಣೆ ಕೊಡಲಿ! ಮುಖ್ಯ ಪ್ರಾಣನು ನನಗೆ ಸರ್ವ ಸ್ವಸಮರ್ಪಣ ಬುದ್ಧಿಯನ್ನು ಕೊಟ್ಟು ಉದ್ಧರಿಸಲಿ !

ಪರದ್ರವ್ಯ ಪರದಾರಾ ಪರಾಙ್ಮುಖನಾಗುವೆನು. ಹೊರಗೆ ಮತ್ತು ಒಳಗೆ ಸ್ನಾನವನ್ನು ಮಾಡುವೆನು, ಪರ ನಿಂದೆಯನ್ನೂ ಆತ್ಮ ಪ್ರಶಂಸೆಯನ್ನೂದೂರೀಕರಿ

ಹುವೆನು, ನಾ ಮಾಡುವೆನೆಂಬುದಿಲ್ಲ, ನೀ ಮಾಡಿಸು ಸರ್ವ ಸ್ವಾಮಿ ! ಸರ್ವದಾ, ಸರ್ವತ್ರ, ನಿನ್ನ ದಿವ್ಯಸ್ಮರಣೆಯನ್ನೆನಗಿತ್ತು ಕಾಪಾಡು ! ಗೋವಿಂದ ! ಗೋವಿಂದಾ ಎನ್ನುತ್ತಾ ಪಿಶಾಚವರನು ನೈಮರೆತು ಮಾಧವನನ್ನು ಮನದಿ ತಂದು ನಿಲ್ಲಿಸಿದನು.

ನಾಸಿಕಾಗ್ರವನ್ನು ನೋಡುತ್ತ, ಇಂದ್ರಿಯಗಳನ್ನು ಬಂಧಿಸಿ, ಹೃತ್ಪದ್ಮದಲ್ಲಿ ಪದ್ಮನಾಭನನ್ನು ಧ್ಯಾನಿಸುವ ಘಂಟಾಕರ್ಣನು ಶಿಲಾಪ್ರತಿಮೆಯಂತೆ ಕಂಡನು.

(ಅಧ್ಯಾಯ ೮೦)

ಭಗವಂತನಾಗ ಅವನ ಪಶ್ಚಾತ್ತಾಪಯುಕ್ತವಾದ ಭಕ್ತಿಗೆ ಮೆಚ್ಚಿ "ಅಹೋ! ಏನಿವನಧ್ಯಾನ ! ಎಂತಹ ಜ್ಞಾನ ! ಶ್ರೀ ಕುಬೇರನ ದಿವ್ಯೋಪದೇಶದ ಫಲವಾಗಿ ಇವನು ಇಂದು ಶುದ್ಧನಾಗಿರುವನು. ನಿದ್ರಾ ಜಾಗ್ರತ್ ಸ್ವಪ್ನಗಳಲ್ಲಿಯೂ – ಅಶನ ವಸನಪಾನ ವಿಹಾರ ಸಮಯಗಳಲ್ಲಿ–ನನ್ನ ಪಾಪ ಹರಣ ಶೀಲವಾದ ನಾಮಸ್ಮರಣೆ ಮಾಡಿ–ಇಂದು ಪಾವನನಾಗಿರುವನು, ಇಂದು ಇವನ ಪಾಪಕರ್ಮವು ಮುಗಿದಿದೆ. ಈ ಪಿಶಾಚಯೋನಿಯಿಂದ ಇವನನ್ನೂ, ಇವನಂತೆ ಭಕ್ತನಾದ ಇವನ ತಮ್ಮನನ್ನೂ ಬಿಡಿಸಿ, ಕಾಪಾಡುವೆನು" ಎಂದು ನಿಶ್ಚಯಿಸಿ, ಅವನ ಅಂತರ್ಮುಖವಾದ ಮನಃ ಕಮಲದಲ್ಲಿ ತದ್ರೂಪನಾಗಿ ಮೂಡಿದನು.

ಘಂಟಾಕರ್ಣನು ಮಿಂಚು ಬಡಿದಂತಾಗಲು–ಮನೋಂಬರದಲ್ಲಿ ಪೀತಾಂಬರ ಧಾರಿಯಾದ ಶ್ರೀ ಹರಿಯ ಕೃಷ್ಣ ರೂಪವನ್ನು ನೋಡಿದನು. ಪೀತಕೌಶೇಯವಸನನು, ಮೇಘ ಶ್ಯಾಮನು, ಶಂಖ ಚಕ್ರ ಗದಾ ಪದ್ಮಹಸ್ತನು, ಬಹುಪ್ರಶಸ್ತನು, ಪುಷ್ಪಮಾಲಾಲಂಕೃತನು, ಕೌಸ್ತುಭಾಮುಕ್ತ ಕಂಧರನು, ಅತಿ ಸುಂದರನು, ವಕ್ಷೋವಿಶಾಲನು, ಲಕ್ಷ್ಮೀಲೋಲನು, ಲಕ್ಷ್ಮೀ ರುಕ್ಮಿಣೀಯುಕ್ತನು, ಗರುಡಸ್ಕಂಧಾಸಕ್ತನು, ವಜ್ರ ವೈಡೂರ್ಯನೀಲ ಮಾಣಿಕ್ಯ ಪ್ರವಾಲಖಚಿತವಾದ ಕಿರೀಟ ಕಟಕಾಂಗದ ಕಂಕಣಗಳಿಗೆ ಅಲಂಕಾರ ಭೂತನು, ಪರಮ ಪೂತನು, ಯೋಗಿ ಜನವಂದ್ಯ ಪಾದಾರವಿಂದನು ಆದ ಗೋವಿಂದನನ್ನು ನೋಡಿ, ಪಿಶಾಚ ಯೋನಿಯುಕ್ತ ಪ್ರಾಯನಾದ ಘಂಟಾಕರ್ಣನು ಆನಂದದಿಂದ ಕುಣಿದಾಡಿ, ಕಣ್ಣು ತೆರೆದು ಅಂತಹ ಸ್ವಾಮಿಯೇ ತನ್ನೆದುರಿಗೆ ನಿಂತು ಪ್ರಸನ್ನವದನನಾಗಿ, ಕರುಣಾಕಟಾಕ್ಷಗಳನ್ನು ಬೀರುತ್ತಿರುವುದನ್ನು ಕಂಡನು.

"ಶ್ರೀ ಹರಿ ಪ್ರಸನ್ನನಾದನು. ನನ್ನಜನ್ಮವೇ ಧನ್ಯವಾಯಿತು. ತಪಸ್ಸು ಫಲಿಸಿ ಬಂತು. ಇನ್ನೇಕೆ ನನಗೆ ಚಿಂತೆ ?" ಎಂದು ಮುಂದೆ ಬಂದು ವಂದಿಸಿದನು.

"ಇಕೋ ಕೃಷ್ಣ ! ಇಲ್ಲಿರುವ ನನ್ನ ಸ್ವಾಮಿ ! ಇವನೇ ವಿಷ್ಣುವು ! ಸಹಸ್ರ ಶಿರಸನು ಸಕಲಾಮರೇಶನು ನನಗೆ ಕಂಡು ಬಂದನು. ಜಗನ್ನಾಥ ! ಪುರುಷೋ

ಸ್ತವು ! ಧನ್ಯನಾದೆನು. ಇವನ ವಕ್ಷದಿ ಕೌಸ್ತುಭವಿದೆ ! ವನಮಾಲೆ ಇದೆ ! ಶ್ರೀ ವತ್ಸವಿದೆ ! ಪೂಮಾಲೆಗಳಿವೆ ! ಇವನೇ ನಮ್ಮಪ್ಪ ! ಇವನೇ ಇಗೋ ಈ ಕೃಷ್ಣನೇ ನನ್ನ ದೈವ-ಗುರು-ಬಂಧು-ಸರ್ವನಿವನೇ ! ಬಲಿಯನ್ನು ಕಟ್ಟಿ,ಅವನ ರಾಜ್ಯವನ್ನು ಇಂದ್ರನಿಗಿತ್ತ ವಾಮನನಿವನು. ಕೋರೆಯಿಂದ ಧರೆಯನ್ನೆತ್ತಿ ಪೊರೆದ ವರಾಹನಿವನು ಮಧುಕೈಟಭರನ್ನು ಮಡುಹಿದ ಮಾಧವನಿವನು. ಮಹೋದಧಿಯಲ್ಲಿ ಮಂದರವನ್ನೆತ್ತಿ ನಿಲ್ಲಿಸಿ, ಮಹಾಭುಜಗಳಿಂದ ಮಥಿಸಿ, ಮಹೇಂದ್ರಾದಿಭಕ್ತರಿಗೆ ಅಮೃತವನ್ನು ಸುರಿದ ಸುರಪ್ರಿಯನಿವನು ! ಬಾಲಪ್ರಹ್ಲಾದನನ್ನು ಪೊರೆಯಲು ಸ್ತಂಭಾವಿರ್ಭೂತನಾಗಿ, ಅವನಪ್ಪನನ್ನು ಯಮನಿಗೊಪ್ಪಿಸಿದ ನಮ್ಮಪ್ಪ ನರಸಿಂಹ ನಿವನು ! ಇವನೇ ಭಾರ್ಗವನಾಗಿ ಮೂರೇಳು ಸಲ ಭೂಮಿಯನ್ನು ಸುತ್ತಿ, ದುಷ್ಟರಾಜರನ್ನು ನಾಶಪಡಿಸಿದನು. ಇವನೇ ಶ್ರೀ ರಾಮನು. ಸೀತಾಲಲಾಮನು, ಪವಿತ್ರನಾಮನು, ರಾವಣಾದಿ ದೈತ್ಯವಿರಾಮನು. ವಿಭೀಷಣ ಸುಗ್ರೀವ ರಾಜ್ಯ ಪ್ರತಿಷ್ಠಾಕಾರಣನು, ವಾಲಿ ಮಾರಣನು ! ಇವನೇ ನನ್ನ ಪ್ರಭು ಶ್ರೀ ಕೃಷ್ಣನು. ಜಗದುತ್ಕೃಷ್ಟನು ! ಇಂತು ಕೊಂಡಾಡಿ ಚಂಡ ಪಿಶಾಚನು ಭಕ್ತಿಭರನಾಗಿ "ಕಂಡೆನಾ ಗೋವಿಂದನ ! ಕಂಡೆ ಕಂಡೆನು ಪುಂಡರೀಕಾಕ್ಷನ, ಕಂಡೆ ನಿಂದು ಗೋವಿಂದನ ! ಗೋವಿಂದ ! ಗೋವಿಂದ ! ವಂದನ ಶತಂಗಳು ನಿನಗೆ ಮಂಗಳ ದೇವತಾರಮಣ ವಂದನ ಸಹಸ್ರಂಗಳು !" ಎಂದು ಕುಣಿದಾಡಿದನು.

ಶ್ರೀ ಕೃಷ್ಣನು ಘಂಟಾಕರ್ಣನಲ್ಲಿ ಪ್ರೀತನಾದನು. ಶ್ರೀ ಕರ ಗ್ರಹಣ ಮಂಗಳವಾದ ಕರಾರವಿಂದವನ್ನೆತ್ತಿ, ಅಭಯವನ್ನಿತ್ತನು. ಬ್ರಹ್ಮರುದ್ರಾದಿ ದೇವ ನಿರೀಕ್ಷಿತವಾದ ಕರುಣಾಕಟಾಕ್ಷದಿಂದ ಅವನನ್ನೀಕ್ಷಿಸಿದನು. ಇಂತು ಪ್ರಸನ್ನನಾದ ಶ್ರೀ ಕೃಷ್ಣನನ್ನು ನೋಡಿ, ಪಿಶಾಚವರನು ಸ್ವಾಮಿಯನ್ನು ಸಕಲೋಪಚಾರಗಳಿಂದ ಪೂಜಿಸಿ, ನುತಿಸಿದನು

|| ಶ್ರೀ ಮಧ್ವೇಶಾರ್ಪಿತಮಸ್ತು ||

21. ಪಿಶಾಚ ಪರಿಮುಕ್ತಿ

ಶ್ರೀವೈಶಂಪಾಯನನು ನಿರೂಪಿಸಿದ ಘಂಟಾಕರ್ಣನ ವೃತ್ತಾಂತವನ್ನು ಕೇಳಿ,ಜನಮೇಜಯನು ಆಶ್ಚರ್ಯಯುತನಾಗಿ "ಸ್ವಾಮಿ ! ಶ್ರೀಕೃಷ್ಣನೇ ತನ್ನನ್ನು ಉದ್ಧರಿಸಲು ಬಂದುದನ್ನು ತಿಳಿದ ಪಿಶಾಚನು ಎಂತು ಶ್ರೀಶನನ್ನು ನುಡಿಸಿದನು. ಅವನಿಗೆ ಪಾಪ ಶರೀರದಿಂದ ಬಿಡುಗಡೆಯಾದುದೆಂತು?" ಎಂದು ಕೇಳಿದನು.

ಶ್ರೀವೈಶಂಪಾಯನನು "ಘಂಟಾಕರ್ಣನು ಶ್ರೀಹರಿಯನ್ನು ನೋಡಿ,ಭಕ್ತಿಪರವಶನಾಗಿ ಇಂತು ನುತಿಸಿದನು" ಎಂದು ಪಿಶಾಚ ಚರಿತವನ್ನು ಮುಂದುವರಿಸಿದನು.

ಘಂಟಾಕರ್ಣನು ಶ್ರೀಕೃಷ್ಣ ! ಕೃಷ್ಣ ! ಎಂದು ಕುಣಿದಾಡಿ,ತಾನು ಶಿವಸಂಬೇರಾದಿಗಳಿಂದ ಕೇಳಿದ ಕೃಷ್ಣ ಚರಿತವನ್ನು ಸ್ತುತಿಸಿ ವರ್ಣಿಸಿದನು.

ದೇವದೇವ !

ಮಧುರವಯ್ಯಾ ನಿನ್ನ ಮಹನೀಯ ಚರಿತವು
ಬ್ರಹ್ಮರುದ್ರೇಂದ್ರಾದಿ ವಂದ್ಯನಾದ ।

ಮಧುರೆಲಿ ನೀ ಪುಟ್ಟಿ ಮಾವನ ಭಯದಿಂದ
ಗೋಕುಲವನು ಪೊಕ್ಕೆ ಗುರುಗುಣಾಢ್ಯ !

ಪೂತನಾ ಮನೆ ನಿನಗೆ ಪೂತನೆ ವಿಷವಿತ್ತು
ಊರ್ವಶಿಯಾದಳ್ಳೆ ಶರ್ವಪಾಲ ।

ಬಂಡಿಯಲ್ಲಡಗಿ ತಾ ಬಂದ ಶಕಟದೈತ್ಯ
ತುಂಡಾಗಿ ಮಡಿದನೋ ದುಷ್ಟದಮನ ।

ಎತ್ತಿ ಕೆಡವಲು ನೋಡಿ ಮತ್ತ ತೃಣಾವರ್ತ
ತಾನಾಗಿ ಬಿದ್ದನೋ ದಾನವಾರಿ !

ಕಂಡು ಬಕಾಸುರ ತುಂಡದಿನುಂಗಲು
ಕೆಂಡದಂತಾದ ದೋರ್ದಂಡ ವೀರ್ಯ !

ದುಷ್ಟಪಾಪಿಷ್ಟ ನರಿಷ್ಟನ ಪಿಡಿದಾಡಿ
ಕುತ್ತಿಗೆ ಹಿಸುಕಿದ ಗೋಪ ವರದ ।

ಕುದುರೆ ರೂಪದಿ ಬಂದ ಮದಮತ್ತ ಕೇಶಿಯ
ಪೊಟ್ಟೆಯ ಸೀಳಿದ ಪೂರ್ಣಕಾಮ !

ತಂದೆಯ ಬಂಧಿಸಿ ತಾನೆ ರಾಜ್ಯವನಾಳ್ದ
ಕಂಸನ ಕೊಂದ ಸಂಸಾರ ವೈರಿ ।

ಕಾಕುಜರಾಸಂಧ ಕಡುಸೈನ್ಯ ತರಲಾಗಿ
ಬಡಿದೋಡಿಸಿದ ಭವ್ಯಬಾಹು ವೀರ್ಯ ।

ಕಾಲಯವನನ ಮುಚುಕುಂದನಿಂದ ಕೊಂದು
ನರಕ ಮಗನೆನ್ನದೇ ನಿತ್ಯ ನರಕ ಕಟ್ಟೆ

ದುಷ್ಟದುರ್ಯೋಧನಾಂತಕ ಶಿಷ್ಟವರದ ।
ಪಾಂಡುಸಂತಪಕ್ಷ ! ರಕ್ಷ ! ಕೃಪಾಕಟಾಕ್ಷ !

ಸಾತ್ತ್ವಿಕ ತಪಮಾಡಿ ಸಮಸುತನನು ಬೇಡೆ
ಸುತನಾದೆ ವಸುದೇವ ಸುದತಿಯಲ್ಲಿ ।

ಸುತಲೀಲೆ ನೋಡಿ ಯಶೋದೆಯು ನಂದನು
ತಪಿಸಲು ಅವರಿಗಾಸುಫಲವಿತ್ತೆ !

ಸಚ್ಚಿದಾನಂದನು ಸಾಮಾನ್ಯನರನಾಗಿ
ನಂದವ್ರಜಾಳಿಗಾನಂದವಿತ್ತೆ !

ಕಾತ್ಯಾಯನೀವ್ರತಗೈದ ಕನ್ಯೆಯರಿಗೆ
ವರನಾಗಬೇಕೆಂಬ ವರವ ಕೊಟ್ಟೆ !

ಗೋವರ್ಧನವನೆತ್ತಿ ಗೋಗೋಪ ಜನರನ್ನು
ಕಾಪಾಡಿ ಇಂದ್ರನ ಗರ್ವಮುರಿದೆ !

ಕಾಳಿಂದಿಮಡುವಿಂದ ಕಾಳಿಯನನುದೂಡಿ
ಜಲವನಿರ್ವಿಷ ಮಾಡಿ ಜಾಣನಾದೆ !

ವೇದವಿದರು ಕೊಡದಾದ ಅನ್ನವನಿತ್ತ
ತತ್ಪತ್ನಿಯರ ಭಕ್ತಿದಯದಿ ತೋರ್ದೆ !

ಪಾಲ್ಬೆಣ್ಣೆ ಮುಸರುಂಡು ಬಾಲೆಯರ್ದೂರಲು
ನಗುನಗುತ್ತವರ ಮನಸ್ಸಗೆದ್ದೆ !

ವೇಣುನಾದಕೆ ಸೋತವಿವಶವಲ್ಲವಸತೀ
ವಲ್ಲಭರಲಿ ನೀನೇ ಪತಿಯೆನಿಸಿದೆ !

ಕಂಸನ ಹಿಂಸೆಗೆ ಕಡುನೊಂದೆತಾಯ್ತಂದೆ
ಯರಕಂಡು ಸಂತೈಸಿ ಅಭಯವಿತ್ತೆ !

ಕಮಲನಾಭ ಮಹಾಮೀನ ! ಕಮಠರೂಪ !
ಆದಿವಾರಾಹ ನರಸಿಂಹ | ಅದಿತಿಪುತ್ರ !

ಪರಶುರಾಮನೆ ! ಶ್ರೀರಾಮ ! ವರದಕೃಷ್ಣ !
ಬುದ್ಧ ! ಕಲ್ಕಿ ! ಕೊಡಯ್ಯ ವಿಶುದ್ಧಬುದ್ಧಿ.

ಶುಭತಮಸುಚರಿತ ಸುರನರ ಗಣನತ
ಸಿರಿಸತಿಪತಿ ಪೊರೆ ಶರಣು ನಿನಗೆ

ಕಮಲಜಹರಸುರ ವಿಮಲ ವಚನನುತ

ಕರಿವರ ವರದನೆ ಶರಣು ನಿನಗೆ.

ದಿತಿಸುತ ರವಿಸುತ ಸತತ ಸುಖಸಹಿತ
ಜನಪಶವು ಸುಖದ ಶರಣು ನಿನಗೆ

ಜನನ ಮರಣ ಭಯಹನನ ಗುರುಕರುಣಾ
ವರನಿಗಮವಿದಿತ ಶರಣು ನಿನಗೆ

ಪರಮದುರಿತ ಜಲಧಿಯಲಿ ನರಳುತಿಹೆನು
ಇತರ ಗತಿಯನು ಹುಡುಕದೆ ವಿತತಮಹಿಮ

ಭವದ ಮಲಪದಕಮಲವೆ ಶಿವದವೆನುತ
ಮನದಿ ಧರಿಸಿದೆ ಪೊರೆ ಯದುವನದಿವಿಧುವೆ !

ರಜಕಮಲ್ಲರ ಕೊಂದ ಶ್ರೀರಮಣ ಕಂಡ
ರುಕ್ಮಿಣೀ ಪತಿ ರುಕ್ಮಿ ವಿರೋಧಿ ಕಂಡ
ದಾನವಾಂತಕ ಭಕ್ತ ನಿಧಾನ ಕಂಡ
ಕಂಡ ಶ್ರೀ ಕೃಷ್ಣ ಎನಗಿಂದು ಕಂಡ ಪ್ರಭುವು !

ಎಂದು ಘಂಟಾಕರ್ಣನು ಸಂತಸದಿಂದ ಕುಣಿದಾಡಿ, ಶ್ರೀಕೃಷ್ಣನಿಗೆ ವಂದಿಸಿದನು "ಹರಿಯನ್ನು ಕಂಡ ನನ್ನ ಸಂಸಾರ ಸಂಕೋಲೆ ಕಳಚಬಿತ್ತು. ನನ್ನ ಮುಕ್ತಿದ್ವಾರವೀಗ ತೆರೆದಿತ್ತು. ಜನ್ಮ ಶತಂಗಳ ಪುಣ್ಯ ಫಲಿಸಿತ್ತು. ಏನು ಕೊಡಲಿ ಪೂಜಾರ್ಹನಾದ ದಾಶಾರ್ಹನಿಗೆ ? ಏನೆಂದು ಮಾತಾಡಿಸಲಿ ! ಏನು ಮಾಡಲಿ ? ಎಂತು ಪ್ರೀತನಾಗುವನು. ನನ್ನ ಅಂತರ್ಯಾಮಿ ಶ್ರೀಕೃಷ್ಣ " ಎಂದು ಚಿಂತಿಸಿ ಪಿಶಾಚನು ಒಂದು ವಿಪ್ರ ಶವವನ್ನು ತಂದು ಶ್ರೀಶನ ಮುಂದಿಟ್ಟು ಸಮರ್ಪಿಸಿ ಕೈಮುಗಿದು ನಿಂತನು "ನವಶವವಿದು ಬ್ರಾಹ್ಮಣನ ದೇಹವು ಪಿಶಾಚ ಭಕ್ಷ್ಯವಾದುದರಿಂದ ನಿನಗೆ ಇದನ್ನೆ ಕೊಟ್ಟೆನು. ದೋಷವಲ್ಲದಿರೆ ಸ್ವೀಕರಿಸು ಪ್ರಭೋ !" ಎಂದ ಘಂಟಾಕರ್ಣನ ವಚನವನ್ನು ಭಕ್ತಿವಶನಾದ ಕೇಶವನು ಮೆಚ್ಚಿ "ಸಾಕು ನಿನ್ನ ಭಕ್ತಿರಸದಿಂದ ಪ್ರೀತನಾಗಿರುವೆನು. "ಬ್ರಾಹ್ಮಣೋನ ಹಂತವ್ಯಃ" ಎಂಬ ವೇದ ವಚನವನ್ನು ಮರೆತು ಇಂತು ಮಾಡಿದೆ. ಇದು ಸರಿಯಲ್ಲ. ವಿಪ್ರರು ಸರ್ವಥಾ ಪೂಜ್ಯರು ನನ್ನಂತಹವರಿಗೆ ಇದು ಸಮರ್ಪಣೀಯವೆನಿಸದು. ನಿನ್ನ ಸಂಕೀರ್ತನದಿಂದಲೇ ತುಷ್ಟನಾಗಿ, ನಿನ್ನ ದುಷ್ಟಯೋನಿಯಿಂದ ಬಿಡಿಸಿ ಕಾಪಾಡುವೆನು. ಯಾವ ಯೋನಿಜಾತರಿಗೆ ತಕ್ಕ ಆಹಾವದೆನ್ನವರು ಶ್ರೀಶನಾದ ನನಗೆ ಸಮರ್ಪಿಸಿ, ಉಂಡಾಗ, ಪಾಪರಹಿತರಾಗುವರಿದೂ ನಿಜ ! ನಿನಗೆ ಈಗಲೇ ಪಿಶಾಚ ಶರೀರದಿಂದ, ಮುಕ್ತಿಯನ್ನಿತ್ತು ಸದ್ಗತಿಗೆ ಕಳಿಸುವೆನು" ಎಂದು ಶ್ರೀಕೃಷ್ಣನು ಘಂಟಾಕರ್ಣನನ್ನು ತನ್ನ ಕರಾರವಿಂದದಿಂದ ಮುಟ್ಟಿದನು. ತತ್ಕ್ಷಣವೇ ಪಿಶಾಚನು ಆ ಶರೀರವನ್ನು

ಬಿಟ್ಟು ದಿವ್ಯಗಂಧರ್ವ ಶರೀರನಾದನು. ಪದ್ಮಾಕ್ಷನು ಪದ್ಮ ಗಂಧನು, ದೀರ್ಘ ಬಾಹು ದಂಡನು ಸರ್ವಾಭರಣ ಭೂಷಿತನು, ಆಗ ಘಂಟಾಕರ್ಣನು ಬಾಯಾರ ಕೃಷ್ಣನನ್ನು ಕೀರ್ತಿಸಿ, ಬಹುತಪೋಲಭ್ಯವಾದ ಪುಣ್ಯಲೋಕವನ್ನು ಪೊಂದಿದನು.

ರಾಜನ್ ! ಜನಾರ್ದನನನ್ನು ಆಶ್ರಯಿಸಿದ ಭಕ್ತನಿಗೆ ಇಹ ಪರಗಳಲ್ಲಿ ದುರ್ಲಭ ವಾದುದಿಲ್ಲ.

ಶ್ರೀ ಕೃಷ್ಣನಾಗ ಘಂಟಾಕರ್ಣನಿಗಿಂತು ಆದೇಶಿಸಿದನು: "ಇಂದ್ರನಿರುವವರೆಗೂ ನಿನ್ನ ಪುಣ್ಯ ಲೋಕಗಳು ಅಕ್ಷಯವಾಗಲಿ ! ಆ ಮೇಲೆ ನಿನಗೆ ಸಾಧನ ಪೂರ್ತಿಯಾಗಿ ನನ್ನ ವೈಕುಂಠದಲ್ಲಿ ಮುಕ್ತಿಯನ್ನಿತ್ತು ನಿನ್ನನ್ನು ಸಲಹುವೆನು. ನಿನ್ನ ತಮ್ಮನೂ ನನ್ನ ಭಕ್ತನಾಗಿರುವನು. ಅವನಿಗೂ ಮುಕ್ತಿ ಯಾಗುವುದು. ನಿನ್ನಲ್ಲಿ ಪ್ರೀತನಾಗಿರುವೆನು. ಬೇಕಾದ ವರವನ್ನು ಬೇಡು" ಎಂದ ಸ್ವಾಮಿಗೆ ಅವನಿಂತೆಂದನು.

"ದೇವಾ ! ನನ್ನ ಪಿಶಾಚಮುಕ್ತಿಯ ನಿನ್ನ ಕರುಣಾಕರಚರಿತವನ್ನು ಪೇಳಿ, ಕೇಳಿದವರು ನಿನ್ನ ಭಕ್ತರಾಗಲಿ ! ಅವರ ಮನಸ್ಸು ಕಲುಷದೂರವಾಗಲಿ !" ಎಂದು ಬೇಡಿದವರವಿತ್ತು ಶ್ರೀ ಹರಿಯು, ಈ ಬ್ರಾಹ್ಮಣ ಶವವನ್ನು ಮುಟ್ಟಿ ಬದುಕಿಸಿದನು. ವಿಪ್ರನು ಬ್ರಾಹ್ಮಣ ಪ್ರಿಯನನ್ನುನುತಿಸಿ ನತಿಸಿ ಧನ್ಯನಾದನು. ಅಲ್ಲಿಂದ ತೆರಳಿ ಗೋವಿಂದನು ಮುನಿ ಜನರಿದ್ದ ನರನಾರಾಯಣಾಶ್ರಮಕ್ಕೆ ಹಿಂದಿರುಗಿ ಬಂದು, ಅವರಿಗೆ ಪಿಶಾಚ ಕಥೆಯನ್ನೆಲ್ಲ ವರ್ಣಿಸಿದನು. ಮುನಿಗಳು ಅದನ್ನು ಕೇಳಿ ಆಶ್ಚರ್ಯ ಭರಿತರಾಗಿ ಶ್ರೀ ಹರಿಗೆ ವಂದಿಸಿದರು.

○

೨೨. ಶ್ರೀ ಕೃಷ್ಣ ತಪಶ್ಚರಣ.

ಮರುದಿನ ಬೆಳಗಾಯಿತು. ಶ್ರೀ ಕೃಷ್ಣನು ಮುನಿಗಳನ್ನೂ ಬರಬೇಕೆಂದು ಆಹ್ವಾನಿಸಿ, ಗರುಡನನ್ನೇರಿ, ಕೈಲಾಸಗಿರಿಗೆ ತೆರಳಿದನು. ಎಲ್ಲಿ ವೈ ಶ್ರವಣನು ಪ್ರಿಯನಾದ ಶಂಕರನನ್ನು ಸೇವಿಸುವನೋ ಭೃಂಗಿರಿಟಿ ಮುಂತಾದ ಪ್ರಮುದ್ದ ಮುಖ್ಯರೆಲ್ಲ ಹರ ಸೇವಾ ನಿರತರಾಗಿರುವರೋ, ಎಲ್ಲಿ ಗಂಗಾದಿನದಿಗಳಿಗೆ ಜನ್ಮ ಭೂಮಿಯಾದ ಮಾನಸ ಸರೋವರವು ಕಮಲ ಕಲ್ಹಾರಗಂಧಿತವಾಗಿದೆಯೋ, ಯಾವ ವಿಹಾರ ಭೂಮಿಗಳಲ್ಲಿ ಉಮಾ ಸಹಿತನಾಗಿ ಶಿವನು ಕ್ರೀಡಿಸುವರೋ, ಎಲ್ಲಿ ಕಮಲಾಕ್ಷನೆಂಬ ದೈತ್ಯನು ಕಣ್ಣನ್ನು ಕಿತ್ತಿ ಸಮರ್ಪಿಸಿ, ಶಿವನ ಪ್ರೀತಿಗೆ ಪಾತ್ರನಾದನೋ, ಎಲ್ಲಿ ಬ್ರಹ್ಮ ಶಿರವನ್ನು ಕತ್ತರಿಸಿ ಬಂದ ಪಾಪವನ್ನು ಶಿವನು ತೊಳೆದುಕೊಂಡನೋ, ಅಂತಹ ಕೈಲಾಸ ಪ್ರಾಂತವನ್ನು ಸೇರಿ, ಶ್ರೀ ಕೃಷ್ಣನು ತಪಸ್ಸಿಗೆ ಕೂತನು. ಮಹಜ್ಜನರು ಲೋಕ ಶಿಕ್ಷಣೆಗಾಗಿ ತಪೋಯಜ್ಞದಾನಾದಿ ಸತ್ಕರ್ಮಗಳನ್ನು ಮಾಡುವರಲ್ಲವೇ !

ಮನಜ ಸದೃಶ ಶರೀರವನ್ನಾಶ್ರಯಿಸಿದ ಶ್ರೀಶನು ಮನುಜನಂತೆ ಜಟೆಬಿಟ್ಟು, ನಾರನ್ನುಟ್ಟು, ಶುಚಿ ಪ್ರದೇಶದಲ್ಲಿ ಕೂತು, ಇತರವನ್ನೆಲ್ಲ ಬಿಟ್ಟು, ಹನ್ನೆರಡು ವರ್ಷಗಳ ತಪಸ್ಸನ್ನು ಮಾಡಿದನು. ಫಾಲ್ಗುನ ಮಾಸದಲ್ಲಿ ಆರಂಭಿಸಿದ ತಪವು ನಿರ್ವಿಘ್ನವಾಗಿ ಸಾಗಿತು. ವೇದಾಧ್ಯಯನ, ಶಾಕಾಹಾರಜೀವನ, ಅಗ್ನಿವೇಶ್ಯ ಚಿಂತನಗಳಲ್ಲಿ ದೇವನು ನಿರತನಾದನು ಆಗ ಹೋಮಕ್ಕಾಗಿ ಬೇಕಾಗುವ ಸಮಿಧಾದಿ ದ್ರವ್ಯಗಳನ್ನು ಗರುಡನು ತಂದು ಕೊಡುತ್ತಿದ್ದನು. ಚಕ್ರಮಾನಿಯು ಹೂವುಗಳನ್ನೂ, ನಂದಕವು ದರ್ಭೆಗಳನ್ನೂ, ಶಂಖವು ಜಲವನ್ನೂ ತಂದು ಕೊಡುತ್ತಿರಲು, ಶಂಖವು ವೇದ ಘೋಷಕ್ಕೆ ಶ್ರುತಿಗೂಡಿಸುತ್ತಿತ್ತು. ಗದೆಯು ಸ್ವರೂಪದಿಂದ ನಿಂತು . ವಿಘ್ನಕರ್ತೃ ದೈತ್ಯಾದಿಗಳನ್ನು ಓಡಿಸುತ್ತಿತ್ತು. ಸರ್ವೇಶ್ವರನಾದ ಸಾಕ್ಷಾದ್ವಿಷ್ಣುವೇ ಕೃಷ್ಣರೂಪನಾಗಿ ನಿಂತ ತಪಗೈಯುತ್ತಿರುವ ಆಶ್ಚರ್ಯವನ್ನುನೋಡಲು, ಇಂದ್ರಯಮ ವರುಣ ಕುಬೇರಾದಿ ದೇವತೆಗಳು ಬಂದರು. ಪರ್ವತ ನಾರದರೂ ಬಂದರು. “ಆಶ್ಚರ್ಯಾಶ್ಚರ್ಯವು ! ನೋಡಿ ಇಲ್ಲಿ ! ಯೋಗಿಧ್ಯೇಯನು ಸ್ವಯಂ ಧ್ಯಾನರತನಾಗಿರುವನು. ಬ್ರಹ್ಮರುದ್ರ ಪ್ರವರ್ತಕ ಪ್ರಭುವು ಯಾರನ್ನು ಕುರಿತು ತಪವನ್ನು ಮಾಡುತ್ತಿರುವನು ? ಅಹೋ! ಎಂದು ವಿಸ್ಮಯ ಭರಿತರಾದ ದೇವಋಷಿಗಳ ಸಂಶಯವನ್ನುಬಿಡಿಸಲೆಂಬಂತೆ ಶ್ರೀ ಶಿವನು ಶಿವೆಯಿಂದ ಕೂಡಿ ಶ್ರೀ ರುಕ್ಮಿಣೀ ಕೃಷ್ಣರಿದ್ದಲ್ಲಿಗೆ ಬಂದನು.

ಇಂದು ಶೇಖರನು ಕುಬೇರನಿಂದಲೂ, ಪ್ರಮಥರಿಂದಲೂ, ಭೂತ ಪಿಶಾಚ ಸಂಘದಿಂದಲು ಕೂಡಿ ಬಂದನು. ದರ್ಭೆಗಳನ್ನೂ, ಅಗ್ನಿ ಕುಂಡವನ್ನೂ, ಡಿಂಡಿಮವನ್ನೂ ಶೂಲವನ್ನೂ ಪಿಡಿದು, ರುದ್ರಾಕ್ಷ ಮಾಲೆಗಳನ್ನುಧರಿಸಿ, ಅರ್ಧಾಂಗದಲ್ಲಿ ಸರ್ವಮಂಗಳೆಯನ್ನಿಟ್ಟು, ಜಟಾಜೂಟದಲ್ಲಿ ವಿಷ್ಣು ಪದಿಯಾದ ಗಂಗೆಯನ್ನಿಟ್ಟು, ಬಂದು ಶಿವನು ಬಲು ಮನೋಹರನಾಗಿದ್ದನು ಮೈಗೆ ಪೂಸಿದ ಭಸ್ಮಾಂಗ ರಾಗದಿಂದಲೂ, ಕರ್ಣ ಕಂಠ ಕರಭುಜಗಳಲ್ಲಿ ಸೊಗಸಾದ ಸರ್ಪಗಳಿಂದ ಅಲಂಕರಿಸಿ ಕೊಂಡು, ಧರಿಸಿದ ಶಿರಃ ಕಪಾಲದಿಂದಲು ದಿತಿಜಭಯಂಕರನಾದ ಶಿವನು ಹರಿಯ ದರ್ಶನಕ್ಕೆಂದು ಬಂದನು.

ಭೂತೇಶನು,ಭೂತ ಮನೋನಿಯಾಮಕನು, ಹದಿನಾರು ತತ್ವಗಳಿಗೆ ಪ್ರಭುವು, ದಕ್ಷಯಜ್ಞಧ್ವಂಸಕನು, ವಿಶ್ವೇಶ್ವರನು, ರೋದನದಿಂದ ರುದ್ರ ನೆನಿಸಿ, ರುದ್ರರೋದನನೆಂಬ ಬಂಗಾರವೇ ವೀರ್ಯವಾಗುಳ್ಳವನು, ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಯಜಮಾನ ಎಂಬ ಅಷ್ಟ ಮೂರ್ತಿಯಾದವನು, ಕುಂಡಧಾರ ಕುಂಡೋದರ ಮುಂತಾದ ಪಾರ್ಷದ ಸೇವಿತನು ಆದ ಶಿವನು ಬಂದು ಶ್ರೀ ಕೃಷ್ಣನನ್ನು ನೋಡಿದನು. ವಿಶ್ವೇಶ್ವರನು ವಿಶ್ವೇಶ್ವರನಾದ ವಿಷ್ಣುವಿನನ್ನು ನೋಡಿ, ನಮಸ್ಕಾರವನ್ನು ಮಾಡಿದನು.

“ಜಯವಿಷ್ಣೋ ! ಹೃಷೀಕೇಶ ! ಜಯಶಂಕರ ವಂದಿತ ! ಜಯರುದ್ರಮಹಾದೇವ! ಜಯಭಕ್ತಶುಭಂಕರ । ಜಯಕೌಸ್ತುಭಶೋಭಿತಾಂಗ । ಜಯಭಸ್ಮವಿರಾಜಿತ । ಜಯ

ಚಕ್ರಗದಾಪಾಣೇ! ಜಯಶೂಲಿನ್ ತ್ರಿಲೋಚನ!" ಎಂಬ ಜಯಶಬ್ದಗಳು ಕೈಲಾಸಗಿರಿ ಕಂದರಗಳಲ್ಲಿ ಪ್ರತಿಧ್ವನಿಸಿದವು! ಆಗ ಶ್ರೀಕೃಷ್ಣನು ವೃಷಧ್ವಜನನ್ನು ನೋಡಿ ಹೃಷ್ಟನಾಗಿ ಇಂತು ನುತಿಸಿದನು.

"ಶಿತಿಕಂಠ! ಶಂಭೋ! ಶಂಕರ! ತೇನಮಃ || ಉಗ್ರವಾಸಿನ್! ಶೋಚಿಷ್ಮಾನ್! ಮೀಢುಷ್ಟಮಾಯ ನಮಃ|| ವಿಶ್ವತನವೇ ನಮಃ ಅಮೂರ್ತ, ದೇವ ಪಿನಾಕಿನ್, ಶಿವ, ತುಂಡ, ತುಷ್ಯ, ತುಟಿ ತಪಿ, ಶಾಂತ, ಗಿರಿಶ, ಗಿರಿವಲ್ಲಭ, ಹರ, ಹರಿಹರ, ಘೋರ, ಘೋರ ಘೋರ, ಪುರಹಾರಿನ್, ಬೀಜ, ಶುಚಿ, ಶೂಲಾಸಿಧಾರಿಣೇನಮಃ ತಿಗ್ಮತೇಜ, ಭಕ್ತ ಪ್ರಿಯ, ಭಕ್ತ, ವಿಷ್ಣುಭಕ್ತಪ್ರಿಯ, ಕೃತ್ತಿವಾಸ, ಭೂತಾನಾಂಪತಯೇನಮಃ|| ದಕ್ಷಮಖಘ್ನ, ಭಗನೇತ್ರಹರ, ತ್ರ್ಯಂಬಕ, ವರದ, ನೀಲಲೋಹಿತ, ಧ್ರುವ, ಕುಶ, ಪಾಶ ಪ್ರಿಯ, ವಿರೂಪ, ಸುರೂಪ, ನಗ್ನ, ನಗ್ನರೂಪ, ಭೂತಾವಾಸ, ವಾಮದೇವ, ವಾಗ್ರೂಪ, ಸ್ತುತಿರೂಪ, ಹರಿಕೇಶಃ ಖರಪ್ರಿಯ, ಶ್ರೀಶಂಕರ! ತೇ ನಮಃ ||

ಸರ್ವಾತ್ಮನ್ ಸರ್ವ ಭೂತೇಶ ತ್ರಾಹಿಮಾಂ ಸತತಂ ಹರ ರಕ್ಷ ದೇವ ಜಗನ್ನಾಥ ಲೋಕಾನ್ ಸರ್ವಾತ್ಮನಾ ಹರ ತ್ರಾಹಿಭಕ್ತಜನಾನ್‌ದೇವ ಭಕ್ತಪ್ರಿಯಸದಾಶಿವ!"

ಇಂತು ನುತಿಸಿದ ಶ್ರೀಕೃಷ್ಣನ ಹಸ್ತವನ್ನು ತನ್ನ ಹಸ್ತದಿಂದಪಿಡಿದು, ಎಲ್ಲ ದೇವಮುನಿ ಭೂತಪ್ರಮಥರು ಕೇಳುತ್ತಿರಲು ಶಂಕರನು ಇಂತೆಂದನು.

"ದೇವದೇವೇಶ! ಚಕ್ರಪಾಣೇ! ಜನಾರ್ದನ! ಏನಿದು! ಯಾರನ್ನು ಕುರಿತು ತಪಗೈದೆ ಸರ್ವೋತ್ತಮ.! ಯಾರನ್ನು ನುತಿಸುವೆ ವೇದಪ್ರತಿಪಾದ್ಯ! ಯಾರಿಗೆ ನಿನ್ನನಮನ ಬ್ರಹ್ಮರುದ್ರಶಕ್ರವಂದ್ಯ! ಎಲ್ಲವೂ ಲೋಕವಿಡಂಬನೆಗಾಗಿ ಮಾಡಿದಮಾಧವನೇ! ನಿನ್ನಮಹಿಮೆಗೆ ನಮೋನಮಃ || ಸ್ವಯಂವಿಷ್ಣುವಾದ ನಿನಗೆ ವೈಷ್ಣವನಾದ ನಾನು ಕೊಡುವುದು ಏನಿದೆ? ಪ್ರಭೂ! ಪುತ್ರನಿನಾಗಿ ತಪಗೈದೆಯಾ? ಪುತ್ರನನ್ನು ನಿನ್ನಶರೀರದಿಂದಲೇ ಹೊರತಂದು, ಜರಾಸಂಧನ ಸೈನ್ಯವನ್ನು ಅವನಿಂದ ಪ್ರದ್ಯುಮ್ನನಿಂದ ಸೋಲಿಸಿಸಿದೆ! ಇನ್ನು ನಾನೇನು ಕೊಡಬಲ್ಲೆನು! ದೇವ! ಹಿಂದೆ ಕೃತಯುಗದಲ್ಲಿ ನಿನ್ನ ಪ್ರೀತಿಗಾಗಿ ನಾನು ತೀವ್ರ ತಪವನ್ನು ಮಾಡುತ್ತಿದ್ದೆನು. ಭವಾನಿಯು ಹಿಮಾಲಯ ರಾಜನಿಂದ ನಿಯುಕ್ತಳಾಗಿ ನನ್ನ ಪರಿಚರ್ಯೆಗೆಂದುನಿಂತಳು. ಇಂದ್ರನು ನನ್ನ ತಪಸ್ಸಿನಿಂದ ಭೀತನಾಗಿ, ಮಧು, ಮನ್ಮಥ, ಮನೋಹರಾಪ್ಸರೆಯರನ್ನು ತಪೋಭಂಗ ಮಾಡೆಂದು ಕಳಿಸಿದನು. ಸರ್ವಜ್ಞ ಕೃಷ್ಣ! ನೀನರಿಯದುದಲ್ಲ. ಆದರೂ ವಿಜ್ಞಾಪಿಸುವೆನು. ಕೇಳು! ಪುಷ್ಪಬಾಣನನ್ನು ನೋಡಿ, ಪುಷ್ಪಗಾತ್ರಿಯಾದ ಪಾರ್ವತಿಯನ್ನೂ ಕಂಡು, ಮನೋಜ ವಿಕಾರದಿಂದ ಸಿಟ್ಟು ಬಂದು, ನಾನಾಗ ಮೂರನೇ ಕಣ್ಣಿನ ಕಿಡಿಯಿಂದ ಮಾರನನ್ನು ಭಸ್ಮಮಾಡಿದೆನು. ಇಂದ್ರನ ಕಾರ್ಯವಿದೆಂದು ಗೊತ್ತಾದ ಮೇಲೆ, ನನಗೆ ಮದನನಲ್ಲಿ ದಯೆಬಂತು ರತಿಯು ದೀನಳಾಗಿ ಪತಿಭಿಕ್ಷೆಯನ್ನು ಬೇಡಿದಳು. ನನ್ನ ತಂದೆ ಬ್ರಹ್ಮದೇವನೂ ನನಗೆ

ಆಜ್ಞಾಪಿಸಿರುವನು. ದೇವೇಶ! ಅದೇ ಮನ್ಮಥನೇ ಈಗ ನಿನಗೆ ಮತ್ತೆ ಪುತ್ರನಾಗುವನು. ಪ್ರದ್ಯುಮ್ನನೆಂದು ಖ್ಯಾತನಾಗಿ, ಯಾದವವಂಶವನ್ನು ವೃದ್ಧಿಗೊಳಿಸುವನು. ಇದು ನಾನಿತ್ತ ವರವಲ್ಲ, ಸುಟ್ಟ ಮನ್ಮಥನನ್ನು ಮತ್ತೆ ನಿನಗೆ ಸಮರ್ಪಿಸುವ ನನ್ನ ಕರ್ತವ್ಯವಾಗಿದೆ."

ಇಂತು ನುಡಿದು ಮಹಾದೇವನು ಅಲ್ಲಿ ನೆರೆದಿದ್ದ ದೇವ ಋಷಿ ಗಂಧರ್ವ ಭೂತ ಪ್ರಮಥರಿಗೆ ನಿಜವಾದ ತತ್ವವನ್ನು ತಿಳಿಸಿಕೊಡಬೇಕೆಂಬ ಕರುಣೆಯಿಂದ, ಮತ್ತೆ ಮಾತನಾಡಿದನು.

ಶ್ರೀಶಂಕರರು ಕೈಜೋಡಿಸಿ, ವಂದಿಸಿ, ವಿನಯವಿನಮಿತಕಂಧರನಾಗಿ "ಶ್ರೀ ಗೋವಿಂದ! ಜಗತ್ಕಾರಣನು ನೀನೆಂದು ಸಾಂಖ್ಯರು ನುಡಿಯುವರು ಪ್ರಕೃತಿಯೇ ಕಾರಣವೆಂಬರು ಅನ್ಯಸಾಂಖ್ಯರು. ವೇದಾರ್ಥವನ್ನು ತಿಳಿಯದೆ ಆಡುವ ಮಾತುಗಳು ಮಾನ್ಯವಲ್ಲ. ನೀನು ಸ್ವತಂತ್ರನು. ಪ್ರಕೃತಿಯು ತತ್ ಸ್ವಾಮಿನಿಯು ಆದ ಶ್ರೀದೇವಿಯು ನಿನ್ನ ಅಧೀನಳು, ನಿನಗೆ ಪ್ರಿಯಳು. ಜಡ ಪ್ರಕೃತಿಯಿಂದ ನೀನು ಸೃಷ್ಟಿಕಾಲದಲ್ಲಿ ಮಹದಹಂಕಾರಾದಿ ಇಪ್ಪತ್ತುಮೂರು ತತ್ವಗಳನ್ನು ಹೊರತಂದು ಭೂತಶರೀರಗಳನ್ನೂ ಜಗವನ್ನೂ ಸೃಜಿಸುವೆ! ಅನಾದಿನಿತ್ಯರಾದರೂ ದೇಹ ಯೋಗವಿಲ್ಲದೆ ನಿನ್ನ ಸೇವಾರೂಪ ಸಾಧನವನ್ನು ಮಾಡಿಕೊಂಡು, ನಿನ್ನ ಅತ್ಯರ್ಥ ಪ್ರಸಾದೈಕಲಭ್ಯವಾದ ಸ್ವರೂಪಾನಂದಾವಿರ್ಭಾವರೂಪ ಮುಕ್ತಿಯನ್ನು ಹೊಂದಲಾರದ ಸುಜೀವರಿಗೆ ಅಂತಹ ಮುಕ್ತಿಯಾಗಲೆಂದು ಕರುಣಾವಗುಣಾಲಯವಾದ ನೀನು ದೇಹವನ್ನಿತ್ತಾಗ, ನಮಗೆ ನಿನ್ನ ಸೇವಾಫಲಭ್ಯಯುತವಾದ ಮಾನವ ದೇವತಾದಿ ಶರೀರಗಳುಬಂದಿವೆ. ಮಹದಭಿಮಾನಿ ಬ್ರಹ್ಮದೇವನೂ ಅಹಂಮಾನಿ ನಾನೂ ನಿನ್ನ ಕಿಂಕರರಾಗಿ ಸೃಷ್ಟಿಸಂಹಾರಗಳನ್ನು ನೀನಿತ್ತ ಅಧಿಕಾರಶಕ್ತಿ ಜ್ಞಾನಗಳಿಂದ ಮಾಡಿ, ನಿನ್ನ ಕೃಪೆಗೆ ಪಾತ್ರರಾಗಲು ಹವಣಿಸುತ್ತಿರುವೆವು.

ಭೂ ಜಲ ವಹ್ನಿವಾಯುಗಗನಗಳು, ತಜ್ಜನ್ಯಗುಣಗಳಾದ ಗಂಧ ರಸ ರೂಪ ಸ್ಪರ್ಶಶಬ್ದಗಳು, ತತ್ಸ್ವೀಕಾರಕಾರಣಗಳಾದ ನಾಸಾನಿರಸನ ನೇತ್ರ ಚರ್ಮಶ್ರೋತ್ರಗಳು, ಅವುಗಳಿಗೆ ಅವನ್ನುತಂದೀವ ವಾಕ್‌ಪಾಣಿಪಾದ ಪಾಯೂಪಸ್ಥಗಳು, ಇವೆಲ್ಲವನ್ನೂ ನಡೆಸಿ ಜೀವನಿಗೆ ಅನುಭವವೀವ ಮನಸ್ಸು, ದೃಢಜ್ಞಾನವೀವ ಬುದ್ಧಿ, ಜ್ಞಾನಕೋಶವಾದ ಚಿತ್ತ ಇಂತು ಸರ್ವತತ್ವಗಳೂ ನಿನ್ನ ಅಧೀನವಾಗಿವೆ. ಆ ತತ್ವದ ಅಭಿಮಾನಿಗಳಾದ, ಭೂದೇವೀ, ವರುಣ, ವಹ್ನಿ, ಪ್ರವಹವಾಯು, ಗಣಪತಿ, ಅಶ್ವಿನೀದ್ವಯ. ವರುಣ, ಸೂರ್ಯ, ಆಹಂಕಾರಿಕ ಪ್ರಾಣ, ಚಂದ್ರಾದಿದಿಗ್ದೇವರು–ಮತ್ತು ವಹ್ನಿದಕ್ಷಜಯಂತ ಮಿತ್ರ ಮನುಗಳು, ಸೌಪರ್ಣೀ ಪಾರ್ವತಿಯರು (ಗುಣಮಾನಿನಿ) ಇಂದ್ರಕಾಮರು ಸಪತ್ನೀಕರು, ಗರುಡ ಶೇಷರುದ್ರರು (ನಾನು) ಭಾರತೀ ಸರಸ್ವತಿಯರು ಕೊನೆಗೆ ಮುಖ್ಯಪ್ರಾಣಚತುರ್ಮುಖರು. ಇವರೆಲ್ಲರೂ ನಿನ್ನ ಅಧೀನರಾಗಿ, ನಿನ್ನಿಂದ

ಹಿಂತವನ್ನು ನಾವು ರೂಪಕ್ರಿಯಾಶಕ್ತಿಗಳನ್ನು ಪಡೆದು, ಜಗವನ್ನು ನಡೆಸುತ್ತಿರುವರು. ಸರ್ವ ಸ್ವಾಮಿನಿಯಾದ ಶ್ರೀ ದೇವಿ ಪಶರಿಪರಿಲ್ಲವಾದರೆ ಆ ಜಗನ್ಮಾತೆಯು ನಿನ್ನ ಅಧೀನಳು ಇಂತಹ ಸಮಾಧಿಕರಹಿತನು, ಜಗದ್ವಿಲಕ್ಷಣನು, ಸರ್ವಜೀವ ಸ್ವಾಮಿಯೂ ಆದ ನೀನು ನನ್ನನ್ನು ನಿನ್ನ ಪಾತ್ರವನ್ನು ಕುರಿತು ತಪಸ್ಸು ಮಾಡಿದೆ ಎಂದರೆ ಸಂತಾನಾಕಾಂಕ್ಷಿಗಳು ಶಿವನನ್ನು ಭಜಿಸಬೇಕೆಂದು ಜಗಕ್ಕೆ ತೋರಲೆಂದೇ ನಾನು ತಿಳಿದಿರುವೆನು.

ಸಹಸ್ರಶೀರ್ಷನಾದ ಪುರುಷನು ನೀನು. ನಿನ್ನ ಪ್ರತಿಮೆಯಂತೆ ಜಗವೆಲ್ಲವೂ ನಿನ್ನ ಅಧೀನವು ಭಿನ್ನವೂ ಆಗಿದೆ. ಪಾದದಿಂದ ಭೂಮಿ, ಕಿವಿಯಿಂದ ದಿಕ್ಕುಗಳು, ಮನಸ್ಸಿನಿಂದ ಇಂದ್ರ ಚಂದ್ರರು, ಕಣ್ಣಿಂದ ಸೂರ್ಯ, ಬಾಯಿಂದ ಅಗ್ನಿ, ಪ್ರಾಣದಿಂದ ಸೂತ್ರನಾಮಕ ಪ್ರಾಣ, ನಾಭಿಯಿಂದ ಅಂತರಿಕ್ಷ, ಶಿರದಿಂದ ದ್ಯುಲೋಕ, ಮುಖದಿಂದ ವಿಪ್ರವರ್ಣ, ಬಾಹುಗಳಿಂದ ರಾಜನ್ಯ ಕ್ಷತ್ರಿಯರು, ತೊಡೆಯಿಂದ ವೈಶ್ಯರು, ಪಾದದಿಂದ ಶೂದ್ರರು, ಪುಟ್ಟಿ ಆಯಾ ಶಕ್ತಿಗಳನು ನೀನಿತ್ತಾಗ, ಇತ್ತಷ್ಟೇ ಪಡೆದು ಜಗದ್ವ್ಯಾಪಾರ ನಿರತರಾಗಿರುವರು. ನೀನಿತ್ತ ಕಾಂತಿಯಿಂದ ಸೂರ್ಯ ಚಂದ್ರ ತಾರಾವಹ್ನಿ ವಿದ್ಯುತ್ತುಗಳು ಬೆಳಗುತ್ತಿವೆ, ನಿನ್ನ ಉಸಿರೇ ವೇದಗಳು. ನಿನ್ನ ಮಂದಹಾಸವೇ ನಾನು ನನ್ನದೆಂಬ ಮಾಯೆ, ನಿನ್ನ ಕರುಣಾ ಕಟಾಕ್ಷವೇ ಮೋಕ್ಷ, ಎಲ್ಲದರಲ್ಲಿಯೂ ವ್ಯಾಪ್ತನಾದುದರಿಂದ ವಿಷ್ಣುವೆನಿಸಿರುವೆ ! ವೇದಾಂತವಿದ್ಯಾ ವಿಷಯನಾಗಿ ಬ್ರಹ್ಮನೆನಿಸಿರುವೆ ಸತ್ವರಜಸ್ತಮೋಗುಣಗಳಿಂದ ನೀನು ಪಾಲನ ಸೃಜನ ಸಂಹರಣಗಳನ್ನು ಮಾಡುವೆ ! ಗುಣ ಪೂರ್ಣನಾಗಿ ಬ್ರಹ್ಮನೆನಿಸಿ ಜಿಜ್ಞಾಸುನಾಗಿರುವೆ ! ಇಂದ್ರಿಯಗಳಿಗೆ ನಿಲುಕದ ನಿನ್ನನ್ನು ಹೃಷೀಕೇಶ ನೆಂಬುವರ್ಕ ಎಂದರೆ ಬ್ರಹ್ಮಾ ಈಶ ಎಂದರೆ ನಾನು (ರುದ್ರ). ಬ್ರಹ್ಮರುದ್ರರನ್ನು ನಿನ್ನ ಹೃದಯ ಮನಗಳಿಂದ ಪುಟ್ಟಿಸಿ ತನ್ನಿಯಾಮಕತ್ವವನ್ನಿತ್ತು ನಡೆಸುವನಾದುದರಿಂದ ಕೇಶವನೆಂದು ಖ್ಯಾತನಾಗಿರುವೆ ! ಮಾ ಅಂದರೆ ಶ್ರೀದೇವಿ. ಆಕೆಗೆ ಗಂಡನಾಗಿ ಮಾಧವನೆನಿಸಿರುವೆ ! ಗೋ ಎಂದರೆ ಮಾತು (ವೇದ). ಅದರಿಂದ ಪೇಳಲ್ಪಡುವನಾದುದರಿಂದ ಗೋವಿಂದ ಎಂದು ನಿನಗೆ ನಾಮ. ಮೂರು ಲೋಕಗಳನ್ನು ಆಕ್ರಮಿಸಿ ನಿಂತಿರುವ ನೀನು ತ್ರಿವಿಕ್ರಮನೆನಿಸಿರುವೆ. ಸುಂದರನಾಗಿ ವಾಮನನು, ಸರ್ವಜ್ಞನಾಗಿ ಮುನಿ, ವಿಶ್ವಾತಿಕಾರಣನಾಗಿ ವ್ಯಾಸನು, ಆಗಿರುವೆ, ಉತ್ತಮವಾದ ವಸ್ತುವಿದೆ ಎಂದರೆ ಅದು ಉತ್ತಮವಾಗಿರುವುದು ನಿನ್ನ ನಾಮರೂಪ ಗುಣ ಸನ್ನಿಧಾನದಿಂದಲೆ ! ಪ್ರಭುವಾಗಿ ಈಶನೆನಿಸಿರುವೆ. ನನಗೂ ಈಶನಾಗಿರುವೆ ! ವೇದಗಳಲ್ಲಿ ಋಕ್ಕು, ಅಕ್ಷರಗಳಲ್ಲಿ ಆಕಾರ, ಶಬ್ದಗಳಲ್ಲಿ ಓಂ (ಪ್ರಣವ), ಛಂದಸ್ಸುಗಳಲ್ಲಿ ಗಾಯತ್ರಿ, ಗಿಡಗಳಲ್ಲಿ ಅಶ್ವತ್ಥ, ಗುರುಗಳಲ್ಲಿ ಚತುರ್ಮುಖ, ಪರ್ವತಗಳಲ್ಲಿ ಮೇರು, ದಾನವರಲ್ಲಿ ಪ್ರಹ್ಲಾದ, ಸರ್ಪಗಳಲ್ಲಿ ವಾಸುಕಿ, ಗುಹ್ಯಕರಲ್ಲಿ ಕುಬೇರ

ನದಿಗಳಲ್ಲಿ ಗಂಗೆ, ಎಲ್ಲವೂ ಉತ್ತಮವಾಗಿವೆ ಎಂದರೆ! ಅವೆಲ್ಲವೂ ನಿನ್ನಿಂದ! ಸರ್ವೋತ್ತಮನು! ನಾರಾಯಣ! ನನಗೂ ಸ್ವಾಮಿಯು ನೀನು ಕೊಟ್ಟ ನಾಮಗಳನ್ನು ಅವೂ ನಿನ್ನವೇ ಇಟ್ಟುಕೊಂಡು, ನೀನಿತ್ತ ಶಕ್ತಿಯಿಂದ ಸಂಹಾರಕನೆನಿಸಿ ನಾನು ಇಂದ್ರಾದಿ ದೇವ ವಂದ್ಯನಾಗಿರುವೆನು. ನೀನಿಲ್ಲದೇನೂ ಇಲ್ಲ ಶ್ರೀ ಕೃಷ್ಣ ಪ್ರಭೋ! ನಿನಗೆ ಸಹಸ್ರ ನಮಸ್ಕಾರಗಳು"

ಇಂದು ನುತಿಸಿ ಮಹೇಶನು ಮುನಿಗಳೆಡೆ ನೋಡಿ, ಶ್ರೀ ಕೃಷ್ಣನನ್ನು ಬೆರಳಿಂದ ತೋರಿಸುತ್ತಾ "ಋಷಿಗಳೇ! ಕೇಳಿರಿ! ಇವನೇ ಪರವಸ್ತುವು. ಇವನೇ ಸರ್ವೋತ್ತಮನು ಇವನೇ ಧ್ಯೇಯನು, ಇವನೇ ಮೋಕ್ಷದಾತನು ಮೋಕ್ಷಕಾರಣ ಸಾಧನವನ್ನು ಮಾಡಿಸಿ, ಉದ್ಧರಿಸುವನೂ ಈ ಶ್ರೀಕೃಷ್ಣನೇ! ತಿಳಿಯಿರಿ! ಮನುಜ ಜನ್ಮ ಬಂದಾಗ ನೀವು ಮಾಡಬೇಕಾದುದು ಶ್ರೀಶನ ಸೇವೆ, ಅದೇ ಜನ್ಮ ಫಲ, ಸನಾತನ ಧರ್ಮ ರಕ್ಷಕನು, ಪುಣ್ಯಶ್ಲೋಕನು, ವೇದ ವೇದ್ಯನು, ಆದ ನಮ್ಮ ಸ್ವಾಮಿ ಶ್ರೀ ಕೃಷ್ಣನಿಗೆ ನಮಸ್ಕರಿಸಿ!", ಎಂದು ತಾನೂ ವಂದಿಸಿದನು, ಗೌರಾ ದೇವಿಯೂ ರುಕ್ಮಿಣೀ ಕೃಷ್ಣರಿಗೆ ವಂದಿಸಿದಳು.

ಶಂಕರನು ಶ್ರೀಕೃಷ್ಣನನ್ನು ನೋಡಿ, ಆ ಸ್ವಾಮಿಯ ದಿವ್ಯ ರೂಪವನ್ನು ಮನದಿ ತುಂಬಿ ಕೊಂಡು, ಭಕ್ತಿಪರವಶನಾಗಿ ಇಂತು ಸ್ತುತಿಸಿದನು. "ದೇವನೆಂದರೆ ಕೃಷ್ಣನೇ ಮತ್ತಾರೂ ಅಲ್ಲ. ಓಂಕಾರ ವಾಚ್ಯನಾದ ನಾರಾಯಣನೇ ಸರ್ವೋತ್ತಮನು, ಅವನಿಗೆ ಸಮರೇ ಇಲ್ಲವೆಂದ ಮೇಲೆ ಅಧಿಕರಿನ್ನೆಲ್ಲಿರುವರು! ಶ್ರೀ ಹರಿಯೇ ಸಂಸಾರ ತಾಪ ಮೋಚಕನು. ನನ್ನಲ್ಲಿರುವ ಸಂಕರ್ಷಣನೇ ನಿಜವಾದ ಶಿವನು. ಆ ಶಿವನಿಗೆ ನನ್ನ ನಮಸ್ಕಾರವು ಋಷಿಗಳಿರಾ! ಶುದ್ಧ ಮನಸ್ಕರಿಗೆ, ನಿಷ್ಪಾಪರಿಗೆ, ಭಕ್ತರಿಗೆ ಒಲಿವ ದೇವನನ್ನು ಶ್ರವಣ, ಮನನ, ಧ್ಯಾನಗಳಿಂದ ಉಪಾಸಿಸಿ, ಮೆಚ್ಚಿಸಿರಿ!"

ಶ್ರೀ ಕೃಷ್ಣ! ದೇವ ದೇವ! ಜಗವನ್ನು ಬೆಳಗುವ ಸೂರ್ಯಾಂತರ್ಯಾಮಿಯೇ! ನಿನಗೆ ನಮಃ ಔಷಧಿಗಳನ್ನು ಬೆಳಸುವ ಚಂದ್ರಾತ್ಮನಿಗೆ ನಮಃ ಪ್ರೀತಿ ವಚನಗಳನ್ನಾಡಿಸುವ ವಹ್ನಿನಿಯಾಮಕನಿಗೆ ನಮಃ ವೇದವಿದಗ್ರಣಿಗಳಿಗೆ ತದರ್ಥವನ್ನು ತಿಳಿಸುವ ಬ್ರಹ್ಮಾತ್ಮನಿಗೆ ನಮಃ ಸಂಹಾರ ಕಾರಣನಾದ ರುದ್ರಾತ್ಮನಿಗೆ ನಮಃ ಸರ್ವೇಂದ್ರಿಯ ವ್ಯಾಪಾರ ಕಾರಣನಾದ ಪ್ರಾಣಾತ್ಮನಿಗೆ ನಮಃ ಪಾಪಿ ಪೌಂಡ್ರಕನನ್ನು ಕೊಂದು, ಅವನಿರುವ ನನ್ನ ಕಾಶೀ ನಗರವನ್ನು ಸುಟ್ಟು, ಮಹಾಶ್ಮಶಾನವೆನಿಸಿ, ನನಗೆ ವಾಸಸ್ಥಲವನ್ನೀವ ವಾಸುದೇವನಿಗೆ ನಮಃ, ಪೃಥಿವಿಯಲ್ಲಿ ಗಂಧಾತ್ಮನು, ಜಲದಲ್ಲಿ ರಸಾತ್ಮನು, ಅಗ್ನಿಯಲ್ಲಿ ತೇಜಾತ್ಮನು, ವಾಯುವಿನಲ್ಲಿ ಸ್ಪರ್ಶಾತ್ಮನು, ಆಕಾಶದಲ್ಲಿ ಶಬ್ದಾತ್ಮನು ಇಂತು ಸರ್ವಾತ್ಮಕಸರ್ವಸರ್ವವಿಲಕ್ಷಣ, ಸರ್ವೋತ್ತಮನಾದ ವಾಸುದೇವನೇ!

[illegible]

[illegible]

[illegible]

— O —

23. ಪೌಂಡ್ರಕ ವಧೆ

[illegible]

[illegible]

ಅವಗಣಿಸಿ ಕೊಟ್ಟು, ತನ್ನವರ ಮಧ್ಯದಲ್ಲಿ ಮೆರೆಯುತ್ತಿರುವವನು. ಅವನಗರ್ವಕ್ಕೆಲ್ಲ ಅವನ ಶಂಖಚಕ್ರಗದಾ ಖಡ್ಗಗಳನ್ನು ನಾನು ಧರಿಸಿ "ಅಹಂಬ್ರಹ್ಮಾಸ್ಮಿ" ಎಂಬ ವೇದ ವಚನವನ್ನು ಸತ್ಯಮಾಡುವವರೆಗೂ ನನಗೆ ನಿದ್ದೆ ಬಾರದು ಅನ್ನವೂ ರುಚಿಸದು. ಅಂತೆಯೇ ನಾನು ನನ್ನ ಗದೆಗೆ ಕೌಮೋದಕಿ ಎಂದೂ, ಶಕ್ತಿಗೆ ನಂದಕವೆಂದೂ, ಚಕ್ರ ಚಕ್ರಕ್ಕೆ ಸುದರ್ಶನನೆಂದೂ, ಬಿಲ್ಲಿಗೆ ಶಾರ್ಙ್ಗವೆಂದೂ ಹೆಸರು ಇಕ್ಕಿಸಿ, ನಾನು ವಾಸುದೇವನೆಂಬ (ಹಂಗ) ನಾಮವನ್ನೂ ಧರಿಸಿ ಅಂತಕನಿಗೂ ಭಯಂಕರನಾಗಿರುವೆನು. ಶ್ರೀವತ್ಸವಿಲ್ಲವೆನ್ನಬೇಡ! ನನ್ನ ಸ್ನೇಹಿತರು ಅದನ್ನೂ ನನ್ನ ಎದೆಯಲ್ಲಿ(ಬೆಂಕಿ ಕಾಸಿಸುಟ್ಟು) ಮುದ್ರಿಸಿರುವರು. ಇನ್ನೇನು "ಆ ಕೃಷ್ಣನಿಲ್ಲ ಆ ಗೋಪಾಲನ ಕೆಲಸ ಮುಗಿಯಿತು"- ಎನಿಸಿ, ನಾನೇ ದೇವರಾಗಿ ಮೆರೆವೆನು" ಎಂದನು. ಆ ಮಾತನ್ನಾಲಿಸಿ ಕೆಲರಾಜನ್ಯರು ಮನಸ್ಸಿನಲ್ಲಿ ಅವನ ಮಾತಿಗೆ ನಕ್ಕು, ತಲೆತಗ್ಗಿಸಿ ಸುಮ್ಮನಿದ್ದರು. ಕೆಲವರು "ಸರಿಯಾಗಿದೆ! ಅಂತೆಯೇ ಮಾಡು" ಎಂದು ಜಯ ಜಯಕಾರಗಳನ್ನು ಮಾಡಿದರು

ಆ ಸಮಯದಲ್ಲಿ ಕೈಲಾಸಗಿರಿಯಲ್ಲಿ ಶಂಕರ ವಂದ್ಯನಾದ ಗೋವಿಂದನ ಅಪಾರ ಮಹಿಮೆಯನ್ನು ಕಣ್ಣಾರ ನೋಡಿದ್ದ ನಾರದನಲ್ಲಿಗೆ ಬಂದನು. ಪೌಂಡ್ರಕನಾ ಮುನಿವರ್ಯನಿಗೆ ಅರ್ಘ್ಯಾದಿಗಳನ್ನಿತ್ತು "ವಿಪೇಂದ್ರ! ಮಹಾನುಭಾವನಾದ ನಿನಗೆ ಅಗಮ್ಯವಾದ ದೇಶವಿಲ್ಲ. ತಿಳಿಯದ ವಿಷಯವಿಲ್ಲ. ನೀನು ನನ್ನ ಮಾತನ್ನು ನಡೆಸಿಕೊಡು! ಅದೇನೆಂದರೆ "ಪೌಂಡ್ರನೇ ನಿಜವಾದ ವಾಸುದೇವನು. ಅವನೇ ವಿಜಯಶೀಲನು. ಅವನೇ ದಾನಿಯು, ಶಂಖಚಕ್ರಾದಿ ನಿಜಾಯುಧಗಳು ಇರುವುದು ಪೌಂಡ್ರಕನಲ್ಲಿ— ಗೋಪಾಲಕೃಷ್ಣನಲ್ಲಿರುವವು ಕೃತಕಗಳು" ಎಂದು ಜಗದಲ್ಲೆಲ್ಲ ನೀನು ಸಾರಬೇಕು. ಇದು ದೇವರಾದ ನನ್ನ ಆಜ್ಞೆ! ತಿಳಿ! ಇಷ್ಟರಲ್ಲೇ ಆಗೊಲ್ಲನಮನೆಯಾದ ದ್ವಾರಕೆಯನ್ನು ನೆಲಸಮಮಾಡಿ, ಆ ಕೃಷ್ಣನನ್ನು ಇಲ್ಲ ಎನಿಸಿ ಬಿಡುವೆನು. ಆಗಲಾದರೂ ನನ್ನ ಮಹಿಮೆ ನಿನಗೆ ಗೊತ್ತಾದೀತು! ನನ್ನಲ್ಲಿ ಬಲವಿದೆ! ಸೈನ್ಯಬಲವೂ ಇದೆ-ಇರಲಿ ನಿನ್ನ ಬಾಯಿಂದಲೇ ಸರ್ವೋತ್ತಮನಾರೆಂದು ನಾನು ಹೇಳಿಸಿ ಬಿಡುವೆನು." ಎಂದನು.

ಆ ಮಾತನ್ನಾಲಿಸಿ ದೇವಮುನಿಯು ನಕ್ಕು ಅವನ ಜಂಬದ ಮಾತನ್ನು ಲೆಕ್ಕಿಸದೇ ಇಂತೆಂದನು. "ಪೌಂಡ್ರಕ! ನಿಜ! ನಾನು ಸರ್ವತ್ರ ಸಂಚರಿಸುವೆನು. ಯಾರು ಸರ್ವೋತ್ತಮನೆಂದು ನನ್ನ ಬಾಯಿಂದಲೇ ಹೇಳುವೆನು ಕೇಳು! ಚಕ್ರಪಾಣಿಯಾದ ಶ್ರೀ ಕೃಷ್ಣನು ಮಹಿಯಲ್ಲವತರಿಸಿ, ಅವಕ್ರ ವಿಕ್ರಮನಾಗಿ, ದುಷ್ಟಕಂಸ ನರಕಾದಿಗಳನ್ನು ಸಂಹರಿಸಿ ಸರ್ವವ್ಯಾಪ್ತನಾಗಿ ರಾರಾಜಿಸುತ್ತಿರಲು, ಮತ್ತೊಬ್ಬನನ್ನು ಸರ್ವೋತ್ತಮನೆನ್ನಲು ಬರುವುದೇ? ಹೊನ್ನೇಹುಳವು ಸೂರ್ಯನನ್ನು ನೋಡಿ ತಾನೂ ಖದ್ಯೋತವೆಂಬ ಹೆಸರುಳ್ಳದ್ದು ಎಂದು ಅಣಕಿಸಲಾದೀತೇ? "ನಾನೇ ದೇವನು" ಎಂಬ ಮನುಜನಾರೇ ಆಗಲಿ, ಅಜ್ಞಾನದಿಂದಲೋ, ಅಹಂಕಾರದಿಂದಲೋ ಅಂತು ನುಡಿಯುತ್ತಿರುವನು. ಅವನು ಶೋಚನೀಯನೇಸರಿ! ನಿನ್ನ ದಡ್ಡ ಮಾತಿಗೆ ನಗುಬರುತ್ತಿದೆ. ಪುರಾಣಪುರುಷನು

ಬ್ರಹ್ಮರುದ್ರವಂದಿತನು ಆದ ಶ್ರೀ ಕೃಷ್ಣನು ನಿನ್ನ ಈ ದರ್ಪವನ್ನು ಮುರಿಯುವನು. ಛೀ ! ನಿನ್ನ ಮಾತಿಗೆ ಕೋಪಿಸಬೇಕೋ, ಅಥವಾ ನಗಬೇಕೋ ತಿಳಿಯದಾಗಿದೆ" ಎಂದು ಸುಮ್ಮನಾದನು.

ಪೌಂಡ್ರಕನು ನಾರದನನ್ನು ನೋಡಿ ಕೋಪದಿಂದ "ಎನೆಂದೆ ? ನಾನೇ ದೇವನು ನಾನೇ ದೇವನು(ಅಹಂಬ್ರಹ್ಮಾಸ್ಮಿ)ಛೀ ! ಇನ್ನೊಬ್ಬನಾಗಿದ್ದರೆ, ಅವನ ನಾಲಿಗೆಯನ್ನು ಸೀಳುತ್ತಿದ್ದೆನು. ಶಾಪವನ್ನು ಕೊಡುವೆ ಎಂಬ ಅಂಜಿಕೆಯಿಂದ ಬಿಟ್ಟಿರುವೆನು ಹೊರಡಿಲ್ಲಿಂದ" ಎಂದು ಕಳಿಸಿದನು.

ನಾರದನೀ ವೃತ್ತಾಂತವನ್ನೆಲ್ಲ ಶ್ರೀಕೃಷ್ಣನಿಗೆ ತಿಳಿಸಿದನು. ಬದರಿಕಾಶ್ರಮದಿಂದ ತೆರಳಿ ಪೌಂಡ್ರಕನ ಕೊಬ್ಬನ್ನು ಕರಗಿಸುವಂತೆ ನಾರದನಿಗೆ ಆಶ್ವಾಸನವಿತ್ತು, ಪ್ರಯಾಣೋನ್ಮುಖನಾದನು.

ಇತ್ತ ಪೌಂಡ್ರಕನು ಚತುರಂಗ ಬಲದಿಂದ ಕೂಡಿ ಹುಟಾಹುಟಿ ಪಯಣಿಸಿ ದ್ವಾರಕಾ ನಗರವನ್ನು ಮಧ್ಯರಾತ್ರಿಯಲ್ಲಿ ಸೇರಿ, ಮುತ್ತಿದನು. ಏಕಲವ್ಯನೂ ಅವನಿಗೆ ಸಹಾಯಕನಾಗಿ ಬಂದಿದ್ದನು. ವೇನನಿಗೆ ಮಣಿಮಂತನು ಜೋಡಾಗುವದು-ಕಾಗೆಗೂಗೆಗಳಗಂತೆ-ವಿಪರೀತಾರ್ಥದಾಯಕವೇ ಆಯಿತು. ಪುರದ್ವಾರವನ್ನು ಹೊಡೆದು ಕೆಡಹಲು ತವಕಿಸುವ ದುಷ್ಟಪೌಂಡ್ರನ ಸೈನಿಕರ ಸಿಂಹಗರ್ಜನ,ಭೇರೀಭಾಂಕಾರಗಳಿಂದ ಎಚ್ಚೆತ್ತ ವೃಷ್ಣಿವೀರರು-ಶ್ರೀಶನ ಮಾತನ್ನು ನೆನೆದು-ಪೌಂಡ್ರಕನನ್ನು ಎದುರಿಸಬೇಕೆಂದು ಬಂದು ಕೊತ್ತಲಗಳ ಮೇಲೆ ನಿಂತು, ಶರವರ್ಷವನ್ನು ಸುರಿಸಿದರು.

ದ್ವಾರಕೆಯಲ್ಲಿ ರಣಭೇರಿಗಳು ಮೊಳಗಿದವು. ಸಾತ್ಯಕಿ, ಗದ, ಸಾರಣ, ಬಲರಾಮ ಕೃತವರ್ಮ, ಮುಂತಾದ ವೀರ ಯಾದವರು ತಂತಮ್ಮ ಬಲಗಳಿಂದ ಸನ್ನದ್ಧರಾದರು. ಕರದೀಪಿಕಾ ಸಹಸ್ರವು ಬೆಳಗುತ್ತಿರಲು, ರಾತ್ರಿ ಯುದ್ಧವು ಭಯಂಕರವಾಯಿತು. ದ್ವಾರಕಾ ನಗರದಿಂದ ಪೊರಮಟ್ಟ ಯದುಸೈನ್ಯವು ಸಮುದ್ರದಂತೆ ಉಕ್ಕೇರಿ ಆಕ್ರಮಿಸಿದಾಗ, ಪೌಂಡ್ರಕನ ಸೇನೆಯು ಹಿಮ್ಮೆಟ್ಟಿ ನಿಂತಿತು.

ಇಕೋ ಬಲರಾಮ ! ಇಲ್ಲಿರುವನು ಸಾತ್ಯಕಿ ! ಇಲ್ಲಿ ಕೃತವರ್ಮ,- ಎಂದು ಶತ್ರು ವೀರರು ವರ್ಣಿಸುವಂತೆ ಯದುವೀರರು ರಣರಂಗದಲ್ಲಿ ಸರ್ವತ್ರ ಸರಿದಾಡಿ-ಸುರಾರಿಗಳನ್ನು ಸುರೇಶನಂತೆ-ಸಂಹಾರ ವಿಹಾರವನ್ನು ಮಾಡಿದರು.

ಏಕಲವ್ಯನದನ್ನು ಸಹಿಸದೇ ಗದಾಪಾಣಿಯಾಗಿ ಯಾದವ ಸೇನೆಯನ್ನು ನಾಶಪಡಿಸಿದನು ರಾತ್ರಿಯುದ್ಧ ಕುಶಲನಾದ ನಿಷಾದನು ಬಿಲ್ಲನು ಪಿಡಿದು ನಿಶಠ, ಉಗ್ರಸೇನ ಸಾರಣ. ಕೃತವರ್ಮ, ವಸುದೇವ, ಉದ್ಧವಾದಿ ವೀರರನ್ನು ಪ್ರತಿಶತ ಬಾಣಗಳಿಂದ ಪೀಡಿಸಿ, ಓಡಿಸಿದನು. ಸಾತ್ಯಕಿ ಬಲರಾಮರನ್ನು ಹುಡುಕುತ್ತಾ ಬರುವ ಏಕಲವ್ಯನ ವಿಕ್ರಮಕ್ಕೆ ಹೆದರಿ,ರಾತ್ರಿಯಲ್ಲಿ ದಿಕ್ಕು ತೋಚದೆ, ಯಾದವರು ಓಡಿಹೋಗಿ ಪುರವನ್ನು ಹೊಕ್ಕರು. ಅದನ್ನು ಕಂಡು ಪೌಂಡ್ರಕನು, ದ್ವಾರಕೆಯ ದ್ವಾರಗಳನ್ನೂ,

ಕೋಟೆಯನ್ನೂ ಮುರಿದು ಕೆಡಹುವಂತೆ ತನ ಸೈನಿಕರಿಗೆ ಅಜ್ಞಾಪಿಸಿದನು. ಅವರು ಕುದ್ದಾಲಕ, ಕುಠಾರಗಳಿಂದ ಕೋಟೆಗೋಡೆಗಳನ್ನು ವಿಟಂಕಗಳನ್ನು ಹೊಡೆದು ಕೆಡ ಹಿದರು.

ಸಾತ್ಯಕಿಯು ದ್ವಾರಕಾ ರಕ್ಷಣೆಗೆಂದ ತನ್ನನ್ನು ಇಟ್ಟುಹೋದ ಶ್ರೀಕೃಷ್ಣನನು ನೆನೆದು,ಕ್ರೋಧೋದ್ದೀಪಿತನಾದನು. ಮುಸಲಿಯೂ ಪ್ರಳಯಾಂತಕನಾದನು. ರಥಾ ರೂಢರಾಗಿ ವೀರರೀರ್ವರು ಪ್ರಾಣಪಣವನ್ನಿಟ್ಟು ಕಡಿದಾಡಿ, ನಗರವನ್ನು ಕಾಪಾಡ ಬೇಕೆಂಬ ಹಂಬಲದಿಂದ ಹೊರಬಿದ್ದು ಹೋರಾಡುವುದನ್ನು ಕಂಡು, ಮಿಕ್ಕ ಯುದು ಸೇನಾನಿಗಳೂ ಅವರಿಗೆ ನೆರವಾಗಿ ನಿಂತು ಕಡಿದಾಡಿದರು ಹೆದರಿ ಓಡಿದ್ದ ಯಾದವರು ಸಹನಾ ಮತ್ತೆ ಮೇಲೆರಗಿದುದನ್ನು ಕಂಡು ಪೌಂಡ್ರಕ ಸೇನೆಯು ದ್ವಾರಕಾ ಪ್ರಾಕಾರ ದಿಂದ ಕ್ರೋಶದೂರ ಹಿಂದೆ ಸರಿಯಿತು.

"ಎಲ್ಲಿ ದುರಾತ್ಮ ಪೌಂಡ್ರಕ ? ಅವನ ತಲೆ ಕಡಿದು ರಣ ಭೂಮಿಗೆ ಬಲಿ ಇಡುವೆನು " ಎಂದು ಗರ್ಜಿಸುತ್ತಾ ಬರುವ ಸಾತ್ಯಕಿಗೆ ಎದುರು ನಿಲ್ಲುವರಿಲ್ಲದಾ ಯಿತು. "ಕಳ್ಳನಂತೆ ರಾತ್ರಿಯಲ್ಲಿ ಬಂದು, ಗೋಡೆಗೆ ಕನ್ನ ವಿಕ್ಕುವ ಪಾಪಾತ್ಮ ನನ್ನು ಕಾಲನ ಪುರಿಗೆ ಕಳಿಸುವೆ "ನೆನ್ನುತ್ತಾ ಬಲರಾಮನೂ ಗರ್ಜಿಸಿದನು. ಆ ಮಾತುಗಳನ್ನು ಸಹಿಸದೆ ಪೌಂಡ್ರಕನು ರಥಾರೂಢನೂ, ಧನುರ್ಬಾಣಧರನೂ, ಕೃಷ್ಣನ ದ್ವೇಷನೂ ಆಗಿ "ಎಲ್ಲಿರುವನು ಆ ಕೃಷ್ಣ !ಗೋಹತ್ಯಾ, ಸ್ತ್ರೀಹತ್ಯಾ ಮಾತುಲ ಹತ್ಯಾ, ಬಂಧು ಹತ್ಯಾಗಳನ್ನು ಮಾಡಿದ ಆ ಪಾಪಿ ಯಾದವನಿಗೆ ಇಂದು ನಾನು ಹಂತಕನಾಗುವೆನು. ಅವನ ರಕ್ತದಿಂದ ನರಕಾದಿ ಮಿತ್ರರಿಗೆ ತರ್ಪಣವನ್ನು ಕೊಡು ವೆನು" ಎಂದು ಗರ್ಜಿಸಿ, ಅವರನ್ನು ಎದುರಿಸಿದನು.

ಸಾತ್ಯಕಿಯು ಅಪಹರಿಸಿ ಪೌಂಡ್ರಕನಿಗಿಂತು ಉತ್ತರವಿತ್ತನು "ಎಲವೋ ವೇಷಧಾರಿ ! ಸಾಯಲಿದ್ದು ಬಡಬಡಿಸುವನಂತೆ ನಿನ್ನ ವಚನಗಳು ! ಜಗದೀಶನನ್ನು ಬೈದ ನಿನಗೆ ಬದುಕಬೇಕೆಂಬ ಆಶೆ ಇದ್ದಂತಿಲ್ಲ ಶ್ರೀ ಶನನ್ನು ನಿಂದಿಸಿದ ನಿನ್ನ ನಾಲಿಗೆಯನ್ನು ನೂರಾಗಿ ಸೀಳಬೇಕು ವಾಸುದೇವನು ನೀನಾದರೆ ಇನ್ನೇಕೆ ಜಗಳ? ಈಗ ನಿನ್ನ ಕುತ್ತಿಗೆಯನ್ನು ನಮ್ಮ ಸ್ವಾಮಿಯು ಬಂದು ಕಡಿದಾಗ ನಿಜವಾಗಿಯು ವಾಸುದೇವ ನಾಗುವೆ ! ತಮಸ್ಸಿನಲ್ಲಿವಸಿಸಿ, ಅಳುತ್ತಾ ಇರುವ ನೀನೂ ವಾಸುದೇ ವನೇ ! ಅಹಹಾ ! ಸರ್ವತ್ರವಸಿಸಿ, ಕ್ರೀಡಾದಿ ಕಲ್ಯಾಣ ಗುಣ ವಿಶಿಷ್ಟನಾದ ನಮ್ಮ ಶ್ರೀ ಕೃಷ್ಣನು ನಿಜವಾಗಿ ವಾಸುದೇವನು" ಎಂದು ತೀವ್ರ ಶರಗಳಿಂದ ಅವನ ಎದೆಗೆ ಹೊಡೆದನು. ರಕ್ತವನ್ನು ಕಾರಿ ಪೌಂಡ್ರಕ ವಾಸುದೇವನು ಸಾತ್ಯಕಿಯನ್ನು ನಾನಾ ಶರಗಳಿಂದ ಪೀಡಿಸಿದನು. ಅವನ ಸಾರಥಿಯನ್ನು ಮೂರು ಬಾಣಗಳಿಂದಲು ಕುದುರೆಗಳನ್ನು ನಾಲ್ಕುಬಾಣಗಳಿಂದಲು ಹೊಡೆದು ವಾಸುದೇವನು ಮತ್ತೈದು

ಬಾಣಗಳಿಂದ ಸಾತ್ಯಕಿಯ ಲಲಾಟಕ್ಕೆ ಗುರಿಯಿಟ್ಟು ಬಿಟ್ಟನು. ಸಾತ್ಯಕಿಯು ಅವನ ಬಾಣಗಳನ್ನು ಮಧ್ಯೆ ಮಾರ್ಗದಲ್ಲೇ ತುಂಡರಿಸಿ, ಅವನನ್ನು ನಿಶಿತ ನಾರಾಚಶತದಿಂದ ಹೊಡೆದು ಮೂರ್ಛೆ ಹೊಂದಿಸಿದನು. ವಾಸುದೇವನು ತಿಳಿದೆದ್ದು ಗದೆಯಿಂದ ಹೊಡೆಯಲು ಸಾತ್ಯಕಿಯೂ ಮೃತ್ಯು ಮುಖವನ್ನು ಹೊಕ್ಕಂತಾದನು.

ಇದನ್ನು ನೋಡಿ ಬಲಭದ್ರನು ಸಾತ್ಯಕಿಯ ನೆರವಿಗೆ ಬಂದನು. ಅವನನ್ನು ತಡೆದು ಏಕಲವ್ಯನು ಭಯಂಕರ ಯುದ್ಧವಾಡಿದನು. ಏಕಲವ್ಯನು ನಿಶಿತಶರದಿಂದ ಬಲದೇವನ ಧನುಸ್ಸನ್ನು ಮುರಿದನು ಮತ್ತೊಂದು ಧನುವನ್ನು ಹಿಡಿದು ಬಲರಾಮನು ಅವನ ಧನುವನ್ನು ಮುಷ್ಟಿದೇಶದಲ್ಲಿ ಬಾಣತ್ರಯದಿಂದ ಮುರಿದು ಕೆಡಹಿದನು. ನಿಷಾದನು ಶಕ್ತಿಯನ್ನೆತ್ತಿ ಒಗೆಯಲು, ಬಲರಾಮನು ಅದನ್ನೇ ಕೈಲಿಹಿಡಿದು ಅವನ ಜತ್ರುದೇಶದಲ್ಲಿ ಬಿಟ್ಟನು. ಶಕ್ತಿ ತಾಡಿತನಾದ ಏಕಲವ್ಯನು ಸರ್ವಾಂಗ ಶಿಥಿಲನಾಗಿ ಕೆಳಗೆ ಬಿದ್ದನು. ಅವನ ಸೈನಿಕ ನಿಷಾದರು ಮೇಲೇರಿ ಬರಲು ಬಲರಾಮನು ತನ್ನ ಹಲಮುಸಲಗಳಿಂದ ಅವರನ್ನೆಲ್ಲ ಸಂಹರಿಸಿ ಅರ್ಭಟಿಸಿದನು. ಅದನ್ನು ಕೇಳಿ ಹೆದರಿ ಏಕಲವ್ಯನ ಪರಿವಾರ ಭೂತರಾದ ರಾಕ್ಷಸರು ಮತ್ತು ನಿಷಾದರು ಓಡಿ ಹೋದರು.

ಬೆಳಗಾಯಿತು, ಬದರಿಕಾಶ್ರಮದಿಂದ ಶ್ರೀ ಕೃಷ್ಣನು ಗರುಡಾರೂಢನಾಗಿ ಬಂದನು. ಸಂಗ್ರಾಮ ಶಬ್ದವನ್ನು ಕೇಳಿ ಶ್ರೀಶನು ಗರುಡನನ್ನು ಸ್ವರ್ಗಕ್ಕೆ ಕಳಿಸಿ, ಶ್ರೀ ದೇವಿಯನ್ನು ಅಂತಃಪುರದಲ್ಲಿ ಬಿಟ್ಟು, ಪೌಂಡ್ರಕನದುಡುಕುತನವನ್ನು ತಿಳಿದನು. ಹಿರಿಯರಿಗೆ ವಂದಿಸಿ, ರಥಾರೂಢನಾಗಿ ಬಂದ ಗೋವಿಂದನನ್ನು ನೋಡಿ ಯದುವೀರರು ಜಯ ಜಯ ಧ್ಯಾನಗಳನ್ನು ಮಾಡಿದರು. ಇಮ್ಮಡಿಸಿದ ಧೈರ್ಯದಿಂದ ಅವರು ಶತ್ರು ಸೇನೆಯನ್ನು ಮುತ್ತಿ ನಾಶಪಡಿಸಿದರು. ನಿರ್ಭಯರಾಗಿ ಕಾದುವ ತನ್ನವರಿಗೆ ಧೈರ್ಯವನ್ನು ತುಂಬಲು ಶ್ರೀ ಹರಿಯು ತನ್ನ ಪಾಂಚಜನ್ಯವನ್ನೂದಿದನು.

ಶ್ರೀ ಕೃಷ್ಣನನ್ನು ಕೃತ್ರಿಮ ವಾಸುದೇವನೂ ನೋಡಿದನು. "ಎಲವೋ ಯಾದವ ಗೋಪಾಲ ! ಎಲ್ಲಿಗೆ ಹೋಗಿದ್ದೆ ನನಗೆ ಹೆದರಿ ? ಅಂತು ಅಂತವನ್ನು ಕಾಣಲು ಬಂದೆಯಲ್ಲ ಸ್ಥಿರವಾಗಿ ನಿಲ್ಲು ! ಇನ್ನು ಮೇಲೆ ನಿನ್ನನ್ನು ಕೊಂದು ನಾನೊಬ್ಬನೇ ವಾಸುದೇವನೆನಿಸಿ ಜಗದಿ ಮೆರೆವೆನು. ಚಕ್ರವನ್ನೂ ಶಂಖವನ್ನೂ ಮಿಕ್ಕೆಲ್ಲವೇನೇನಿವೆಯೋ, ಅವನ್ನೆಲ್ಲ ನನಗೆ ಸಮರ್ಪಿಸಿ ಶರಣಾಗು" ಎಂದು ಮೇಲೇರಿ ಬಂದನು. ನರಿಯೊಂದು ಸಿಂಹವನ್ನೆದುರಿಸಿ ದಂತಾಯಿತು. ಯಾದವರವನನ್ನೂ ಅವನ ವೇಷವನ್ನೂ ನೋಡಿನಕ್ಕರು.

ಶ್ರೀ ಕೃಷ್ಣನು ನಸುನಕ್ಕು "ಅಹುದಹುದ ! ನಾನು ಪಾಪಿ, ದುರಾಚಾರನೂ ನಿಜ ! (ಪಾಪಗಳನ್ನು ದುರ್ಜನರಿಂದ ಮಾಡಿಸುವನು–ನನ್ನಂತೆ ಆಚರಿಸಲು ಇನ್ನಾ

ರಿಗೂ ಬರುವುದಿಲ್ಲ) ಪಾಪ ! ನನ್ನಂತಹವರನ್ನು ಶಿಕ್ಷಿಸಲು ಅವತರಿಸಿದ ಅಸುರ
ಬ್ರಹ್ಮನು ನೀನು ! ನನ್ನ ಆಯುಧಗಳನ್ನು ಕಳಿಸಬೇಕೆಂದೆ ! ಅಣ್ಣನಾಗಿರುವ ನಿನ್ನ
ಆಜ್ಞೆ ಮೀರಲಹುದೇ ? ಇಕೋ ಮೊದಲು ಬಾಣಗಳನ್ನೂ ಕೊನೆಗೆ ಚಕ್ರವನ್ನೂ
ಕಳಿಸುವೆನು ! ಕಾದುಕೋ ! " ಎಂದು ನಿಶಿತಶರಗಳಿಂದ ಪಾಪಿ ಪೌಂಡ್ರಕನನ್ನು
ಹೊಡೆದು ಸಿಂಹ ಗರ್ಜನವನ್ನು ಮಾಡಿದನು. ಪೌಂಡ್ರನೂ ಗರ್ಜಿಸಿ ಹತ್ತು ಬಾಣ
ಗಳಿಂದ ಉತ್ತಮ ಪುರುಷನನ್ನು ಹೊಡೆದನು. ಶ್ರೀಶನು ಕುಪಿತನಾಗಿ ಶಾರ್ಙ್ಗವಿ
ಮುಕ್ತ ಭಲ್ಲಾಳಿಯಿಂದ ಅವನ ಮೈ ಮುಚ್ಚಿದನು. ಪೌಂಡ್ರನು ರಣರಂಗದಿಂದ
ಓಡತೊಡಗಿದನು. ಶ್ರೀ ಕೃಷ್ಣನು ಬಿಡದೆ ಅವನ ಬೆನ್ನತ್ತಿ, ಅವನ ರಥ ಕುದುರೆ
ಗಳನ್ನು ನಾಲ್ಕು ಬಾಣಗಳಿಂದ ಕೆಡಹಿ, ಐದರಿಂದ ರಕ್ಷಕರನ್ನು ಕೊಂದನು ! ಒಂದು
ಭಲ್ಲದಿಂದ ಅವನ ಸಾರಥಿಯನ್ನು ಸಂಹರಿಸಿ, ಧ್ವಜವನ್ನೊಂದರಿಂದ ಕೆಡಹಿದನು
ಆ ಪಾಪಿಯು ಎರಡು ಕೃತ್ರಿಮಕರಗಳನ್ನು ಎರಡು ಬಾಣಗಳಿಂದ ಕಡಿದಾಗ, ಅಲ್ಲಿ
ಧರಿಸಿದ್ದ ಶಂಖ ಚಕ್ರಗಳು ಕೆಳಗೆ ಬಿದ್ದವು. ಒಂದು ಚಂದ್ರಬಾಣದಿಂದ ಅವನ
ಎದೆಗೆ ತಾಟಿಸಿದಾಗ, ಎದೆಯಲ್ಲಿ ಸುಟ್ಟುಗುರುತ್ತುಶ್ರೀ ವತ್ಸ—ವೆಂದು ಅವನು ತಿಳಿದಿದ್ದು—
ಅದರಿಂದ ರಕ್ತ ಹರಿಯತೊಡಗಿತು. ಇನ್ನೊಂದು ರಥವನ್ನು ಏರಿ, ಪೌಂಡ್ರಕನು
ಕಾಶಿಯವರೆಗೂ ಓಡಿ ಪೋದನು.—ಶ್ರೀಶನೂ ಹಿಂಬಾಲಿಸಿ ಮುತ್ತಿದನು. ಪೌಂಡ್ರನು
ರಥದಿಂದ ಕೆಳಗಿಳಿದು ದೊಡ್ಡ ಬಂಡೆಯನ್ನೆತ್ತಿ ಒಗೆದನು. ಅದನ್ನು ತುಂಡರಿಸಿ
ಶ್ರೀ ಕೃಷ್ಣನು ತನ್ನ ಚಕ್ರವನ್ನೆತ್ತಿ ಪ್ರಯೋಗಿಸಿದನು. ರಥವನ್ನೇರಿ ಓಡಿ ಹೋಗು
ತ್ತಿರುವ ಪರಮ ಪಾಪಿಯನ್ನು ಸುದರ್ಶನವು ಬಿಡದೆ ಬೆಂಬತ್ತಿತು.

ದೈತ್ಯ ರಕ್ತಸಿಕ್ತವು, ಮಾಧವಾರಿದಾನವ ಮಾಂಸದಿಗ್ಧವು, ಮಹಾ ಜ್ವಾಲಾ
ಮಾಲಾಕುಲವು,ಸೂರ್ಯ ಕೋಟಿ ಸಮ ಪ್ರಭವು, ಆದ ಚಕ್ರವು ಪೌಂಡ್ರಕನ ಶಿರವನ್ನು
ಕತ್ತರಿಸಿ ಕಾಶೀನಗರದ ಹೆಬ್ಬಾಗಿಲಿನಲ್ಲಿ ಬೀಳುವಂತೆ ಎಸೆಯಿತು. ರಾಜನ್ ! ಶ್ರೀ
ಚಕ್ರವು ಅಷ್ಟಕ್ಕೆ ನಿಲ್ಲದೆ ಶ್ರೀಶೇಚ್ಛೆಯಂತೆ ಕಾಶೀನಗರವನ್ನು ಸುಟ್ಟು, ಅದನ್ನು
ಮಹಾ ಶ್ಮಶಾನವನ್ನಾಗಿ ಪರಿವರ್ತಿಸಿತು. "ಅಹಂಬ್ರಹ್ಮಾಸ್ಮಿ" ಎಂದು ಬೊಗಳುವ
ಪೌಂಡ್ರಕನಗತಿಯು ಅಂಧತಮಸ್ಸೇ ಆಯಿತು. ವೇನನೇ ಆದ ಆ ಮಹಾ ಪಾಪಿಗೆ
ಅಂತಹ ನಿತ್ಯ ದುಃಖವು ಅವನು ತನ್ನ ದುಷ್ಟೋಪಾಸನೆಯಿಂದ ತಾನೇ ಸಂಪಾದಿಸಿ
ಕೊಂಡದ್ದಾಗಿದೆ. ಚಕ್ರ ರಾಜವು ಮತ್ತೆ ನಮ್ಮ ಸ್ವಾಮಿಯ ಕೈ ಸೇರಿ ಸುರಗಣಾ
ರ್ಚಿತವೂ, ಅಸುರಗಣ ಭಯಂಕರವೂ ಆಗಿ ವಿರಾಜಿಸಿತು. ಶ್ರೀ ಕೃಷ್ಣನು ಹಿಂದಿ
ರುಗಿ ಬಂದು ದ್ವಾರಕೆಯನ್ನು ಸೇರಿ, ಪೌಂಡ್ರಕ ಪೀಡಿತರಾಗಿದ್ದ ತನ್ನವರನ್ನು ಸಮಾ
ಧಾನಪಡಿಸಿದನು.

ಪೌಂಡ್ರಕ ವಧೆಯನ್ನು ಕಂಡು ಕುಪಿತನಾದ ಏಕಲವ್ಯನು ಬಲರಾಮನನ್ನೆದು
ರಿಸಿ ಗದೆಯಿಂದ ಎದೆಗೆ ಬೀಸಿ ಹೊಡೆದನು. ಪೂಮಾಲೆಯಿಂದ ಹೊಡೆಯಲ್ಪಟ್ಟ

ಮದ ಗಜದಂಡದಿ ಕುಂದದೆ ರೋಹಿಣೀ ನಂದನನು, ತನ್ನ ಗದೆಯನ್ನು ಎರಡೂ ಕೈಗಳಿಂದ ಎತ್ತಿ, ಗಿರಗಿರತಿರುಗಿಸುತ್ತಾಪಾಪಿನಿಷಾದನನ್ನು ಹೊಡೆಯಲು ಬಂದನು. ಏಕ ಲವ್ಯನು ಗದಾ ಪಾಣಿಯಾಗಿ ಬರುವ ಬಲದೇವನಿಗೆ ಹೆದರಿ, ರಥದಿಂದಳಿದು ಪಶ್ಚಿಮ ಸಮುದ್ರದಡವನ್ನು ಸೇರಿದನು. ಬಿಡದೆ ಬೆನ್ನತ್ತಿ ಬರುವ ಬಲಭದ್ರನನ್ನು ಕಂಡು ಏಕ ಲವ್ಯನು ಸಮುದ್ರದಲ್ಲಿ ಬಿದ್ದು, ಈಸಿ ಕೊಂಡು ಹೋಗಿ, ಒಂದು ದ್ವೀಪವನ್ನು ಸೇರಿ, ಏದುಸಿರಾಡುತ್ತಾ ಕೂತನು. ಬಲರಾಮನು "ಹಾಳಾಗಿ ಹೋಗಲಿ" ಎಂದು ಅವನನ್ನು ಬಿಟ್ಟು, ದ್ವಾರಕೆಗೆ ಬಂದನು. ಇತರ ಶತ್ರುಗಳನ್ನು ಸದೆ ಬಡಿದೋಡಿಸಿ ಸಾತ್ಯಕಿಯೂ ಬಂದನು.

ತುಂಬಿದ ಸಭೆಯಲ್ಲಿ ಅಂಬುಜಾಕ್ಷನು, ಕೈಲಾಸ ಗಿರಿಯಲ್ಲಿ, ಬದರಿಕಾಶ್ರಮದಲ್ಲಿ, ಕಾಶೀ ನಗರ ಪ್ರಾಂತದಲ್ಲಿಯೂ ನಡೆದ ವೃತ್ತಾಂತವನ್ನು ಸಕಲಯಾದವರಿಗೆ ತಿಳಿಸಿ, ಇಂತೆಂದನು. "ದುಷ್ಟ ಪೌಂಡ್ರಕನು ಹತನಾದನು. ನನ್ನ ಚಕ್ರಾಗ್ನಿಯಿಂದ ಅವನ ನಗರವಾದ ಕಾಶಿಯು ಸುಟ್ಟು ಮಹಾ ಶ್ಮಶಾನವೆನಿಸಿತು. ಮಹಾದೇವನೇ ಕೇಳಿಕೊಂಡದ್ದರಿಂದ ಇಂತುಮಾಡಿ, ಶತ್ರುನಾಶವನ್ನೂ, ಭಕ್ತರುದ್ರನ ನಿವೇಶವನ್ನೂ ಕೂಡ ಸಾಧಿಸಿದೆನು. ಋಷಿಗಳಿಗೆ ಪಿಶಾಚದಾನವಾದಿ ಭಯವನ್ನೂ ನಿವಾರಿಸಿ ಬಂದಿರುವೆನು" ಎಂದು ಗೋವಿಂದನನ್ನುಸರ್ವಯಾದವವೀರರೂ ಪ್ರಶಂಸಿಸಿ ನಮಸ್ಕರಿಸಿದರು.

ಗೋವಿಂದನು ರುಕ್ಮಿಣಿಯಲ್ಲಿ ಪ್ರದ್ಯುಮ್ನನೆಂಬ ಪುತ್ರನನ್ನು ಪಡೆದು, ತಪಸ್ಸು ನಿಷ್ಫಲವಾಗದೆಂಬ ಸತ್ಯವನ್ನು ದೇವ ಸುಜನರಿಗೆ ತಿಳಿಸಿ ಕೊಟ್ಟನು. ಶ್ರೀ ಹರಿಯು ಸತ್ಯ ಸಂಕಲ್ಪನು ನಿತ್ಯ ನಿರ್ದೋಷನು ಶ್ರೀ ಕೃಷ್ಣ ಭಕ್ತರಿಗೆ ಹಾನಿ ನಿಲ್ಲ, ಶ್ರೀ ಕೃಷ್ಣ ವೈರಿಗಳಿಗೆ ಶ್ರೇಯಸ್ಸಿಲ್ಲ. ರಾಜನ್ ! ನಾನೇ ದೇವನೆಂಬ ಒಬ್ಬ ಜೀವನಕಿಂತ ಪಾಪಿಗಳಿಲ್ಲ, ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭು ಮುಚ್ಯತೇ || ವೇದ ಶಾಸ್ತ್ರಾತ್ ಪರಂನಾಸ್ತಿ, ನ ದೈವಂ ಕೇಶವಾತ್ಪರಂ ||

ಶ್ರೀ ಹರಿಯೇ ಅವತರಿಸಿ ಕೃಷ್ಣನಾಗಿ ನಿಂತಾಗ ಕಂಸ, ನರಕ, ಜರಾಸಂಧ, ಪೌಂಡ್ರ, ಸಾಲ್ವ, ಶಿಶುಪಾಲ, ವಿಚಕ್ರ, ವಿದೂರಥ, ಹಂಸಡಿಭಕ, ಏಕ ಲವ್ಯ, ಮುರ, ಕಾಲಯವನನು, ಬಕ, ಕೇಶಿ, ಅರಿಷ್ಟ, ಚಾಣೂರ,ಮುಷ್ಟಿಕ, ಶಂಖ ಚೂಡ, ಸೃಗಾಲ ದುರ್ಯೋಧನ, ದುಃಶ್ಯಾಸನ, ಜಯದ್ರಥ, ಶಕುನಿ, ವಿಕರ್ಣ, ತ್ರಿಗರ್ತ, ಶತಧನ್ವ, ತೃಣಾವತ್ರ, ಶಕಟ, (ದಿವಾಕರ) ಮುಂತಾದ ಪ್ರಜಾ ಪೀಡಕ ರಾಕ್ಷಸರು, ದಿವಾಕರನ ಕಂಡು ಬಾಡಿದ ಕುವಲಯಗಳಾದರು ! ಉಗ್ರಸೇನ, ಪಾಂಡವ, ಶತ್ರುದೇವ, ಬಹುಲಾಶ್ವ, ದ್ರೌಪದೀ, ಸುಭದ್ರಾ, ಕುಂತೀ, ವಿಪ್ರಪತ್ನಿಗಣ, ಗೋಪಕುಮಾರೀಶತ, ನಂದ, ಯಶೋದಾ, ದೇವಕೀ ವಸುದೇವ ದುರ್ವಾಸಾದಿ ಮುನಿಜನ, ಸಾಂದೀ

ಪನಿ, ಕುಚೇಲ, ನಾರದ, ದೇವಾಲಾಪಿತ, ಅಕ್ರೂರ, ಉದ್ಧವ ದೇವಕಿ, ಬಲರಾಮ ರೋಹಿಣೀ, ಸುದಾಮ, ಶ್ರೀ ದಾಮ, ವೇದಾವಿ ದ್ವಿಜಸಹಸ್ರ, ಘಂಟಾಕರ್ಣಾದಿ ಪಿಶಾಚಗಣ, ಜಾಂಬವತ್ಯಾದಿರಮಣೀ ಸಹಸ್ರ, ಪ್ರದ್ಯುಮ್ನಾದಿ ಕುಮಾರ ಕೋಟಿ, ಅನಂತ ಭಕ್ತವೃಂದ ಮುಂತಾದ ಪ್ರಜಾಹಿತ ದೇವ ಗಂಧರ್ವ ಸುಜನರು ಶಿಶಾಕರನ ಕಂಡು ಹಿಗ್ಗಿದ ಕುಮುದಗಳಾದರು. ಶ್ರೀ ಕೃಷ್ಣನು ಪೂರ್ಣಕಾಮನಾದುದರಿಂದ, ಸ್ವ ಲಾಭ ಹಾನಿಗಳಗೊಡವೆ ದಿಲ್ಲದೆ ಇಬ್ಬರನ್ನು ಸರಿಯಾಗಿ ನೋಡಿ ಕೊಂಡನು. ದುಷ್ಟ ರನ್ನು ಶಿಕ್ಷಿಸುವವನೂ, ಶಿಷ್ಟರನ್ನು ರಕ್ಷಿಸುವವನೂ ಆದ ಪ್ರಭುವೇ ನಿಷ್ಪಕ್ಷಪಾತಿ ಎನಿಸಿ, ಪ್ರಸಿದ್ಧನಾಗುವನು. ಶ್ರೀ ಕೃಷ್ಣಾಯನಮಃ || ಓಂ ಶ್ರೀ ಃ ||

O (ಮೂಲ ೧೦೨ ಅಧ್ಯಾಯ)

24. ಹಂಸ ಡಿಭಿಕ ದುರ್ವರ್ತನೆ

ಶ್ರೀ ಜನಮೇಜಯನು ಶ್ರೀವೇದವ್ಯಾಸ ಪ್ರಿಯ ಶಿಷ್ಯನೂ,ಮಹಾಭಾರತಮರ್ಮ ವಿದಗ್ರಮನು ಆದ ವೈಶಂಪಾಯನರನ್ನು ನೋಡಿ, ಪ್ರೀತಿಯಿಂದ ''ಮುನಿವರೇಣ್ಯ! ಶ್ರೀಕೃಷ್ಣ ಪರಮಾತ್ಮನ ಪಾವನವಾದ ಚರಿತ್ರವನ್ನು ಕೇಳುತ್ತಿರುವ ನನಗೆ ಅಮೃತ ಪ್ರಾಶನವಾದಂತಾಗಿ, ಪರಮಾನಂದವಾಗಿದೆ ! ಮಹಾನುಭಾವ ! ನಿನ್ನಂತೆ ಭಕ್ತಿಪುಟ್ಟು ವಂತೆ ಭಗವಚ್ಚರಿತವನ್ನು ವರ್ಣಿಸುವರನ್ನು ನಾ ಕಾಣೆ ! ನನ್ನ ಪೂರ್ವಜರ ಪುಣ್ಯದಿಂದ ನೀನು ದೊರಕಿರುವೆ ! ಧನ್ಯನಾದೆನು. ವಿಚಕ್ರ, ಹಂಸ, ಡಿಭಕರೆಂಬ ದಾನವರನ್ನು ಶ್ರೀಶನು ಮಟ್ಟಿಕ್ಕಿ, ದುರ್ವಾದಿ ಸುಜರನ್ನು ಕಾಪಾಡಿದ ವೃತ್ತಾಂತವನ್ನು ಕೇಳಲಿಚ್ಛೆ ಯಾಗಿದೆ. ಶ್ರೀವಿಷ್ಣು ಚರಿತವನ್ನು ಕೇಳಿ, ಸಾಕೆಂಬ ಮನುಜನು ಪಶುವೇಸರಿ! ಹೇಳಯ್ಯಾ ಶ್ರೀಹರಿಪಾಥ ಹರಚರಿತವನ್ನು ಕಿವಿಗೊಟ್ಟು ಕೇಳುವೆನು" ಎಂದು ಪ್ರಾರ್ಥಿಸಿದನು

ಶ್ರೀವೈಶಂಪಾಯನನು ವರ್ಣಿಸಲಾರಂಭಿಸಿದನು.

ರಾಜನ್ ! ಹಿಂದೆ ಶಾಲ್ವ ದೇಶದಲ್ಲಿ ಬ್ರಹ್ಮದತ್ತನೆಂಬ ರಾಜ ವರನಿದ್ದನು. ಸರ್ವಭೂತ ದಯಾಪರನು, ಪರಮಪೂತಾತ್ಮನು, ವಿಜಿತೇಂದ್ರಿಯನು. ವೇದವೇದಾಂಗ ವಿಚಕ್ಷಣನು ಆಗಿ ಆತನು ನಿತ್ಯವೂ ದೇವಪಿತೃಋಷಿ ನರಭೂತ ಯಜ್ಞಗಳನ್ನು ಶ್ರದ್ಧೆ ಯಿಂದ ಮಾಡುತ್ತಿದ್ದನು. ದೇವಪೂಜಾ, ವೈಶ್ಯದೇವ, ಬಲಿಹರಣ, ವೇದಪಠನ, ನಿತ್ಯ ತರ್ಪಣ, ಅತಿಥಿಪೂಜನ, ದಯಾದಾನಗಳಿಂದ ಅವನ ಪಂಚಯಜ್ಞಗಳೂ ಸಂಪನ್ನ ವಾಗಿದ್ದವು. ಅವನಿಗೆ ರೂಪ ಯೌವನ ಗಣಗಣ ಸಂಪನ್ನೆಯರಾದ ಇಬ್ಬರು ಪತ್ನಿ ಯರಿದ್ದರು ಮಿತ್ರಸಹನೆಂಬ ಬ್ರಾಹ್ಮಣೋತ್ತಮನು ಅವನ ಮಿತ್ರನಾಗಿದ್ದನು. ರಾಜ ವಿಪ್ರರಿಗಿಬ್ಬರಿಗೂ ಸಂತಾನವಾಗಲಿಲ್ಲ

ಬ್ರಹ್ಮದತ್ತನು ಶಂಕರನನ್ನು ಕುರಿತು ತೀವ್ರ ತಪವನ್ನು ಮಾಡಿದನು. ಪತ್ನೀ ದ್ವಯವೂ ಅವನಿಗೆ ಉಪಚರಿಸಿತು ಮಿತ್ರಸಹನೂ ಕೂಡ ವೈಷ್ಣವ ದೀಕ್ಷೆಯಿಂದ ವಿಷ್ಣು

ಪಂಚರಾದಿ ವ್ರತವನ್ನು ಮಾಡಿದನು ಶಂಕರನು ಪ್ರೀತನಾಗಿ ವರವಿತ್ತನು. ಬ್ರಹ್ಮದತ್ತನ ಪತ್ನೀದ್ವಯದಲ್ಲಿ ಪುತ್ರದ್ವಯವನ್ನು ಬೇಡಿದನು ಶ್ರೀಶನು ಮಿತ್ರಸಹನಿಗೆ ಓರ್ವ ಪುತ್ರನನ್ನು ಕರುಣಿಸಿದನು. ಇನಸುನನಸಾಯಿತು ಬ್ರಹ್ಮದತ್ತನಿಗೆ ಶಂಕರ ತೇಜಃ ಪ್ರಭಾವದಿಂದ ಹಂಸಡಿಭಕರೆಂಬ ಸುತರಾದರು. ಮಹಾಭಕ್ತನಾದ ಮಿತ್ರಸಹನಿಗೆ ವಿಷ್ಣುತೇಜೋಪ ಬೃಂಹಿತನಾದ ಜನಾರ್ದನನೆಂಬ ಮಗನಾದನು. ಮೂವರು ಕುಮಾರರೂ ಪರಸ್ಪರ ಮಿತ್ರರಾಗಿ ಬೆಳೆದರು ; ವೇದಗಳನ್ನು ಓದಿದರು. ತರ್ಕವನ್ನು ಕಲಿತರು ಧನುರ್ವಿದ್ಯಾ ನಿಪುಣರಾಗಿ ಅಸ್ತ್ರಗಳನ್ನೂ ಅಭ್ಯಸಿಸಿದರು.

ಹಂಸಡಿಭಕರು ಹಿಮವತ್ಪಾರ್ಶ್ವವನ್ನು ಸೇರಿ ತಮ್ಮ ಜನ್ಮ ಕಾರಣನಾದ ಉಮಾರಮಣನನ್ನು ಕುರಿತು ಚಂಡ ತಪಸ್ಸನ್ನು ಮಾಡಿದರು "ನಮಸ್ತೇ ದೇವ ದೇವೇಶ ಶಂಕರ ! ಭಕ್ತವ ಶಂಕರ ! ಹರಶರ್ವ ಶಿವಾಭವ ನೀಲಗ್ರೀವ ಮಹಾದೇವ ವೃಷಧ್ವಜ ವಿರೂಪಾಕ್ಷ ಗಂಗಾಧರ ವಾಮದೇವ ಸದ್ಯೋಜಾತಗುಹಾವಾಸ ಭೂತಭಾವನಭೂತೇಶ ಸದಾಶಿವ ! ಇತ್ಯಾದಿನಾಮಗಳಿಂದ ಪೂಜಿಸುತ್ತಾ, ಐದು ಸಂವತ್ಸರಗಳ ಕಾಲವೂ ಮತ್ತೊಂದು ಮಾತಾಡದೆ, ತಪಸ್ಸೈದ ರಾಜ ಸುತರಿಬ್ಬರಿಗೆ ಪ್ರತ್ಯಕ್ಷನಾಗಿ ಪ್ರತ್ಯಕ್ಷನಾಗಿ ಶಿವನು ವರವನ್ನು ಬೇಡಿರಿ ! ಎಂದನು.

ವ್ಯಾಘ್ರಚರ್ಮಾಂಬರನು ಪಾಪಹರನು, ತ್ರಿನೇತ್ರನು, ಅತಿಪವಿತ್ರನು, ಶರ್ವನು ಗತಗರ್ವನು, ಶೂಲಪಾಣಿಯು ಪ್ರಶಸ್ತವಾಣಿಯು ಆದ ಉಮಾಪತಿಯನ್ನು ನೋಡಿ ಸಂತೋಷದಿಂದ ಎದ್ದು ನಿಂತು, ದಂಡಪ್ರಣಾಮವನ್ನು ಮಾಡಿ, ಕೈಜೋಡಿಸಿ "ಮಹಾದೇವ ! ನಾವಿರ್ವರೂ ದೇವಾಸುರ ಯಕ್ಷ ಗಂಧರ್ವಕಿನ್ನರ ದಾನವರಿಗೆ ಅಜಯ್ಯರಾಗಿರಬೇಕು. ಮಾಹೇಶ್ವರಾಸ್ತ್ರ ಬ್ರಹ್ಮಾಸ್ತ್ರಗಳನ್ನು ನಮಗೆ ದಯಮಾಡಿ ಕೊಡು! ಅಭೇದ್ಯವಾದ ಕವಚವನ್ನೂ ಅಚ್ಛೇದ್ಯವಾದ ಧನುವನ್ನೂ, ನಿಶಿತಪರಶುವನ್ನೂ ಕೊಡು ! ನಮಗೆ ರಕ್ಷಕರಾಗಿರಲು ಮಹಾಭೂತಗಳನ್ನು ಇಬ್ಬರನ್ನು ಕೊಡು!" ಎಂದು ಬೇಡಿದರು. "ಹಾಗೇ ಆಗಲಿ" ಎಂದು ವರವಿತ್ತು ಶಂಕರನು ಭೃಂಗಿರಿಟಿ ಎಂಬ ತನ್ನ ಪಾರ್ಷದರನ್ನು ಸಹಾಯಕ ಭೂತಗಳನ್ನು ಕಳಿಸುವಂತೆ ಆಜ್ಞಾಪಿಸಿದನು. ಕುಂಡೋದರ, ವಿರೂಪಾಕ್ಷ ಎಂಬೀರ್ವರು ಭೂತಗಳು ಹಂಸಡಿಭಕರನ್ನನುಸರಿಸಿ ಬಂದರು. ಶಂಕರನು ಕಣ್ಮರೆಯಾದನು.

ಹಂಸಡಿಂಭಕರುಶಂಕರವರಗರ್ವಿತರಾಗಿ ಮನೆಗೆ ಬಂದರು. ಮೈತುಂಬ ಭೂತಿ ಕವಚಗಳು, ಕೈಯಲ್ಲಿ ಧನುರಸ್ತ್ರಗಳು, ತಲೆಯಲ್ಲಿ ಜಟೆ, ಕಂಠ ಕರಗಳಲ್ಲಿಯರುದ್ರಾಕ್ಷ ಮಾಲೆಗಳು, ಹೊದಿಕೆಗಾಗಿ ಹುಲಿಯ ಚರ್ಮ ಬಾಯಲ್ಲಿ ಶಿವನಾಮ ಧರಿಸಿ, ನೋಡಲು ಶಿವನಂತೆ ಕಂಗೊಳಿಸಿದ ಪುತ್ರರು ಬಂದು ವಂದಿಸಲು ಬ್ರಹ್ಮದತ್ತನು ಸಂತೋಷಾಶ್ಚರ್ಯ ಸಂಭ್ರಮಾನ್ವಿತನಾದನು ತಾಯಂದಿರಿಗೆ ಮಕ್ಕಳಲ್ಲಿ ಪ್ರೀತಿಯುಕಿಂತ ಭೀತಿಯೇ ಹೆಚ್ಚಾಯಿತು. ಜನಾರ್ದನನೂ ವೇದವಿಚಾರಶೀಲನಾಗಿ ಗುಣಪೂರ್ಣನು, ಸರ್ವೇಂದ್ರಿಯ

ಪ್ರೇರಕನು, ಸರ್ವಬ್ರಹ್ಮಶಂಕರಶಕ್ರ ದೇವಗಣವಂದಿತ ಪಾದಾರವಿಂದನು ಶ್ರೀವಿಷ್ಣುವೇ ಎಂದರಿತು ಶುದ್ಧವೈಷ್ಣವ ಧರ್ಮದಲ್ಲಿ ನಿರತನಾಗಿದ್ದನು. ಅವರು ಮೂವರು ಮದುವೆಯಾಗಿ, ಸ್ವದಾರ ನಿರತರೂ, ಪಂಚಯಜ್ಞತತ್ಪರರೂ ಆಗಿದ್ದರು.

ಒಂದು ಸಲ ರಾಜಕುಮಾರರು ಬೇಟೆಗೆಂದು ಹೊರಟು. ಜನಾರ್ಧನನನ್ನೂ ಕರೆದರು. ವಿಪ್ರನಿನೇಕೆ ಬೇಟೆಯ ಕಾಟವೆಂದರೂ ಕೇಳದೆ, ಬಲಾತ್ಕರಿಸಿ, ಕರೆದುಕೊಂಡು ಹೋದರು. ಸಿಂಹ ಶಾರ್ದೂಲ ಶರಭಮುಖ ಮೃಗಗಳನ್ನು ಕೊಂದು ಮನೆಗೆ ಕಳಿಸಿದರು. ಮಧ್ಯಾಹ್ನವಾಯಿತು. ಬಿಸಿಲಿನ ತಾಪಕ್ಕೆ ಬಳಲಿ ಅವರು ಪುಷ್ಕರ ಸರೋವರವನ್ನು ಸೇರಿ, ನೀರು ಕುಡಿದು ಈಜಾಡಿ ವಿಶ್ರಮಿಸಿದರು. ಜನಾರ್ಧನನೂ ಸ್ನಾನ ಪೂಜಾದಿಗಳನ್ನು ಮಾಡಿಕೊಂಡು ಅವರಿಂದ ಕೂಡಿ ವಿಶ್ರಮಿಸುತ್ತಿದ್ದನು.

ಅವರಿಗೆ ವೇದ ಧ್ವನಿಯು ಕೇಳಬಂತು, ಯಜ್ಞವು ನಡೆಯುತ್ತಿರಬಹುದೆಂದು ಊಹಿಸಿ, ಅವರು ಸೇನೆಯನ್ನು ಅಲ್ಲೇ ಬಿಟ್ಟು, ಸರಸ್ತೀರದ ಯಜ್ಞಮಂಟಪವನ್ನು ಸೇರಿದರು. ಮಹರ್ಷಿಕಾಶ್ಯಪನ ವೈಷ್ಣವ ಯಜ್ಞವು ಮಹಾ ವಿಜೃಂಭಣೆಯಿಂದ ನಡೆಯುತ್ತಿತ್ತು. ಜಪ ಹೋಮ ಪಾರಾಯಣಗಳು ನಡೆದಿದ್ದವು. ಮೂವರು ಬಂದು ಮುನಿಗಳಿಗೆ ಮೂರ್ಧಗಳಿಂದ ವಂದಿಸಿದರು. ಮುನಿಗಳೂ ಬಂದ ಅತಿಥಿಗಳಿಗೆ ತಕ್ಕ ಅರ್ಘ್ಯಾದಿ ಸತ್ಕಾರವನ್ನು ಕೊಟ್ಟು ಗೌರವಿಸಿದರು. ಆಗ ಹಂಸನು ಮುನಿವರರನ್ನು ನೋಡಿ "ಮುನಿಶ್ರೇಷ್ಠರೇ! ನಮ್ಮ ತಂದೆ ಬ್ರಹ್ಮದತ್ತನ ಹೆಸರು ನೀವು ಕೇಳಿರಬಹುದು! ಆತನು ಯಜ್ಞವನ್ನು-ರಾಜಸೂಯವನ್ನೇ ಮಾಡಬೇಕೆಂದಿರುವನು. ಈ ನಿಮ್ಮ ಸತ್ರವು ಮುಗಿದೊಡನೆ ತಾವೆಲ್ಲರೂ ನಮ್ಮ ಊರಿಗೆ ಬಂದು ಆ ಯಜ್ಞವನ್ನು ನಡೆಸಿಕೊಡಬೇಕು. ನಾವು ಅಷ್ಟರಲ್ಲೇ ಸಮಸ್ತರಾಜ ಮಂಡಲವನ್ನು ಪರಾಕ್ರಮದಿಂದ ಗೆದ್ದು, ಕಪ್ಪ ಕಾಣಿಕೆಗಳನ್ನು ಪಡೆದು, ಯಜ್ಞ ಸಂಭಾರಗಳನ್ನು ಸಿದ್ಧಪಡಿಸಿರುವೆವು. ನಾನೇನು ಸಾಮಾನ್ಯರಲ್ಲ ಕೇಳಿ! ನಮ್ಮ ಸ್ವಂತ ಪ್ರಯತ್ನ ಸಾಹಸಗಳಿಂದ ತೀವ್ರ ತಪವನ್ನು ಮಾಡಿ, ಮಹಾದೇವನನ್ನು ಮೆಚ್ಚಿಸಿ ಆಯುಧಗಳಿಂದ ಮರಣವಾಗದ ವರವನ್ನು ಬೇಡಿ, ಬಂದಿರುವೆವು ನಮ್ಮ ತಂದೆಯು ಧರ್ಮಾತ್ಮನೂ, ದಾನ ಶೀಲನೂ ಇರುವನು. ಇಂದೇ ನಾವು ದಿಗ್ವಿಜಯಮಾಡಲು ಹೊರಡುವೆವು."

ಹಂಸನ ಸೋಹಂಗರ್ವದ ವಚನಗಳನ್ನಾಲಿಸಿ, ಮುನಿಗಳು ನಸುನಗುತ್ತಾ "ಆಗಲಿ! ಯಜ್ಞ ನಡೆದರೆ ನಾವು ಅವಶ್ಯವಾಗಿ ಬರುವೆವು ಶಿಷ್ಯರೂ ಬರುವರು" ಎಂದರು. ಹಂಸಡಿಭಕರು ಅಲ್ಲಿಂದ ತೆರಳಿ, ಪುಷ್ಕರದ ಉತ್ತರ ತೀರವನ್ನು ದಾಟಿ, ದುರ್ವಾಸರಿದ್ದ ಆಶ್ರಮವನ್ನು ಕಂಡರು, ಮಂತ್ರವರ್ಣವಿದರು, ನಿಯತೇಂದ್ರಿಯರು, ಬ್ರಹ್ಮಸೂತ್ರ ವಿಚಾರಪರರು, ಆದ ದುರ್ವಾಸ ಶಿಷ್ಯರು ಜಗದ್ಯೋನಿಯು, ವಿಶ್ವನಿಯಾಮಕನು, ಬ್ರಹ್ಮ ಶಬ್ದಮುಖ್ಯಾರ್ಥನು, ವೇದಾಂತ ವೇದ್ಯನು, ಅನಾದ್ಯನಂತನು,

ಕುಂಕುಮ, ಗಂಧ, ಪ್ರಿಯವಾದ ಪುಷ್ಪಗಳು, ಸರ್ವರೋಗ ನಿವಾರಕವೂ, ಅಮೃತ ಸಮಾನ ವಾದ್ಯಾದಿಗಳನ್ನು ರಾಜಕುಮಾರರು ಅತಿ ಗೌರವದಿಂದವರನ್ನು ಪ್ರಜಾಹಿತರ ಭಕ್ತಿಯಿಂದ ಉಪಚರಿಸುತ್ತಿದ್ದರು. ಹಂಸಡಿಭಕರುಗಳಿಗೆ ಗುರುವಾದ ದುರ್ವಾಸ ಮಹರ್ಷಿಗಳೂ ಮುನಿವರರು ಸನ್ಯಾಸಿಗಳಿಗೆ ಅಧ್ಯಾತ್ಮ ವಿದ್ಯಾಭ್ಯಾಸಗಳನ್ನು ದಯಪಾಲಿಸುತ್ತಿದ್ದರು.

ರಾಜಕುಮಾರರು ಕೌಪೀನಧರನೂ, ಜಟಾ ಅಜಿನಧಾರಕನೂ, ಉಗ್ರತೇಜಸನೂ, ವೇದಾದಿ ಶಾಸ್ತ್ರ, ವಿನಯವೂ, ಸರ್ವಲೋಕ ವಿಖ್ಯಾತನೂ ಆದ ದುರ್ವಾಸ ಮುನಿವರನನ್ನು ನೋಡಿ ಹಂಸಡಿಭಕರು "ಯಾರಿವನು ? ಯಾವ ಆಶ್ರಮದವನು ? ಕೆಂಪು ಲಂಗೋಟಿಯನ್ನು ಧರಿಸಿದರೆ ಮೋಕ್ಷ ಬರುವುದೇ ? ಗೃಹಸ್ಥನೇ ಧರ್ಮಿಷ್ಠನು, ಗೃಹಸ್ಥಾಶ್ರಮವೇ ಸರಿಯಾದ ಆಶ್ರಮವು, ಪ್ರಾಣಿಗಳಿಗೆಲ್ಲ ತಂದೆಯಂತೆ ಅನ್ನಾದಿಗಳನ್ನಿತ್ತು, ತಾಯಿಯಂತೆ ಉಪಚರಿಸಿ ಉಪಕರಿಸುವ ಗೃಹಸ್ಥನೇ ಧನ್ಯನು. ಅಂತಹ ಗೃಹಸ್ಥನಾಗದೆ, ಈ ಮುನಿಯು ಉನ್ಮತ್ತನಂತೆ ವಿರೂಪನಾಗಿರುವನು. ಬಕದಂತೆ ಸದಾ ಧ್ಯಾನವನ್ನು ಮಾಡುವ ಈ ವಂಚಕನಿಂದ ಜಗವು ಹಾಳಾಗುತ್ತಿದೆ. ಇವನು ಶ್ರೇಷ್ಠರೆನಿಸಿಕೊಂಡು, ಧನಾದಿಗಳನ್ನು ಕಸಿದು, ಸುಮ್ಮನೆ ಕೂತು ತಿನ್ನುವ ಸನ್ಯಾಸಿಗಳಿಗೆ ಬುದ್ಧಿಯನ್ನು ಕಲಿಸದಿದ್ದರೆ, ನಾವು ರಾಜರೆನಿಸಿ ಏನು ಪ್ರಯೋಜನ? ರಾಜನ ಕರ್ತವ್ಯಗಳಲ್ಲಿ ಇಂತಹ ವಂಚಕರನ್ನು ಶಿಕ್ಷಿಸಿ, ಜನರಿಗೆ ಸುಖಮಾರ್ಗವನ್ನು ತೋರುವುದೇ ಪ್ರಥಮವಾಗಿದೆ. ವೈರಾಗ್ಯ, ಸನ್ಯಾಸ, ಇಂದ್ರಿಯದಮನ ಮೊದಲಾದವೆಲ್ಲ ಬೂಟಾಟಿಕೆಗಳು, ಇವರನ್ನು ಹಿಡಿದು ಕೆಟ್ಟಹಠವನ್ನು ಮುರಿದು, ಇವರಿಗೆಲ್ಲಾ ಮದುವೆಮಾಡಿ ಸುಖಕರವಾದ ಗೃಹಸ್ಥಾಶ್ರಮದಲ್ಲಿ ಸ್ಥಾಪಿಸಿಬಿಡುವೆವು. ಅಧರ್ಮವನ್ನು ಧರ್ಮವೆಂಬುವ ಈ ಮೂರ್ಖರಿಗೆ ಬುದ್ಧಿ ಬರುವಂತೆ ಮಾಡದಿದ್ದರೆ ನಾನು ಹಂಸನೇ ಅಲ್ಲ, ಇವನು ಡಿಭಕನೇ ಅಲ್ಲ !" ಎಂದು ಚಿಂತಿಸಿ ಅವರಿಬ್ಬರು. ವಿಪ್ರಜನಾರ್ದನನನ್ನೂ ಕರೆದುಕೊಂಡು, ದುರ್ವಾಸಮುನಿರಾಜನನ್ನು ಸಮೀಪಿಸಿದರು. ಶಿವವರದಿಂದ ಪುಟ್ಟಿ, ಶಿವಕೃಪೆಯಿಂದ ವಿಕ್ರಮವಂತರಾದ ರಾಜಪುತ್ರಾಧಮರು ಶಿವಾವತಾರನಾದ, ವೈಷ್ಣವ ಸತ್ತಮನಾದ ದುರ್ವಾಸನಿಗೆ ದ್ರೋಹ ಮಾಡಿದರು. ಸಾಕಿದ ನಾಯಿಯು ಸಾಕುವ ಸ್ವಾಮಿಯ ಕಾಲನ್ನೇ ಕಚ್ಚಿತು.

ಅವರ ಮುಖಭಾವವನ್ನು ಕಂಡು ಜನಾರ್ದನನು ಹೆದರಿನಿಂತನು. ಭಕ್ತನ ಸಮ್ಮತಿಯನ್ನು ಪಡೆದು ಹಂಸನು ದುರ್ವಾಸನನ್ನು ನೋಡಿ "ಎಲವೊ ಬ್ರಾಹ್ಮಣಾಧಮ ! ನಿನಗೆ ಜ್ಞಾನವಿದೆಯಾ ? ಯಾರ ಆಶ್ರಮವಿದು ? ಅದನ್ನು ಅಪವಿತ್ರಗೊಳಿಸಲು ನೀನೇಕೆ ಇಲ್ಲಿಗೆ ಬಂದೆ ? ಲೋಕೋಪಕಾರಕವಾದ ಗೃಹಾಶ್ರಮವನ್ನು ಬಿಟ್ಟು ಸನ್ಯಾಸಿಯಾಗಿ ಜನರನ್ನು ವಂಚಿಸುತ್ತಿರುವ ನಿನ್ನ ಹೆಸರೇನು ? ಡಂಬಾಚಾರಿಯೇ ! ನೀನು ಕೆಡುವುದಲ್ಲದೆ, ಈ ಸಹಸ್ರ ಸಹಸ್ರ ತರುಣರನ್ನೂ ಸನ್ಯಾಸಿಗಳನ್ನು ಮಾಡಿ, ಸುಖರಹಿತರನ್ನಾಗಿ ಕೆಡಿಸುತ್ತಿರುವೆ ! ಮೂರ್ಖ ! ನಿನಗೆ ಶಾಸಕರಿಲ್ಲವೆಂದು

ಕಾಣುತ್ತದೆ. ಈಗ ನಿನ್ನನ್ನು ದಂಡಿಸುವ ಸಮರ್ಥರು ನಾವು ಬಂದಿರುವೆವು ಇನ್ನು ಮುಂದೆ ನಿನ್ನ ಈ ವೇಷ, ಈ ನಾಟಕ, ಈ ವಂಚನೆ ಸಾಗದು ತಿಳಿ! ಒಳ್ಳೆಯ ಮಾತಿನಲ್ಲಿ ಗೃಹಸ್ಥನಾಗಿ, ಸುಖವಾಗಿರು! ಮಾಡು ಪಂಚಯಜ್ಞಗಳನ್ನು ಬೇಡು ಸ್ವರ್ಗವನ್ನು! ಅಲ್ಲಿ ಕೂಡ ನಿನಗೆ ರಂಭಾಸಂಭೋಗ, ನಂದನವಿಹಾರ, ಭೋಗ ವಿಲಾಸಗಳು ನಿಶ್ಚಯವಾಗಿ ಸಿಗುವವು ಇಹಪರ ಸುಖಪರನಾಶಕವಾದ ಈ ಪಾಳು ಸನ್ಯಾಸವನ್ನು ಬಿಡು! ಇಲ್ಲದಿರೆ ಬಲಾತ್ಕರಿಸಿ ನಾವು ಬಿಡಿಸುವೆವು!" ಎಂದು ಪ್ರಲಾಪಗಳನ್ನಾಡಿದನು.

ಆಗ ಬಿರುಗಾಳಿಗೆ ತರಳೆಲೆಯಂತೆ ಕಂಪಿಸುತ್ತಾ ಜನಾರ್ದನನು ಹಂಸನನ್ನು ಅವನ ತಮ್ಮ ಡಿಭಕನನ್ನೂ ತಡೆದು, ಯತಿವರನಿಗೆ ನಮಸ್ಕಾರವನ್ನು ಮಾಡಿ, ಮತ್ತೆ ಆ ರಾಕ್ಷಸರನ್ನು ನೋಡಿ ಇಂತೆಂದನು. "ಮಂದಬುದ್ಧಿ! ಹಂಸ! ಡಿಭಕ! ಇಂತು ಮಾತಾಡುವುದು ಸರಿಯಲ್ಲ ಉಭಯಲೋಕ ಸುಖ ನಾಶಕವಾದ ವಚನಗಳನ್ನಾಡಿ, ಮಹಜ್ಜನ ದ್ರೋಹವನ್ನು ಕೆಂಡವನ್ನು ಉಡಿಯಲ್ಲಂತೆ ಕಟ್ಟಿಕೊಂಡಿರಿ! ಕೇಳಬಾರದಂತಹ ಕೇಡಿಗರ ನುಡಿಯನ್ನು! ಕೃಷ್ಣ! ಶಾಂತಂಪಾಪಂ! ನಿಮಗಿಬ್ಬರಿಗೆ ವಿನಾಶ ಕಾಲವೇ ಬಂದಂತಿದೆ! ಬ್ರಹ್ಮದಂಡ ಹತರಾಗಿ ಆಯುರ್ಹಾನಿಯನ್ನು ಸಂಪಾದಿಸಿದಿರಿ! ಜ್ಞಾನ ದೀಪದಲ್ಲಿ ಶ್ರೀ ಹರಿಯನ್ನು ಕಂಡು, ಇತರ ಸುಜನರಿಗೆ ತೋರಿಸಿ ಉದ್ಧರಿಸುವ ಶುದ್ಧಾತ್ಮರಿವರು! ಕರ್ಮಫಲಗಳನ್ನು ಶ್ರೀಶನಿಗರ್ಪಿಸಿ, ದುಷ್ಕರ್ಮಗಳನ್ನು ದೂರೀಕರಿಸಿ, ಇಂದ್ರಿಯಗಳನ್ನು ನಿಗ್ರಹಿಸಿ, ವಾಸಮಾಡುವ ದುರ್ವಾಸರಿವರು! ಇಂತಹ ಮಹಾತ್ಮರಿಗೆ ದ್ರೋಹ ಬಗೆದು ನೀವು ಸತ್ತವರೇ ಸರಿ! ಎಲವೋ ಮೂರ್ಖ ರಾಜರೇ! ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ-ಎಂದು ನಾಲ್ಕಾಶ್ರಮದವರು ಶಾಸ್ತ್ರವಿಹಿತರಾಗಿ ಇರುವರು. ಅವರಲ್ಲಿ ಯತಿಯು ಸರ್ವಶ್ರೇಷ್ಠನು ಅವರಲ್ಲಿ ಬ್ರಹ್ಮವಿದನು ಶ್ರೇಷ್ಠತರನು ಅವರಲ್ಲಿ ಶಾಸ್ತ್ರಪ್ರವಚನದಿಂದ ಇತರರ ಸಂಶಯಗಳನ್ನು ಅನಾಯಾಸವಾಗಿ ನಿವಾರಿಸಿ, ಜ್ಞಾನದೀಪವನ್ನು ತೋರಿ ಉಪಕರಿಸುವ ಮಹಾತ್ಮನು ಶ್ರೇಷ್ಠತಮನು ಅಂತಹ ದುರ್ವಾಸರಲ್ಲಿ ನಿಮಗೇಕೆ ಇಂತಹ ಕೇಡು ಬುದ್ಧಿ ಉದಯಿಸಿತು? ಹಿರಿಯರನ್ನು ಸೇವಿಸಿಲ್ಲ, ಶಾಸ್ತ್ರಮರ್ಮಗಳನ್ನು ತಿಳಿದಿಲ್ಲ. ಆದರೂ ಶಾಸ್ತ್ರನಿಂದೆ ಬ್ರಾಹ್ಮಣನಿಂದೆಗಳನ್ನು ಕೊಂಕಿಲ್ಲದೆ ಮಾಡುವ ನಿಮ್ಮ ಮಂದಮತಿಗೆ ಆಶ್ಚರ್ಯವಿವಾದವಶನಾಗಿರುವೆನು ಅಯ್ಯೋ! ಕೆಟ್ಟಿರಿ! ನಿಮ್ಮ ಪಾಪಿ ಸಹವಾಸದಿಂದ ನಾನು ಕೆಟ್ಟಂತಾಯಿತು! ಈ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ತಲೆಯನ್ನು ಬಂಡೆಗೆ ಬಡಿದುಕೊಳ್ಳಲೇ ವಿಷಕುಡಿಯಲೇ ಸಮುದ್ರದಿ ಬೀಳಲೇ?" ಹೋಎಂದು ಅಳುತ್ತಾ ಜನಾರ್ದನನು ಕುಸಿದುಬಿದ್ದನು.

ಇಷ್ಟೆಲ್ಲವನ್ನು ಕಂಡು, ಕೆಂಡನಾಗಿ, ಚಂಡಮುನಿಯು ತನ್ನ ಮೂಲರೂಪದ ಮೂರನೆಯ ಕಣ್ಣಿಂದಲಾತೆ ನೋಡುತ್ತಾ ಹಂಸಡಿಭಕರಿಗಿಂತೆಂದನು. "ಏನೆಂದೆ?

ಏನೆಂದೆ ! ಎಲವೋ ಪಾಪಿಗಳಿರಾ ! ಹಾಳಾಗಿ ಹೋಗಿ ! ಈಗ ಈ ಕ್ಷಣವೇ ಹೋಗಿ ಬಿಡಿ ! ಇಲ್ಲದಿರೆ ನಿಮ್ಮನ್ನು ನಿಮ್ಮ ಸೇನಾದಿ ಸರ್ವಸ್ವವನ್ನೂ ಸುಟ್ಟು ಭಸ್ಮ ಮಾಡಿಬಿಡಬಲ್ಲೆನು. ಎಂತಹ ದುಸ್ಸಾಹಸ ! ನನ್ನ ಮುಂದೆ ನಿಂತು ಇಂತು ಕೊಂಕಾಡಿದವರು ಉಳಿದಿಲ್ಲ. ಮಂದ ಬುದ್ಧಿಗಳಾದ ನಿಮ್ಮ ದರ್ಪವನ್ನು ಮುರಿಯುವ ಶಂಖ ಚಕ್ರ ಗದಾ ಧರನಿದ್ದಾನೆ ! ನಾನೇಕೆ ಸುಮ್ಮನೆ ತಪಃ ಫಲವನ್ನು ವ್ಯಯಿಸಲಿ ! "ಎಂದು ದುರ್ವಾಸನು—ದುಷ್ಟರಿಂದ ತಾನೇ ದೂರವಿರಬೇಕೆಂದು ಶಿಷ್ಯರಿಂದ ಕೂಡಿ ಆ ಸ್ಥಲವನ್ನು ಬಿಡಲು ಉದ್ಯುಕ್ತನಾದನು.

ಹಂಸನು ಮುಂದೆ ಬಂದು ಮುನಿವರನ ಕೈ ಹಿಡಿದು, ಆತನ ಲಂಗೋಟಿಯನ್ನು ಹರಿದು ಬಿಸುಟಿದನು; ಕಮಂಡಲುವನ್ನು ನೆಲಕ್ಕೆ ಕುಕ್ಕಿ ಒಡೆದನು; ದಂಡವನ್ನು ಮುರಿದನು. ಡಿಭಕನಿಂದ ಇತರ ಯತಿಗಳಿಗೆ ಇದೇ ಗತಿಯಾಯಿತು. ಅವರು ದಿಕೆಟ್ಟು ಹಾ ಹಾ ಎನ್ನುತ್ತಾ ಓಡಿ ಹೋದರು. ಜನಾರ್ದನನು ಅನಾಹುತವನ್ನು ನಿವಾರಿಸಲು "ಬೇಡ ! ಇದು ಒಳಿತಲ್ಲ !" ಎಂದು ರಾಜ ಪುತ್ರರನ್ನು ನಿವಾರಿಸಿದನು.

ದುರ್ವಾಸನು ತನ್ನ ಸಿಡಿದೇಳುವ ಸಿಟ್ಟನ್ನು ಬದಿಗಿಟ್ಟು, ಮೆಲ್ಲನೆ ಹಂಸ ಡಿಭಕರಿಗೆ ಇಂತೆಂದನು. "ರಾಜಕುಲಪಾಂಸನರೇ ! ಶಾಪದಿಂದ ಈ ಕ್ಷಣವೇ ನಿಮ್ಮನ್ನೆಲ್ಲರನ್ನು ನಾಶಮಾಡಬಲ್ಲೆನು. ಆದರೆ ಯತಿಯಾಗಿರುವುದರಿಂದ ಮತಿ ಶಾಂತನಾಗಿ ಬಿಟ್ಟಿರುವೆನು. ಈಗ ವಾಸುದೇವನೇ ಅವತರಿಸಿ, ದ್ವಾರಕೆಯಲ್ಲಿ ಸಾಕ್ಷಾತ್ತಾಗಿ ಇರುವಾಗ, ನನಗೇಕೆ ಆ ಶ್ರಮ ! ನಿಮ್ಮಿಬ್ಬರಿಗೂ ಸಖನಾಗಿರುವ ಈ ವಿಪ್ರನು ಸಜ್ಜೀವನಾದುದರಿಂದ ಬಿಟ್ಟಿರುವೆನು. ಹೋಗಿ ಶಂಖ ಚಕ್ರ ಗದಾ ಧರನು ಜಗದೇಕನಾಥನು, ದೀನಜನಶರಣ್ಯನು ಆದ ಶ್ರೀ ಕೃಷ್ಣನೇ ನಮಗೆ ಗತಿ ! ನಿಮ್ಮ ಬಂಧುವಾದ ಜರಾಸಂಧನೂ ಎಂದೂ ಇಂತಹ ಮಾತನ್ನು ಆಡಿಲ್ಲ. ಇಂತಹ ಕೇಡನ್ನು ಮಾಡಿಲ್ಲ ! ಅವನಿಗೆ ಇದು ತಿಳಿದು ಸುಮ್ಮನಿದ್ದರೆ, ಅವನೂ ಹಾಳಾಗಿ ಹೋಗುವ ದಿದು ನಿಜ ! "ಎಂದು" ವಿಪ್ರಬಾಲ ! ನೀನು ಒಳ್ಳೆಯವನಿರುವೆ ! ನಿನಗೆ ಬೇಗನೆ ನಿನ್ನ ಪ್ರಭು ಜನಾರ್ದನನ ದರ್ಶನವಾಗಲಿ ! ನಿನಗೆ ಶುಭವಾಗಲಿ ! ಹೋಗಿ ಎಲ್ಲ ವಿಚಾರವನ್ನೂ ನಿಮ್ಮಪ್ಪನಿಗೆ ತಿಳಿಸು ! ಎಂದು ಜನಾರ್ದನನಿಗೆ ಆಶೀರ್ವದಿಸಿದನು.

ಆಗ ಹಂಸ ಡಿಭಕರು ಕುಪಿತರಾಗಿ ಸನ್ಯಾಸಿಗಳ ಶಿಕ್ಯಭಾಂಡಗಳನ್ನೂ ಕೌಪೀನಾಚ್ಛಾದನಗಳನ್ನೂ, ದಂಡಕಮಂಡಲುಗಳನ್ನೂ ನಾಶಮಾಡಿ, ಆಶ್ರಮದಲ್ಲಿ ಹರಡಿದರು. ಬೇಡ ಸೇವಕರನ್ನು ಕರೆದು, ಅವರಿಂದ ಅಲ್ಲಿ ಮಾಂಸಗಳನ್ನು ಅಗ್ನಿಕುಂಡಗಳಲ್ಲಿ ಬೆಯಿಸಿಸಿ, ತಿಂದರು. ಒದರಾಡುತ್ತಾ ಅವರು ತಮ್ಮ ಶಾಲ್ವಪುರಿಗೆ

ಹೊರಟರು ವಿಧಿಯಿಲ್ಲದೆ ವಿಪ್ರಕುಮಾರರೂ ಅವರನ್ನನುಸರಿಸಿ. ಪುರವನ್ನು ಸೇರಿ, ತನ್ನ ತಂದೆಗೆ ಎಲ್ಲ ದುರಾಗತವನ್ನೂ ತಿಳಿಸಿದನು.

25. ದುರ್ವಾಸದ್ವಾರಕಾಗಮನ ಕೃಷ್ಣಸಾಂತ್ವನ

ಶ್ರೀ ಜನಮೇಜಯ ! ಕೇಳು ! ಆಗ ದುರ್ವಾಸನು ಓಡಿಹೋಗುವ ಶಿಷ್ಯರನ್ನು ಕರೆದು, ಒಟ್ಟುಗೂಡಿಸಿ, ಸಮಾಧಾನಪಡಿಸಿದನು. ಅವರನ್ನೂ ಕರೆದುಕೊಂಡ , ಮೆಲ್ಲನೆಸಾಗಿ, ದ್ವಾರಕೆಗೆ ಬಂದನು. "ಪ್ರಭುವನ್ನು ಕಂಡುಕಾಲಿಗೆರಗುವೆವು ! ಮುರಿದದಾರು ಪಾತ್ರೆಗಳನ್ನು ಹರಿದ ಕೌಪೀನಗಳನ್ನು ತೋರಿಸಿ, ಗೋಳಿಡುವೆವು. ಕಾಪಾಡುವವರಿವಿಗೂ ಬಿಡೆವು ! ಸಾಹಸ ದುಃಷ್ಟರನ್ನು ಸದೆಬಡಿಯಲು ಸರ್ವೋತ್ತಮನು ಶ್ರೀ ಹರಿಯು ಅವತರಿಸಿರುವನು." ಎಂದು ಚಿಂತಿಸುತ್ತಾ, ಕೈಗಳಲ್ಲಿ ಛಿದ್ರಭಾಂಡಾದಿಗಳನ್ನು ಹಿಡಿದು ಗೋವಿಂದಾ ! ಹರೀ ! ಮಾಧವಾ ! ಎಂದು ಉಚ್ಚರಿಸುತ್ತಾ ಬರುವ ಮುನಿಜನರನ್ನು ಶ್ರೀ ಕೃಷ್ಣನು ನೋಡಿ, ಎದ್ದು ಬಂದು, ಕರೆತಂದು, ಉಚಿತಾಸನಗಳಲ್ಲಿ ಕೂಡಿಸಿ, ಅವರ ದೀನ ಸ್ಥಿತಿಯನ್ನು ಕಂಡು, ಕಣ್ಣೀರಿಟ್ಟು, ದುರ್ವಾಸಾದಿಗಳನ್ನು ಅಮೃತ ವಚನಗಳಿಂದ ಸಂತೈಸಿದನು. ಈಶ್ವರಾನುಗ್ರಹ ಜಾತರು ಈಶ್ವರನಿಗೆ ದ್ರೋಹ ಮಾಡುವುದು ಹೊಸತೇನಲ್ಲ. ಆ ಪಾಪಿಗಳ ಸ್ವಭಾವವೇ ಅಂತಹದು ! ಬಾಣ ರಾವಣ ಭಸ್ಮಾಸುರರೇ ಇಂತಹ ದೃಷ್ಟಾಂತಸ್ಥಾನಗತರು !

ಮರುದಿನ ಸರ್ವೇಶ್ವರನಾದ ವಿಷ್ಣುವು ಪ್ರಾತಃ ಕಾಲವಾದಾಗ ಗೋಲ ಕ್ರೀಡಾ ತತ್ಪರನಾಗಿ ದುರ್ವಾಸಾದಿಗಳನ್ನು ಹೇಳಿ ಕಳಿಸಿದನು. ನೀಲಕುಂಚಿತ ಮೂರ್ಧಜನು, ನೀಲನೀರದ ಕಾಯನು, ಪ್ರಲಂಬಬಾಹುದಂಡನು, ಕಿರೀಟ ಕಟಕ ಹಾರನೂ ಪುರಕೇಯೂರ ಭೂಷಣನು, ಪದ್ಮಕಿಂಜಲ್ಕ ಲೋಚನನು, ಶಿವನು, ಶ್ರೀಪತಿಯು ಆದ ಶ್ರೀ ಕೃಷ್ಣನನ್ನು ನೋಡಿ, ಗೋಲ ಕ್ರೀಡೆಯನ್ನೂ ನೋಡಿ, ದುರ್ವಾಸನು "ಹರೇ ! ನಾರಾಯಣ ! ನಿತ್ಯಾನಂದ ಮಹೋದಧಿ ! ಭೃತ್ಯವತ್ಸಲ ! ಜೀವಜಾತವನ್ನು ಗೋಲಗಳಂತೆ ಆಡಿಸುವ ಕ್ರೀಡಾಲೋಲ ! ನಿನಗೆ ನಮಃ" ಎನ್ನುತ್ತಾ ಒಳ ಬಂದನು.

ಶ್ರೀ ಶನು ಥಿಗ್ಗನೆದ್ದು, ಮುನಿವರ ನಿಗಾಸನವಿತ್ತು ಸತ್ಕರಿಸಿದನು. ಇತರರೂ ಸತ್ಕೃತರಾಗಿ ಸ್ವಲ್ಪದೂರದಲ್ಲಿ ರತ್ನ ಕುಥಾದಿಗಳಲ್ಲಿ ಕೂತರು. ಗುಂಡಾದ ಪಗಡೆಗಳ ಗೋಲಕ್ರೀಡೆಯನ್ನು ಬಿಟ್ಟು ಸಾತ್ಯಕಿಯನ್ನೂ, ಉದ್ಧವನನ್ನೂ, ವಸುದೇವ ಬಲರಾಮರನ್ನೂ ಕರೆದುಕೊಂಡು ಬಂದ ಕೃಷ್ಣನು ದುರ್ವಾಸ ಮುನಿ ಸಮೀಪದಲ್ಲಿ ಕೂತು "ಏನೆಂಬಂತೆ" ನೋಡಿದನು. ದುರ್ವಾಸನೂ ಶಂಕ ದೈತ್ಯನ ಅಪಚಾರವನ್ನು ನೆನೆದಂತೆ ಕಿಡಿಕಿಡಿ ಯಾದನು. ಆ ಮುನೀಶ್ವರನು ರುದ್ರನೇ ಆದನು. ಆತನ ಕಣ್ಣುಗಳು ಕಿಡಿಕಾರಿದವು ಶರೀರವು ರೋಷ ಪ್ರಸ್ಫುರಿತವಾಯಿತು

ಮಾತಾಡಲು ಬರದೆ ಮಾಧವನನ್ನು ಕೂತ ಮುನಿರಾಜನನ್ನು ಕಂಡು ಯಾದವರು ಭಯಭ್ರಾಂತರಾದರು. ಶ್ರೀಕೃಷ್ಣನು "ಏನು ? ಏನಾಯಿತು ? ನಾನಿಲ್ಲಿರುವೆನು ! ನಿನಗಾಗಿ ಏನು ಮಾಡಲಿ ? ಹೇಳು ಮಹಾನುಭಾವ ! ಆ ಕೆಲಸವು ಆಯಿತೆಂದು ತಿಳಿ ! ಏಕೆ ಬಂದಿರಿ? ಬ್ರಾಹ್ಮಣೋತ್ತಮರು ಅದರಲ್ಲಿ ಯತಿ ಶ್ರೇಷ್ಠರು ಇಷ್ಟು ಜನರೂ ದೀನರಾಗಿ ಕಣ್ಣೀರಿಡುತ್ತಿರುವುದಕ್ಕೆ ಕಾರಣವೇನು ? ಇಂದ್ರಿಯ ಜಯವಂತರು ನಿಷ್ಕಾಮರು ಜ್ಞಾನ ಸಂಪನ್ನರೂ ಆದ ನಿಮಗೆ ಬೇಡಿಗೊತ್ತಿಲ್ಲ. ಆದರೂ ಎಂತಹ ಆಪತ್ತು ಒದಗಿದೆ ! ಯಾವ ದುಷ್ಟದಿಂದ ಕಷ್ಟಪಟ್ಟಿರುವಿರಿ ? ಹೇಳಿ ! ಈ ಕೃಷ್ಣನು ನಿಮ್ಮ ಸೇವೆಗೆ ಸಿದ್ಧನಿರುವನು. ಈ ನನ್ನ ಯಾದವರೆಲ್ಲ ನಿಮ್ಮ ಕಿಂಕರರು" ಎಂದು ಸಮಾಧಾನ ಪಡಿಸಿದನು.

ದುರ್ವಾಸನ ಕೋಪಶೋಕಗಳು ಇಮ್ಮಡಿಸಿದವು. ಅತನು ತ್ರಿನೇತ್ರನಾಗಿ ಲೋಕಗಳನ್ನು ಸುಡುವನೇನೋ ಎಂಬಂತೆ ರಕ್ತೇಕ್ಷಣನಾಗಿ, ಗಟ್ಟಿಯಾಗಿ ನಕ್ಕು ಇಂತೆಂದನು.

"ಕೃಷ್ಣ ! ಶ್ರೀಕೃಷ್ಣ ! ಗೊತ್ತಿಲ್ಲದವನಂತೆ ಕೇಳುವುದು ನಿನಗೆ ನ್ಯಾಯವೇ ? ಅಥವಾ ನನ್ನನ್ನು ಶ್ರೀಕೃಷ್ಣ ಮಹಿಮೆಯನ್ನು ತಿಳಿಯದ ದಡ್ಡನೆಂದು ಅವಗಣಿಸುನೆಯಾ ? ಹಾಗಲ್ಲ ಪ್ರಭೂ ! ನೀನೇ ನಿಜವಾದ ಮಹಾದೇವನೆಂದು ನನಗೆ (ಮಹಾದೇವನಾದ ನನಗೆ) ಗೊತ್ತು. ದೇವದೇವನು ಮಾಯಾಮನುಜನಂತಾಡಿ ಮರುಳು ಮಾಡಬೇಡ ! ಬ್ರಹ್ಮನು ನೀನು. ಬ್ರಹ್ಮನನ್ನು ಸೃಜಿಸಿದವನು ನೀನು. ಬ್ರಹ್ಮನಿಗೆ ಉಪದೇಶಕ ಗುರುವು ನೀನು ! ಬ್ರಹ್ಮನಿಂದ ನಾವು (ರುದ್ರಶಕ್ರಾದಿಗಳೆಲ್ಲರೂ) ಜ್ಞಾನವನ್ನು ಹೊಂದುವೆವು ವಿಶ್ವಕಾರಣವಾದ ಮಹತ್ತತ್ವಾದಿಗಳಿಗೆ ಆ ಶಕ್ತಿಯನ್ನಿತ್ತ ಸರ್ವೋತ್ತಮ ! ನಿನಗೆ ನಮ್ಮ ಕಷ್ಟವು ಗೊತ್ತಾಗಲಿಲ್ಲವೇ ? ಕರುಣಾ ಸಮುದ್ರನಕ್ಕೈ ನಮ್ಮಂತಹ ಸನ್ಯಾಸಿ ಜನರ ಕಣ್ಣೀರನ್ನೊರೆಸುವುದಿಲ್ಲವೇ ? ಪ್ರತ್ಯಕ್ಷನಾಗಿ ಕಾಣುವ ಈ ನಿನ್ನ ದಿವ್ಯಮಂಗಳರೂಪವನ್ನು ನೋಡಿ ಧನ್ಯನಾದೆನು. ಕೇಶಿನಿಷೂದನ ! ಯೋಗಿಜನರು ಚಿರಕಾಲೀನವಾದ ತಪೋಧ್ಯಾನಗಳಿಂದ ಹೃತ್ಸರೋಜದಲ್ಲಿ ನೋಡುವ ಈ ನಿನ್ನ ರೂಪವನ್ನು ನೋಡಿದೆನು. ವೇದ ಪ್ರಸ್ತುತ ಮಹಾಮಹಿಮನಾದ ನಿನ್ನನ್ನು ನನ್ನಂತಹ ದೀನನೆಂತು ನುತಿಸಲರ್ಹನು ? ಓಂ ಎಂಬ ಪ್ರಣವವೇ ನಿನ್ನ ಪೆಸರು. ಅದರಿಂದ ಅ, ಉ, ಮ, ಭೂಃಭುವಃ ಸ್ವಃ ಗಾಯತ್ರಿ ಪುರುಷ ಸೂಕ್ತ, ನಿಖಿಲನಿಗಮ ಇತಿಹಾಸ ಪುರಾಣಗಳು—ಎಲ್ಲ ಶಬ್ದ ಪ್ರಪಂಚವೂ ಅಭಿವ್ಯಂಜನವನ್ನು ಹೊಂದುವುದು ನಿನ್ನಿಂದ ಅಂದಮೇಲೆ ಸರ್ವಶಾಸ್ತ್ರ ಪ್ರತಿಪಾದಿತನು, ಸರ್ವಶಬ್ದಾಭಿಧೇಯನೂ ನೀನೇ ಆಗಿರುವೆ ! ಸರ್ವಜ್ಞನಾದ ನಿನಗೆ ಪರೋಕ್ಷವೆಂಬುದಿಲ್ಲ. ಸರ್ವಶಕ್ತನಾದ ನಿನಗೆ ಅಶಕ್ಯವಿಲ್ಲ. ಸರ್ವಸ್ವಾಮಿಯಾದ ನಿನಗೆ ಅನಧೀನವಿಲ್ಲ. ಸರ್ವವ್ಯಾಪ್ತನಾದ ನಿನಗೆ ಅಕರಗತವಿಲ್ಲ. ವಿಶ್ವಸೃಜನಪಾಲನ ಹರಣ ಮುಕ್ತಿಪ್ರದಾನವಾದ ದಿವ್ಯತೇಜವೇ ಈಗ ನನ್ನ ಮುಂದೆ ಕೃಷ್ಣನಾಗಿ ಕೂತು "ಏನುಬೇಕೆಂ"ದು ಕೇಳುತ್ತಿದೆ. ಇದಕ್ಕೂ ಮಿಗಿ

ಲಾದ ಆಶ್ಚರ್ಯವಿಲ್ಲ ವಾಯುವೆಂಬೆನಾಗ ವಾಯುವಾಗಿ ಕಾಣಿಸುವೆ! [ಜ್ಞಾನ ಬಲ] ಪೃಥುರೂಪನಾದುದರಿಂದ ಪೃಥಿವಿ ಎನಿಸಿ ಕಾಣುವೆ! ಪ್ರಕಾಶರೂಪನಾಗಿ ಆಕಾಶನೆನಿಸುವೆ! ರಸ (ನಾದ)ರೂಪನಾಗಿ ಜಲದಲ್ಲಿ ರಸನೆನಿಸುವೆ! ತೇಜೋರೂಪನಾಗಿ ಸೂರ್ಯ ಚಂದ್ರ ತಾರಾಗ್ರಹವಿದ್ಯುದಗ್ನಿಗಳಲ್ಲಿ ತೇಜವೆನಿಸುವೆ! ಚಂದ್ರನಲ್ಲಿ ನಿನ್ನನ್ನು ನೋಡಿ ಆನಂದ ಪಡುವೆನು, ಸೂರ್ಯನಲ್ಲಿಯೂ ನಿನ್ನನ್ನು ನೋಡಿ ಬೆಳಕನ್ನು ಹೊಂದುವೆನು. ಎಲ್ಲರಲ್ಲಿಯೂ ನಿಯಾಮಕನಾಗಿದ್ದು, ಎಲ್ಲರನ್ನೂ ನಡೆಸುವ ಸರ್ವೇಶನಿಗೆ ಇಂದು ನಮ್ಮ ಕಷ್ಟವೇ ಗೊತ್ತಾಗಲಿಲ್ಲವೆಂದರೆ ಅದು ನಮ್ಮ ದೌರ್ಭಾಗ್ಯವೇ ಸರಿ! ಇರಲಿ! ಕೇಳಬೇಕೆಂದಿದ್ದರೆ ಹೇಳುವೆನು

ದೇವದೇವ! ಅತ್ಯಂತ ದುಃಖದಲ್ಲಿ ನೊಂದು ಬಂದಿರುವೆವು. (ಸೀಸ) ಸಿರಿ ಕೃಷ್ಣ! ನಿನದಿವ್ಯ ಚರಣವ ನಂಬಿದ ಮನುಜಗೆ ದುಃಖವೇವನಜನಾಭ! ಕೈಲಾಸ ಪತಿವರಗರ್ವಿತರಾಗಿ ಹಪಾಪಿರಾಜರು ಕಷ್ಟಪಡಿಸಿರುವರು! ಬ್ರಹ್ಮದತ್ತನಸುತರ್ ರೈ ಹಂಸಡಿಭಕರು ಬೈದು ಹೀಡಿಸಿದರೋ ಬ್ರಹ್ಮವಂದ್ಯ! ಅವರು ಮಾಡಿದಪಾಪ ದಾರ್ಭಟ ಪೇಳಲು ನಾಚಿಕೆಯಾಗಿದೆ ನಲಿನನಾಭ! ಶಿಕ್ಯ, ಚಮಸ, ದಂಡ ಸ್ಪರ್ಶಸುವ ಕೌಪೀನಗಳನ್ನೆಲ್ಲ ಮುರಿದಾಡಿ ಹರಿದರಯ್ಯ! ಆಶ್ರಮದಲಿ ತಿಂದು ಆಸವಂಗಳ ಕುಡಿದಗ್ನಿಕುಂಡದಿ ಮಲಹಾಕಿ ಕೆಡಿಸಿ [ಗೀತೆ] ಬಾಧೆಪಡಿಸಿದ ದುಷ್ಟರ ವಧಿಸಿ ನೀನು। ಲೋಕಹಿತಮಾಡದಿರೆ ಪದ್ಮಲೋಚನ ಹರಿ। ಧರ್ಮವಿಪ್ರಸದಾಶ್ರಮದಾನ ವರ್ಣ।ವೆಲ್ಲ ಹಾಳಾಗುವುದು ನಿಜ ಫುಲ್ಲನಾಭ! ನೋಡು ಶ್ರೀಕೃಷ್ಣ! ನಮ್ಮ ಬವಣೆ!

(ಸೀಸ) ಆ ಕಮಂಡಲುವಂತೆ ಹಂಸಡಿಭಕರ ತಲೆ ಒಡೆಯಬೇಕಯ್ಯ ಓ ಪೃಥವಿಯೊಡೆಯ! ಆಶಿಕ್ಯವನು ನೋಡು ಅದರಂತೆ ಅಸುರರ ಅಂತ್ರವ ಹರಿದಾಡು ಅಸುರವೈರಿ! ಆದಾರುಪಾತ್ರೆಯು ಅಡಿಯ ನೋಡದರಂತೆ ಹಂಸನ ವಂಶವ ಧ್ವಂಸಮಾಡು! ಆ ನಮ್ಮ ಕೌಪೀನವಾಕಂಥೆಗಳ ರೀತಿ ಪುಂಡರ ಎಲುಬನ್ನು ತುಂಡು ಮಾಡು!

(ಗೀತ) ಆ ದುರಾತ್ಮರ ದಂಡಿಸಲಾರದಾಗಿ। ಭೀಷ್ಮಮುಖ ವೀರರೆಲ್ಲರು ಭೀತರಾಗಿ ಸುಮ್ಮನಿರುವರು ದೇವ! ಸುರಾದಿಗಳಿಗೂ ವಧ್ಯರಾಗರು ಶಂಕರ ವರದ ಬಲದಿ॥

(ಕಂದ) ಅಂತಹ ಪಾಪಾತ್ಮಕರನು ಅಂತಕ ಪುರ ಸೇರಿಪುದಕೆ ಅತಿಶಕ್ತನು ನೀ। ನಿಂತರಿತು ಶರಣು ಬಂದಗೆ। ಶಾಂತಿಯಕೊಡು ದಂತಿವರದ ಶಂಕರ ವಂದ್ಯಾ॥

ಇಂತು ನುತಿಪ ಮುನಿಕಾಂತನಿಗೆ ಶ್ರೀಕಾಂತ ನಿಂತೆಂದನು. "ಮುನಿವರ! ನನ್ನನ್ನು ಕ್ಷಮಿಸು! ಮೊದಲೇ ಈ ದುಷ್ಟಹನನವನ್ನು ಮಾಡಬೇಕಿತ್ತು! ಈಗ ಹಂಸಡಿಭಕರನ್ನು ರಣದಿ ಸಂಹರಿಸಿ, ನನ್ನ ಭಕ್ತರಾದ ಬ್ರಾಹ್ಮಣರಿಗೆ ಶಾಂತಿ ಸುಖಗಳನ್ನು ತಂದು ಕೊಡುವೆನು. ಶಂಕರವರವೇ ಅಲ್ಲ! ಬ್ರಹ್ಮವರ, ಇಂದ್ರವರಗಳಿದ್ದರೂ ಹಂಸಡಿಭಕರು ಮೃತ್ಯುವಿಗೆ ತುತ್ತಾಗಿರುವರೆಂದು ತಿಳಿ! ರೋಷವನ್ನು ಬಿಡು! ಸತ್ಯವೀ

ನನ್ನ ಮಾತು ! ಗಿರಿಶವರ ಮಿತ್ರರಾಗಿ ಅತ್ಯಂತ ಬಲದರ್ಪಯುತರಾಗಿ ಆ ಪಾಪಿ ರಾಜ ಪುತ್ರರು ಮಾಡುವ ಸುಜನ ಹಿಂಸೆ ನನಗೆ ಗೊತ್ತಿದೆ ! ಜರಾಸಂಧನೂ ಅವರಿಗೆ ಹಿತೈಷಿಯಾಗಿರುವನು ಇರಲಿ ! ಮಹಾ ಪ್ರಯತ್ನವನ್ನಾದರೂ ಮಾಡಿ, ಆ ದೈತ್ಯರನ್ನು ಸಂಹರಿಸುವೆನು. ಸ್ವಲ್ಪ ಕಾಲ ತಡೆ !" ಎಂದು ಸಮಾಧಾನ ಪಡಿಸಿದನು.

ಆಗ ಪ್ರಸನ್ನಮನಸ್ಕನಾದ ಮಸ್ಕರಿವರನು "ಯಾದವೇಶ ! ನಿನಗೆ ಸ್ವಸ್ತಿ ಯಾಗಲಿ ! ಜಗನ್ನಾಥ ! ನಿನಗೆ ದುಸ್ಸಾಧ್ಯವಾವುದೂ ಇಲ್ಲ ! ನಾನದನ್ನು ಬಲ್ಲೆನು ! ದೇವ ದೇವ ! ನಿನಗೆ ನಿಷ್ಕಾರಣವಾದ ದ್ವೇಷವೂ ಇಲ್ಲ, ಒಲುಮೆಯೂ ಇಲ್ಲ ಅವರವರ ಕರ್ಮಯೋಗ್ಯತೆಗಳನ್ನು ನೋಡಿ ಕರ್ಮಫಲವನ್ನೀವ ನೀನು ವೈಷಮ್ಯ ನೈರ್ಘೃಣ್ಯ ರಹಿತನೆಂದು ವೇದಾದಿಗಳಲ್ಲಿ ಪ್ರಸಿದ್ಧನಾಗಿರುವೆ ! ವಿಷ್ಣೋ ! ದೇವ ! ಹರೇ ಕೃಷ್ಣ ! ನಮಃ ಅಜ್ಞಾನದಿಂದಲೂ, ಆವೇಶದಿಂದಲೂ ನಾನಾಡಿದ ಸಿಡುಕಿನ ನುಡಿಗಳನ್ನು ಸಹಿಸಿ ಕ್ಷಮಿಸು ! ನನ್ನೊಡೆಯಾ ! ಹೋಗಿ ಬರುವೆನು," ಎಂದನು.

ಶ್ರೀಭಗವಂತನಿಂತೆಂದನು, "ಯತಿವರ್ಯ ! ನಿನಗೆ ಹೇಳಬೇಕಿಲ್ಲ, ಕೇಳು ! ನಾನು ಕ್ಷಮಾಸಾರನು ನಿಮ್ಮಂತಹ ಸನ್ಯಾಸಿಗಳಿಗೂ ಕ್ಷಮೆಯೇಸಾರ. ಕ್ಷಮೆಯಿಂದ ಮೋಕ್ಷವಾಗುವುದು. ಸತ್ಯಧರ್ಮದಾನ ತಪೋ ವಿಜ್ಞಾನಗಳಿಗೆ ಕ್ಷಮೆಯೇ ಮೂಲ ವಾಗಿದೆ ! ನೀನು, ನಿನ್ನ ಪರಿವಾರದ ಯತಿವರರು ಬಲು ದರ್ಲಭರು. ನಿಮ್ಮ ಪೂಜೆ ಪ್ರಥಮ ಕರಣೀಯವಾಗಿದೆ. ದಯ ಮಾಡಿ ನನ್ನ ಮನೆಯಲ್ಲಿ ಪೂಜೆಗಳು ನಡೆಯಲಿ !" ಎಂದು, ತತ್‌ಕ್ಷಣವೇ ಸಾವಿರಾರು ದುಕೂಲ ವಸನ ಗಳನ್ನು ತರಿಸಿದನು. ಶ್ರೀಶನು ಅವನ್ನು ಹರಿದ್ಧರಿದು ಲಂಗೋಟಿಗಳನ್ನು ಅವರಿಗೆ ಕೊಟ್ಟನು. ವಿಪ್ರವರರಿಗೆ ಕೊಟ್ಟ ವಸ್ತ್ರವು ಮುಂದೆ ಅನಂತವಾಗುವುದೆಂದು ತನ್ನ ತಂಗಿಯಾದ ದ್ರೌಪದಿಗೆ ಆ ವಸ್ತ್ರದಾನ ಫಲವನ್ನಿತ್ತನು. ಹೊಸ ಕಮಂಡ ಲುಗಳನ್ನೂ, ಶಿಕ್ಯಗಳನ್ನೂ, ದಾರು ಪಾತ್ರೆಗಳನ್ನೂ ಸ್ರುಕ್‌ಸ್ರುವಗಳನ್ನೂ ತರಿಸಿ ಸಮರ್ಪಿಸಿದನು. ಮೃಷ್ಟಾನ್ನವನ್ನು ಉಣಿಸಿ, ಭೂರಿ ದಕ್ಷಿಣೆಯನ್ನಿತ್ತು ನಮಸ್ಕರಿ ದನು. ದುರ್ವಾಸನು ಪ್ರೀತನಾಗಿ ಶ್ರೀ ಶನನ್ನೂ ಹರಸಿ, ವಂದಿಸಿ, ತನ್ನ ಆಶ್ರಮಕ್ಕೆ ತೆರಳಿದನು.

—○—○

26. ಜನಾರ್ದನ ದೌತ್ಯ

ಶ್ರೀ ವೈಶಂಪಾಯನನು ನಿರೂಪಿಸಿದನು.

ದುರ್ವಾಸಾಶ್ರಮವನ್ನು ಕೆಡಿಸಿ, ಮುನಿಕೋಪವನ್ನು ಗಳಿಸಿ ಬಂದ ಹಂಸ ಡಿಭಕರು ತಮ್ಮ ತಂದೆಯನ್ನು ನೋಡಿ ಇಂತೆಂದರು. "ಜನಕ ! ರಾಜ ಸೂಯವೆಂಬ ಮಹಾ ಯಾಗವನ್ನು ನೀನು ಮಾಡು ! ನಿನ್ನ ಯಜ್ಞಸಿದ್ಧಿ ಗಾಗಿ ನಾವು ದಿಗ್ವಿದಿಕ್ಕುಗಳ ರಾಜಕನ್ನೆಲ್ಲ ಗೆದ್ದು ಕಪ್ಪ ಕಾಣಿಕೆಗಳನ್ನು

ತರುವೆವು, ಬೇಕಾದ ಸಂಭಾರಗಳನ್ನೂ ಸಿದ್ಧಪಡಿಸುವೆವು" ಎಂದರು. ಬ್ರಹ್ಮದತ್ತನೂ ಸರಿ ! ಎಂದನು.

ಜನಾರ್ದನನು ಅವರ ದುಸ್ಸಾಹಸವನ್ನು ವಾರಿಸುತ್ತಾ "ಹಂಸ ! ಕೇಳಲ್ಲಿ ! ರಾಜಸೂಯವು ಸುಕರವಲ್ಲ. ಭೀಷ್ಮ, ಜರಾಸಂಧ, ಬಾಹ್ಲೀಕ ಮುಂತಾದ ಮಹಾವೀರರು ಅಜೇಯರಾಗಿರುವರು. ಅವರನ್ನು ಗೆಲ್ಲಲಾಗದು. ಒಂದು ವೇಳೆ ನೀನು ರುದ್ರವರದಿಂದ ಬಲಿಷ್ಠನಾಗಿ, ಅವರನ್ನು ಗೆದ್ದರೂ, ವೃಷ್ಣಿವೀರರನ್ನು ಗೆಲ್ಲಲಾರೆ ! ಕೃಷ್ಣನು ಜರಾಸಂಧನಂತಹ ವೀರಾಧಿವೀರರನ್ನು ಸೋಲಿಸಿರುವನು. ಅವನ ಮುಂದೆ ನಿಂತು ಕಾದಾಡಲು ಕಾಲರುದ್ರನಿಗೂ ಸಾಧ್ಯವಿಲ್ಲ, ಬಲಭದ್ರನೇನು ಸಾಮಾನ್ಯನಲ್ಲ, ಆತನು ಕ್ರುದ್ಧನಾದರೆ ಎಲ್ಲ ಲೋಕಗಳನ್ನೂ ನಾಶಮಾಡಬಲ್ಲನು. ಸಾತ್ಯಕಿಯೂ ಸಾರಬಲನು ನಮ್ಮಿಂದ ಅವಮಾನಿತನಾದ ದುರ್ವಾಸನು ಶ್ರೀಕೃಷ್ಣನನು, ನೋಡಿ, ಶರಣಾಗಿ, ಅಭಯವನ್ನು ಪಡೆದಿರುವನೆಂದು ನನ್ನ ಮನೆಗೆ ಬಂದಿದ್ದ ಅತಿಥಿಯಿಂದ ತಿಳಿದಿರುವೆನು. ಮುನಿಜನಾವನ ಚಣನಾದ ಕೃಷ್ಣನವಿರೋಧವೂ ನಿಮಗೆ ಒದಗಿ ಬಂದಿದೆ. ಆಲೋಚಿಸಿ, ಮುಂದಿನ ಪ್ರಯತ್ನವನ್ನು ಮಾಡು !" ಎಂದನು.

ಆ ಮಾತಿಗೆ ನಕ್ಕು ಹಂಸ ನಿಂತೆಂದನು "ಬ್ರಾಹ್ಮಣ ಮಿತ್ರ ! ನಿನ್ನ ಮಾತಿನಲ್ಲಿ ಹುರುಳಿಲ್ಲ ಆ ಮುದುಕ ಭೀಷ್ಮನು ನಮ್ಮನೆದರಿಸಿ ನಿಲ್ಲಬಲ್ಲನೇ ? ಕೃಷ್ಣನು ನಮ್ಮನ್ನು ನೋಡಿದೊಡನೆ ಕದನರಂಗದಿಂದ ಕಾಲ್ತೆಗೆಯುವನು ಬಲರಾಮನು ಮದಿರಾಮತ್ತನು. ಸಾತ್ಯಕಿಯು ಅತ್ಯಲ್ಪನು, ಇಂತಹ ಭೀರುಗಳನ್ನು ವೀರರೆಂದು ಹೇಳಲಾದೀತೇ? ಇನ್ನು ಜರಾಸಂಧನು ನಮಗೆ ಬಂಧುವು ; ಆದುದರಿಂದ ಚಿಂತೆಬಿಡು ! ಈಗ ಒಂದು ಮಿತ್ರ ಕಾರ್ಯವಿದೆ ! ನೀನು ತ್ವರೆಯಿಂದ ದ್ವಾರಕೆಗೆ ಹೋಗು ! ಕೃಷ್ಣನಿಗೆ ನಮ್ಮ ಆಜ್ಞೆಯನ್ನು ತಿಳಿಸು !" ಎಂದು ಸಂದೇಶವನ್ನಿತ್ತು "ಎಲವೊ ಬ್ರಾಹ್ಮಣ ! ಈಗಲೇ ನಮ್ಮ ದೂತನಾಗಿ ಕೃಷ್ಣನಲ್ಲಿಗೆ ಹೋಗು. ಮಿತ್ರಭಾವದಿಂದ ಹೇಳುವೆನು. ಬದುಲಾಡದೆ ಈಗಲೇ ನಡೆ ! ಮತ್ತೆ ದರ್ಶನವಾಗಲಿ !" ಎಂದು ಮತ್ತೆ ಒತ್ತರಿಸಿ ಹೇಳಿ ಕಳಿಸಿದನು.

ಜನಾರ್ದನನು ಬದುಲಾಡದೆ, ಆ ಧೂರ್ತರಿಗೆ ಹೆದರಿ ಅಲ್ಲಿಂದ ಮನೆಗೆ ಬಂದನು. ಶ್ರೀ ಕೃಷ್ಣನನ್ನು ನೋಡಿ ಧನ್ಯನಾಗಬೇಕೆಂಬ ತನ್ನ ಬಯಕೆ ಇಂದು ಆ ಪಾಪಿಗಳ ಆದೇಶದಿಂದ ಈಡೇರಿತೆಂದು ಸಂತಸಿಸಿದನು. ಜಗಜ್ಜನ್ಮಾದಿಕಾರಣನು, ಶಂಖ ಚಕ್ರಗದಾಧರನು ಆದ ಇಂದಿರೇಶ ಕೃಷ್ಣನ ದರ್ಶನವಾಗುವುದೆಂಬ ತವಕದಿಂದ, ಕುದುರೆಯನ್ನೇರಿ, ದ್ವಾರಕೆಗೆತೆರಳಿದನು.

ಧನ್ಯನಾದೆನೆಂದು ಗೋವಿಂದನನ್ನು ಕಾಣುವೆನು. ನೀಲನೀರದನಿಭಗಾತ್ರನು,

ಪದ್ಮವಿಶಾಲ ನೇತ್ರನು, ವನಮಾಲಾವಿಭೂಷಿತವಕ್ಷಸ್ಕನು, ಭಕ್ತರಕ್ಷಣ ದೀಕ್ಷಿತ ಮನಸ್ಕನು, ಶಂಖ ಚಕ್ರಗದಾಪದ್ಮಹಸ್ತನು, ಪೀತಾಂಬರ ಪ್ರಕಶಸ್ತನು, ಸ್ಮಿತಸುಂದರ ವದನನು, ರೂಪಜಿತ ಕೋಟಿಮದನನು, ಸರ್ವಜ್ಞನು, ಧೃತಶಾರ್ಙ್ಗನು, ಯಾದವ ವಲ್ಲಭನು, ಅಚಿಂತ್ಯವಿಭವನು, ಭೂತಭವ್ಯ ಭವತ್ ಪ್ರಭುವು ಆದ ಶ್ರೀಕೃಷ್ಣನನ್ನು ನೋಡಿದ ನನ್ನ ಕಣ್ಣುಗಳಿಂದು ಕೃತಾರ್ಥಗಳಾಗುವವು. ನನ್ನ ತಪಸ್ಸು ಫಲಿಸಿತು. ನನ್ನ ಯಜ್ಞಗಳು ಪೂರ್ಣವಾದವು. ನನ್ನದಾನಗಳಿಂದ ಸರ್ವೇಶ ಪ್ರೀತನಾದನು. ನನ್ನ ಸ್ವಾಮಿ ಶ್ರೀಕೃಷ್ಣನ ದಿವ್ಯಸೌಂದರ್ಯಾಮೃತವನ್ನು ನನ್ನ ಕಣ್ಣದೊನೆಗಳಲ್ಲಿ ತುಂಬಿ ಕುಡಿದು, ಅಂತರ್ಯಾಮಿಹರಿಯನ್ನು ಹೃದಯದ ನಿಧಿಯಂತೆ ಬಚ್ಚಿಟ್ಟುಕೊಂಡು, ಭಕ್ತಿಪಾಶದಿಂದ ಭಗವತ್ಪದ ಪಂಕಜವನ್ನು ಕಟ್ಟಿಬಿಡದೆ, ನಾನಿಂದು ಕೃತಕೃತ್ಯ ನಾಗುವೆನು. ಮಕರಕುಂಡಲ ಶೋಭಾನ್ವಿತಗಂಡಸ್ಥಲನು, ಶ್ರೀಕೌಸ್ತುಭಕಿರಣ ಭಾಸಿತವಕ್ಷನು, ಪೀತಾಂಬರ ಸುಂದರನು, ಅಮರವಂದಿತ ಪದಕಮಲನು, ಆದ ಶ್ರೀನಾರಾಯಣನನ್ನು ನೋಡುವೆನು, ಮುಕುಂದ! ನೀನು ಅಣುವಿಗೆ ಅಣುವೂ, ಮಹತ್ತಿಗೆ ಮಹತ್ತೂ ಆಗಿರುವೆ! ಮುಮುಕ್ಷುಜನಶರಣ್ಯನು, ದುಷ್ಟಜನ ಶಿಕ್ಷಾವಿಧಿ ಕೃದ್ವರೇಣ್ಯನು ಆದ ನಿನ್ನ ದಿವ್ಯದರ್ಶನವೆ ನನಗೆಂತಾದೀತು ? ಬಂತು ದಯಮಾಡುವೆ ! ದುಷ್ಟರದೂತ ನಿವನೆಂದು ನಿರಾಕರಿಸದೆ ನಿನ್ನದಾಸನೆಂದು ಕರೆದು ದಯೆತೋರುವೆಯಾ? ಸರ್ವಜ್ಞ ! ನಿನಗೆನಮಃ ||

ಇಂತುಚಿಂತಿಸುತ್ತಾ ಜನಾರ್ದನನು ದ್ವಾರವತಿಯನ್ನೂ, ದ್ವಾರಕಾಧೀಶನ ಮಂದಿರವನ್ನೂ ಸೇರಿದನು. ದ್ವಾರಪಾಲರಿಂದ ನಿವೇದಿಸಿ, ಕರೆಯಿಸಲ್ಪಟ್ಟ ವಿಪ್ರನು ಸಭಾ ಮಂಟಪದಿ ವಿರಾಜ ಮಾನನಾದ ಶ್ರೀಕೃಷ್ಣನನ್ನು ಕಂಡನು. ಉಗ್ರಸೇನನು ರಾಜಾಸನದಿ ಕೂತಿದ್ದನು. ಬಲದೇವನು ಬಲಗಡೆಗೆ, ಸಾತ್ಯಕಿಯು ಎಡಗಡೆಗೆ ಕೂತಿರಲು ಮಧ್ಯೇ ಸಿಂಹಾಸನಾಸೀನನಾಗಿ, ನಾರದನಿಂದನರ್ಮಾಲಾಪಗಳನ್ನಾಡುವ ನಾರಾಯಣನನ್ನು ನೋಡಿ, ವಂದಿಸಿ, ಕೈಜೋಡಿಸಿ, ನಿಂತನು. ವಿಪ್ರಜನಾರ್ದನನು ದೇವಜನಾರ್ದನನನ್ನು ನೋಡಿ, ಕಣ್ಣುಗಳಲ್ಲಿ ಹರ್ಷಾಶ್ರುಗಳು, ಮೈಯಲ್ಲಿನವಿರು ಕಂಠದಲ್ಲಿಗದ್ಗದಿಕೆ, ಬರುತ್ತಿರಲು ಮೈಮರೆತು ಮಾತಾಡದೆ, ಕೃಷ್ಣಚರಣಾರವಿಂದಯುಗಳೀಸೇವಾಮೃತಾ ಸ್ವಾದನವನ್ನು ಮಾಡುತ್ತಿದ್ದನು.

ಮತ್ತೆ ತಿಳಿದು ಮಹೀಸುರನು "ಮಾಧವ ! ಹಂಸ ಡಿಭಕರ ದೂತನಾಗಿ ಬಂದಿ, ರುವೆನು, ಬ್ರಹ್ಮದತ್ತ ಮಹಿಪಾಲನ ಮಂತ್ರಿಯ ಮಗನು, ನನ್ನುನ್ನ ಜನಾರ್ದನನೆಂಬುವರು. ನಿನ್ನ ನಾಮಧಾರಕನಾಗಿ, ನಿನ್ನನ್ನು ನೆನೆಯುತ್ತಾ ಬದುಕಿರುವೆನು". ಎಂದನು. ಶ್ರೀಶನು "ಜನಾರ್ದನ ! ಮೊದಲು ಆಸನದಿ ಕೂಡು ! ಆ ಮೇಲೆ ದೌತ್ಯದ ಮಾತಾಡು ! ಎಂದು ಕೂಡಿಸಿ, ಅತಿಥಿಸತ್ಕಾರಗಳಿಂದ ಸನ್ಮಾನಿಸಿದರು. "ದೂತನಾಗಿ

ಬಂದು ತಂದ ಸಂದೇಶವೇನು. ಅದುಯುಕ್ತವೋ ಅಯುಕ್ತವೋ ಎಂಬ ಚಿಂತೆಬೇಡ! ಪರರಮಾತನ್ನು ಅನುವದಿಸುವ ದೂತನಿಗೆ ಏಕೆ ಹೆದರಿಕೆ " ಎಂದು ಸಮ ದಾಯಿಸಿದನು.

ಅಗ ಜನಾರ್ದನನು "ಸರ್ವಜ್ಞನಾದ ನಿನಗೆ ಎಲ್ಲವೂ ಗೊತ್ತಾಗಿ ಬಿಟ್ಟಿದೆ. ಆದರೂ ತಿಳಿಯದವನಂತೆ ಕೇಳುವ ನಿನಗೆ ವಿಜ್ಞಾಪಿಸುವೆನು. ಇಂದ್ರ ರುದ್ರವಾಯು ವಿರಿಂಚರ ಪ್ರಭುವಾದ ನಿನಗೆ ನನ್ನ ರಾಜರು ಆಜ್ಞಾಪಿಸುವುದೇನೆಂದರೆ ಕೃಷ್ಣಾ!" ಎಂದು ಸುಮ್ಮನಾದನು. ದೇವದೇವನು ಅವನನ್ನು "ಅಂಜಬೇಡ! ಏನದು ಆಜ್ಞೆ ?" ಎಂದನು ಸಭಾಸದರೆಲ್ಲ ವಿಸ್ಮಿತರಾಗಿ ಕೂತರು. ಜನಾರ್ದನನು "ಕೃಷ್ಣ! ಬ್ರಹ್ಮ ದತ್ತನೆಂಬ ನಮ್ಮ ತಂದೆಯು ರಾಜಸೂಯವನ್ನು ಮಾಡುವನು. ಆ ಯಜ್ಞದ ಸಮಾ ರಾಧನೆಗೆ ಸಮುದ್ರ ಸಮೀಪ ಸಂಸ್ಥಾನಾಧಿಪನಾಗಿರುವ ನೀನು ಬೇಕಾದಷ್ಟು ಉಪ್ಪನ್ನು ಕಪ್ಪವಾಗಿ ತಂದೊಪ್ಪಿಸು!" ಎಂದು ಹಂಸನ ವಚನಗಳನ್ನು ಪುನರುಚ್ಚರಿಸಿ ನಾಚಿ, ತಲೆತಗ್ಗಿಸಿದನು.

ಆ ಮಾತನ್ನಾಲಿಸಿ ಕೆಲವರು ನಕ್ಕರು ಕೆಲರು ಕಣ್ಣು ಕೆಂಪುಮಾಡಿ ಕತ್ತಿಗಳ ಮೇಲೆ ಕೈಯಾಡಿಸಿದರು ಶ್ರೀಶನು ಅವರನು ವಾರಿಸಿ, ನಗುತ್ತಾ "ಏನಾಶ್ಚರ್ಯವಿದು! ಬ್ರಹ್ಮದತ್ತನಂತೆ ! ರಾಜಸೂಯವಂತೆ ! ಅವನ ಮಕ್ಕಳ ಮಾತಿಗೆ ತಲೆಬಾಗಿ, ಈ ಯದುಕುಲದ ಕೃಷ್ಣನೆಂಬುವನು ಉಪ್ಪಿನ ಕಪ್ಪವನ್ನು ಕೊಡಬೇಕಂತೆ !" ಎಂದು ಕೈಗಳನ್ನೆತ್ತಿ ಆಡಿಸಿದನು. ಬಲದೇವಾದಿಗಳು "ಸರಿ! ಕೃಷ್ಣ ಕೊಡು ಕಪ್ಪವನ್ನು" ಎಂದು ಕೈಚಪ್ಪಾಳೆ ತಟ್ಟಿ ನಕ್ಕರು.

ಶ್ರೀಕೃಷ್ಣನು "ದ್ವಿಜೋತ್ತಮ! ಆಯಿತಲ್ಲವೇ ನಿನ್ನ ಕರ್ತವ್ಯವಿನ್ನು ಹೋಗು! ನಿನ್ನರಾಜಾಧಮರಿಗೆ ಹೇಳು! ಕಪ್ಪವನ್ನು ಕೊಡುವೆನು ! ತಪ್ಪದೆ ತಂದುಕೊಡುವೆನು! ಉಪ್ಪನ್ನಲ್ಲ ಮತ್ತೇನೆಂದರೆ ಬಾಣಗಳನ್ನು! ಯತಿಗಳ ಕೌಪೀನವನ್ನು ಹರಿದ ಕೈಗಳು ನನ್ನ ಖಡ್ಗಧಾರೆಗೆ ತುತ್ತಾಗಿ ಉದುರಿ ಬೀಳುವವು. ದುರ್ವಾಸರಕಮಂಡಲವನ್ನು ಒಡೆದನರಎದೆಗಳನ್ನು ನನ್ನಗದೆಯು ಒಡೆದ.ಕೆಡಹುವದು ನನ್ನ ಭಕ್ತರನ್ನು ಬೈದ ನಾಲಿಗೆಗಳು ತುಂಡಾಗುವವು. ರಣರಂಗದಲ್ಲಿ ಸಮಾಗಮ-ಎಂದು ತಿಳಿಸು!" ಮತ್ತೇನೆಂದರೆ ಮಿತ್ರಭಾವದಿಂದ ನೀನಾಡಲು ಬಾರದ ಕೆಲವಚನಗಳಿವೆ! ಅವನ್ನು ನಮ್ಮಸಾತ್ಯಕಿಯು ದೂತನಾಗಿ ಬಂದು ಸಾಲ್ವರಾಜಸುತರಿಗೆ ಅರುಹುವನೆಂದೂ ಹೇಳು" ಎಂದನು. ಜನಾರ್ದನನು ಸಾಷ್ಟಾಂಗವೆರಗಿ, ನಿಂತುನಡುಗುತ್ತಾ ನಿಂತನು. ಶ್ರೀಶನು "ಹೆದರಬೇಡ! ನಿನ್ನ ತಪ್ಪಿಲ್ಲ ನೀನು ನನ್ನ ಭಕ್ತನೆಂದು ನಾ ಬಲ್ಲೆನು. ಸಂಸಾರದಲ್ಲಿದ್ದೂ ತಾವರೆ ಎಲೇ ನೀರನ್ನಂಟದಿರುವಂತೆ-ನೀನು ನನ್ನನ್ನುಭಜಿಸಿ ಮುಕ್ತ ನಾಗುವೆ!" ಎಂದು ಸಮಾಶ್ವಸಿಸಿ. ಕಳಿಸಿದನು. ಶ್ರೀಶನಿಂದ ಅಜ್ಞಪ್ತನಾದ

ಸಾತ್ಯಕಿಯು ಧನುರ್ಬಾಣ ಕವಚಧರನಾಗಿ, ರಥವರದಿ ಕೂಡು ವಿಪ್ರವರನನ್ನೂ ಕೂಡಿ ಸಾಲ್ವಪುರವನ್ನು ಸೇರಿದನು.

○

27 ಸಾತ್ಯಕಿ ದೌತ್ಯ-ಯುದ್ಧ

ಶ್ರೀವೈಶಂಪಾಯನನು ಇಂತೆಂದನು

ಜನಾರ್ದನನು ಹಂಸನನ್ನು ಕಂಡು ಸಕಲವನ್ನು ನಿವೇದಿಸಿದನು "ರಾಜಪುತ್ರ! ದ್ವಾರಕೆಯಲ್ಲಿ ನಾನು ಶ್ರೀಕೃಷ್ಣನನ್ನು ಕಂಡೆನು. ಚತುರ್ಭುಜನು, ಶಂಖಚಕ್ರಧರನು ಮಹಾವೈಭವ ಯುಕ್ತನು, ಭಕ್ತಜನಾನುರಕ್ತನು ಆದ ಸ್ವಾಮಿಯನ್ನು ಕಂಡೆನು. ನಾರದದುರ್ವಾಸರಿಂದ ಕೂಡಿ ಬ್ರಹ್ಮಸೂತ್ರಗಳನ್ನು ವಿಚಾರ ಮಾಡುವ ಸರ್ವಜ್ಞನನ್ನು ನೋಡಿ ನನ್ನ ದೂತವಾಕ್ಯವನ್ನು ಕೇಳಿ ಇಂತು ನುಡಿದನು "ಬ್ರಹ್ಮದತ್ತನು ರಾಜಸೂಯವನ್ನು ಮಾಡಲರ್ಹನಲ್ಲ, ಅವನ ಮಕ್ಕಳು ಸಾಹಸಿಸಿ ಮಾಡುವ ಕಾರ್ಯಗಳು ಅನರ್ಥಕರಗಳಾಗುವವು ಕಪ್ಪವನ್ನು ಬಾಣ ರೂಪದಿಂದ ಕೊಡುವೆನು" ಎಂದು ಸಾತ್ಯಕಿಯನ್ನು ನೋಡಿದನು.

ಆ ಮಾತಿಗೆ ಹಂಸನು ಕುಪಿತನಾಗಿ "ಧಿಕ್ಕಾರವಿರಲಿ ನಿನಗೆ! ನಿನ್ನ ಕೃಷ್ಣನಿಗೆ ಧಿಕ್ಕಾರ! ಆ ಮಾಯಾವಿಯ ವೇಷವನ್ನು ನೋಡಿ ಭ್ರಮಿಸಿರುವೆ. ಅವನು ತನ್ನ ಕಪಟವೇಷಗಳಿಂದ ಎಂತೆಂತಹ ಮಹಾರಾಜರನ್ನೂ ಮೋಸಪಡಿಸಿ, ತಾನು ದೇವನೆಂದು ಮೆರೆಯುತ್ತಿರುವನು. ಸಾಕು ನಿನ್ನ ಭಟ್ಟಂಗಿತನ! ನೀನು ಬ್ರಾಹ್ಮಣನಾಗಿ ಉಳಿದೆ-ಇಲ್ಲದಿರೆ-ನನ್ನ ಕಣ್ಣೆದುರಿಗೇ ನನ್ನ ಪ್ರಬಲಶತ್ರುವಾದ ಕೃಷ್ಣನನ್ನು ಹೊಗಳುತ್ತಿರುವ ನಿನ್ನನ್ನು ಯಮಮಂದಿರಕ್ಕೆ ಕಳಿಸಿಬಿಡುತ್ತಿದ್ದೆನು. ನಿನ್ನ ಗೊಲ್ಲ ಕೃಷ್ಣನನ್ನೂ, ಅವನ ಯಾದವ ಪರಿವಾರವನ್ನೂ ಸಂಹರಿಸಿ, ನಿನ್ನ ಹುಚ್ಚನ್ನು ಬಿಡಿಸುವೆನು. ಈಗ ನಮ್ಮಲ್ಲಿರಬೇಡ ! ಎಲ್ಲಿಗೆ ಬೇಕಾದರೂ ಹೋಗು" ಎಂದು ನಿಂದಿಸಿ, ಸಾತ್ಯಕಿಯನ್ನು ನೋಡಿ ಇಂತೆಂದನು.

"ಎಲವೋ ಯಾದವ! ಏಕಿಲ್ಲಿಗೆ ಬಂದೆ? ಎಲ್ಲಿ ನಮಗೆ ಸಲ್ಲಿಸಬೇಕಾದ ಉಪ್ಪು ಮೊದಲಾದ ಕಾಣಿಕೆಗಳು ಏನೆಂಬುವನು ಆ ನಿಮ್ಮ ಕೃಷ್ಣ ?"

ಆ ಮಾತನ್ನಾಲಿಸಿ ಸಾತ್ಯಕಿಯು "ಶಂಖಚಕ್ರಗದಾಧರನ ವಚನವಿದು. ಕೇಳು! ಮಂದ ಬುದ್ಧಿಯಾಗಿ ಕೆಡಬೇಡ! ದೇವದೇವನಾದ ಜಗನ್ನಾಥನಿಂದ ಕಪ್ಪವನ್ನು ಕೇಳುವ ನಿನ್ನನ್ನು ಶ್ರೀಶನ ಬಾಣಗಳು ಮುತ್ತಿ, ಪ್ರಾಣವನ್ನು ಹಂಸದೆಬಿಡವು. ನಿನಗೆ ವರವನ್ನಿತ್ತ ಶಿತಿಕಂಠನೂ ಶ್ರೀಕೃಷ್ಣನ ಬಾಣಾಗ್ನಿಗೆ ತುತ್ತಾಗುವ ನಿನ್ನನ್ನು ಉಳಿಸಲಾರನು. ಬಲಭದ್ರ ನಾನು, ಕೃತವರ್ಮ, ನಿಶಠ, ಬಭ್ರು, ಉತ್ಕಲ, ತಾರಣ, ಸಾರಂಗ ವಿಪ್ರಥು, ಉದ್ಧವ,ಎಂಬುವ ಮಹಾರಥಿಕರು ರಣಾಂಗಣದಿ ಚಕ್ರಪಾಣಿಯ ಸೇವೆಗಾಗಿ

ಸಿದ್ಧರಿರುವರು ಸಂಗ್ರಾಮವು ಪುಷ್ಕರದಲ್ಲಿ ನಡೆಯಲಿ! ಪ್ರಯಾಗದಲ್ಲಾಗಲಿ! ಇಲ್ಲದಿರೆ ಮಥುರೆಯಲ್ಲೇ ನಡೆಯಲಿ! ಶ್ರೀರಮಣ ನಿರುವಾಗ ಮತ್ತೊಬ್ಬನಾವ ಮಹಾರಾಜನೂ ರಾಜಸೂಯವನ್ನು ಮಾಡಲು ಶಕ್ತನಲ್ಲ ಶ್ರೀಹರಿಯನ್ನೆದುರಿಸಿ ಕೆಡಬೇಡ !" ಎಂದು ನಿಜಗಂಭೀರಭಾವದಿಂದ ನಿಂತನು.

ಆಗ ಹಂಸನು ಕೈ ಕೈ ಹಿಸುಕಿಕೊಂಡು, ಹಲ್ಲು ಕಟಿದು, "ಯಾವ ವೀರನೋ ಕೃಷ್ಣ ? ಬಲರಾಮನಲ್ಲಿ ಬಲವೇ ಇಲ್ಲ, ಸಾತ್ಯಕಿಯಲ್ಲಿ ಸತ್ಯವಿಲ್ಲ. ಅರೇ ಯದುಪಾಂಸನ ! ನಮ್ಮ ಎದುರೇ ಕೃಷ್ಣನನ್ನು ಪೊಗಳುವ ನಿನ್ನ ನಾಲಿಗೆಯನ್ನು ಸೀಳಿ ಬಿಸುಟುವುದು ಉಚಿತ, ಆದರೆ ದೂತನಾಗಿದ್ದದರಿಂದ ಬಿಟ್ಟಿರುವೆವು. ನಿಮ್ಮನ್ನು ಸಸೈನ್ಯವಾಗಿ ಸಂಹರಿಸಿ, ನಿಮ್ಮ ರಾಜ್ಯದ ಸಂಪತ್ತನ್ನೆಲ್ಲವನ್ನೂ ಕಪ್ಪವೆಂದು ಸ್ವೀಕರಿಸು ಕಾಲವು ಸನ್ನಿಹಿತವಾಗಿದೆ. ರುದ್ರದೇವನನ್ನು ಮೆಚ್ಚಿಸಿ ವರಗಳನ್ನು ಪಡೆದಿರುವ ನಮ್ಮ ಪರಾಕ್ರಮವು ಕಾಲನ ಕಾಲಬಳಿ ನಿಂತಾಗ ನಿಮಗೆ ಗೊತ್ತಾಗುವುದು".

ಸಾತ್ಯಕಿಯು ಹಂಸನನ್ನು ನಿರ್ಲಕ್ಷಿಸಿ "ದೂತನೆಂದು ಸುಮ್ಮನಿರಬೇಕಾಗಿದೆ. ಹೋಗುವೆನು. ಶ್ರೀಕೃಷ್ಣನಲ್ಲಿ ನಿನ್ನ ಪರುವಾಲಾಪಗಳನ್ನು ತಿಳಿಸುವೆನು. ಈಗಲೇ ನಿಮ್ಮಿಬ್ಬರನ್ನೂ ರುದ್ರವರವನ್ನು ಬದಿಗೊತ್ತಿ ಸಂಹರಿಸಬಲ್ಲೆನು. ಆದರೆ ಅದು ಕೃಷ್ಣನ ಕೆಲಸವಾದುದರಿಂದ ಬಿಟ್ಟಿರುವೆನು. ಎಂದಾದರೂ, ಎಲ್ಲಾಗಲಿ ಯುದ್ಧವಾಗಲಿ ! ಶಂಖ ಚಕ್ರಗದಾಪಾಣಿಯು, ಯೋಗಿಧ್ಯೇಯಪದಪಂಕಜನು, ಪದ್ಮಕಿಂಜಲ್ಕನಯನನು. ಶ್ಯಾಮಲವರ್ಣನು ಸಿಂಹವಿಕ್ರಮನು, ಸೃಷ್ಟಿಸ್ಥಿತಿಲಯಕಾರಣನು, ತ್ರಿಜಗದ್ಗುರುವರನು, ಆದ ಶ್ರೀಕೃಷ್ಣನಿಂದ ರಣರಂಗದಲ್ಲಿ ಮಡಿಯುವ ನಿಮಗೆ ಯಮದರ್ಶನವಾಗುವುದು. ಆದರಿಂದ ಸಜ್ಜನರಿಗೆ ಆನಂದವಾಗುವುದು" ಎಂದು ರಥವನ್ನೇರಿ ದ್ವಾರಕೆಗೆ ಹೊರಟನು.

ಮರುದಿನ ದ್ವಾರಕೆಯನ್ನು ಮುಟ್ಟಿ ಸಾತ್ಯಕಿಯು ಶ್ರೀಕೃಷ್ಣನಿಗೆಲ್ಲ ವೃತ್ತಾಂತವನ್ನೂ ತಿಳಿಸಿದನು. ಬಲರಾಮಾದಿಯಾದವರು ಸಭಾಸ್ತಾರರು ಸೇನಾಪತಿಗಳು ಹಂಸನ ಉದ್ಧವವನ್ನು ಸಹಿಸದೆ ಯುದ್ಧಸನ್ನದ್ಧರಾದರು. ಉಭಯ ಸೇನೆಗಳೂ ಪುಷ್ಕರ ಕ್ಷೇತ್ರದಲ್ಲಿ ಸಂಧಿಸಿದವು.

ಧ್ವಜಪತಾಕಾಪರಿಚ್ಛದಗಳಿಂದ ಅಲಂಕೃತವಾದರಥಗಳು. ಅಂಬಾರಿಗಳಿಂದ ಸೊಗಸಾದಗಜಗಳು, ತಡಿಗಳಿಂದ ನಡೆಯುವ ತುರಗಗಳು ಖಡ್ಗಧನುರ್ಭಲ್ಲ ಪ್ರಾಸಯು ಸಲತೋಮರಮುದ್ಗರ ಪಾಣಿಗಳಾದ ಪದಾತಿಗಳು ಕಲೆತು ಕದನವಾಡಿದರು, ಭೇರೀ ಭಾಂಕಾರಗಳೊಂದಿಗೆ ಧನುಷ್ಟಂಕಾರಗಳು ಬೆರೆತು, ಗಗನದಿವ್ಯಾಪಿಸಿದವು ಹಯ ಹೇಷಾರವಗಳು ಗಜಘೀಂಕಾರಗಳೊಂದಿಗೆ ಬೆರೆತವು, ಖಣಿಲ್ ಥಣ್ ಎಂಬ ಆಯುಧ ಧ್ವಾನಗಳು ಸಂತತವಾದವು. ಪಾವನಪುಷ್ಕರ ಕ್ಷೇತ್ರವು ರಕ್ತನದೀಪರಿಪ್ಲುತವಾಯಿತು. ವಿಪ್ರರವೇದಘೋಷವಿದ್ದೆಡೆ, ವೀರರಸಿಂಹಗರ್ಜನಗಳು, ಗಾಯಗೊಂಡವರ ಆಕ್ರಂದನ

ಗಳು, ವೀರಾಲಾಪಗಳು ಕೇಳಬಂದವು. ರಣಭೂಮಿಯಲ್ಲಿ ಮಾರಣ ಹೋಮಗಳು ನಡೆದವು.

ಮಹಾರವವಾದ ಪಾಂಚಜನ್ಯವು ಮೊಳಗಿದಾಗ ದೈತ್ಯರು ಎದೆಯೊಡೆದರು ಶಾರ್ಙ್ಗಟಂಕಾರದಿಂದ ಹಂಸಡಿಭಕರಿಗೆ ಸಹಾಯಕನಾಗಿ ಬಂದಿದ್ದ ವಿಚಕ್ರನೆಂಬ ರಾಕ್ಷಸನು ಹಿಂಜರಿದನು. ಹಿಡಿಂಬನೂ ಬಂದಿದ್ದನು. ಅವನು ತನ್ನ ರಾಕ್ಷಸೀಸೇನೆಗೆ ಧೈರ್ಯವನ್ನು ತುಂಬಿ ಕೃಷ್ಣಸೇನೆಯನ್ನೆದುರಿಸಿದನು.

ರಥಗಳಲ್ಲಿ ಕೂತು ಮಹಾಧನುಗಳನ್ನು ಹಿಡಿದು ಬಂದಹಂಸಡಿಭಕರು ಭಸ್ಮಪರಿ ಲೇಪಿತರೂ, ತ್ರಿಪುಂಡ್ರಲಲಾಟರು, ರುದ್ರಾಕ್ಷಮಾಲಾಧರರು ಆಗಿ ಅನ್ಯರುದ್ರದ್ವಯ ದಂತೆ ಪ್ರಕಾಶಿಸಿದರು. ಅವರಿಗೆ ಸಹಾಯವಾಗಿ ಬಂದಿದ್ದ ರುದ್ರಪಾರ್ಷದರು ಕುಂಭಾಂಡ, ಕೂಪಕರ್ಣರೆಂಬ ಭೂತಗಳು ಅಟ್ಟಹಾಸದಿಂದ ಬರುತ್ತಿದ್ದರು. ಕುಂಡೋ ದರ ವಿರೂಪಾಕ್ಷರೆಂಬ ಭೂತದ್ವಯವೂ ಶಂಕರವರದಂತೆ ಸಾಲ್ವರಾಜ ಪುತ್ರರ ಹಿಂದೆ ನಡೆದು ಬಂದರು.

ಪರ್ವತದಂತಿದ್ದ ವಿಚಕ್ರದಾನವನು ಶಿವವರ ದರ್ಪದಿಂದ ಕಂಡವರನ್ನು ಕೆಣಕಿ, ಗೆದ್ದು, ಜಯಗಳಿಸಿ, ವಿಶೃಂಖಲನಾಗಿದ್ದನು. ಹಿಂದೆ ದೇವದಾನವಯುದ್ಧದಲ್ಲಿ ಅವನು ದೇವೇಂದ್ರನನ್ನೂ ಗೆದ್ದಿದ ನು. ವೃಷ್ಣಿವಿದ್ವೇಷಿಯಾದ ವಿಚಕ್ರನು ತಾನಾಗಿ ಹಂಸಡಿಭ ಕರಿಗೆ ಸಹಾಯಮಾಡಲು ಬಂದನು. ಹಿಡಿಂಬನೂ, ತನ್ನ ಅಣ್ಣನಾದ ಹಿಡಿಂಬನ ಅನು ಮತಿಯಿಂದ ಯಾದವಕುಲತಿಲಕನಿಗೆ ಕೇಡನ್ನು ಬಗೆದು ಬಂದನು. ಇಂತು ಪರಸೇ ನೆಯು ಹತ್ತು ಅಕ್ಷೋಹಿಣಿಗಳಾಗಿತ್ತು ಶ್ರೀಕೃಷ್ಣ ಬಲರಾಮರು ಆರುಅಕ್ಷೋಹಿಣೀಸೇನಾ ಸಮೇತರಾಗಿ ಸಮರ ರಂಗದಿನಿಂತಿದ್ದರು.

ಯುದ್ಧವು ತುಮುಲವಾಯಿತು. ಆಗ ವೀರರು ದ್ವಂದ್ವಯುದ್ಧನಿರತರಾದರು. ವಸುದೇವೋಗ್ರಸೇನರು ವೃದ್ಧರಾದರೂ ವೀರಾವೇಶದಿಂದ ಹಿಡಿಂಬನೊಡನೆ ಕಾದಿದರು. ಶ್ರೀಕೃಷ್ಣನು ವಿಚಕ್ರನನ್ನು ಮುತ್ತಿದನು. ಬಲದೇವನು ಹಂಸನಿಂದಲು, ಸಾತ್ಯಕಿಯು ಡಿಭಕನಿಂದಲು ಕೂಡಿಕಾದಿದರು.

ಪುಷ್ಕರಕ್ಷೇತ್ರ ಪುರುಷೋತ್ತಮನಾದ ಕೃಷ್ಣ ಇವೆರಡೇ ಜಗತೀತಲದಿ ಪ್ರಸಿದ್ಧ ಪಾವನಗಳು ಇವೆರಡೇದರ್ಶನ ಸ್ಪರ್ಶನಗಳಿಂದ ಪಾಪಹರಣಗಳು ಇವೆರಡೇ ಅಮರ ಗಂಧರ್ವಮನುಜರಾದ ಸರ್ವಪ್ರಾಣಿ ಸೇವಿತಗಳು. ಅಂತಹಪಾವನ ಕ್ಷೇತ್ರದಲ್ಲಿ, ಪುರು ಷೋತ್ತಮನಲ್ಲಿ ದ್ವೇಷದಿಂದ ಉರಿಯುವ ಹಂಸಡಿಭಕರು ವಿಚಕ್ರಹಿಡಿಂಬರು. ತಾವೇ ಸುಟ್ಟು ಹೋದರು.

ಪರಸ್ಪರ ಕೃತೋತ್ಸಾಹರಾಗಿ ಸೈನಿಕರು ಕಡಿದಾಡಿದರು ಕಾರ್ಮುಕನಿರ್ಮುಕ್ತಶ ರಗಳು ತಲೆಗಳನ್ನು ಕತ್ತರಿಸಿ, ಕೊಂಡುಪೋಗಿ ದೂರದಲ್ಲಿ ಬೀಳಿಸಿದವು. ಪರಿಘ ಪಟ್ಟಿಶ ಪ್ರಾಸತೋಮರಗಳನ್ನು ಹಿಡಿದು ಯುದ್ಧಮಾಡುವ ಯಾದವ ಸಾಲ್ವಸೈನಿಕರು ಕೈಗಳು,

ಕಾಲುಗಳು, ತಲೆಗಳು ಕಡಿದುಬಿದ್ದಾಗ ರಕ್ತವಾಹಿನಿಯೇ ಹರಿಯಿತು. ಹತಗಜಗಳು ದ್ವೀಪಗಳಾದವು, ತುರಗಗಳು ತರಂಗಗಳಾದವು. ಎಲುಬಿನರಾಶಿಗಳು ತೀರದಬೆಟ್ಟಗಳಾದವು. ಕಂಕಗೃಧ್ರವಾಯಸಗಳಿಗೆ, ಜಂಬುಕ ವೃಕಗಳಿಗೆ ನಂಜುಂಡಹಬ್ಬವಾಯಿತು. ಎಪ್ಪತ್ತೇಳುಸಾವಿರ ಆನೆಗಳು ಮೂವತ್ತು ಮತ್ತೊಂದು ಸಾವಿರಕುದುರೆಗಳು. ಲಕ್ಷರಥಿಕರು. ಮೂರು ಕೋಟಿ ಪದಾತಿಗಳು ರಣರಂಗಕ್ಕೆ ಬಲಿ ಆದರು ಕೆಲವರು ಓಡಿ ಹೋದರು. ಕೆಲವರು ಸತ್ತ ಆನೆಗಳ ಮಧ್ಯದಲ್ಲಿ ಅಡಗಿಕೂತರು ಸವಾರನಿಲ್ಲದೆ ಓಡುವ ಕುದುರೆಯನ್ನೇರಿ ಕೆಲವರು ದೂರರಾದರು.

ವಾಸುದೇವನು ಎಪ್ಪತ್ತುಮೂರು ಬಾಣಗಳಿಂದ ವಿಚಕ್ರನನ್ನು ಪೀಡಿಸಿದನು. ಆಕಾಶದಿನಿಂತು ದೇವತೆಗಳು ನೋಡುತ್ತಿದ್ದರು. ವಿಚಕ್ರನು ಆ ಬಾಣವನ್ನು ಕತ್ತರಿಸಿ, ನಿಶಿತಶರಗಳಿಂದ ಕೃಷ್ಣನ ಎದೆಗೆ ಹೊಡೆದನು. ಕ್ರುದ್ಧನಾದ ಹೃಷೀಕೇಶನು ಕ್ಷುರಪ್ರದಿಂದ ದೈತ್ಯನ ರಥಧ್ವಜವನು ಕೆಡಹಿ, ನಾಲ್ಕು ಶರಗಳಿಂದ ಕುದುರೆಗಳನ್ನು ಕೊಂದು, ಒಂದು ಭಲ್ಲದಿಂದ ಸಾರಥಿಯನ್ನು ಸಂಹರಿಸಿ, ಮೂರು ವಿಶಿಖಗಳಿಂದ ವಿಕ್ರನನ್ನು ತಾಡಿಸಿದನು. ಪುಂಡರೀಕಾಕ್ಷನು ಪಾಂಚಜನ್ಯವನ್ನೂದಲು, ಉಭಯ ಸೇನೆಗಳೂ ಎದೆಗುಂದಿ ಸ್ವಲ್ಪ ಹೊತ್ತು ನಿಶ್ಚೇಷ್ಟವಾಗಿ ನಿಂತವು. ವಿಚಕ್ರನು ವಿಜೃಂಭಿಸಿ ರಥದಿಂದ ಧುಮುಕಿ ಗದೆಯಿಂದ ಕೇಶವನ ತಲೆಗೆ ಹೊಡೆದನು. ಬರುವ ಗದೆಯನ್ನು ಕೈಲಿ ಹಿಡಿದು ಶ್ರೀಹರಿಯು, ಅದರಿಂದಲೇ ಅವನ ತಲೆಗೆ ಹೊಡೆದನು. ವಿಚಕ್ರನು ಮೂರ್ಛೆ ಬಂದು ಸತ್ತಂತಾದನು. ಸ್ವಲ್ಪ ಹೊತ್ತಾದ ಮೇಲೆ ಎಚ್ಚರವಹಿಸಿ, ವಿಚಕ್ರನು "ಗೋವಿಂದ! ಹಿಂದೆ ದೇವದಾನವ ಯುದ್ಧದಲ್ಲಿ ನನ್ನ ಪರಾಕ್ರಮವನ್ನು ರುಚಿ ಕಂಡಿರುವೆ! ಇಂದು ನಿನ್ನನ್ನು ಕೊನೆಗಾಣಿಸುವೆನು. ನಿನ್ನ ಭಕ್ತರನ್ನು ಕೊಂದು ತಿನ್ನುವೆನು.'' ಎನ್ನುತ್ತಾ, ಕ್ರಮವಾಗಿ, ಪರಿಘವನ್ನೂ, ಖಡ್ಗವನ್ನೂ, ಎಸೆದನು. ಕೃಷ್ಣನಾ ಆಯುಧಗಳನ್ನು ಬಾಣಗಳಿಂದ ತುಂಡರಿಸಿದನು. ವಿಚಕ್ರನು ಗಿಡವನ್ನೆತ್ತಿ ಹೊಡೆದನು. ಕೃಷ್ಣನು ಅದನ್ನೂ ಚೂರಾಗಿಸಿದನು. ಕೃಷ್ಣನಾಗ ಆಗ್ನೇಯಾಸ್ತ್ರವನ್ನು ಬಿಟ್ಟು, ಆ ಪಾಪಿ ದೈತ್ಯನನ್ನು ಅಂತಕಪುರಕ್ಕೆ ಕೊಟ್ಟು ಕಳಿಸಿದನು. ಬೂದಿಯಾದ ವಿಚಕ್ರನನ್ನು ನೋಡಿ ಮಿಕ್ಕ ರಾಕ್ಷಸರು ಹೆದರಿ ಓಡಿ ಹೋದರು.

ಬಲರಾಮನು ಹಂಸನನ್ನೆದುರಿಸಿ ಅವನನ್ನು ಐದು ಬಾಣಗಳಿಂದ ಗಾಯಗೊಳಿಸಿದನು. ಹಂಸನು ಸಿಟ್ಟಾಗಿ ಹತ್ತು ಶರಗಳಿಂದ ಪೀಡಿಸಲು, ಹಲಿಯು ಅದನ್ನು ಕತ್ತರಿಸಿ ಕೆಡಹಿ, ಸಾವಿರಾರು ಬಾಣಗಳಿಂದ ಅವನ ರಥ ಪತಾಕಾ ಧ್ವಜ ಸೂತ ತುರಗಗಳನ್ನು ಮುಚ್ಚಿದನು. ಹಂಸನೂ ಬಲದೇವನ ಧ್ವಜವನ್ನು ಮುರಿದು, ಒಂದರಿಂದ ಸೂತನನ್ನು ಕೊಂದು, ನಾಲ್ಕರಿಂದ ತುರಗಗಳನ್ನು ಕೆಡಹಿದನು. ಬಲರಾಮನು ಕೆಳಗಿಳಿದು ಗದೆಯನ್ನು ಹಿಡಿದು ಹೊಡೆಯಲು ಹಂಸನ ಸೂತರಥ ತುರಗಗಳು ದುಗ್ಗು ನುಚ್ಚಾದವು.

ಆಗ ಹಂಸ ಬಲರಾಮರು ಗದಾ ಯುದ್ಧ ಮಾಡಿದರು, ಆ ಯುದ್ಧವು ಉಲ್ಬಣವಾದಾಗ, ಇತರ ಸೈನಿಕರು ಬೆರಗಾಗಿ ನೋಡುತ್ತಾ ನಿಂತರು. ಇಬ್ಬರ ವೀರರ ಮೈಗಳೂ ರಕ್ತಸಿಕ್ತವಾದವು. ಹುಲಿಗಳಂತೆ ಗರ್ಜಿಸುತ್ತಾ, ಹೊಡೆದಾಡಿ. ತಿರುಗುತ್ತಾ ಅವರು ಗದಾ ದಂಡಗಳನ್ನು ಮುರಿದು ಕೊಂಡರು. ಇಬ್ಬರೂ ರಣಾರಂಗ ನಿವೃತ್ತರಾದರು

ಇತ್ತ ಸಾತ್ಯಕಿ ಡಿಭಕರು ಬಾಣ ಯುದ್ಧಕ್ಕಿಳಿದರು. ಗದಾಯುದ್ಧದಲ್ಲಿ ಸಮರಾಗಿ, ಖಡ್ಗಯುದ್ಧಕ್ಕಿಳಿದರು. ದೌಶ್ಶಾಸನಿ, ಭೂರಿಶ್ರವ, ಸಾತ್ಯಕಿ, ಅಭಿಮನ್ಯು, ನಕುಲ, ಇವರೈವರು ಖಡ್ಗ ಯುದ್ಧವಿಶಾರದರೆಂದು ಪ್ರತೀತಿ ಸಾತ್ಯಕಿ ಡಿಭಕರು ಖಡ್ಗಗಳಿಂದ ಕಡಿದಾಡುವಾಗ, ಅವರ ಯುದ್ಧವುದರ್ಶನೀಯವೆನಿಸಿತು. ಭ್ರಾಂತ, ಉದ್‌ಭ್ರಾಂತ, ಆವಿದ್ಧ, ಪ್ರಬಾಧ, ಬಾಹುನಿಸೃತ, ಆಕಾರ, ವಿಷ್ಕರ, ಮಿತ್ರ, ನಿರ್ಮರ್ಯಾದ,ಆಮಾನುಷ,ಸಂಕೋಚಿತ,ಕಾಲಚಿತ ಸವ್ಯ,ಜಾನು,ವಿಜಾನು, ಅಹಿತ, ಚಕ್ರಕ, ಕ್ಷಿಪ್ತ, ಕುಸುಂಬ, ಲಂಬನ, ಧೃತ, ಸವ್ಯ ಬಾಹು, ವಿನಿರ್ವ್ಯಾಹ, ಸವ್ಯೇತರ, ಉತ್ತರ, ತ್ರಿಬಾಹು, ತುಂಗ, ಬಾಹು, ಅನಂತ, ಉದಾಸಿ, ಪೃಷ್ಠ ಪ್ರಹರ, ಯೌಧಿಕ, ಪ್ರಥಿತ. ಎಂಬ ಮೂವತ್ತೆರಡು ಪ್ರಕಾರವಾದ ಖಡ್ಗ ವಿನ್ಯಾಸ ಚಾತುರ್ಯಗಳಿಂದ ಅವರು ನೋಡುತ್ತಿದ್ದ ದೇವ ಮಾನವ ದಾನವ ಪ್ರಶಂಸೆಗಳಿಗೆ ಪಾತ್ರರಾದರು.

ವಸುದೇವೋಗ್ರಸೇನರು ಮುಪ್ಪಿಗೆ ಬಾಗದೆ, ಪರಾಕ್ರಮದಿಂದ ವಿಜೃಂಭಿಸಿ ಹಿಡಿಂಬನನ್ನು ಹಿಮ್ಮೆಟ್ಟಿಸಿದರು. ಆ ರಾಕ್ಷಸನು ಪ್ರವೃದ್ಧ ಕಾಯನಾಗಿ, ಆ ಎಂದು ಬಾಯ್ತೆಗೆದು, ಅವರನ್ನಿಬ್ಬರನ್ನೂ ಭಕ್ಷಿಸಲು ಬಂದನು. ಅದನ್ನು ನೋಡಿ, ಬಲರಾಮನು, ಹಂಸನಿಂದ ಯುದ್ಧವನ್ನು ಬಿಟ್ಟು, ಅಲ್ಲಿಗೆ ಬಂದು, ಅವರೀರ್ವರಿಗೆ ಆಸರೆಯಾಗಿ ನಿಂತನು. ಹಿಡಿಂಬನು ಮುದುಕರನ್ನು .ಬಿಟ್ಟು, ಬಲರಾಮನನ್ನೆದುರಿಸಿದನು. ಬಾಣಶರಗಳನ್ನು ರಥದಲ್ಲಿಟ್ಟು, ಕೆಳಗಿಳಿದ ಬಲದೇವನು ಮುಷ್ಟಿಯಿಂದ ಬಲವಾಗಿ ಹಿಡಿಂಬನ ಎದೆಗೆಗುದ್ದಿದನು, ರಕ್ಕಸನು ರಕ್ತವನ್ನು ಕಾರಿ ಕೆಳಗುರುಳಿದನು. ಬಲನು ಅಷ್ಟಕ್ಕೆ ಬಿಡದೆ, ಅವನನ್ನೆತ್ತಿ, ಗರಗರ ತಿರುಗಿಸಿ, ನೆಲಕ್ಕಪ್ಪಳಿಸಿ ಕೊಂದನು. ಸೂರ್ಯನು ಮುಣುಗಲು, ಯುದ್ಧವು ಅಂದಿಗೆ ಮುಗಿಯಿತು.

○

28. ಯುದ್ಧ-ದ್ವಿತೀಯದಿನ

ಶ್ರೀ ವೈಶಂಪಾಯನನು ನಿರೂಪಿಸಿದನು.

ಜನಮೇಜಯ ಕೇಳು ! ಮರುದಿನ ಬೆಳಗಾಯಿತು. ವಿಚಕ್ರಹಿಡಿಂಬರ ನಾಶವನ್ನು ಕಂಡು. ಹೆದರಿ ಹಂಸ ಡಿಭಕರು ಪುಷ್ಕರ ಕ್ಷೇತ್ರದಿಂದ ಕಾಲ್ತೆಗೆ ದೋಡಿ, ಮಥುರೆಯನ್ನು ಮುಟ್ಟಿದರು. ಅಲ್ಲಿಂದ ಗೋವರ್ಧನಗಿರಿಯ ಉತ್ತರ ಪಾರ್ಶ್ವವನ್ನು

ತಲುಪಿ, ಅಲ್ಲಿ ಕೃಷ್ಣನಿಗಾಗಿ ಕಾದಿದ್ದರು. ಶ್ರೀಕೃಷ್ಣನು ತನ್ನವರಿಂದ ಕೂಡಿ, ಬೆನ್ನತ್ತಿ ಬಂದು ಅವರನ್ನು ಮುತ್ತಿದನು. ಮತ್ತೆ ಭಯಂಕರ ಯುದ್ಧವು ಪ್ರಸಕ್ತವಾಯಿತು. ಅನಾಧೃಷ್ಟಿ, ಸಾಂಬ, ಪ್ರದ್ಯುಮ್ನ, ಉಗ್ರಸೇನ, ಉದ್ಧವ, ಅಕ್ರೂರ, ವಿಪೃಥುಗಳಿಂದ ಕೂಡಿ ಸಾತ್ಯಕಿಯು ಸಲೀಲೆಗಿ, ಸರ್ವಸಾಲ್ವಸೈನ್ಯವನ್ನೂ ನಾಶಪಡಿಸಿದನು. ದೇವಾಸುರ ಸಂಗ್ರಾಮದಂತೆ ಭೀಕರವಾದ ಸಾಲ್ವಯಾದವ ಯುದ್ಧವನು ದೇವಾಸುರರು ಆಕಾಶದಿ ನಿಂತು ನೋಡುತ್ತಾ, ತಂತಮ್ಮ ಪಕ್ಷಗಳನ್ನು ವಹಿಸಿ, ಮಾತಾಡಿಕೊಂಡರು.

ಆಗ ತ್ರಿನೇತ್ರನು ಕಳುಹಿಸಿ ಕೊಟ್ಟಿದ್ದ ಭೂತಗಳು ರಣ ಕಣಕ್ಕಿಳಿದವು. ಅವರ ಹಾವಳಿಯಿಂದ ಯಾದವರು ಭೀತರಾದರು. ವಾಸುದೇವನು ಹಂಸನಿಂದಲು, ಬಲದೇವನು ಡಿಭಕನಿಂದಲು ಹೋರಾಡಿದರು. ಸಾತ್ಯಕಿ ಪ್ರಮುಖರು, ಹತಶೇಷರಿಂದ ಯುದ್ಧವಾಡಿದರು. ಕುಂಡೋದರನು ವಿರೂಪಾಕ್ಷನು ಶೂಲಗಳನ್ನು ಪಿಡಿದೆತ್ತಿ ವಾಸುದೇವನನ್ನೂ ಬಲ ದೇವನನ್ನೂ ತಿವಿದರು. ಆಗ ಮಂದಸ್ಮಿತ ಸುಂದರವದನನಾದ ಶ್ರೀ ಕೃಷ್ಣನು, ರಥದಿಂದ ಕೆಳಗಿಳಿದು, ಅವರಿಬ್ಬರನ್ನೂ ಕೈಗಳಿಂದ ಹಿಡಿದೆತ್ತಿ, ಅಲಾತ ಚಕ್ರದಂತೆ ತಿರುಗಿಸಿ, ಒಗೆದನು. ಅವರು ಸರಿಯಾಗಿ ಕೈಲಾಸವನ್ನು ಮುಟ್ಟಿ, ಶಂಕರನಿಗೆ ಶಂಕರವಂದ್ಯನ ವಿಕ್ರಮವನ್ನು ತೋರಿಸಿ, ಸುಮ್ಮನೆ ಕೂತರು.

ಹಂಸನದನ್ನು ಕಂಡು ಕೆಂತವಾಗಿ, "ಕೃಷ್ಣ ! ಯದುಕುಲ ಕಲಂಕ ! ನಮ್ಮಪ್ಪನು ಪೂಜ್ಯನು. ಅವನ ರಾಜಸೂಯಕ್ಕೆ ವಿಘ್ನ ಮಾಡ ಬೇಡ ! ಕೇಳಿಲ್ಲಿ ! ಉಪ್ಪಿನ ಕಪ್ಪವನ್ನು ಕೊಟ್ಟು, ಮುಪ್ಪುರ ವೈರಿಯ ಭಕ್ತರಾದ ನಮ್ಮಗೆ ಶರಣಾಗಿ, ಉಳಿದುಕೋ ! ಇಲ್ಲದಿರೆ ನಿನ್ನವರೂ, ನೀನೂ ಸತ್ತರೆಂದೇ ತಿಳಿ !" ಎಂದು ನಿಶಿತ ನಾರಾಚಗಳನ್ನು ಬಿಟ್ಟನು; ಮತ್ತೊಂದು ಭಲ್ಲದಿಂದ ಕೃಷ್ಣನ ಹಣೆಗೆ ಹೊಡೆದನು. ಆಗ ಕೃಷ್ಣನು ದಾರುಕನನ್ನು ಪೃಷ್ಠವಾಹಕನನ್ನಾಗಿಸಿ, ಸಾತ್ಯಕಿಯನ್ನು ಸಾರಥಿಯನ್ನಾಗಿಸಿ ಕೊಂಡು, ಹಂಸನನ್ನೆದುರಿಸಿ ನಿಂತನು. "ದುರಾತ್ಮನ್ ! ನನ್ನಿಂದ ಕರವನ್ನು ಪಡೆಯುವ ಕೊಬ್ಬೇ ನಿನಗೆ ! ಇನ್ನೂ ಕಲಿಯುಗವು ಬಂದಿಲ್ಲ, ನಾನೀಗ ಕೃಷ್ಣನಾಗಿರುತ್ತಿರಲು, ಬ್ರಾಹ್ಮಣ ದ್ರೋಹವನ್ನು ಬಗೆದು, ನಾಯಿಯಂತೆ ಬೊಗಳುವ ನಿನ್ನ ಕಥೆ ಇಂದಿಗೆ ಮುಗಿಯಿತೆಂದು ತಿಳಿ ! ಯತಿವರ್ಯರ ಶಾಪದಿಂದ ನೀನಂದೇ ಸತ್ತಿರುವೆ ! ಪಾಪಿ ! ನಿಲ್ಲುತಿರವಾಗಿ, ಸರಿಯಾದ ಗತಿಯು ನಿನಗೆ ಕೊಡಲ್ಪಡುವದು !" ಎಂದು ಅಗ್ನೇಯಾಸ್ತ್ರವನ್ನು ಬಿಟ್ಟನು. ಹಂಸನು ಅದನ್ನು ವಾರುಣಾಸ್ತ್ರದಿಂದ ಆರಿಸಿದನು. ಕೃಷ್ಣನು ವಾಯವ್ಯವನ್ನು ಬಿಡಲು ಅದನ್ನು ಹಂಸನು ಮಹೇಂದ್ರಾಸ್ತ್ರದಿಂದವಾರಿಸಿದನು. ಕುಬೇರ, ಆಸುರ, ಯಾಮ್ಯ, ವೈಶಾಚಾಸ್ತ್ರಗಳನ್ನು ಹಂಸನು ಬಿಡಲು, ಶ್ರೀ ಕೃಷ್ಣನು ಅವನ್ನು ಬ್ರಾಹ್ಮ, ಅಥರ್ವ, ಗಾಂಧರ್ವ,

ಕಾದಾಸ್ತ್ರಗಳಿಂದ ವ್ಯರ್ಥಪಡಿಸಿದನು. ಬ್ರಹ್ಮಶಿರೋನಾಮಕವಾದ ಧನುಚಕ್ರವನ್ನು ತೆಗೆದು, ಅದರಲ್ಲಿ ವೈಷ್ಣವಾಸ್ತ್ರವನ್ನೂ ಸಂಧಿಸಿ, ಪ್ರಯೋಗಿಸಲು ಉದ್ಯುಕ್ತನಾದ ಶ್ರೀಶನನ್ನು ಕಂಡು, ಹಂಸನು ಹೆದರಿ, ಓಡತೊಡಗಿದನು.

ಕೃಷ್ಣನೂ ಅವನನ್ನು ಬಿಡದೆ ಬೆಂಬತ್ತಿ ಬಂದನು ಹಂಸನು ಯಮುನೆಯನ್ನು ಸೇರಿ, ರಥದಿಂದಳಿದು ಕಾಳಿಯ ಹ್ರದದಲ್ಲಿ ಬಿದ್ದು, ಉತ್ತರಿಸಿ ಹೋಗಲು ಹವಣಿಸಿದನು. ಮಹಾಗಾಧವು ಪಾತಾಳದಷ್ಟವು ಘೋರ ಸರ್ಪಗಣ ನಿಲಯವು. ನೀಲಮಣಿಪ್ರಭವು ಆದ ಹ್ರದದಲ್ಲಿ ಬಿದ್ದ ಹಂಸನ ಮೇಲೆ ಕೃಷ್ಣನೂ ಹಾರಿಧುಮುಕಿದನು. ಆ ಪಾಪಿಯು ಮೇಲೆದ್ದಂತೆ; ಕಾಲಿಂದ ತುಳಿ ತುಳಿದು, ಕಾಳಿಂದೀಪತಿಯು ಅವನನ್ನು ಅಂಧಂತಮಸ್ಸಿಗೆ ಅಟ್ಟಿದನು. ಆ ಮಡುವಿನಲ್ಲಿದ್ದ ಪನ್ನಗ ಮಕರಾದಿ ಜಲಚರಗಳಿಗೆ ಅವನು (ದೇಹ) ಆಹಾರನಾದನು.

ಜಗನ್ನಾಥನು ಮೇಲೇರಿಬಂದು, ರಥವನ್ನು ಆರೋಹಿಸಿ, ಬಂದು ತನ್ನವರಿಗೆ ಆನಂದವನ್ನಿತ್ತನು. ಹಂಸನೇ ಜೀವಂತನಾಗಿ ಉಳಿದಿದ್ದರೆ ಜನಮೇಜಯ ! ನಿಮ್ಮ ಮುತ್ತಾತನಾದ ಧರ್ಮನಿಗೆ ರಾಜಸೂಯವನ್ನು ಮಾಡಲಾಗುತ್ತಿದ್ದಿಲ್ಲವೆಂದು ತಿಳಿ ! ಇಂತು ಭಕ್ತ ವತ್ಸಲನು ತನ್ನ ಭಕ್ತರ ಶ್ರೇಯಸ್ಸಿಗೆ ಬರುವ ಎಲ್ಲ ವಿಘ್ನಗಳನ್ನೂ ನಿವಾರಿಸಿ, ಸಲುಹುವನೆಂದು ತಿಳಿ ! ಶ್ರೀ ಗೋವಿಂದಾಯನಮಃ ||

ಇನ್ನೂ ಶ್ರೀ ಕೃಷ್ಣನು ಹಿಂದಿರುಗಿ ಬಂದಿದ್ದಿಲ್ಲ ! ಆದರೆ ಹಂಸ ಮರಣ ವಾರ್ತೆಯು ಸರ್ವತ್ರ ಹಬ್ಬಿತು. ಗಂಧರ್ವರು ಹಂಸಾಸುರ ವೈರಿಯನ್ನು ಪ್ರಶಂಸಿಸಿದರು ಮಧುರರವಗಳು ಅಂಬರದಿ ತುಂಬಿ ಸುಜನಾನಂದವನ್ನು ತಂದವು

ಹಂಸನ ಮರಣದಸುದ್ದಿಯು ಯುದ್ಧರಂಗದಲ್ಲಿ ಹಬ್ಬಿತು ಅಣ್ಣನ ಸಾವನ್ನು ಕೇಳಿದಡಿಭಕನು, ಬಲದೇವನೊಡನೆಯುದ್ಧವನ್ನು, ಬಿಟ್ಟು, ಯಮುನೆಯ ಕಾಳಿಂದೀಮಡುವನ್ನು ಸೇರಿದನು. ಅಲ್ಲಿ ಹ್ರದದಲ್ಲಿ ಹುಡುಕಿ ಹಂಸನನ್ನು ಕಾಣದೆ ಡಿಭಕನು ಹತಾಶನಾದನು. ಬೆಂಬತ್ತಿ ಬರುವ ಬಲ ಭದ್ರನ ವೀರ್ಯ ಸಾಹಸಗಳನ್ನೂ, ಹಂಸನು ಘೋರ ಮರಣವನ್ನೂ ಚಿಂತಿಸಿ, ನಿರ್ವಿಣ್ಣನಾದನು ವಾಸುದೇವನಾಗ ಅಲ್ಲಿಗೆ ಬಂದನು. ಡಿಭಕನವನನ್ನು ನೋಡಿ, ಸಿಟ್ಟಿನಿಂದ "ಅರೇ ಗೋಪಾಲಕ ! ಎಲ್ಲಿರುವನೋ ನನ್ನ ಅಣ್ಣ ಹಂಸ ?" ಎಂದು ಕೇಳಿದನು. ಶ್ರೀ ಕೃಷ್ಣನು "ಕೇಳು ಯಮುನಾ ಕಿನದಿಯನ್ನು !" ಎಂದನು. ಮತ್ತೆಮಡುವನ್ನು ಕೆದಕಿ, ಹುಡುಕಿ ನಿರಾಶನಾದ ಡಿಭಕನು "ಅಣ್ಣ ! ರಾಜೇಂದ್ರ ! ಹಂಸ ! ಎಲ್ಲಿರುವೆ ? ನನ್ನನ್ನು ಬಿಟ್ಟು ಹೋಗುವುದು ಉಚಿತವೇ ? ನಾನೂ ಬಂದು ಬಿಡುವೆನು ತಡೆ !" ಎಂದು ಒದರಾಡಿ ಡಿಭಕನು, ತನ್ನ ಕೈಯಿಂದ ತನ್ನ ನಾಲಿಗೆಯನ್ನು ಕಿತ್ತಿ, ರಕ್ತಕಾರಿ ಸತ್ತನು. ಅವನೂ ಹಂಸನಂತೆ ನಿತ್ಯ ನರಕವನ್ನು ಸೇರಿದನು.

ಇಂತು ವಾಸುದೇವನು ಬ್ರಾಹ್ಮಣ ದ್ವೇಷಿಗಳಾದ ಹಂಸಡಿಭಕರನ್ನು-ರುದ್ರ ವರದಂತೆ-ತಮ್ಮಿಂದ ತಾವೇಸಾಯುವಂತೆ ಮಾಡಿ, ಸರ್ವಲೋಕ ಕ್ಷೇಮಂಕರನಾದನು. ತಾನು ಬಾಲ್ಯದಲ್ಲಿದ್ದ ದೇಶವೆಂದುಸಂಬಾವಿಸಿ, ವೃಂದಾವನದ ನಂದನ ಮಂದಿರವನ್ನು ಸೇರಿ, ಬಲರಾಮನಿಂದ ಕೂಡಿ, ಕೆಲಕಾಲವಲ್ಲಿ ನೆಲಸಿದನು ಕೃಷ್ಣದರ್ಶನದಿಂದ ಆನಂದಿತರಾದ ನಂದಾದಿ ಗೋಪರು, ಯಶೋದಾದಿ ಸುದತಿಯರು, ವಿಜಯೋತ್ಸವ ವನ್ನು ಆಚರಿಸಿದರು. ನವನೀತದಧಿ ಪಾಯಸಗಳನ್ನು, ಹುಗ್ಗಿ ಚಿತ್ರಾನ್ನಗಳನ್ನೂ ತೆಗೆದುಕೊಂಡು, ಗೋವರ್ಧನಗಿರಿಯ ಸಾನುವನ್ನು ಸೇರಿದರು. ಮಯೂರ ಪಿಚ್ಛಗ ಳಿಂದ ಅಲಂಕಾರವನ್ನು ಮಾಡಿಕೊಂಡ ಗೋಪಾಲಕರು ಕೃಷ್ಣನನ್ನು ಸುತ್ತುವರಿ ನಿಂತು ಹಾಡಿ ಕುಣಿದಾಡಿದರು.

ಶ್ರೀ ಕೃಷ್ಣನು ಅಮ್ಮ ಯಶೋದೆ ! ಅಪ್ಪ ನಂದರಾಜ ! ಕುಶಲವೇ ನಿಮಗೆ? ಗೋಗಳು ಹಾಲನ್ನೀಯುವವೇ ? ಬೃಂದಾವನದಲ್ಲಿ ಜಲ ತೃಣಸಮೃದ್ಧಿ ಇದೆ ಅಲ್ಲವೇ ? "ಎಂದು ವಿಚಾರಿಸಿ, ಕೆಲಕಾಲವಲ್ಲಿ ವಸಿಸಿದನು. ಶ್ರೀ ಕೃಷ್ಣನು ಹಂಸ ಡಿಭಕರನ್ನು ಸಂಹರಿಸಿ, ದಿಗ್ವಿಜಯಯುತನಾಗಿ ದ್ವಾರಕೆಗೆ ಹಿಂದಿರುಗಿ ಹೋಗುತ್ತಾ, ಮತ್ತೆ ಪುಷ್ಕರ ಕ್ಷೇತ್ರಕ್ಕೆ ಬಂದನು. ದುಷ್ಟದಮನವನ್ನು ಸಾಧಿಸಿ ಬಂದ ಗೋವಿಂದ ನಿಗೆ ದುರ್ವಾಸ ಪ್ರಮುಖ ಮುನಿವರರು ವಂದಿಸಿ, ಸತ್ಕರಿಸಿದರು.

"ಭೂತಭವ್ಯಭವತ್ಪ್ರಭುವೇ ! ನಿನ್ನ ವೀರ್ಯವು ಅತ್ಯಾಶ್ಚರ್ಯವು ನಿನ್ನ ಪರಾಕ್ರ ಮವು ವಕ್ರಜನನಾಶಕವು ! ನಿನ್ನದಯೆಯು ಅಮೋಘವು. ನಿನ್ನ ಲೀಲೆಯು ಬ್ರಹ್ಮ ರುದ್ರಾದಿ ದೇವಜನ ಸ್ತುತವು. ಹಂಸ ಡಿಭಕರನ್ನು ನಾಶಪಡಿಸಿ, ನಮ್ಮಂತಹ ತಪಸ್ವಿಗಳಿಗೆ ಶಾಂತಿ ಸಮಾಧಾನಗಳನ್ನು ದಯಪಾಲಿಸಿದೆ ! ನಿನ್ನನ್ನು ಸ್ಮರಿಸುತ್ತಾ ನಿಷ್ಕಲ್ಮಷರಾಗುವೆವು. ನೀನೇ ನಮ್ಮ ಸರ್ವದುಃಖನಾಶಕನಾಗಿರುವೆ ! ನೀನೇ ಪ್ರಾಣ ದೇವನೊಡಗೂಡಿ, ಸರ್ವಾಂತರ್ಯಾಮಿಯಾಗಿ ಸಲಹುವ ಪ್ರಭುವು. ನಿನಗೆ ನಮಃ ||" ಎಂದು ಸ್ತುತಿಸಿದರು.

ಮುಂದೆ ಗೋವಿಂದನು ದ್ವಾರಕೆಯನ್ನು ಮುಟ್ಟಿ, ಅಲ್ಲಿದ್ದ ತನ್ನವರಿಗೆಲ್ಲ ಆನಂದವನ್ನಿತ್ತನು. ರಾಜನ್ ! ಇಂತು ಶ್ರೀ ಕೃಷ್ಣನ ಭಕ್ತವಾತ್ಸಲ್ಯ, ದುಷ್ಟ ಶಿಕ್ಷಣ, ವಿಪ್ರತಪಃಪರಿಪಾಲನ, ಬಂಧು ಜನಪೋಷಣ, ಸುಜನ ಸಂಕಟ ಹರಣಗ ಳನ್ನು ನಿನಗೆ ನಾನು ಯಥಾಮತಿ ನಿರೂಪಿಸಿ ಧನ್ಯನಾದೆನು. ನೀನೂ ಕೇಳಿ ಪಾವ ನನನಾದೆ. ಮತ್ತೇನು ಪೇಳಲಿ ಕೇಳು !" ಎಂದು ವೈಶಂಪಾಯನನು ನುಡಿದನು.

ಶ್ರೀ ಶಾರ್ಪಿತಮಸ್ತು " ||

— ೦ —

29. ತ್ರಿಪುರಸಂಹರ

ಶ್ರೀ ಜನಮೇಜಯನು "ಮಹಾಮುನೇ ! ಧನ್ಯನಾದೆನು. ಶ್ರೀ ಕೃಷ್ಣನು ತ್ರಿಪುರ ಹರನಾದ ಹರನಿಗೆ ಸಹಾಯವನ್ನು ಮಾಡಿ, ಆತನ ಕೀರ್ತಿಯನ್ನು ಲೋಕದಲ್ಲಿ ಹರಡಿದನೆಂದು ಕೇಳಿರುವೆನು. ದಯಮಾಡಿ ಆ ಕಥೆಯನ್ನು ನನಗೆ ಹೇಳು !" ಎಂದು ಪ್ರಾರ್ಥಿಸಿದನು.

ವೈಶಂಪಾಯನನಿಂತೆಂದನು. ರಾಜನ್ ! ರುದ್ರವಲ್ಲಭನಾದ ವಾಸುದೇವನ ದಿವ್ಯಲೀಲೆಯನ್ನು ವರ್ಣಿಸುವೆನು. ಶ್ರದ್ಧೆಯಿಂದ ಕೇಳು ! ಹಿಂದೆ ತ್ರಿಪುರಾಸುರರು ಮಯನಿಂದ ಮೂರು ವಿಮಾನಗಳನ್ನು ಮಾಡಿಸಿದರು ವಿಮಾನಗಳು ಊರುಗಳಂತೆ ಸಕಲ ಸೌಕರ್ಯ ಸಮೇತವಾಗಿದ್ದುದರಿಂದ ಅವನ್ನು ತ್ರಿಪುರವೆಂದು ಕರೆದರು. ಕಾಂಚನಪ್ರಾಕಾರಗಳು, ಮಣಿವಪ್ರಗಳು. ಗಜರಥತುರಗಗಳು, ಸರ್ವಶಸ್ತ್ರಾಸ್ತ್ರಗಳು, ಎಲ್ಲ ವಾಂಛನೀಯವಸ್ತುಗಳು ಅಲ್ಲಿದ್ದವು. ಆಕಾಶದಿ ಹಾರುವ ಹಂಸಗಳೆಂಬಂತೆ, ವಿಮಾನ ತ್ರಯವೂ ವಾಯುವೇಗ ಮನೋವೇಗಗಳಿಂದ ಸಂಚರಿಸುತ್ತಿದ್ದವು. ದೈತ್ಯರು ಮೂವರು ಕಮಲಾಕ್ಷ ವಿರೂಪಾಕ್ಷ, ತಾರಕಾಕ್ಷರೆಂಬುವರು– ತಾವೇ ನಿಜವಾದ ಕಮಲಾಕ್ಷ (ವಿಷ್ಣು) ವಿರೂಪಾಕ್ಷ (ಶಂಕರ) ತಾರಕಾಕ್ಷ (ಬ್ರಹ್ಮ) ರೆಂದು ಭ್ರಮಿಸಿ, ಇತರ ದೈತ್ಯದಾನವರನ್ನು ಕೂಡಿ, ಜಗದ ಸರ್ವಜನರನ್ನೂ ಪೀಡಿಸಿದರು.

ಆಗ ಸರ್ವ ದೇವತೆಗಳೂ ಪರಮೇಷ್ಠಿ ಪಾದಗಳಿಗೆರಗಿ ದುಷ್ಟದಾನವಧೋಪಾಯವೇನೆಂದು ಪ್ರಾರ್ಥಿಸಿದರು. ಅವರಿಗೆ ಅಂತಹ ವರವನ್ನಿತ್ತಬ್ರಹ್ಮನು"ದೇವತೆಗಳಿರಾ! ಕೇಳಿ ! ಆ ದಾನವರು ತೀವ್ರತಪವನ್ನು ಮಾಡಿ, ನನ್ನಿಂದಲು, ಶಂಕರ ನಿಂದಲು ವರಗಳನ್ನು ಪಡೆದು, ವರಬಲದಿಂದ ಕೊಬ್ಬಿ, ಜನಹಿಂಸಕರಾಗಿರುವರು. ಅವರು ಶಂಕರನಿಂದಲ್ಲದೆ ಅನ್ಯರಿಂದ ಸಂಹೃತರಾಗರು" ಎಂದನು.

ದೇವತೆಗಳು ಭುವಿಗಿಳಿದು ಕೈಲಾಸವನ್ನು ಸೇರಿ, ಭಗವಂತನು, ದೀನವತ್ಸಲನು ಆದ ಶಿವನಿಗೆ ಶರಣಾದರು. "ಭಗವನ್‌ರುದ್ರ ! ಬ್ರಹ್ಮನೂ, ನೀನೂ ಇತ್ತವರದಿಂದ ಗರ್ವಿತರಾದ ತ್ರಿಪುರರು ಮಾಡುವ ಪೀಡೆಯಿಂದ ನಮ್ಮ ಸ್ವಾಧ್ಯಾಯ, ಯಜ್ಞದಾನ ತಪಃ ಕರ್ಮಗಳು ನಡೆಯದಂತಾಗಿವೆ. ನಮ್ಮ ತಪಸ್ಸು ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗಿದೆ. ಶಂಕರನಲ್ಲದೆ ಮತ್ತಾರೂ ಆ ದೈತ್ಯರನ್ನು ಸಂಹರಿಸಲಾರರೆಂದು ಬ್ರಹ್ಮದೇವನ ಮಾತು. ಅದನ್ನು ಸತ್ಯಮಾಡು" ಎಂದು ಪ್ರಾರ್ಥಿಸಿದರು.

ಶಂಕರನು ಅದಕ್ಕೆ ಸಮ್ಮತಿಸಿ, ಇಂದ್ರಾದಿ ಬೃಂದಾರಕರಿಂದ ಕೂಡಿ ಅಂಬರ ಪಥದಿ ಬಂತು ನಿಂತನು. ರುದ್ರನಿಂದ ಇತರ ದಶರುದ್ರರು, ಇಂದ್ರನಿಂದ ಹತ್ತು ಆದಿತ್ಯರು (ವಿಷ್ಣುವಿನನ್ನು ಬಿಟ್ಟು), ವಸುಗಳು ಮುಂತಾದ ದೇವತೆಗಳು. ತ್ರಿಪುರ ನಾಶಕ್ಕೆಂದು ಸನ್ನದ್ಧರಾದರು. ತ್ರಿನೇತ್ರನ ನಿಶಿತ ಶಸ್ತ್ರಗಳಿಂದ ತ್ರಿಪುರಗತ ದೈತ್ಯರು, ವಜ್ರಹತಗಿರಿಗಳಂತೆಬಿದ್ದರು. ಮತ್ತೆ ಎಚ್ಚೆತ್ತ ದಾನವರು ಅಭೇದ್ಯವಿಮಾನಗಳನ್ನೇರಿ ದೇವತೆಗಳನ್ನು ಎದುರಿಸಿ, ನಿಶಿತಾಸ್ತ್ರಶಸ್ತ್ರಗಳಿಂದ ಪೀಡಿಸಿದರು. ಬಿದ್ದ ದೈತ್ಯರು ಎದ್ದು ಬಂದದ್ದನ್ನು ನೋಡಿ, ಇಂದ್ರಾದಿಗಳು ಅಚ್ಚರಭಯಗ್ರಸ್ತರಾಗಿ, ದೈತ್ಯಶಸ್ತ್ರಗಳಿಂದ ವಿದ್ಧರಾಗಿ ಹೆದರಿದರು.

ಅಗ ಅಸ್ತಮಯವಾಯಿತು. ರಾತ್ರಿಯುದ್ಧದಲ್ಲಿ ಪ್ರಬಲರಾದ ರಾಕ್ಷಸರು ವಿಜೃಂಭಿಸಿ, ದೇವತೆಗಳನ್ನು ಮುತ್ತಿ, ವಿವಿಧಾಯುಧಗಳಿಂದ ಪೀಡಿಸಿದರು. ಬೃಹಸ್ಪತಿಯ ಮಂತ್ರ ಬಲದಿಂದ ದೇವತೆಗಳೂ, ಶುಕ್ರ ಮಂತ್ರ ಬಲದಿಂದ ದೈತ್ಯರೂ ಒಬ್ಬರನ್ನೊಬ್ಬರು ಪೀಡಿಸುತ್ತಿರಲು, ಜಯಾಪಜಯಗಳು ಸಂಶಯ ಗ್ರಸ್ತವಾದವು. ಆಗ ರುದ್ರನು ವೃಷಭನಧ್ವಜವಾದ ರಥವನ್ನೇರಿ, ಪ್ರಳಯ ಕಾಲ ರುದ್ರನೇ ಆಗಿ ಶೂಲ, ಪರಶು, ಭಲ್ಲ, ಧನುರ್ಬಾಣಗಳನ್ನು ಧರಿಸಿ, ದೈತ್ಯರನ್ನು ಎದುರಿಸಿದಾಗ, ದೈತ್ಯ ಬಲವು–ವೇಲೆಯನ್ನು ಮುಟ್ಟಿದ ಸಮುದ್ರದಂತೆ–ಹಿಮ್ಮೆಟ್ಟಿತು. ಋಷಿಗಳಿಂದ ರುದ್ರಸೂಕ್ತಗಳು ಜಪಿಸಲ್ಪಟ್ಟವು ದೇವತೆಗಳು ಗರ್ಜಿಸುತ್ತಾ ಮುನ್ನುಗ್ಗಿದರು

ದೈತ್ಯರು ಮಯಾಸುರನ ಮಾಯಾಬಲದಿಂದ ವಿಜೃಂಭಿತರಾಗಿ ಸುರಸೈನ್ಯವನ್ನು ಮುತ್ತಿ ಭಲ್ಲಾ, ಪ್ರಾಸ, ಪರಶು, ಭಿಂಡಿವಾಲ, ಮುದ್ಗರ, ಗದಾ ಖಡ್ಗಗಳನ್ನು ಪಿಡಿದು ಹೋರಾಡಿದರು. ಮಯನು ಒಂದು ಬಾವಿಯಲ್ಲಿ ಜೀವನ ಪ್ರದಲತಾದಿ ಓಷಧಿಗಳನ್ನು ಹಾಕಿ, ಆ ರಸಾಯನದಲ್ಲಿ ಸತ್ತ ದೈತ್ಯರನ್ನು ಅದ್ದಿ, ಬದುಕಿಸುತ್ತಿದ್ದನು. ಅವರು ಮೊದಲಿನಕಿಂತಲೂ ಬಲಾಧಿಕರಾಗಿ, ಸಿಟ್ಟಿನಿಂದ, ಮೇಲೇರಿಬರುತ್ತಿದ್ದರು. ತನ್ನ ನಿಶಿತ ಶರಪರಂಪರೆಯಿಂದ ಸತ್ತವರು ಮತ್ತೆ ಬಂದು ಮುತ್ತುವುದನ್ನು ಕಂಡ ರುದ್ರನು ನಿರ್ವಿಣ್ಣನಾದನು. ದೈತ್ಯರ ಶರವರ್ಷದಿಂದ ಪೀಡಿತರಾದ ದೇವತೆಗಳೂ ಭೀತರಾಗಿ, ಓಡ ತೊಡಗಿದರು. ಮತ್ತೊಂದು ವಿಚಿತ್ರವೇನೆಂದರೆ ಶಂಕರನ ರಥವು ಭೂಮಿಯಲ್ಲಿ ಕುಗ್ಗುತ್ತಿತ್ತು. ಅಜೇಯನಾದ ಹರನು ಸೋತಂತಾದನು. ಏನು ಮಾಡಬೇಕೆಂದು ತೋರದೆ ಶಿವನು ಸುಮ್ಮನಾದನು. ಸನಾತನ ಪ್ರಮುಖ ಮುನಿಗಳು ಅದನ್ನು ನೋಡಿ ಭೀತರಾದರು. ಮಿಕ್ಕೆಲ್ಲ ದೇವರಥಗಳೂ ಭೂವಿವರದಲ್ಲಿ ಕುಗ್ಗಿ ನಿಂತವು. ಪರ್ವತಾಗ್ರಗಳು ಕುಸಿದವು. ವೃಕ್ಷಗಳು ಉರುಳಿದವು ನದಿಗಳು ಉಕ್ಕೆರಿದವು. ಭೂಮಿಯು ಕಂಪಿಸಿತು. ಸಮುದ್ರವು ವೇಲೆಯನ್ನು ದಾಟಿತು. ದಿಕ್ಕು

ಗಳಲ್ಲಿ ಹೊಗೆತುಂಬಿದಂತಾಗಿ ವಿಶ್ವ ತೋಚದಾಯಿತು. ಇಂತಹ ದುಶ್ಶಕುನಗಳನ್ನು ನೋಡಿ, ವೃದ್ಧ ಬ್ರಾಹ್ಮಣರು ಶಾಂತಿಸೂಕ್ತಗಳನ್ನು ಪಠಿಸಿದರು.

ಆಗ ಬ್ರಹ್ಮ ಶಬ್ದ ಮುಖ್ಯಾರ್ಥನು, ವೇದವೇದ್ಯನು, ವಿಜಯ ಶೀಲನು, ಸರ್ವ ಭೂತ ಹಿತಕರನು ಆದ ಶ್ರೀ ವಿಷ್ಣುವು ಲೋಕಕ್ಷೇಮವಾಗಲೆಂದು ವೃಷಭರೂಪದಿಂದ ಬಂದು ಬೆನ್ನ ಡುಬ್ಬದಿಂದ ಶಂಕರ ರಥವನ್ನು ಮೇಲಕ್ಕೆತ್ತಿ, ಮತ್ತೆ, ಅದು ಹೊಯ್ದಾಡದಂತೆ ತನ್ನ ಕೊಂಬುಗಳಗಲ್ಲಿ ತೂಗಿಪಿಡಿದು ನಿಲ್ಲಿಸಿದನು. ರಾಜನ್ ! ವೃಷವೆಂದರೆ ಧರ್ಮವು ಮತ್ತು ತದ್ರಕ್ಷಕನಾದ ಶ್ರೀಹರಿಯು; ಮನಸ್ಸೇಶಂಕರನು; ದೇಹವೇ ರಥವು; ಇಂದ್ರಿಯಗಳೇ ಕುದುರೆಗಳು ಬುದ್ಧ್ಯಭಿಮಾನಿ ಭಾರತೀಶನೇ ಸಾರಥಿಯು; ದೇವನರವರರೇ ಸುಕರ್ಮಸಚ್ಛಾಸ್ತ್ರ, ದೇವಯಾನಗಳು. ದಾನವರೇ ಕುಕರ್ಮಮಾಯಾವಾದ ತಮೋಮಾರ್ಗಗಳು ಇಂತಹ ಯುದ್ಧವು ಅನಾದ್ಯನಂತನಾಗಿ ನಡೆಯುತ್ತಲೇ ಇರುತ್ತದೆ. ಆದರೆ ಜೀವನು ತನ್ನ ಇಂದ್ರಿಯಂಗಳನ್ನು ಹರಿಬಿಡದೆ ವಿಷಯ ವಿಷಮಮಾರ್ಗವನ್ನು ಬಿಟ್ಟು, ಸಚ್ಛಾಸ್ತ್ರವನ್ನು ಗುರುಮುಖದಿಂದ ಕೇಳಿ ತಿಳಿದರೆ ಅಂತಹ ಸುಜೀವನು ಸುಖಮಯನಾದ ಶ್ರೀಹರಿಪ್ರಸಾದಕ್ಕೆ ಯೋಗ್ಯನಾಗಿ ವೈಕುಂಠವನ್ನು ಪೊಂದಿಸುಖಿಸುವನು. ದುರ್ಜೀವನು ಇಂದ್ರಿಯದಾಸನಾಗಿ ಶ್ರೀಶನನ್ನು ಮರೆತು ಕೆಳಗೆ ಬೀಳುವನು. (original ಅಧ್ಯಾಯ-೧೩೩)

ಶಂಕರರಥವು ಮೇಲಕ್ಕೆದ್ದಿತು ಸರ್ವಾಧಾರನಾದ ವೃಷರೂಪೀ ಶ್ರೀಹರಿಯು! ಗಟ್ಟಿಯಾಗಿ ಗುಟುರು ಹಾಕಿದನು. ಮುಖ್ಯಪ್ರಾಣನು ಶ್ರೀಹರಿಯ ಆಶ್ರಯದಲ್ಲಿ ನಿಂತು ಗರ್ಜಿಸಿದನು. ಆ ಭಯಂಕರಸಿಂಹ ನಾದವನ್ನು ಕೇಳಿ, ದಾನವರು ಎದೆ ಗುಂದಿದರೂ ಹಠದಿಂದ ಮತ್ತೆಯುದ್ಧ ಸನ್ನದ್ಧರಾದರು. ಇಷ್ಟರಲ್ಲಿಯೇ ಶ್ರೇಷ್ಠನಾದ ಶ್ರೀಹರಿಯು ತಾನು ಗೋರೂಪನಾಗಿ ಬ್ರಹ್ಮನನ್ನು ಕರುವನ್ನಾಗಿಸಿ, ಕರೆದುಕೊಂಡು ಹೋಗಿ, ಮಯಾಸುರನರಸಾಯನ ಕೂಪದ ಅಮೃತದ್ರವವನ್ನು ಕುಡಿದು ಬರಿದಾಗಿಸಿದನು ಕರವು ಕೂಡ ನೆಕ್ಕಿ ಬಿಟ್ಟಿತು.

ರುದ್ರನು ಹರಿಬಲದಿಂದ ಸಲಿರೇಗಿ. ಪ್ರಾಣಬಲದಿಂದ ವಿಜೃಂಭಿಸಿ ದಿವ್ಯಬಾಣದಲ್ಲಿ ಅಗ್ನಿ ಬ್ರಹ್ಮ(ಶಿರ) ವಿಷ್ಣುದೇವಾತ್ಮಕ ದಿವ್ಯಾಸ್ತ್ರಗಳನ್ನು ಅಭಿಮಂತ್ರಿಸಿ ಶ್ರೀಹರಿ ಬ್ರಹ್ಮರಿಗೆ ನಮಿಸಿ ಆಬಾಣವನ್ನು ತ್ರಿಪುರಗಳ ಮೇಲೆಸೆದನು- ಪ್ರಳಾಯಾಗ್ನಿಯಂತೆ ಉರಿಯುವ ದಿವ್ಯಾಸ್ತ್ರದಿಂದ ತ್ರಿಪುರಗಳು ಸುಟ್ಟುಹೋದವು. ಪ್ರಾಸಾದ ಪ್ರಾಕಾರಪರಿಖಾಗೋಪುರಗಳು ಕೆಳಗುರುಳಿದ್ದವು. ಸತ್ಯದಮಶಮಗಳಿಂದ ಅನೃತ ದಂಭನಾಸ್ತಿಕ್ಯಗಳ ನಾಶವಾಯಿತು. ಸರ್ವದಾನವರೂ ದೈತ್ಯಪುಂಗವರೂ ಹತರಾದರು.

ಶ್ರೀಶಂಕರ ವಿಜಯವನ್ನು ಕಂಡುಗಂಧರ್ವರು ಪಾಡಿದರು. ಅಪ್ಸರೆಯರು ಆಡಿ ಕುಣಿದರು. ಋಷಿಗಳು ಸ್ತುತಿಸಿದರು. ಶಂಕರಯಶವುಲೋಕದಿ ಹರಡಿ ಸುಜನ ಸುಖಂಕರ ವಾಯಿತು. ಈ ವಿಜಯವು ಶ್ರೀಹರಿ ಪ್ರಸಾದಸಂಪಾದಿತವೆಂದು ಮನಗಂಡು ಶಂಕರನು, ಬ್ರಹ್ಮದೇವನಿಂದಲು, ಇತರ ದೇವತೆಗಳಿಂದಲು ಕೂಡಿ ಶ್ರೀವಿಷ್ಣುವಿನನ್ನು ವೇದ ಸೂಕ್ತಗಳಿಂದ ಸ್ತುತಿಸಿ, ನಮಿಸಿದನು. ಮಯಾಸುರನು ವಿಷ್ಣುಪ್ರಭಾವನನ್ನು ಕಂಡ ರಸಾಯನವನ್ನೇ ಛಲದಿಂದ ಕುಡಿದ ದೇವದೇವನಿಗೆ ವಂದಿಸಿ ಸುಪ್ರಸನ್ನನಾದನು. ಇಂತು ಶ್ರೀಹರಿಮಹಿಮಾ ಪ್ರತಿಪಾದಕವಾದ ಶ್ರೀಹರಿವಂಶನನ್ನು ನಿನಗೆ ನಿರೂಪಿಸಿದೆನು.

ಶ್ರೀಹರಿಯ ಪ್ರಸಾದ ಪಾತ್ರರಾದ ಸುಜನರು ಸರ್ವ ಸುಖಗಳನ್ನುಪೊಂದಿಸುಖಿಸೀದರು. ಕಮಲಾಕ್ಷ ವಿರೂಪಾಕ್ಷ ತಾರಕಾಕ್ಷರು ಹತರಾದುದರಿಂದ ಮಿಥ್ಯಾನಾಮಧೇಯರಾಗಿ ದೇವದ್ರೋಹವನ್ನು ಮಾಡಿದ ದುರಾತ್ಮರು ನಾಶವಾಗುವರೆಂದು ವಿಚಾರಿಸಿ ತಿಳಿದು, ಸರ್ವಮುಕ್ತಿಯೋಗ್ಯರು ಜ್ಞಾನಭಕ್ತಿ ವೈರಾಗ್ಯಗಳಿಂದ ಶ್ರೀ ಭಾರತೀ ರಮಣ ಮುಖ್ಯಪ್ರಾಣಾಂತರ್ಯಾಮಿ ಶ್ರೀಲಕ್ಷ್ಮೀ ವೇಂಕಟೇಶನನ್ನು ಭಕ್ತಿಯಿಂದ ಸೇವಿಸಿ. ಸ್ವಯೋಗ್ಯನೈಜ ಸುಖಾನುಭೂತಿಯನ್ನು ಪಡೆಯುವರು. ಶ್ರೀಕೃಷ್ಣಾರ್ಪಿತಮಸ್ತು ಶ್ರೀಮಧ್ವೇಶಾರ್ಪಿತಮಸ್ತು.

—o—

30 ಅನುಕ್ರಮಣಿಕಾಧ್ಯಾಯ ಫಲಸ್ತುತಿ||

ಶ್ರೀ ವೈಶಂಪಾಯನನು ಜನಮೇಜಯನಿಗೆ ಸರ್ವಭಾರತ ಪರ್ವಸಂಗ್ರಹವನ್ನು ಮನನಯೋಗ್ಯವಾಗುವಂತೆ ನಿರೂಪಿಸಿದನು. ಮತ್ತು ಶ್ರವಣ ವಿಧಿ, ಶ್ರವಣಪಠನ ಫಲಗಳನ್ನೂ ಪೇಳಿದನು.

ರಾಜನ್! ದೇವತೆಗಳು ಶ್ರೀಶನು ಅವತರಿಸುವನೆಂದು ತಿಳಿದು ಬ್ರಹ್ಮದೇವನ ಆಜ್ಞೆಯಂತೆ ಭುವಿಲ್ಲವತರಿಸಿ, ತಂತಮ್ಮ ಸೇವಾಸಾಧನಗಳನ್ನು ಸಂಪಾದಿಸಿ, ಶ್ರೀಹರಿಗರ್ಪಿಸಿ, ಮತ್ತೆ ತಂತಮ್ಮ ಮೂಲರೂಪಗಳನ್ನು ಪೊಂದಿದರು ಶ್ರೀಭಾರತದಲ್ಲಿ ಋಷಿ ದೇವಗಂಧರ್ವ ಸಿದ್ಧಸಾಧ್ಯಮರುದ್ಗಣಮನು ಪ್ರಜಾಪತಿ ಮಾನವೋತ್ತಮರು ವರ್ಣಿತರಾಗಿರುವರು. ಗಿರಿಕಂದರ ನದೀ ನದ ಪುಣ್ಯಕ್ಷೇತ್ರಸಾಗರವನಗಳೂ ಹೇಳಲ್ಪಟ್ಟಿರುವವು. ಗ್ರಹತಾರೆಗಳು, ಸಂವತ್ಸರಾದಿ ಕಾಲಾವಯವಗಳು— ಇವೂ ವಿಶದಮಾಡಲ್ಪಟ್ಟಿವೆ. ಶ್ರೀಮಹಾಭಾರತದಲ್ಲಿ ಇಲ್ಲದಿದ್ದದ್ದು ಮತ್ತೆಲ್ಲಿಯೂ ಇಲ್ಲ. ಅಲ್ಲಿರುವ ತತ್ವಗಳನ್ನೇ ಉಪಜೀವಿಸಿ, ಮತ್ತೆಲ್ಲಗ್ರಂಥಗಳೂ ಪ್ರಸಕ್ತವಾಗಿವೆ. ಮಹತ್ವದಿಂದಲು, ಭಾರ [ಅರ್ಥತಃ]ದಿಂದಲು ಅದು ಮಹಾಭಾರತನೆಂದು ಪ್ರಸಿದ್ಧವಾಗಿದೆ.

ಇಂತಹ ಇತಿಹಾಸವನ್ನು ಹೇಳಿ ಕೇಳಿದವರು ಸರ್ವಪಾಪವಿನಿರ್ಮುಕ್ತರಾಗುವರು ಸರ್ವಕಾಮಿತ ಸುಖಗಳನ್ನೂ ಪೊಂದುವರು. ಗ್ರಂಥವನ್ನು ಕೇಳಿಹೇಳಿದವರು. ಪ್ರತಿ ಪರ್ವವುಮುಗಿದಾಗ ವಿಪ್ರಗೆ ಮೃಷ್ಟಾನ್ನವನ್ನು ವಿಪುಲದಕ್ಷಿಣೆಯನ್ನೂ ಕೊಡಬೇಕು, ಭೂಮಿ ವಸ್ತ್ರ, ಕಾಂಚನ ರಜತಮಣಿ ಪಾತ್ರಗೋಕಂಬ, ಕೃಷ್ಣಾಜಿನ, ಗೋಪಿ ಚಂದನ, ಶಯನ, ಶಿಬಿಕಾ ಯಾನ ವಾಹನಗಳನ್ನು ಯಥಾಯೋಗ್ಯವಾಗಿ ವಿಪ್ರವರರಿಗೆ ಕೊಡಬೇಕು. ದಾನಮಾನಗಳನ್ನು ಪಾತ್ರರನ್ನರಿತು ಯಥಾಶಕ್ತಿಯಾಗಿ ಮಾಡ ಬೇಕು.

ಪಾರಾಯಣಕರ್ತನು ಶುಚಿಯಾಗಿರಬೇಕು. ಬಿಳಿವಸ್ತ್ರವನ್ನುಟ್ಟು ಹೊದೆದು. ಶ್ರದ್ಧೆಯಿಂದ ಹೇಳಬೇಕು. ಜಿತೇಂದ್ರಿಯನು ವೇದಶಾಸ್ತ್ರ ವಿಚಕ್ಷಣನು ಅಸೂಯಾ ರಹಿತನು, ಸತ್ಯವಚನನು ಆದ ಶ್ರೋತ್ರಿಯ ಬ್ರಾಹ್ಮಣನು ಉತ್ತಮ ವಾಚಕನೆನಿಸು ವನು. ಅವನು ಅತ್ಯವಸರವಿಲ್ಲದೆ ಅತಿ ನಿದಾನನಾಗದೆ ಸ್ಪಷ್ಟವಾಗಿ ಉಚ್ಚರಿಸುತ್ತಾ ಭಕ್ತಿಭಾವ ಬಂಧುರನಾಗಿರಬೇಕು. ಶ್ರೋತೃವರ್ಗವೂ ಶ್ರದ್ಧೆಯಿಂದ ವಕ್ತೃವಿನಲ್ಲಿ ಆದರವಿಟ್ಟು ಕಿವಿಗೊಟ್ಟು ಕೇಳಬೇಕು. ಈ ಶ್ಲೋಕವನ್ನು ತಪ್ಪದೆಪಠಿಸಿ ದವನು ಶ್ರೀಹರಿಗುರು ಪ್ರಸಾದ ಭಾಜನನಾಗುವನು,

"ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ

ದೇವೀಂ ಸರಸ್ವತೀಂ ವ್ಯಾಸಂ ತತೋಜಯ ಮುದೀರಯೇತ್." ||

ಶ್ರೀ ಮಹಾಭಾರತದ ಕೊನೆಯ ಭಾಗವೇ ಆದ ಶ್ರೀಹರಿವಂಶವೂ ಶ್ರವಣೀ ಯವು. ಅದನ್ನು ಓದಿ ಕೇಳಿದವರು ವಂಶವೃದ್ಧಿಯನ್ನು ಸಕಲ ಸಂಪತ್ಸಮೃದ್ಧಿ ಯನ್ನೂ ಪೊಂದುವರು ವೇದೇರಾಮಾಯಣೇ ಚೈವ ಪುರಾಣೇ ಭಾರತೇ ತಥಾ ಆದಾ ವಂತೇಚಮಧ್ಯೇಚ ವಿಷ್ಣುಸ್ಸರ್ವತ್ರಗೀಯತೇ ||

ಹರಿಃಓಂ ತತ್ ಸತ್ ಶ್ರೀಮಧ್ವೇಶಾರ್ಪಿತಮಸ್ತು

ಜನಮೇಜಯ! ಆದಿಕತ್ಥನನು ಸತ್ಯತನು ಶುಚಿವ್ರತನು ಶ್ರದ್ಧಾಳುವು ಜಿತಕ್ರೋ ಧನು ಆದಪುರಾಣವಾಚಕನು ಮುಖ್ಯಪಾತ್ರನೇನಿಸುವನು. ಅಂತಹವನೆ ಆದ ಶ್ರೋತನು. ಬಲುಪುಣ್ಯವನ್ನು ಹೊಂದಲು ತನಗೆ ದೇವನಿತ್ತುದನ್ನು ವಂಚನೇ, ಗೈಯದೆ ವಾಚಕ ನಿಗಿತ್ತು, ಗಂಧ ಪುಷ್ಪಾಕ್ಷತೆಗಳಿಂದ ಪೂಜಿಸಿ, ವಸ್ತ್ರದಕ್ಷಿಣಾದಿಗಳಿಂದ ಗೌರವಿಸಬೇಕು

ಪ್ರಥಮ ಪಾರಾಯಣದಿಂದ ಅಗ್ನಿಷ್ಟೋಮಫಲವನ್ನೂ ದ್ವಿತೀಯ ಪಾರಣದಿಂದ ಅತಿರಾತ್ರಫಲವನ್ನೂ, ತೃತೀಯದಿಂದ ದ್ವಾದಶಾಹಕ್ರತು ಫಲವನೂ, ಚತುರ್ಥದಿಂದ ವಾಜಪೇಯ ಫಲವನ್ನೂ ಪಂಚಮಪಾರಾಯಣದಿಂದ ವಾಜಪೇಯದ್ವಯಫಲವನ್ನೂ ಷಷ್ಠದಿಂದ ತದ್ವಿಗುಣಫಲವನ್ನೂ ಸಪ್ತಮದಿಂದ ತ್ರಿಗುಣ ಫಲವನ್ನೂ ಅಷ್ಟಮ

ದಿಂದ ರಾಜಸೂಯ ಫಲವನ್ನೂ, ನವಮದಿಂದ ಅಶ್ವಮೇಧ ಫಲವನ್ನೂ ದಶಮ ದಿಂದ ಸರ್ವಫಲವನ್ನೂ ವಾಚಕನೂ ಶ್ರೋತೃಗಳೂ ಪಡೆಯುವರು.

ಅವರು ದಿವ್ಯವಿಮಾನಗಳಲ್ಲಿ ದಿವ್ಯನಾರೀಶತಸಹಿತರಾಗಿ ಅಪ್ಸರ ಸ್ತ್ರೀಸೇವಿತರಾಗಿ ಸಂಚರಿಸುವರು. ನಂದನೋದ್ಯಾನದಿ ವಿಹಾರಗೈಯುವರು. ಸೂರ್ಯಭವನ, ಶಿವಭವನ ವಿಷ್ಣುಭವನಗಳಲ್ಲಿ ಅವರು ಸುಖವಾಗಿ ನಿವಸಿಸಿ, ಕೊನೆಗೆ ಮುಕ್ತರಾಗುವರು.

ಆಸ್ತೀಕಪರ್ವ ಸಮಾಪ್ತಿಯಲ್ಲಿ ಗುಡೋದನವನ್ನೂ, ಆದಿಪರ್ವದಲ್ಲಿ ಅಪೂಪ, ಮೋದಕಗಳನ್ನೂ, ಸಭಾಪರ್ವದಲ್ಲಿ ಹವಿಷ್ಯವನ್ನೂ, ಅರಣ್ಯಕದಲ್ಲಿ ಮೂಲಫಲಗಳನ್ನೂ, ವಿರಾಟ ಪರ್ವದಲ್ಲಿ ವಸ್ತ್ರಮೂಲ್ಯಗಳನ್ನೂ, ಉದ್ಯೋಗದಲ್ಲಿ ಮಧುರಾನ್ನವನ್ನೂ, ಭೀಷ್ಮಪರ್ವದಲ್ಲಿ ಯಾನವನ್ನೂ, ದ್ರೋಣಪರ್ವದಲ್ಲಿ ವಿಪ್ರಭೋಜನವನ್ನೂ, ಕರ್ಣಪರ್ವ ದಲ್ಲಿ ಕನಕವನ್ನೂ, ಶಲ್ಯಪರ್ವದಲ್ಲಿ ಮೋದಕವನ್ನೂ, ಗದಾಪರ್ವದಲ್ಲಿ ಮುದ್ಗಾನ್ನವನ್ನೂ, ಸ್ತ್ರೀಪರ್ವದಲ್ಲಿ ರತ್ನಗಳನ್ನೂ, ಐಷೀಕಪರ್ವದಲ್ಲಿ ಘೃತೋದನವನ್ನೂ, ಶಾಂತಿಪರ್ವದಲ್ಲಿ ಹವಿಷ್ಯವನ್ನೂ, ಆಶ್ವಮೇಧಿಕದಲ್ಲಿಯು ಆಶ್ರಮವಾಸಪರ್ವದಲ್ಲಿಯೂ ಸರ್ವಭಕ್ಷ್ಯಗಳನ್ನೂ, ಕಂದಮೂಲಗಳನ್ನೂ, ಮೌಸಲದಲ್ಲಿಗಂಧ ಮಾಲ್ಯವಸನಗಳನ್ನೂ, ಮಹಾಪ್ರಸ್ಥಾನಿಕ ದಲ್ಲಿ ಕಾಮಿತ ಭೋಜನವನ್ನೂ, ಸ್ವರ್ಗಾರೋಹಣ ಪರ್ವದಲ್ಲಿ ಶತಭೋಜನವನ್ನೂ, ಹರಿವಂಶಪರ್ವಸಮಾಪ್ತಿಯಲ್ಲಿ ಪಾಯಸವನ್ನೂ, ವಿಷ್ಣುಪರ್ವದಲ್ಲಿ ಶರ್ಕರಾನ್ನವನ್ನೂ ಭವಿಷ್ಯಪರ್ವಸಮಾಪ್ತಿಯಲ್ಲಿ ಲಡ್ಡುಕಾಮಂಡಿಕಾದಿಗಳನ್ನೂ ಸಮರ್ಪಿಸಿ ವಿಪ್ರಶತಕ್ಕೆ, ಕಡಿಮೆ ಯಾಗದಂತೆ ಮೃಷ್ಟಾನ್ನಭೋಜನವಿಡಬೇಕು. ಸಪತ್ನೀಕನಾದ ಪ್ರವಚನಕಾರ ನನ್ನು ವಸ್ತ್ರಾಲಂಕಾರದಕ್ಷಿಣಾದಿಗಳಿಂದ ಪೂಜಿಸಬೇಕು. ಆದರಿಂದ ಶ್ರೀವಿಷ್ಣುವೇ ಪೂಜಿತನಾಗಿ ಸರ್ವಶ್ರೇಯಸ್ಸನ್ನೂ ದಯಪಾಲಿಸುವನು

ಭಾರತಂ ಶೃಣು ಯಾನ್ನಿತ್ಯಂಭಾರತಂ ಪರಿಕೀರ್ತಯೇತ್ ।
ಭಾರತಂ ಭವನೇಯಸ್ಯ ತಸ್ಯ ಹಸ್ತಗತೋಜಯಃ ॥
ಭಾರತಂ ಸರ್ವ ಶಾಸ್ತ್ರಾಣಾಂ ಉತ್ತಮಂ ಪಾವನಂ ಶುಭಂ ।
ಭಾರತಾತ್ ಪ್ರಾಪ್ಯತೇ ಮೋಕ್ಷಃ ತತ್ತ್ವಮೇತತ್ ಬ್ರುವೀಮ್ಯಹಂ ॥

ಭಾರತ, ಭೂಮಿ,ಗೋವು, ಸರಸ್ವತಿ, ಬ್ರಹ್ಮ ಶಿವಕೇಶವರು, ಇವರನ್ನು ಸ್ತುತಿಸಿದ ವನಿಗೆ ಯಾವಕಷ್ಟವೂ ಬರಲಾರದು. ಮತ್ತು ಎಲ್ಲ ಪುಣ್ಯವೂ ಬರುವುದು ಅದರಿಂದ ಸುಖವಾಗುವುದು ಎಲ್ಲಿದಿವ್ಯವಾದ ವಿಷ್ಣು ಕಥೆಯೋ, ಎಲ್ಲಿಮು ಖ್ಯಪ್ರಾಣ ಮಹಿ ಮೆಯೋ, ಎಲ್ಲಿ ತತ್ವ ದೇವತೆಗಳ ಪಾವನ ಚರಿತವೋ, ಎಲ್ಲಿ ಗುರುಗಳ ಜ್ಞಾನಪ್ರಾ ಭವವೋ, ಅಂತಹ ಶ್ರೀಭಾರತ ಹರಿವಂಶವನ್ನು ಪರಮಪದವನ್ನು ಪೊಂದಲಪೇಕ್ಷಿಸಿದ ವನು ನಿ ವೂ ಸ್ವಲ್ಪವಾದರೂ ಪಠಿಸಬೇಕು. ಅಥವಾ ಕೇಳಬೇಕು.

ಅಜರಮಮರ ಮೇಕಂ ಧ್ಯೇಯಮಾದ್ಯಂತಶೂನ್ಯಂ ।
ಸಗುಣಮಗುಣ ಮಾದ್ಯಂ ಸ್ಥೂಲಮತ್ಯಂತ ಸೂಕ್ಷ್ಮಂ ॥
ನಿರುಪಮಮುಪಮೇಯಂ ಯೋಗಿನಾಂಜ್ಞಾನಗಮ್ಯಂ ।
ತ್ರಿಭುವನಗುರು ಮೀಶಂ ತ್ವಾಂ ಪ್ರಪನ್ನೋಽಸ್ಮಿ ವಿಷ್ಣೋ! ॥
ಸರ್ವತ್ರತರತು ದುರ್ಗಾಣಿ ಸರ್ವೋಭದ್ರಾಣಿ ಪಶ್ಯತು ।
ಸರ್ವೇಷಾಂವಾಂ ಛಿತಾರ್ಥಾನಾಂ ಸಿದ್ಧಿಸ್ಸ್ಯಾತ್‌ದಯಯಾಹರೇಃ ॥

ಶ್ರೀಹರಿವಂಶದ ಮೂರುಪರ್ವಗಳಲ್ಲಿ ವಿಷಯಗಳೆಂತೆಂದರೆ ॥ ಆದಿಸೃಷ್ಟಿ, ಭೂತ ಸರ್ಗ, ಪೃಥುಚರಿತೆ. ಮನುಗಳವರ್ಣನೆ, ವೈವಸ್ವತಕುಲ ವಿಸ್ತಾರ, ಧುಂಧುಮಾರವಧೆ, ಗಾಲವೋತ್ಪತ್ತಿ, ಇಕ್ಷ್ವಾಕುವಂಶವಿವರ, ಪಿತೃ ಕಲ್ಪ. ಸೋಮಬುಧರಉತ್ಪತ್ತಿದಿವೋ ದಾಸಕಥೆ, ತ್ರಿಶಂಕು ಚರಿತಯಯಾತಿ ಪುರುರಾಜರವಂಶ ವಿಸ್ತಾರ, (ಪ್ರಥಮ ಪರ್ವ) ವಿಷ್ಣುಪ್ರಾದುರ್ಭಾವ, ತಾರಕಾಮಯುಯುದ್ಧ, ವಿಷ್ಣುವಾಕ್ಯ, ಯೋಗಮಾಯಾಸ ಮುತ್ಪತ್ತಿ. ಅಂಶಾವತರಣ, ನಾರದ ವಾಕ್ಯ, ಸಪ್ತಗರ್ಭವಧಿ, ಆರ್ಯಾಸ್ತವ, ಗೋವ್ರಜಗ ಮನ, ಶಕಟಭಂಜನ, ಪೂತನಾಸಂಹರಣ, ಯಮಲಾರ್ಜುನಮೋಚನ, ವೃಂದಾವನ ನಿವೇಶನ, ಕಾಲೀಯದಮನ, ಧೇನುಕವಧೆ, ಪ್ರಲಂಬ ನಿಧನ, ಗಿರಿಯಜ್ಞ, ಗೋವರ್ಧ ನೋದ್ಧರಣ, ಗೋವಿಂದಾಭಿಷೇಕ, ಗೋಪೀಕ್ರೀಡಾ, ಅರಿಷ್ಟವಧೆ, ಕೇಶಿವಧೆ, ಅಕ್ರೂರನಾಗಲೋಕದರ್ಶನ, ಧನುರ್ಭಂಗ, ಕುವಲಯಾಪೀಡವಧೆ, ಚಾಣೂರ ಮುಷ್ಟಿ ಕವಧೆ, ಮಧುರಾ ನಿವೇಶನ, ಜರಾಸಂಧ ಪರಾಜಯ, ಗೋಮಂತಾರೋಹಣ, ಗಿರಿ ದಾಹ, ಸೃಗಾಲವಧೆ ಕಾಲಯವನನಾಶ, ದ್ವಾರವತೀನಿರ್ಮಾಣ, ರುಕ್ಮಿಣೀ ಕಲ್ಯಾಣ ಬಲದೇವಾಹ್ನಿಕ ನರಕವಧೆ, ಪಾರಿಜಾತಾಪಹರಣ, ಷಟ್ ಪುರುದಾನವ ಸಂಹರಣ ಶಂಬರವಧೆ, ಧನ್ಯೋಪಾಖ್ಯಾನ (ದ್ವಿತೀಯ ಪರ್ವ) ಪುಷ್ಕರಪರ್ವ, ವಾರಾಹನಾರ ಸಿಂಹ ವಾಮನ ವೈಭವ, ಕೈಲಾಸ ಯಾತ್ರೆ, ಪೌಂಡ್ರಕವಧೆ, ಹಂಸ ಡಿಭಕವಿನಾಶ ಪುರತ್ರಯ ಸಂಹಾರ ಇಂತು ಪರ್ವಸಂಗ್ರಹವು. ಈ ಹರಿವಂಶಗ್ರಂಥವು ಪರಮಪಾವ ನವು. ಇದನ್ನು ಶ್ರದ್ಧೆಯಿಂದ ಹೇಳಿದವರು, ಕೇಳಿದವರು ವೈಷ್ಣವಧಾಮವನು ಹೊಂದಿ, ನಿಜಾನಂದ ಪೂರ್ಣರಾಗುವರು. ಧನ್ಯಂ, ಯಶಸ್ಯವು, ಆಯುಷ್ಕರವು, ಭಕ್ತಿ ಭುಕ್ತಿ ಮುಕ್ತಿಫಲಪ್ರದವು ಆದ ಶ್ರೀಹರಿವಂಶ ಗ್ರಂಥದ ಕನ್ನಡಾನುವಾದವನ್ನು ಶ್ರೀಹರಿಗುರು ಗಳದಯದಿಂದ ಲಿಖಿಸಿಧನ್ಯನಾದೆನು. ಸರ್ವಂ ಶ್ರೀಕೃಷ್ಣಾರ್ಪಣಮಸ್ತು

॥ಇದಂಮಯಾತೇ ಪರಿಕೀರ್ತಿತಂಕುಹತ್ ॥
ಶ್ರೀಕೃಷ್ಣ ಮಾಹಾತ್ಮ್ಯಮಪಾರಮದ್ಭುತಂ ॥
ಶೃಣ್ವನ್‌ಪಠನ್ ಅಶುಸಮಾಪ್ನುಯಾತ್ ಫಲಂ ॥
ಯಚ್ಚಾಪಿ ಲೋಕೇಷು ಸ ದುರ್ಲಭಂ ಮಹತ್ ॥

॥ ಹರಿಃ ಓಂತತ್‌ಸತ್ ಶ್ರೀಮಧ್ವೇಶಾರ್ಪಿತಮಸ್ತು ॥ಶ್ರೀರಸ್ತು॥

|| ಇತಿ ಶ್ರೀಮತ್ಸುರವರ ಹರಿಚರಣ ಸೇವಾಸವಪಾನಾರಿತ ಮಧುರವಚನರಚನಾಚತುರಸ್ಯ, ಶ್ರೀಓಂ ಶ್ರೀಸತ್ಯಸಂತುಷ್ಟ ತೀರ್ಥವಂಶಾವತಂಸ ಘೂಳೀ ವಂಶ ಪವಿತ್ರ ಶ್ರೀಭಾರದ್ವಾಜ ಗೋತ್ರಜಾತವೇಂಕೋಬಾಚಾರ್ಯ ಪುತ್ರ, ಕೃಷ್ಣಮೂರ್ತಿ ನಾಮಧೇಯಸ್ಯಕೃತೌ, ಶ್ರೀಹರಿವಂಶಗ್ರಂಥೇ ಪರ್ವತ್ರದಿಯಂ ಶ್ರೀಶ್ರೀಮದ್ಗುರು ಶ್ರೀಹುಲಿಗಿ ಹುಚ್ಚಾಚಾರ್ಯಪ್ರಿಯ ಶಿಷ್ಯವರದ ಶ್ರೀಶ್ರೀರಾಘವೇಂದ್ರಗುರುರಾಜಾಂತರ್ಗತ ಶ್ರೀಶ್ರೀಘೂಂಳೀ ಭಾರತೀಶಮುಖ್ಯಪ್ರಾಣಾಂತರ್ಗತ ಶ್ರೀಶ್ರೀಲಕ್ಷ್ಮೀ ವೇಂಕಟೇಶದಿವ್ಯ ಚರಣಾರವಿಂದಯೋಃ ಸಮರ್ಪಿತಂಭಕ್ತ್ಯಾ ಸಾಷ್ಟಾಂಗನತಿಶತಪೂರ್ವಮಿತಿಶಂ ||

|| ಶ್ರೀಮಧ್ವೇಶಾರ್ಪಿತಮಸ್ತು ||

ಪುಟ	ಪಂಕ್ತಿ	ತಪ್ಪು	ಒಪ್ಪು
೨	೭	ಪಾಂಡವಕುಲ	ಕುಲನಾಶಕ್ಕೆ
೨	೮	ಕರುವಂಶ	ಕುರುವಂಶ
೨	೧೪	ಕಾಣ	ಕಾರಣ
೪	೨೪	ನೆಮ	ನೆವ
೫	೧೪	ವ್ಯಾಕ್ಬಾಣ	ವಾಗ್ಬಾಣ
೬	೮	ಗೃಹ	ಗ್ರಹ
೬	೧೪	ಭತ್ಯ	ಭೃತ್ಯ
೭	೫	ವಾದಗಳು	ಪಾದಗಳು
೭	೯	ಸಾತ್ಯಮತೇಯ	ಸಾತ್ಯವತೇಯ
೭	೧೮	ವಪುಷ್ಟವೆ	ವಪುಷ್ಪಮೆ
೯	೧೦	ನಾನುರೂಪ	ನಾಮರೂಪ
೧೬	೮	ಯಜಸ್ಸಾಮ	ಯಜುಸ್ಸಾಮ
೧೬	೧೮	ರಮೃದ್ಧಿ	ಸಮೃದ್ಧಿ
೧೬	೧೮	ಭಲ್ತಿಮುಕ್ತ	ಭಕ್ತಿಮುಕ್ತಿ
೧೭	೨೭	ಜಡರಹಿತ	ಜಡಸಹಿತ
೧೮	೧೪	ಪ್ರತಿಪಾದಿ	ತ್ರಿಪಾದಿ
೧೯	೨೦	ವಾಗಿಸಿದನು	ವಾಗಿಸಿದರು
೨೦	೨	ಜೀನ	ಜೀವ
೨೧	೧೪	ಮಾತ್ರಗಳು	ತನ್ಮಾತ್ರಗಳು
೨೩	೧	ಬಹ್ಮಾಬ್ದವು	ಬ್ರಹ್ಮಶಬ್ದವು
೨೩	೨೫	ನಿರವು	ನಿರಯ
೨೪	೨೮	ಯಜರೆವ	ಯಜರೇವ
೨೬	೧೩	ಅನ್ನ್ನ	ಅನ್ನ

ಪುಟ	ಪಂಕ್ತಿ	ತಪ್ಪು	ಒಪ್ಪು
೨೭	೨೩	ಎಲ್ಲಿ	ಎಲ್ಲ
೨೮	೧೮	ಸುರ	ಸಂತ
೨೯	೧೮	ತ್ರಭರು	ಭರ್ತ್ರರು
೩೧	೬	ವನಃ	ಮನಸ್ಃ
೩೧	೧೦	ವಾಯುು	ಬಾಹು
೩೩	೫	ವಾಯು	ಪಾಯು
೩೩	೧೪	ನಸವಃ	ವಸನಃ
೩೩	೧೯	ತ್ರವಃ	ತ್ರಯಃ
೪೧	೩	ರೂವತನ್ನು	ರೂಪವನ್ನು
೪೧	೯	ನಮುನ	ನಮುನ
೪೧	೧೮	ಹಯು	ಹರಿ
೪೧	೨೩	ಆಚನೀಯ	ಆಚರಣೀಯ
೪೨	೪	ಮಹಿಯನ್ನು	ಮಹಿಮೆಯನ್ನು
೪೩	೮	ಮತನಾದ	ಶ್ರುತನಾದ
೪೬	೪	ಯಾವದಾನವಿ	ಮಾನವದಾನವ
೪೬	೨೮	ಅವವವೌನ	ಅವನವೌನ
೫೦	೪	ನ್ರಾಜ್ಞ	ಪ್ರಾಜ್ಞ
೫೧	೧೪	ಭಾದನ	ಭಂಡನ
೫೧	೧೬	ನಾಹಿಸಿಯು	ವಾಹಿನಿಯು
೫೨	೧	ಮರುದ್ಗಣಗ–ನಸು	ಮರುದ್ಗಣ–ವಸ
೫೨	೩	ರಾಜರ್ಷಿವವರ	ರಾಜರ್ಷಿವರರನ್ನೂ
	೯	ಮುದ್ಗಗ	ಮುದ್ಗರ
೫೭	೧೭	ಅಂಕಿರ್ಬುಧ್ನ	ಅಹಿರ್ಬುಧ್ನ
೫೭	೨೭	ಶ್ರೀವತ್ಸದಕ್ಷನು	ಶ್ರೀವತ್ಸವಕ್ಷನು
೬೩	೧	ಅವಾಂತರತಮ	ಅಪಾಂತರತಮ

ಪುಟ	ಪಂಕ್ತಿ	ತಪ್ಪು	ಒಪ್ಪು
೬೪	೯	ಲೋಕಾನ	ಲೋಕಾನ್
೬೫	೩೧	ಅನಂಗನು ನಾಂಗ	ಅನಂಗನು ಸಾಂಗ
೬೬	೩	ಗಾಂದಿನಿ	ಸುತನು
೬೯	೨೩	ಅಪ್ಸೈರಕ್ತ–ರಮಾಭಕ್ತ	ಅಪ್ಸರರ್ತ–ರಮಾಭರ್ತ
೭೧	೧	ಶೂದ್ರರಿಂಗೆ	ಕ್ಷುದ್ರರಿಂಗೆ
೭೨	೭	ಳಗಿದ್ದು	ಒಳಗಿದ್ದು
೭೨	೧೧	ಲಕ್ಷ್ಮೀಭಕ್ತ	ಲಕ್ಷ್ಮೀಭರ್ತ
೭೬	೫	ವಂದ್ಯನಾದ	ವಂದ್ಯಪಾದ
೭೭	೭	ಗೋದರ್ಧನ	ಗೋವರ್ಧನ
೭೯	೨೧	ಪ್ರಮುದ್ದ	ಪ್ರಮಥ
೮೦	೨೫	ವೀಯು	ವೀರ್ಯ
೮೩	೧೯	ನೆಂಬುವರ್ಕ	ನೆಂಬುವರು
೮೪	೧೨	ಸಂಕರ್ಷನೇ	ಸಂಕರ್ಷಣನೇ
೮೪	೨೯	ಸಾತ್ನನು	ರಸಾತ್ಮನು
೮೬	೧೫	ಅಘ್ಯಾದಿ	ಅರ್ಘ್ಯಾದಿ
೮೬	೧೫	ವಿಪೇಂದ್ರ	ವಿಪ್ರೇಂದ್ರ !
೮೮	೯	ಸಹನಾ	ಸಹಸಾ
೮೮	೨೦	ಅಪಹರಿಸಿ	ಅಪಹಸಿಸಿ
೯೨	೨	ವೇದಾವಿದ್ವಿಪ್ರ	ವೇದವಿದ್ವಿಪ್ರ
೯೩	೧೦	ಹರಶವ	ಹರಶಿವ
೯೩	೧೯	ಹಾಸ್ತ್ರ....ಳದ್ದು	ರಾಸ್ತ್ರಗಳನ್ನು
೯೬	೧೦	ಕಂಸ !	ಹಂಸ
೯೬	೨೬	ವಿವಾದ	ವಿಷಾದ
೯೮	೧೯	ಕಿ ಜಲ್ಕನು	ಕಿಂಜಲ್ಕನು
೯೯	೫	ನಿಷ್ಠಾಯರು	ನಿಷ್ಠಾವುರು

ಪುಟ	ಪಂಕ್ತಿ	ತಪ್ಪು	ಒಪ್ಪು
೧೦೦	೨	ಪೃದು	ಪೃಥು
೧೦೩	೧೪	ಬಂತು	ಎಂತು
೧೦೬	೧೪	ಪರವಾಲಾಪು	ಪರುಷಾಲಾಪ
೧೦೭	೨೦	ಹಂಬಿ	ಹಂಸ
೧೧೧	೨೭	ಕೆದನ	ಕೆದಕಿ
೧೧೭	೧	ಸರ್ವವಾಪ	ಸರ್ವಪಾಪ
೧೧೭	೪	ಕಂಬ	ಕಂಬಲ
೧೧೭	೨೨	ಸತ್ಯತನು	ಸತ್ಯರತನು
೧೧೭	೨೨	ಆದಿಕತ್ಥನನು	ಆವಿಕಸ್ಥನನ್ನು
೧೧೮	೨೩	ಪ್ರ್ಯಾಪ್ಯತೇ	ಪ್ರಾಪ್ಯತೇ
೧೧೮	೩೦	ನಿ ವೂ	ನಿತ್ಯವೂ
೧೧೯	೬	ವಾಂಚಿತ	ವಾಂಛಿತ
೧೧೯	೨೬	ಕುಹತ್	ಮಹತ್
೧೨೦	೧	ನಾರಿತ	ಸಾದಿತ
೧೨೦	೪	ಪರ್ವತ್ರ್ಯದಿಯಂ	ಪರ್ವತ್ರಿತಯಂ

— ಮುಗಿಯಿತು —